
# ಭಾಗ – 1





## 1.1 ಪರಿಚಯ

ತಮ್ಮ ಪ್ರದೇಶದ ಎಲ್ಲಾ 0–6 ವರ್ಷದ ಮಕ್ಕಳನ್ನು ಶೇ. 100 ರಷ್ಟು ಅಂಗನವಾಡಿಗೆ ದಾಖಲು ಪಡಿಸಿಕೊಂಡು ಅವರು ನಿರಂತರವಾಗಿ ಹಾಜರುಆಗುವಂತೆ ನೋಡಿಕೊಳ್ಳುವುದು ಅಂಗನವಾಡಿ ಶಿಕ್ಷಕಿಯರ ಪ್ರಮುಖ ಜವಾಬ್ದಾರಿಯಾಗಿದೆ. ಹೆಚ್ಚಿನ ಸಂದರ್ಭಗಳಲ್ಲಿ ಹೊರಗಿಡಲ್ಪಟ್ಟ ಸಮುದಾಯಗಳ ಬಡಮಕ್ಕಳ ಪೋಷಕರು ಪೂರ್ವಪ್ರಾಥಮಿಕ ಶಿಕ್ಷಣ ಮತ್ತು ಪೌಷ್ಠಿಕ ಆಹಾರದ ಅವಶ್ಯಕತೆಯನ್ನು ಸರಿಯಾಗಿ ಮನಗಾಣದೆ ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸದೆ ಇರಬಹುದು. ಆದುದರಿಂದ ಅಂಗನವಾಡಿ ಶಿಕ್ಷಕಿಯರು ಈ ಮಕ್ಕಳನ್ನು ಅಂಗನವಾಡಿಗೆ ಆಕರ್ಷಿಸಲು ಹೆಚ್ಚು ಶ್ರಮವಹಿಸಬೇಕಾಗುವುದು ಹಾಗೂ ಅಂಗನವಾಡಿಗಳನ್ನು ಕ್ರಿಯಾತ್ಮಕವಾಗಿ ಮತ್ತು ಆಕರ್ಷಕವಾಗಿ ಇಟ್ಟುಕೊಳ್ಳಬೇಕು.


ಪೂರ್ವ ಪ್ರಾಥಮಿಕ ಶಿಕ್ಷಣವು ಮಕ್ಕಳ ಮಾನಸಿಕ, ಭೌತಿಕ ಮತ್ತು psychological ಅಭಿವೃದ್ಧಿಗೆ ಹಾಗೂ ಅವರ ಮುಂದಿನ ಜೀವನದಲ್ಲಿನ ಶಿಕ್ಷಣದ ಉತ್ತಮ ಪ್ರಗತಿಗೆ ಅತ್ಯಂತ ಅವಶ್ಯಕವೆಂಬುದಕ್ಕೆ ಹಲವಾರು ವೈಜ್ಞಾನಿಕ ಆಧಾರಗಳು ಇವೆ. ಮನುಷ್ಯರ ಮೆದುಳಿನ ಹೆಚ್ಚಿನ ಭಾಗವು ಮಗುವಿನ 6 ವರ್ಷದ ಒಳಗಿನ ಜೀವನದಲ್ಲಿ ಹೆಚ್ಚಿನ ಅಭಿವೃದ್ಧಿ ಆಗುವುದು. ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕ ಆಹಾರ ದೊರಕುವ ಅಂಗನವಾಡಿಗಳಿಗೆ ಹೋಗದ ಮಕ್ಕಳು ಮುಂದಿನ ಶಾಲಾಶಿಕ್ಷಣಕ್ಕೆ ಸರಿಯಾಗಿ ತಯಾರಾಗದೆ ಇರುವವರಾಗಿ ಉಳಿದುಕೊಳ್ಳುತ್ತಾರೆ. ಅಂಗನವಾಡಿಗೆ ಹೋದ ಮಕ್ಕಳು ಶಾಲೆಯನ್ನು ಬೇಗನೆ ಹೊಂದಿಕೊಂಡು ಶಾಲೆಗೆ ಸರಿಯಾಗಿ ಹಾಜರು ಆಗುತ್ತಿರುವುದನ್ನು ನಾವು ಕಂಡಿದ್ದೇವೆ.

ಶಿಕ್ಷಣವು ಒಂದು ಮೂಲಭೂತವಾದ ಹಕ್ಕಾಗಿದ್ದು, ಅದು ಮಾನವನ ಅರ್ಥಪೂರ್ಣವಾದ ಅಭಿವೃದ್ಧಿಗೆ ಅತ್ಯಂತ ಅವಶ್ಯಕವಾಗಿದೆ. ದೊಡ್ಡ ಸಂಖ್ಯೆಯ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ. ಅವರು ಶೋಷಣೆಗೆ ಒಳಗಾಗಿರಬಹುದು. ಕೆಲವರು ಕಠಿಣ ಕೆಲಸಗಳಲ್ಲಿ ತೊಡಗಿರಬಹುದು ಹಾಗೂ ಇತರರು ಸಮುದಾಯದ ಇತರ ಚಟುವಟಿಕೆಗಳಲ್ಲಿ ತೊಡಗಿರಬಹುದು. ಶಾಲೆಯಿಂದ ಹೊರಗೆ ಇರುವ ಮಕ್ಕಳು ಶಿಕ್ಷಣದ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ. ಇದು ಅವರ ವೈಯಕ್ತಿಕ ನಷ್ಟ ಮಾತ್ರವಲ್ಲದೆ, ಸಮುದಾಯದ ಮತ್ತು ರಾಷ್ಟ್ರದ ನಷ್ಟ.

ಶಾಲೆಯಿಂದ ಹೊರಗೆ ಇರುವ ಮಕ್ಕಳಲ್ಲಿ ಹಲವರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದು, ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಹಲವಾರು ಕಾರಣಗಳಿಂದ ಇವರನ್ನು ಬಾಲಕಾರ್ಮಿಕತೆಗೆ ದೂಡಲಾಗಿದೆ. ಇವರು ಹೆಚ್ಚಾಗಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಅವರ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಬದಲು ಕೆಲಸಕ್ಕೆ ಕಳುಹಿಸುವರು. ಇದು ಅವರಲ್ಲಿನ ಶಿಕ್ಷಣದ ಹಾಗೂ ಅದರ ಅನುಕೂಲಗಳ ಬಗ್ಗೆ ಇರುವ ಅರಿವಿನ ಕೊರತೆಯಿಂದಾಗಿರಬಹುದು. ಅವರು ಶಾಲಾ ಶಿಕ್ಷಣ ಬಹಳ ದುಬಾರಿ ವಸ್ತು ಅದು ಶ್ರೀಮಂತರಿಗೆ ಮಾತ್ರ ಲಭ್ಯ ಎಂದು ತಿಳಿದುಕೊಂಡಿರುತ್ತಾರೆ. ಅವರು ಶಾಲಾ ಶಿಕ್ಷಣ ಒಂದು ಲಾಭವಿಲ್ಲದ ಪ್ರಕ್ರಿಯೆ ಎಂದು ತಿಳಿದಿರುತ್ತಾರೆ. ಅವರು ಭವಿಷ್ಯದ ಬಗ್ಗೆ ಯೋಚಿಸುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡಲು ಶಾಲೆಗಳ ಸಹಾನುಭೂತಿ ಇಲ್ಲದ ವಾತಾವರಣ ಸಹ ಕಾರಣ.




ಶಾಲೆಯಿಂದ ಹೊರಗೆ ಇರುವ ಮಕ್ಕಳು ತಮ್ಮ ಭವಿಷ್ಯವನ್ನು ಕಳೆದುಕೊಳ್ಳುತ್ತಿದ್ದು, ಅವರು ಶಾಲೆಗೆ ಮರಳಿ ಬರುವುದು ಅತ್ಯಂತ ಅವಶ್ಯಕ. ಅವರು ಅವರಿಗೆ ತಕ್ಕುದಾದ ಶಿಕ್ಷಣವನ್ನು ಪಡೆದುಕೊಳ್ಳಬೇಕು. ಇಲ್ಲಿ ಹೆಚ್ಚು ಪ್ರಸ್ತುತವಾದ ತಂತ್ರ, ಮಕ್ಕಳು ಶಾಲೆಗೆ ಹೋಗದೆ ಇರುವುದನ್ನು ತಡೆಯುವುದು. ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವನ್ನು ಕಲಿಸಲು ಹಾಗೂ ಶಿಕ್ಷಣದ ಬೇಡಿಕೆ ಉಂಟು ಮಾಡಲು ಅತ್ಯಂತ ಉತ್ತಮದಾರಿ ಅಂಗನವಾಡಿಗಳು. ತನ್ನ ಪ್ರದೇಶದಲ್ಲಿ ಎಲ್ಲಾ ಮಕ್ಕಳನ್ನು



ಅಂಗನವಾಡಿಗೆ ಬರುವಂತೆ ಮಾಡಿ, ಅವರಿಗೆ ಪೌಷ್ಠಿಕಾಂಶದ ಆಹಾರ ಮತ್ತು ಲಸಿಕೆಯ ಷವಲತ್ತುಗಳನ್ನು ಒದಗಿಸುವುದು. ಮಾತೆಯರಿಗೆ ತಮ್ಮ ಮಕ್ಕಳ ಶಿಕ್ಷಣದ ಹಾಗೂ ಪೌಷ್ಠಿಕಾಂಶದ ಅವಶ್ಯಕತೆಯನ್ನು ಭರಿಸಲು ಸಾಧ್ಯವಾಗುವಂತೆ ಅವರಿಗೆ ಅವಶ್ಯಕವಾದ ಪೌಷ್ಠಿಕಾಂಶಗಳನ್ನು ಮತ್ತು ಶಿಕ್ಷಣವನ್ನು ಒದಗಿಸಿ ಅವರ ಬಲವರ್ಧನೆ ಮಾಡುವುದು, ಅಂಗನವಾಡಿ ಶಿಕ್ಷಕಿಯರ ಮುಖ್ಯ ಕೆಲಸವಾಗಿರುವುದರಿಂದ, ಅವರು ಬಾಲಕಾರ್ಮಿಕ ಸಮಸ್ಯೆಯನ್ನು ಮುಖ್ಯ ಮಟ್ಟದಲ್ಲಿ ಪರಿಹರಿಸುವ ಸ್ಥಾನದಲ್ಲಿರುತ್ತಾರೆ. ಅಂಗನವಾಡಿ ಶಿಕ್ಷಕಿಯರು ಹಾಗೂ ಅವರ ಸಂಘಟನೆಗಳನ್ನು ಬಾಲಕಾರ್ಮಿಕತೆಯ ನಿವಾರಣೆ ತಮ್ಮ ಜೀವನದ ಧ್ಯೇಯವನ್ನಾಗಿ ತೆಗೆದುಕೊಳ್ಳಬೇಕು. ಬಾಲಕಾರ್ಮಿಕತೆಯಂತಹ ಸಾಮಾಜಿಕ ಕಳಕಳಿಯ ವಿಚಾರಗಳ ಬಗ್ಗೆ ಕೆಲಸ ಮಾಡಲು ಪ್ರೇರಣೆ ಹೊಂದಿದ ಅಂಗನವಾಡಿ ಶಿಕ್ಷಕಿಯರು ತಾವು ಪ್ರತ್ಯೇಕಿಸಲ್ಪಟ್ಟು ಏಕಾಂಗಿ ಆಗಿದ್ದೇವೆ ಎಂಬ ಭಾವನೆ ಹೊಂದಿ ಒಬ್ಬೊಬ್ಬರಿಗೆ ಕೆಲಸ ಮಾಡಲು ಅಸಾಧ್ಯವಾಗಬಹುದು. ಈ ಸಮಸ್ಯೆಯ ಪರಿಹಾರಕ್ಕಾಗಿ ಸ್ಥಳೀಯ ಅಂಗನವಾಡಿ ಶಿಕ್ಷಕಿಯರೊಂದಿಗೆ, ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳೊಂದಿಗೆ, ಸಮುದಾಯದ ಇತರ ಸದಸ್ಯರೊಂದಿಗೆ ಸೇರಿಕೊಂಡು ಒಂದು ಸಹಾಯದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅವಶ್ಯವಾಗಿದೆ.

ಈ ತರಬೇತಿ ಕೈಪಿಡಿಯನ್ನು ಅಂಗನವಾಡಿ ಶಿಕ್ಷಕಿಯರು ಮತ್ತು ಅವರ ಸಂಘಟನೆಯ ಪದಾಧಿಕಾರಿಗಳನ್ನು, ಹಾಗೂ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಶ್ರಮಿಸುವ ಇತರರನ್ನು ತರಬೇತಿಗೊಳಿಸಲು ಹಾಗೂ ಸೂಕ್ಷ್ಮತೆಗೊಳಿಸಲು ತಯಾರಿಸಲಾಗಿದೆ.





## 1.2 ಕೈಪಿಡಿಯ ಬಗ್ಗೆ

ಈ ತರಬೇತಿ ಕೈಪಿಡಿಯಲ್ಲಿ ನಾಲ್ಕು ಭಾಗಗಳಿವೆ,

ಮೊದಲನೆಯ ಭಾಗದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ಕೈಪಿಡಿಯನ್ನು ಅರ್ಥಮಾಡಿಕೊಳ್ಳುವಂತಹ ಮತ್ತು ತರಬೇತಿಯನ್ನು ಸುಸೂತ್ರವಾಗಿ ಸಂಘಟಿಸಲು ಉಪಯೋಗವಾಗುವಂತಹ ಕೆಲವು ಮಾಹಿತಿಗಳು ಇವೆ.

ಎರಡನೆಯ ಭಾಗದಲ್ಲಿ ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಅವರ ಸಂಘಟನೆಯ ನಾಯಕರುಗಳಿಗೆ ತರಬೇತಿ ಕೊಡುವ ಬಗ್ಗೆ ತರಬೇತಿ ಚಟುವಟಿಕೆಗಳು ಇವೆ. ಇದು 2 ದಿನಗಳ ತರಬೇತಿಯಾಗಿದೆ. ಬಾಲಕಾರ್ಮಿಕತೆಯು ಬಹಳ ವಿಶಾಲವಾದ ವಿಷಯವಾಗಿದ್ದು ಎಲ್ಲಾ ಮುಖ್ಯ ವಿಚಾರಗಳನ್ನು ಸಮಯದ ಅಭಾವದಿಂದಾಗಿ ಈ 2 ದಿನಗಳ ತರಬೇತಿಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ಸ್ಥಳೀಯ ಅವಶ್ಯಕತೆಗಳಿಗೆ ಸಂಬಂಧಪಟ್ಟಂತೆ ತರಬೇತುದಾರರು ಪೂರಕವಾದ ವಿಚಾರಗಳನ್ನು ಸೂಕ್ತ ಬದಲಾವಣೆಯೊಂದಿಗೆ ಸೇರಿಸಿಕೊಳ್ಳಬಹುದಾಗಿದೆ. ಸಮಯದ ಅಭಾವವಿದ್ದಲ್ಲಿ ಇಡೀ ತರಬೇತಿಯ ಮೂಲ ಆಶಯಕ್ಕೆ ಧಕ್ಕೆ ಬರದಂತೆ ತರಗತಿಗಳನ್ನು ಸಂಕುಚಿತಗೊಳಿಸಬಹುದಾಗಿದೆ.

ಮೂರನೆಯ ಭಾಗದಲ್ಲಿ ತರಬೇತಿ ಚಟುವಟಿಕೆಗಳಿಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುವ ಲೇಖನಗಳಿವೆ.ನಾಲ್ಕನೇ ಭಾಗದಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಪವರ್ ಪಾಯಿಂಟ್ ಮಂಡನೆಯ ಸಂಬಂಧಪಟ್ಟಂತಹ ಸಾಹಿತ್ಯವನ್ನು ಒದಗಿಸಲಾಗಿದೆ. ಇದಲ್ಲದೆ ಬಾಲಕಾರ್ಮಿಕ, ಸಂತೋಷದ ಮಗು ಮತ್ತು ಸ್ನೇಹ ಸೂಚಕ ಪಟ್ಟಿಯನ್ನು ಸಹ ಸೇರಿಸಲಾಗಿದೆ. ಇದರಲ್ಲಿ ಹಲವಾರು ರೀತಿಯ ತರಬೇತಿ ಚಟುವಟಿಕೆಳಿದ್ದು ಅಂಗನವಾಡಿ ಶಿಕ್ಷಕಿಯರಿಗೆ ಹಾಗೂ ಅವರ ಸಂಘಟನೆಯ ನಾಯಕರುಗಳ ನೇರ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ತರಬೇತಿ ಕೈಪಿಡಿ ತಯಾರಿಸಲಾಗಿದೆ. ತರಬೇತಿ ಕೈಪಿಡಿಯಲ್ಲಿ ಬಹಳಷ್ಟು ಚಿತ್ರಗಳಿದ್ದು, ಅವುಗಳನ್ನು ತರಬೇತಿದಾರರು ತರಬೇತಿಯಲ್ಲಿ ಶಿಬಿರಾರ್ಥಿಗಳಿಗೆ ವಿಷಯುಗಳನ್ನು ಮನವರಿಕೆ ಮಾಡಲು ಉಪಯೋಗಿಸಬಹುದಾಗಿದೆ.

ಪ್ರತಿಯೊಂದು ತರಬೇತಿ ಚಟುವಟಿಕೆಯನ್ನು ಹಲವಾರು ಉಪಚಟುವಟಿಕೆಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ತರಬೇತಿ ಚಟುವಟಿಕೆ ಈ ಕೆಳಗಿನ ಭಾಗಗಳನ್ನು ಒಳಗೊಂಡಿದೆ.

- ಶೀರ್ಷಿಕೆ
- ಅವಧಿ
- ಉದ್ದೇಶಗಳು
- ಪಠ್ಯ
- ವಿಧಾನಗಳು
- ಪರಿಕರಗಳು
- ಪ್ರಕ್ರಿಯೆ / ಚಟುವಟಿಕೆ
- ನಿರೀಕ್ಷಿತ ಫಲಿತಾಂಶ
- ಸಫಲತೆಗೆ ಸೂಚ್ಯಂಕಗಳು
- ಸೂಚನೆಗಳು




## 1.3 ತರಬೇತಿ ವ್ಯವಸ್ಥಾಪಕರಿಗೆ ಸೂಚನೆಗಳು

1. ಸುವ್ಯವಸ್ಥೆಯನ್ನು ಮಾಡಬೇಕು.
2. ಬಾಲಕಾರ್ಮಿಕತೆಯ ಮೇಲೆ ಇರುವ ವಿಡಿಯೋ ಚಿತ್ರಗಳನ್ನು ನೊಂದಣಿ ಮತ್ತು ಊಟದ ವಿರಾಮಗಳಲ್ಲಿ ಪ್ರದರ್ಶಿಸಬೇಕು.
3. ನೊಂದಣಿ ಪ್ರದೇಶದಲ್ಲಿ ಮತ್ತು ತರಬೇತಿ ಕೊಠಡಿಯಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಪೋಸ್ಟರ್, ಫೋಟೋಗಳನ್ನು ಪ್ರದರ್ಶಿಸಬೇಕು.
4. ಭಾಷೆ ಮತ್ತು ವಿಷಯದ ಮೇಲೆ ಹಿಡಿತ ಇರುವವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಬೇಕು.
5. ಸಮಯದ ಪಾಲನೆ ಹಾಗೂ ತರಬೇತಿ ಸಮಯಗಳಲ್ಲಿ ಶಿಸ್ತಿನಿಂದಿರುವುದು ಬಹಳ ಮುಖ್ಯ
6. ಗುಂಪು ಚರ್ಚೆಗೆ ಮೊದಲೇ ವ್ಯವಸ್ಥೆ ಮಾಡಿಕೊಳ್ಳಬೇಕು. ನೊಂದಣಿಯ ಮಾಹಿತಿಯ ಪ್ರಕಾರ ಶಿಬಿರಾರ್ಥಿಗಳನ್ನು ಉಪಗುಂಪುಗಳನ್ನಾಗಿ ವಿಂಗಡಿಸಬೇಕು. ಪ್ರತಿ ಅವಧಿಯಲ್ಲಿ ಗುಂಪುಗಳನ್ನು ರಚಿಸಲು ಹೋಗಬಾರದು. ಸಾಧ್ಯವಿದ್ದರೆ ಪ್ರತಿಗುಂಪಿಗೆ ಪ್ರತ್ಯೇಕ ಕೊಠಡಿಗಳನ್ನು ಒದಗಿಸಬಹುದು ಗುಂಪು ಚರ್ಚೆಗೆ ಅವಶ್ಯಕವಾದ ವಸ್ತುಗಳನ್ನು ಮೊದಲೆ ಸಿದ್ದಗೊಳಿಸಿಕೊಂಡಿರಬೇಕು.
7. ತರಬೇತಿಯ ಸೂಚನೆಗಳನ್ನು ಕನಿಷ್ಠ 8 ದಿನಗಳ ಮೊದಲು ಶಿಬಿರಾರ್ಥಿಗಳಿಗೆ ತಲುಪಿಸಬೇಕು.
8. ತರಬೇತಿ ಸ್ಥಳವನ್ನು ಶುಚಿಯಾಗಿ ಇಡುವುದು ಅವಶ್ಯಕ
9. ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯದ ವ್ಯವಸ್ಥೆ ಶುಚಿಯಾಗಿ ಇರಬೇಕು
10. ಉತ್ತಮವಾದ ಮತ್ತು ಆರೋಗ್ಯಕರವಾದ ಆಹಾರದ ವ್ಯವಸ್ಥೆ ಮಾಡಬೇಕು. ಆಹಾರದ ಸರಬರಾಜನ್ನು ಸಮಯಕ್ಕೆ ಸರಿಯಾಗಿ ಮಾಡಬೇಕು. ಚಹಾ ಮತ್ತು ಕಾಫಿಯನ್ನು ಸರಿಯಾದ ಕಪ್ ಮತ್ತು ಸಾಸರ್‌ನಲ್ಲಿ ಕೊಡಬೇಕು. ಯಾವುದೇ ಕಾರಣಕ್ಕೂ ಪ್ಲಾಸ್ಟಿಕ್ ಅಥವಾ ಇತರ ಪ್ಲಾಸ್ಟಿಕ್ ಪರಿಕರಗಳನ್ನು ಉಪಯೋಗಿಸಬಾರದು.
11. ಬರೆಯುವ ಪುಸ್ತಕ, ಫೈಲ್ ಮುಂತಾದವುಗಳ ಮೇಲೆ ತರಬೇತಿಯ ಬಗ್ಗೆ, ದಿನಾಂಕ ಇತ್ಯಾದಿ ಮುದ್ರಿಸಬೇಕು. ಇದರ ಜೊತೆಯಲ್ಲಿ ಸಾಧ್ಯವಾದರೆ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಧ್ಯೇಯ ವಾಕ್ಯಗಳನ್ನು ಮುದ್ರಿಸಬಹುದು.
12. ತರಬೇತಿಗೆ ಸರಿಯಾದ ಪ್ರಚಾರ ಕೊಡಬೇಕು. ಇದರಿಂದ ಬಾಲಕಾರ್ಮಿಕತೆಯ ನಿರ್ಮೂಲನ ಕಾರ್ಯಕ್ರಮಕ್ಕೆ ಒತ್ತು ಸಿಗುವುದು.
13. ಉದ್ಘಾಟನಾ ಸಮಾರಂಭದಲ್ಲಿ ಯಾರು ಅತಿಥಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾರೆ, ಯಾರು ಸ್ವಾಗತ ಮಾಡುತ್ತಾರೆ, ಯಾರು ಪ್ರಾರ್ಥನೆ ಮಾಡುತ್ತಾರೆ, ಯಾರು ಪ್ರಸ್ತಾವನೆ ಮತ್ತು ವಂದನಾರ್ಪಣೆ ಮಾಡುತ್ತಾರೆ ಎಂಬುದು ಮೊದಲೇ ನಿರ್ಧಾರವಾಗಿರಬೇಕು. ಯಾವುದೇ ರೀತಿಯ ಆಭಾಸಕ್ಕೆ ಎಡೆಮಾಡಿ ಕೊಡಬಾರದು. ಪ್ರತಿಯೊಬ್ಬರು ಈ ಬಗ್ಗೆ ಸಾಕಷ್ಟು ತಯಾರಿ ಮಾಡಿಕೊಳ್ಳುವುದು ಅವಶ್ಯಕ. ಸಭೆಯಲ್ಲಿ ಭಾಗವಹಿಸುವ ಅತಿಥಿಗಳಿಗೆ, ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ಇರುವ ಮಾಹಿತಿ ಪತ್ರಗಳನ್ನು ಒದಗಿಸಬೇಕು.



14. ತರಬೇತಿಯನ್ನು ಶಾಂತವಾದ ಪ್ರದೇಶದಲ್ಲಿ ವ್ಯವಸ್ಥೆ ಮಾಡಬೇಕು.
15. ತರಬೇತಿಯ ಕೊಠಡಿಯಲ್ಲಿ ಶಿಬಿರಾರ್ಥಿಗಳಿಗೆ ಅವಶ್ಯಕವಾದಷ್ಟು ಜಾಗವಿರಬೇಕು.
16. ಅನುಕೂಲಕರವಾದ ಪಿಠೋಪಕರಣಗಳು ಇರುವುದು ಅವಶ್ಯಕ.
17. ಉತ್ತಮವಾದ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರಬೇಕು.
18. ತರಬೇತಿಗೆ ಅವಶ್ಯಕವಾದ ಕರಿಹಲಗೆ, ಬಿಳಿಬೋರ್ಡು, ಸೀಮೆಸುಣ್ಣ, ಮಾರ್ಕರ್, ಕಂದುಬಣ್ಣದ ಹಾಳೆಗಳು, ಬಿಳಿಹಾಳೆಗಳು, ಡ್ರಾಯಿಂಗ್ ಹಾಳೆಗಳು, ಕತ್ತರಿ, ಸೆಲೋಟೇಪ್, ಎಲ್.ಸಿ.ಡಿ, ಓ.ಹೆಚ್.ಪಿ ಪ್ರೊಜೆಕ್ಟರ್ ಇತ್ಯಾದಿ ವ್ಯವಸ್ಥೆ ಸಿದ್ಧಗೊಳಿಸಿಸರಬೇಕು.
19. ವ್ಯವಸ್ಥಾಪಕರು, ತರಬೇತಿ ಕೇಂದ್ರಕ್ಕೆ ಹಿಂದಿನ ದಿನವೇ ಹೋಗಿ ವ್ಯವಸ್ಥೆಯ ಪರಿವೀಕ್ಷಣೆ ನಡೆಸಿ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು.






## 1.4 ತರಬೇತಿ ಕೈಪಿಡಿಯ ಉದ್ದೇಶಗಳು

- ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಪ್ರತಿನಿಧಿಗಳಿಗೆ ಬಾಲಕಾರ್ಮಿಕತೆಯ ಕ್ರಿಯಾತ್ಮಕ ಅರಿವು ನೀಡಲು ಅನುಕೂಲವಾಗುವುದು
- ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಅವರ ಸಂಘಟನೆಯ ನಾಯಕರುಗಳಿಗೆ ಬಾಲಕಾರ್ಮಿಕ ಸಮಸ್ಯೆಯ ಬಗ್ಗೆ ಅವರ ಮಾಹಿತಿ ಮತ್ತು ಜ್ಞಾನವನ್ನು ಹೆಚ್ಚಿಸುವುದು
- ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಅವರ ಸಂಘಟನೆಯ ನಾಯಕರುಗಳಿಗೆ ಬಾಲಕಾರ್ಮಿಕತೆ ಅವರ ಮಕ್ಕಳ ಬೆಳವಣಿಗೆಗೆ ಹಾನಿಕಾರಕ ಎಂಬುದನ್ನು ಮನವರಿಕೆ ಮಾಡಿಕೊಡುವುದು
- ತಮ್ಮ ಪರಿಸರದಲ್ಲಿನ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸಲು ಮನವರಿಕೆ ಮಾಡಿಕೊಡುವುದು
- ಬಾಲಕಾರ್ಮಿಕತೆ ಬಗ್ಗೆ ಅವಶ್ಯವಾದ ಮಾಹಿತಿಯನ್ನು ಒದಗಿಸುವುದು
- ಬಾಲಕಾರ್ಮಿಕತೆಯ ಕಾರಣಗಳನ್ನು ಹಾಗೂ ಅದರ ಪರಿಣಾಮವನ್ನು ಮನದಟ್ಟು ಮಾಡುವುದು
- ಅವರಿಗೆ “ಮಗು / ಮಕ್ಕಳು” “ಬಾಲಕಾರ್ಮಿಕರು” “ಅಪಾಯಕಾರಿ ಕೆಲಸ” “ನಿಕೃಷ್ಠ ಕೆಲಸ” ಮುಂತಾದವುಗಳ ಅರ್ಥ ಮಾಡಿಕೊಡುವುದು





## 1.5 ತರಬೇತಿಯಲ್ಲಿ ಉಪಯೋಗಿಸಿದ ವಿಧಾನಗಳು

### 1.5.1 ಉಪನ್ಯಾಸ

ಉಪನ್ಯಾಸವನ್ನು, ಹೊಸ ವಿಚಾರಗಳನ್ನು ಮಂಡಿಸಲು, ತರಬೇತಿಯ ಅವಧಿಯನ್ನು ಆರಂಭಿಸಲು, ಹೊಸ ವಿಷಯ ಅಥವಾ ಟಾಪಿಕ್‌ಗಳನ್ನು ಮಂಡಿಸಲು ಉಪಯೋಗಿಸಲಾಗಿದೆ.

### 1.5.2 ಪ್ರಶ್ನೆಗಳು

ಇದನ್ನು ಶಿಬಿರಾರ್ಥಿಗಳನ್ನು ಆಸಕ್ತರನ್ನಾಗಿ ಇಡಲು ಮತ್ತು ಚರ್ಚೆಯನ್ನು ಆರಂಭಿಸಲು ಉಪಯೋಗಿಸಲಾಗುವುದು. ಪ್ರಶ್ನೆಗಳನ್ನು ಕೇಳುವಾಗ ಹೆದರಿಸುವ ಅಥವಾ ಕಿರಿಕಿರಿ ಉಂಟು ಮಾಡುವ ಹಾಗೆ ಕೇಳಬಾರದು. ಶಿಬಿರಾರ್ಥಿಗಳಿಗೆ ಅವರನ್ನು ಪರೀಕ್ಷೆ ಮಾಡಲು ಪ್ರಶ್ನೆ ಕೇಳಾಗುತ್ತಿದೆ ಎಂಬ ಭಾವನೆ ಬರಬಾರದು.

### 1.5.3 ಉಪಗುಂಪುಗಳಲ್ಲಿ ಚರ್ಚೆ

ಎಲ್ಲಾ ಶಿಬಿರಾರ್ಥಿಗಳು ಸಕ್ರಿಯವಾಗಿ ಭಾಗವಹಿಸಲು ಇದು ಸಹಕಾರಿ ಆಗುವುದು. ಇದು ಭಾಗವಹಿಸುವಿಕೆಯ ಕಲಿಕೆಗೆ ಸಹಾಯ ಮಾಡುವುದು.

### 1.5.4 ಸಣ್ಣ ಗುಂಪು ಚಟುವಟಿಕೆ

ಇದು ಸಹ ಒಂದು ಸಕ್ರಿಯ ವಿಧಾನ.

ಇದು ಸಹಕಾರಿ ತತ್ವದಲ್ಲಿ ಕೆಲಸ ಮಾಡಲು ಅನುವು ಮಾಡಿಕೊಡುವುದು.

ತಮ್ಮನ್ನು ನೋಡಲಾಗುತ್ತಿದೆ ಎಂಬ ಮನೋಭಾವದೊಂದಿಗೆ ಪ್ರಕ್ರಿಯೆಯಲ್ಲಿ ಭಾಗವಹಿಸುವರು.

ಇದು ಶಿಬಿರಾರ್ಥಿಗಳಿಗೆ ಅನ್ವೇಷಣೆ ಮಾಡಲು, ಚರ್ಚಿಸಲು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸುವುದು.

ಸ್ವಲ್ಪ ಕಡಿಮೆ ಧ್ಯೇಯದ ಸದಸ್ಯರಿಗೆ ಭಾಗವಹಿಸಲು ಆಸ್ಪದ ಮಾಡಿಕೊಡುವುದು.

### 1.5.5 ಪಾತ್ರಾಭಿನಯ

ಇದು ಸಹ ಶಿಬಿರಾರ್ಥಿಗಳಿಗೆ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸುವ ಒಂದು ಪ್ರಕ್ರಿಯೆ. ಯಾವುದೇ ಘಟನೆಯನ್ನು ಪಾತ್ರಾಭಿನಯವಾಗಿ ಮಾರ್ಪಡಿಸಬಹುದು. ಇದು ಶಿಬಿರಾರ್ಥಿಗಳಿಗೆ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.

### 1.5.6 ಕ್ರಿಯಾ ಯೋಜನೆ

ಇದನ್ನು ಗುಂಪುಚಟುವಟಿಕೆಯಾಗಿ ಅಥವಾ ವ್ಯಕ್ತಿಗತ ಚಟುವಟಿಕೆಯಾಗಿ ಉಪಯೋಗಿಸಬಹುದು. ಇದು ಶಿಬಿರಾರ್ಥಿಗಳಿಗೆ ಹೆಚ್ಚು ಯೋಚಿಸಲು ಆಸ್ಪದ ಮಾಡಿಕೊಡುವುದು. ಇದು ಶಿಬಿರಾರ್ಥಿಗಳಿಗೆ ಹೊಸ ಹೊಸ ತಂತ್ರಗಳನ್ನು ರೂಪಿಸಿಕೊಳ್ಳಲು ಸಹಾಯ ಮಾಡುವುದು.

### 1.5.7 ಕೋರ್ಸ್‌ನ ಸಭೆ

ಕೋರ್ಸಿನ ಸಭೆ ನಡೆಸುವುದರಿಂದ ಶಿಬಿರಾರ್ಥಿಗಳಿಗೆ ಕೋರ್ಸಿನ ಬಗ್ಗೆ ಸರಿಯಾದ ಮಾಹಿತಿ ದೊರಕುತ್ತದೆ.


### 1.5.8 ನಿರ್ದೇಶಿತ ಮಾತುಕತೆ

ಇದು ಶಿಬಿರಾರ್ಥಿಗಳಿಗೆ ಹೊಸ ವಿಚಾರಗಳನ್ನು ಹೊರತರಲು ಸಹಕಾರಿಯಾಗುತ್ತದೆ. ತರಬೇತುದಾರರು ನಿರಂತರವಾಗಿ ನಿರ್ದೇಶನ ಕೊಡುತ್ತಿರುತ್ತಾರೆ. ನಿರ್ದೇಶನಗಳ ಮೂಲಕ ಶಿಬಿರಾರ್ಥಿಗಳಿಂದ ಹೊಸ ಹೊಸ ವಿಚಾರಗಳನ್ನು ಹೊರತರಲು ಸಹಾಯವಾಗುವುದು.

### 1.5.9 ಮೆದುಳುಮಂಥನ

ಇದರಲ್ಲಿ ಶಿಬಿರಾರ್ಥಿಗಳು ಒಂದೇ ವಿಷಯದ ಮೇಲೆ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಲು ಅವಕಾಶ ಇದೆ. ಶಿಬಿರಾರ್ಥಿಗಳು ತಮ್ಮ ಮನಸ್ಸಿಗೆ ಈ ಬಗ್ಗೆ ಮೊದಲು ಬಂದ ವಿಚಾರವನ್ನು ತಿಳಿಸಲು ಶಿಬಿರಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.






## 1.6 ತರಬೇತುದಾರರ ಕೆಲಸ ಕಾರ್ಯಗಳು

- ತರಬೇತುದಾರರಿಗೆ ಗುಂಪಿನ ಸಂಯೋಜನೆಯ ಬಗ್ಗೆ ಅರಿವಿದ್ದು, ಎಲ್ಲಾ ಶಿಬಿರಾರ್ಥಿಗಳಿಗೆ ಸಮಾನ ಅವಕಾಶ ಒದಗಿಸಬೇಕು.
- ತರಬೇತುದಾರರು ಎಲ್ಲಾ ಶಿಬಿರಾರ್ಥಿಗಳ ಎಲ್ಲಾ ರೀತಿಯ ನಿಲುವು ಮತ್ತು ಯೋಚನೆಗಳಿಗೆ ಬೆಲೆ ಕೊಡಬೇಕು.
- ತರಬೇತುದಾರರು ಚರ್ಚೆಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.
- ತರಬೇತುದಾರರು ಮೊದಲು ಚರ್ಚೆಯನ್ನು ಆರಂಭಿಸಬೇಕು. ಅವಧಿಯ ಅಂತ್ಯದಲ್ಲಿ ಚರ್ಚೆಯ ಮುಖ್ಯಾಂಶಗಳನ್ನು ಪುನರ್‌ಮನನ ಮಾಡಬೇಕು.
- ಅವಶ್ಯವಿದ್ದಲ್ಲಿ ಕ್ಷೇತ್ರಭೇಟಿ ಹಾಗು ಅತಿಥಿ ಉಪನ್ಯಾಸಕರ ವ್ಯವಸ್ಥೆ ಮಾಡಬೇಕು.
- ತರಬೇತುದಾರರಿಗೆ ಸಮಯ ಪ್ರಜ್ಞೆ ಇರಬೇಕು. ಅವರು ಸಮಯಕ್ಕೆ ಸರಿಯಾಗಿ ಹಾಜರಿದ್ದು ಇತರರಿಗೆ ಮಾದರಿ ಆಗಬೇಕು.
- ಶಿಬಿರಾರ್ಥಿಗಳ ಅನುಭವದ ಜ್ಞಾನಕ್ಕೆ ಬೆಲೆ ಕೊಡಬೇಕು.
- ತರಬೇತಿದಾರರು ತರಬೇತಿ ಪ್ರಾರಂಭವಾಗುವುದಕ್ಕಿಂತ ಮೊದಲೆ ಸರಿಯಾದ ತಯಾರಿ ಮಾಡಿಕೊಳ್ಳಬೇಕು.
- ತರಬೇತಿದಾರರು ಗುಂಪುಚರ್ಚೆಯನ್ನು ಪ್ರೋತ್ಸಾಹಿಸಬೇಕು.
- ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಕಿರುಹೊತ್ತಿಗೆ, ಮಾಹಿತಿ ಪತ್ರ ಇತ್ಯಾದಿ ಸಂಗ್ರಹಿಸಿ ಶಿಬಿರಾರ್ಥಿಗಳಿಗೆ ಹಂಚಬೇಕು.
- ತರಬೇತಿ ವೇಳಾಪಟ್ಟಿಯನ್ನು ಶಿಬಿರಾರ್ಥಿಗಳು ಅರ್ಥಮಾಡಿಕೊಳ್ಳಲು ಸಹಕರಿಸಬೇಕು.
- ತರಬೇತಿ ಸಂದರ್ಭಗಳಲ್ಲಿ ಅನಾವಶ್ಯಕ ಚರ್ಚೆ, ಮಾತುಕತೆ ಇತ್ಯಾದಿ ನಡೆಯದಂತೆ ನೋಡಿಕೊಳ್ಳಬೇಕು.
- ಹಾಡು, ನಾಟಕ ಇತ್ಯಾದಿಗೆ ಪ್ರೋತ್ಸಾಹ ಕೊಡಬೇಕು.
- ಶಿಬಿರಾರ್ಥಿಗಳು ಪರಸ್ಪರ ಸಮಾಲೋಚಿಸಿ ಕಲಿಯಲು ಪ್ರೋತ್ಸಾಹ ನೀಡಬೇಕು.
- ಶಿಬಿರಾರ್ಥಿಗಳಲ್ಲಿ ಯಾರಾದರೂ ಒಬ್ಬರು, ಇಬ್ಬರು ಅಥವಾ ಒಂದು ಗುಂಪು ಇಡೀ ತರಬೇತಿಯನ್ನು ತಮ್ಮ ಅಧೀನಗೊಳಿಸಿಕೊಳ್ಳುವದಕ್ಕೆ ಪ್ರೋತ್ಸಾಹ ಕೊಡಬಾರದು.
- ಭಾಗವಹಿಸದೇ ಇರುವ ಶಿಬಿರಾರ್ಥಿಗಳನ್ನು ಭಾಗವಹಿಸುವಂತೆ ಪ್ರಚೋದಿಸಬೇಕು.
- ತರಬೇತುದಾರರು ಪ್ರಜಾಸತ್ತಾತ್ಮಕವಾಗಿರಬೇಕು.
- ಶಿಬಿರಾರ್ಥಿಗಳ ಭಾಗವಹಿಸುವಿಕೆಯನ್ನು ಗುರುತಿಸಬೇಕು.
- ಶಿಬಿರಾರ್ಥಿಗಳು ಭಾಗವಹಿಸುವಿಕೆಯಿಂದ ಮತ್ತು ಚರ್ಚೆಯಿಂದ ಹಿಂತೆಗೆಯದಂತೆ ನೋಡಿಕೊಳ್ಳಬೇಕು.






## 1.7 ಮಾದರಿ ವೇಳಾಪಟ್ಟಿ


**ದಿನ ಒಂದು**

| ಕ್ರ.ಸಂ | ವಿಷಯ | ಸಮಯ | ಚಟುವಟಿಕೆ | ಪರಿಕರಗಳು |
|---|---|---|---|---|
| 1. | ನೊಂದಣಿ | 09:30 ರಿಂದ 10:15 | ತರಬೇತಿ ಪೂರಕ ಸಾಮಗ್ರಿಗಳ ವಿತರಣೆ, ಮಾಹಿತಿ ಸಂಗ್ರಹಣೆ | ನೊಂದಣಿ ಪುಸ್ತಕ, ನೊಂದಣಿ ನಮೂನೆ, ಫೈಲ್, ಪೆನ್ನು, ಸಂಪನ್ಮೂಲ ವಸ್ತುಗಳು ಇತ್ಯಾದಿ |
| 2. | ಉದ್ಘಾಟನೆ | 10:15 ರಿಂದ 10:45 | ಸಭೆ | ಉದ್ಘಾಟನಾ ಸಮಾರಂಭಕ್ಕೆ ಸಂಬಂಧಿಸಿದಂತೆ ಸಾಮಗ್ರಿಗಳು |
| 3. | ಸ್ವ-ಪರಿಚಯ | 10:45 ರಿಂದ 11:45 | ಆಟಗಳು, ಚರ್ಚೆ, ಉಪನ್ಯಾಸ | ಡ್ರಾಯಿಂಗ್ ಹಾಳೆಗಳು, ಕರಿ ಹಲಗೆ, ಕಂದು ಬಣ್ಣದ ಹಾಳೆಗಳು, ಮಾರ್ಕರ್ |
| | ಚಹಾ ವಿರಾಮ | 11:45 ರಿಂದ 12:00 | | |
| 4. | ಬಾಲಕಾರ್ಮಿಕತೆಯ ವಿಸ್ತಾರ, ಆಳ – ಕಾರಣಗಳು ಮತ್ತು ಪರಿಣಾಮಗಳು, ಅಪಾಯಕಾರಿ ಬಾಲಕಾರ್ಮಿಕತೆ – ನಿಕೃಷ್ಟ ಬಾಲಕಾರ್ಮಿಕತೆ. | 12:00 ರಿಂದ 01:15 | ಮಂಡನೆ, ಮುಕ್ತ ಚರ್ಚೆ | ಎಲ್.ಸಿ.ಡಿ ಪ್ರೊಜೆಕ್ಟರ್, ಓ.ಹೆಚ್.ಪಿ, ಪವರ್ ಪಾಯಿಂಟ್ ಮಂಡನೆ, ಕರಿ ಹಲಗೆ, ಬಿಳಿ ಹಲಗೆ, ಮಾರ್ಕರ್, ಸ್ಕೆಚ್ ಪೆನ್ನುಗಳು |
| 5. | ಶಾಲೆಯಿಂದ ಹೊರಗಿರುವ ಮಕ್ಕಳ ವಿಶೇಷ ಅಗತ್ಯತೆಗಳು | 01:15 ರಿಂದ 02:30 | ಮಂಡನೆ, ಉಪನ್ಯಾಸ, ಚರ್ಚೆ, ಪ್ರಾತ್ಯಕ್ಷಿಕೆ | ಎಲ್.ಸಿ.ಡಿ ಪ್ರೊಜೆಕ್ಟರ್, ಓ.ಹೆಚ್.ಪಿ, ಪವರ್ ಕಂದು ಬಣ್ಣದ ಹಾಳೆಗಳು, ಮಾರ್ಕರ್, ಸ್ಕೆಚ್ ಪೆನ್ನುಗಳು |
| | ಊಟದ ವಿರಾಮ | 02:30 ರಿಂದ 03:00 | | |
| 6. | ಶಿಕ್ಷಣ ಮತ್ತು ಅಭಿವೃದ್ಧಿ | 03:00 ರಿಂದ 04:15 | ಮಂಡನೆ. ಚರ್ಚೆ | ಎಲ್.ಸಿ.ಡಿ ಪ್ರೊಜೆಕ್ಟರ್, ಓ.ಹೆಚ್.ಪಿ, ಪವರ್ ಪಾಯಿಂಟ್ ಮಂಡನೆ, ಕಂದು ಬಣ್ಣದ ಹಾಳೆಗಳು, ಬಿಳಿ ಹಾಳೆಗಳು |
| 7. | ಮಕ್ಕಳ ಹಕ್ಕುಗಳ ಮತ್ತು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಕಾನೂನಿನ ಅವಕಾಶಗಳು | 04:15 ರಿಂದ 05:30 | ಮಂಡನೆ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಇತ್ಯಾದಿ |



**ದಿನ ಎರಡು**


| ಕ್ರ.ಸಂ | ವಿಷಯ | ಸಮಯ | ಚಟುವಟಿಕೆ | ಪರಿಕರಗಳು |
|---|---|---|---|---|
| 1. | ಪುನರ್ ಮನನ/ ಹಿಂದಿನ ದಿನದ ವರದಿ | 09:30 ರಿಂದ 10:00 | ವರದಿ ಓದುವುದು | ವರದಿ |
| 2. | ಬಾಲಕಾರ್ಮಿಕತೆ – ಹೆಣ್ಣು ಮಕ್ಕಳು – ಮಕ್ಕಳ ಸಾಗಾಟ | 10:00 ರಿಂದ 10:45 | ಉಪನ್ಯಾಸ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 3. | ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಪಾತ್ರ | 10:45 ರಿಂದ 11:30 | ಉಪನ್ಯಾಸ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 4. | ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಪಾತ್ರ | 11:45 ರಿಂದ 12:30 | ಉಪನ್ಯಾಸ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 5. | ಮಕ್ಕಳ ಸಾಗಾಟ ಮತ್ತು ಪರಿವೀಕ್ಷಣೆ | 12:30 ರಿಂದ 01:15 | ಉಪನ್ಯಾಸ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 6. | ಬಾಲಕಾರ್ಮಿಕತೆಯ ಕ್ವಿಜ್ | 02:00 ರಿಂದ 02:30 | ಕ್ವಿಜ್ | ಕ್ವಿಜ್ ಪ್ರತಿಗಳು |
| 7. | ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಹತ್ತಿರ ಸಂವಹನ ನಡೆಸುವುದು | 02:30 ರಿಂದ 03:15 | ಉಪನ್ಯಾಸ, ಗುಂಪು ಚರ್ಚೆ | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 8. | ಅವರ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆ ನಿರ್ಮೂಲನೆಗಾಗಿ ಕ್ರಿಯಾ ಯೋಜನೆ ತಯಾರಿ ನಾವೇನು ಮಾಡಬಹುದು? | 03:30 ರಿಂದ 04:30 | ಉಪನ್ಯಾಸ, ಗುಂಪು ಚರ್ಚೆ, ಗುಂಪು ವರದಿ ಬರೆಯುವುದು | ಕರಿ ಹಲಗೆ, ಸೀಮೆಸುಣ್ಣ, ಚಾರ್ಟ್ ಪೇಪರ್, ಸ್ಕೆಚ್ಚ ಪೆನ್ನುಗಳು |
| 9. | ಮೌಲ್ಯಮಾಪನ ಮತ್ತು ಸಾಮಾಜಿಕ ಒಪ್ಪಂದ | 04:30 ರಿಂದ 05:30 | ಮೌಲ್ಯಮಾಪನ ನಮೂನೆ ತುಂಬಿಸುವುದು, ಸಾಮಾಜಿಕ ಒಪ್ಪಂದಕ್ಕೆ ಸಹಿ ಮಾಡುವುದು | ಮೌಲ್ಯಮಾಪನ ಪ್ರತಿ, ಸಾಮಾಜಿಕ ಒಪ್ಪಂದ ಪ್ರತಿಗಳು |



# ಭಾಗ – 2

# ತರಬೇತಿ ಚಟುವಟಿಕೆಗಳು





# 2.1 ನೊಂದಣಿ

ಸಮಯ: 30 ನಿಮಿಷಗಳು

## 2.1.1 ಉದ್ದೇಶಗಳು

- ಶಿಬಿರಾರ್ಥಿಗಳ ಹೆಸರು ವಿಳಾಸ ಇತ್ಯಾದಿಗಳ ಮಾಹಿತಿ ಸಂಗ್ರಹಿಸುವುದು.
- ಶಿಬಿರಾರ್ಥಿಗಳಿಗೆ ತರಬೇತಿಗೆ ಅವಶ್ಯಕವಾದ ಪರಿಕರಗಳನ್ನು ವಿತರಿಸುವುದು.
- ಶಿಬಿರಾರ್ಥಿಗಳಿಗೆ "ಬಾಲಕಾರ್ಮಿಕತೆ"ಯನ್ನು ಪರಿಚಯಿಸುವುದು.

## 2.1.2 ಪರಿಕರಗಳು

- ನೊಂದಣಿ ಪುಸ್ತಕ
- ನೊಂದಣಿ ನಮೂನೆಗಳು
- ಪೆನ್ನು
- ಶಿಬಿರಾರ್ಥಿಗಳಿಗೆ ಹಂಚುವ ಪರಿಕರಗಳು
- (ತರಬೇತಿ ವೇಳಾಪಟ್ಟಿ, ತರಬೇತಿ ಪಠ್ಯಗಳು, ನೊಂದಣಿ ನಮೂನೆ, ಬರೆಯುವ ಪುಸ್ತಕ ಇತ್ಯಾದಿಗಳು)

## 2.1.3 ಪ್ರಕ್ರಿಯೆ

- ತರಬೇತಿ ದಿವಸ ವ್ಯವಸ್ಥಾಪಕರು ಸಾಕಷ್ಟು ಮೊದಲೇ ಬಂದು ವ್ಯವಸ್ಥೆಯನ್ನು ಇನ್ನೊಮ್ಮೆ ಪರೀಕ್ಷಿಸಬೇಕು.
- ಉತ್ತಮವಾಗಿ ಮಾತನಾಡಲು ಮತ್ತು ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಿಕೊಳ್ಳಲು ನೇಮಿಸಬೇಕು.
- ಶಿಬಿರಾರ್ಥಿಗಳು ಆಗಮಿಸಿದ ಹಾಗೆ ಅವರನ್ನು ನೊಂದಾಯಿಸಿಕೊಳ್ಳಬೇಕು. ನೊಂದಾಯಿಸಿಕೊಳ್ಳುವಾಗ ಅವರನ್ನು ವಿಚಾರಿಸಿಕೊಳ್ಳಬೇಕು. ಸೌಹಾರ್ದಯುತವಾಗಿ ಅವರ ಹತ್ತಿರ ಮಾತನಾಡಬೇಕು. ಅವರಲ್ಲಿನ ಮುಜುಗರ, ಶಂಕೆ ಇತ್ಯಾದಿ ನಿವಾರಿಸಿ ಹೋಗಿ ಅವರು ವಾತಾವರಣಕ್ಕೆ ಹೊಂದಿಕೊಳ್ಳುವ ಹಾಗೆ ನೋಡಿಕೊಳ್ಳುವುದು ಅವಶ್ಯಕ.
- ತರಬೇತಿ ನಡೆಯುವ ಕಟ್ಟಡದ ಬಾಗಿಲಲ್ಲಿ ಮುಖವಾಡ ಧರಿಸಿದ ಇಬ್ಬರು ನಿಂತು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಬಾಗಿಲಿನ ಒಂದು ಬದಿಯಲ್ಲಿ ನಗುತ್ತಿರುವ ಮಕ್ಕಳ ಮುಖವಾಡ ಧರಿಸಿದ ವ್ಯಕ್ತಿ ನಿಂತು ಶಿಬಿರಾರ್ಥಿಗಳು ಬಂದ ಹಾಗೆಲ್ಲ ಅವರನ್ನು ನಗುಮುಖದಿಂದ ಸತ್ಕರಿಸಿ ಕೈ ಕುಲುಕಿ ಬರಮಾಡಿಕೊಳ್ಳಬೇಕು.



- ಇನ್ನೊಂದು ಬದಿಯಲ್ಲಿ ಬಾಲಕಾರ್ಮಿಕರ ಮುಖವಾಡ ಧರಿಸಿಕೊಂಡು ಶಿಬಿರಾರ್ಥಿಗಳನ್ನು ಬರಮಾಡಿಕೊಳ್ಳಬೇಕು. ಅವರು ಒಳಗೆ ಬಂದ ಕೂಡಲೆ ಅವರ ಕೈ ಕುಲುಕಬೇಕು. "ಶುಭ ಮುಂಜಾನೆ" ಹೇಳಬೇಕು. ನಂತರ ಶಿಬಿರಾರ್ಥಿಗಳ ಹತ್ತಿರ "ನನ್ನ ಸ್ನೇಹಿತರಾಗುತ್ತೀರಾ" ಎಂದು ಕೇಳಬೇಕು. ಇದಾದ ನಂತರ ಅವರ ಮುಂಗೈಗೆ ಸ್ನೇಹ ಪಟ್ಟಿಯನ್ನು ಕಟ್ಟಬೇಕು. (ಮುಖವಾಡಗಳ ಮತ್ತು ಸ್ನೇಹದ ಪಟ್ಟಿಯ ನಮೂನೆಯನ್ನು ಭಾಗ ಮೂರರಲ್ಲಿ ಕೊಡಲಾಗಿದೆ.)
- ಶಿಬಿರಾರ್ಥಿಗಳ ಹೆಸರು ಇತ್ಯಾದಿಗಳನ್ನು ನೊಂದಾಯಿಸಿಕೊಂಡ ನಂತರ ಅವರನ್ನು ಶಿಬಿರದಲ್ಲಿ ವ್ಯವಸ್ಥೆ ಮಾಡಿದ ಬಾಲಕಾರ್ಮಿಕರಿಗೆ ಸಂಬಂಧ ಪಟ್ಟ ವಸ್ತು ಪ್ರದರ್ಶನಕ್ಕೆ ಕರೆದುಕೊಂಡು ಹೋಗಬೇಕು. ಈ ವಸ್ತು ಪ್ರದರ್ಶನದಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಪೋಸ್ಟರ್‌ಗಳು, ಸ್ಟಿಕ್ಕರ್‌ಗಳು, ಬ್ಯಾನರ್‌ಗಳು, ವರ್ತಮಾನ ಪತ್ರಿಕೆಯ ತುಂಡುಗಳು, ಗ್ರಾಫ್‌ಗಳು, ಕಿರುಹೊತ್ತಿಗೆಗಳು, ಪೇಂಟಿಂಗ್‌ಗಳು, ಬ್ರೋಷರ್‌ಗಳು, ರೇಖಾಚಿತ್ರಗಳು ಇತ್ಯಾದಿಗಳು ಇರಬಹುದು.
- ವಸ್ತು ಪ್ರದರ್ಶನದ ವೀಕ್ಷಣೆಯ ನಂತರ ಉಪಹಾರದ ವ್ಯವಸ್ಥೆ ಇದ್ದರೆ ಅವರನ್ನ ಉಪಹಾರಕ್ಕೆ ಕಳುಹಿಸಿಕೊಡಬೇಕು. ಇಲ್ಲದೆ ಇದ್ದಲ್ಲಿ ಅವರನ್ನು ತರಬೇತಿ ಕೊಠಡಿಯಲ್ಲಿ ಆಸೀನರಾಗುವಂತೆ ವಿನಂತಿಸಬೇಕು.


### 2.1.4 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ.
- ಶಿಬಿರಾರ್ಥಿಗಳಿಗೆ ತರಬೇತಿಯಲ್ಲಿ ಉಪಯೋಗಿಸಲು ಅವಶ್ಯಕವಾದ ಪರಿಕರಗಳನ್ನು ವಿತರಿಸಲಾಗುತ್ತದೆ.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಾಥಮಿಕ ಅರಿವನ್ನು ಮಾಡಿಕೊಳ್ಳುವರು. ಅವರ ಅರಿವಿನ ಮಟ್ಟ ಹೆಚ್ಚಾಗುವುದು. ವಸ್ತು ಪ್ರದರ್ಶನದಿಂದ ಬಾಲಕಾರ್ಮಿಕತೆಯ ಪರಿಮಾಣ ಮತ್ತು ಪರಿಣಾಮವನ್ನು ಅರ್ಥ ಮಾಡಿಕೊಳ್ಳುವರು.
- ಸ್ನೇಹ ಸೂಚಿ ಪಟ್ಟಿಯಿಂದ ಶಿಬಿರಾರ್ಥಿಗಳು ವೈಯಕ್ತಿಕವಾಗಿ ಬಾಲಕಾರ್ಮಿಕತೆ ಬಗ್ಗೆ ಯೋಚಿಸಲು ಆರಂಭಿಸುವರು.

### 2.1.5 ಸೂಚನೆಗಳು

- ಉತ್ತಮವಾಗಿ ಮಾತನಾಡಲು ಹಾಗೂ ವಿಚಾರಿಸಿಕೊಳ್ಳಲು ಶಕ್ತರಾಗಿರುವವರನ್ನು ನೊಂದಣಿ ಮಾಡಲು ಗುರುತಿಸಿಕೊಳ್ಳಬೇಕು. ನೊಂದಣಿ ಪ್ರಕ್ರಿಯೆ ತರಬೇತಿದಾರರು ಮತ್ತು ಶಿಬಿರಾರ್ಥಿಗಳ ಮಧ್ಯೆ ಏರ್ಪಡಬಹುದಾದ ಭಾಂದವ್ಯದ ಪ್ರಥಮ ಸೋಪಾನವಾಗಿರುತ್ತದೆ. ಪ್ರತಿಯೊಬ್ಬ ಶಿಬಿರಾರ್ಥಿಗಳು ತಾವು ಒಬ್ಬ ವಿಶೇಷ ವ್ಯಕ್ತಿ ಎಂಬ ಭಾವನೆ ಹೊಂದುವಂತೆ ಅವರನ್ನು ಬರಮಾಡಿಕೊಳ್ಳಬೇಕು.
- ಶಿಬಿರಾರ್ಥಿಗಳು ತಮ್ಮ ಚಾ, ಊಟದ ವಿರಾಮ ಮುಂತಾದವುಗಳಲ್ಲಿ ವಸ್ತು ಪ್ರದರ್ಶನಕ್ಕೆ ಭೇಟಿ ಕೊಡಲು ಪ್ರೋತ್ಸಾಹಿಸಬೇಕು. ಅವರು ತಮ್ಮ ತಮ್ಮಲ್ಲಿ ಮತ್ತು ಸಂಪನ್ಮೂಲ ವ್ಯಕ್ತಿಗಳ ಜೊತೆಯಲ್ಲಿ ಬಾಲಕಾರ್ಮಿಕತೆಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಚರ್ಚಿಸಲು ಪ್ರೋತ್ಸಾಹಿಸಬೇಕು.





## 2.2 ಉದ್ಘಾಟನೆ

ಸಮಯ: 30 ನಿಮಿಷಗಳು

### 2.2.1 ಉದ್ದೇಶಗಳು

ತರಬೇತಿಗೆ ಚಾಲನೆ ನೀಡುವುದು.

ಶಿಬಿರಾರ್ಥಿಗಳಿಗೆ ಪ್ರೇರೇಪಣೆ ನೀಡುವುದು.

### 2.2.2 ಪ್ರಕ್ರಿಯೆ

- ಉದ್ಘಾಟನೆಗೆ ಬಂದ ಅತಿಥಿಗಳನ್ನು ವೇದಿಕೆಗೆ ಆಹ್ವಾನಿಸುವುದು.
- ಸ್ವಾಗತ ಗೀತೆ, ಸ್ವಾಗತದ ನಂತರ ತರಬೇತಿಗೆ ಪೂರಕವಾಗಿ ಬಾಲ ಕಾರ್ಮಿಕತನದ ಕುರಿತು ಸಂಕ್ಷಿಪ್ತವಾಗಿ ಸಂಘಟಕರು ಅಥವಾ ಸಂಪನ್ಮೂಲ ವ್ಯಕ್ತಿ 5 ನಿಮಿಷ ಮಾತನಾಡುವುದು.
- ಸ್ವಾಗತ ಭಾಷಣ
- ಉದ್ಘಾಟಕರು ಪೂರಕವಾಗಿ 10 ನಿಮಿಷ ಮಾತನಾಡಿ, ಪ್ರಶಿಕ್ಷಣಾರ್ಥಿಗಳ ಜವಾಬ್ದಾರಿ ಕುರಿತು ವಿವರಿಸುವುದು.
- ಉದ್ಘಾಟನೆ
- ಭಾಷಣ / ಪ್ರಸ್ತಾವನೆ
- ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ.

### 2.2.3 ಗಮನಿಸಿ

ಉದ್ಘಾಟಕರು ಸಮಯಕ್ಕೆ ಸರಿಯಾಗಿ ಬರುವಂತೆ ತಿಳಿಸುವುದು. ಅವರಿಗಾಗಿ ಕಾಯುವಂತಾಗಬಾರದು.

ತಡವಾದರೆ, ಉದ್ಘಾಟನೆಯನ್ನು ಸಾಂಕೇತಿಕವಾಗಿ ಮಾಡುವುದು.

ದೀಪ ಬೆಳಗುವುದು ಮುಂತಾದ ಸಾಂಪ್ರದಾಯಿಕ ಕ್ರಮ ಬೇಡ.

ಕಾರ್ಯಕ್ರಮಕ್ಕೆ ಪೂರಕವಾಗಿರುವ ಗಣ್ಯರನ್ನೇ ಆಹ್ವಾನಿಸುವುದು.

ಸ್ವಾಗತ ಗೀತೆಯನ್ನು ಹಾಡುವಾಗ, ಬಾಲಕಾರ್ಮಿಕತೆಯನ್ನು ನಿವಾರಿಸುವ ಸಂಬಂಧಿ ಇರುವ ಗೀತೆಯನ್ನು ಹಾಡುವುದು ಅವಶ್ಯ.



ಉದ್ಘಾಟಕರು ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆಯೆ ಮಾತನಾಡಬೇಕು. ಅವರಿಗೆ ಅವಶ್ಯವಾದ ಮಾಹಿತಿಯನ್ನು ಸಾಕಷ್ಟು ಮೊದಲೇ ಒದಗಿಸುವುದು.

ಒಟ್ಟಿನಲ್ಲಿ ಉದ್ಘಾಟನೆಯಲ್ಲಿ ಏನೂ ಅಭಾಸ ಆಗದಂತೆ ನೋಡಿಕೊಳ್ಳಬೇಕು.

## 2.3 ಸ್ವ ಪರಿಚಯ

ಸಮಯ: 20 ನಿಮಿಷಗಳು

### 2.3.1 ಉದ್ದೇಶಗಳು

- ಶಿಬಿರಾರ್ಥಿಗಳು ಇತರೆ ಶಿಬಿರಾರ್ಥಿಗಳನ್ನು ಅರ್ಥ ಮಾಡಿಕೊಳ್ಳುವುದು
- ಶಿಬಿರಾರ್ಥಿಗಳನ್ನು ತರಬೇತಿಯಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳುವಂತೆ ಮಾಡುವುದು


### 2.3.2 ಪ್ರಕ್ರಿಯೆ

ಇಂತಹ ತರಬೇತಿಗಳಲ್ಲಿ ಶಿಬಿರಾರ್ಥಿಗಳೆಲ್ಲರು ಒಂದೇ ಪ್ರದೇಶದವರಾಗಿರುವುದರಿಂದ ಪ್ರತಿಯೊಬ್ಬರ ಪರಿಚಯ ಇರುತ್ತದೆ. ಇಲ್ಲಿ ಸುಧೀರ್ಘವಾದ ಪರಸ್ಪರ ಪರಿಚಯದ ಚಟುವಟಿಕೆಯ ಅವಶ್ಯಕತೆ ಇರುವುದಿಲ್ಲ. ಸಂಕ್ಷಿಪ್ತವಾದ ಸ್ವ–ಪರಿಚಯದ ಚಟುವಟಿಕೆಯನ್ನು ಅಳವಡಿಸಿಕೊಳ್ಳುವುದು ಸೂಕ್ತ. ಪ್ರತಿಯೊಬ್ಬ ಶಿಬಿರಾರ್ಥಿ ತನ್ನನ್ನು ಸಭೆಗೆ ಪರಿಚಯಿಸಿಕೊಳ್ಳುವಂತೆ ಸೂಚಿಸುವುದು.

### 2.3.3 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ತರಬೇತಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ತಯಾರಾಗುತ್ತಾರೆ.





## 2.4 ಮಕ್ಕಳನ್ನು ಅರ್ಥಮಾಡಿಕೊಳ್ಳುವುದು

ಸಮಯ: 40 ನಿಮಿಷಗಳು

### 2.4.1 ಉದ್ದೇಶಗಳು

- ಮಕ್ಕಳು / ಮಗು ಎಂಬ ಶಬ್ದದ ಜೊತೆಯಲ್ಲಿ ಹೊರ ಬರುವ ಹಲವಾರು ಭಾವನೆಗಳಿಗೆ ಸಂಬಂಧಪಟ್ಟ ಅಂಶಗಳನ್ನು ಗುರುತಿಸುವುದು
- ಬಾಲಕಾರ್ಮಿಕತೆಯ ಸೂಕ್ಷ್ಮತೆಯನ್ನು ಹೆಚ್ಚಿಸುವುದು

### 2.4.2 ಪರಿಕರಗಳು


- ಕರಿಹಲಗೆ
- ಸೀಮೆಸುಣ್ಣ
- ಚಾರ್ಟ್ ಹಾಳೆಗಳು
- ಸ್ಕೆಚ್ ಪೆನ್ನುಗಳು
- ಸೆಲೋಟೇಪ್

### 2.4.3 ಪ್ರಕ್ರಿಯೆ

**2.4.3.1 ಉಪಚಟುವಟಿಕೆ 1 – "ನನಗೆ ಇದು ಬೇಕು"**

ತರಬೇತುದಾರರು ಕರಿಹಲಗೆ ಅಥವಾ ಚಾರ್ಟ್ ಹಾಳೆಯ ಮೇಲೆ ಮಗು ಎಂಬ ಶಬ್ದವನ್ನು ದೊಡ್ಡದಾಗಿ ಬರೆಯಬೇಕು. ಇದರ ಜೊತೆಯಲ್ಲಿ ಮಗುವಿನ ಮುಖದ ಚಿತ್ರವನ್ನು ರಚಿಸಬೇಕು. ಶಿಬಿರಾರ್ಥಿಗಳ ಹತ್ತಿರ ಚಿತ್ರವನ್ನು ನೋಡಿ, "ಮಗು" ಎಂಬ ಶಬ್ದದ ಜೊತೆಯಲ್ಲಿ ಸಂಬಂಧ ಹೊಂದಿರುವ ಎಲ್ಲಾ ಅಂಶಗಳನ್ನು ಪಟ್ಟಿ ಮಾಡಲು / ಸೂಚಿಸಲು ತಿಳಿಸಬೇಕು. ಶಿಬಿರಾರ್ಥಿಗಳಿಗೆ ಅನುಕೂಲ ಮಾಡಿಕೊಡಲು, ತರಬೇತುದಾರರು ಈ ಕೆಳಗಿನ ಪ್ರಶ್ನೆಗಳನ್ನು ಹಾಕಬಹುದು. ಮಗುವಿನ ಅಭಿವೃದ್ಧಿ ಮತ್ತು ಉತ್ತಮ ಜೀವನದ ಬಗ್ಗೆ ಅವಶ್ಯಕವಾದ ಅಂಶಗಳೇನು? ಶಿಬಿರಾರ್ಥಿಗಳು ಈ ಬಗ್ಗೆ ಅರ್ಥ ಹಾಗೂ ಸಂಪರ್ಕ ಹೊಂದಿರುವ ಶಬ್ದಗಳನ್ನು ಹೆಚ್ಚು ಹೆಚ್ಚು ಹೊರಗೆ ಹಾಕಲು ಪ್ರೋತ್ಸಾಹಿಸಬೇಕು. ಹೀಗೆ ಹೊರಬಂದ ಅಂಶಗಳನ್ನು ಚಿತ್ರದಲ್ಲಿ ಸೂಚಿಸಿ ಹಾಗೆ ಮಗುವಿನ ಮುಖದ ಚಿತ್ರದ ಮೇಲೆ, ಕೆಳಗೆ ಹಾಗೂ ಎರಡೂ ಬದಿಗಳಲ್ಲಿ ಬರೆಯಬೇಕು.





**ನನಗೆ ಇದು ಬೇಕು**

**ಪೋಷಕರು** **ಆಹಾರ** **ಶಿಕ್ಷಣ** **ಆರೋಗ್ಯ** **ಕಾಪಾಡುವುದು**


**ಹೊಗಳುವಿಕೆ** **ವಿಶ್ರಾಂತಿ**

**ಮನೋರಂಜನೆ**

**ಗೌರವ / ಘನತೆ**

**ಬಟ್ಟೆ**

**ಪ್ರೀತಿ**



**ರಕ್ಷಣೆ**

**ಮನೆ** **ಬಹುಮಾನ** **ಪಾಲನೆ**

**ಸುರಕ್ಷತೆ**

**ಪ್ರೋತ್ಸಾಹ** **ಸಂಸ್ಕೃತಿ** **ಕೌಶಲ್ಯ**

**ಹಾಸಿಗೆ / ಕೊಠಡಿ** **ನಂಬಿಕೆ**


ನಂತರ ಶಿಬಿರಾರ್ಥಿಗಳ ಹತ್ತಿರ ಮೇಲೆ ಪಟ್ಟಿ ಮಾಡಿದ ಅಂಶಗಳಲ್ಲಿ ಬಾಲಕಾರ್ಮಿಕರು ಯಾವುದನ್ನು ಪಡೆಯುತ್ತಿದ್ದಾರೆ ಹಾಗೂ ಯಾವುದರಿಂದ ವಂಚಿತರಾಗಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಬೇಕು. ಬಾಲಕಾರ್ಮಿಕರು ವಂಚಿತರಾದ ಅಂಶಗಳನ್ನು ಬೇರೆ ಬಣ್ಣದಿಂದ ಗುರುತಿಸಬೇಕು.

ಕೊನೆಯಲ್ಲಿ ಒಂದು ಅಥವಾ ಎರಡು ಅಂಶಗಳನ್ನು ಮೇಲೆ ಹೇಳಿದ ಹಾಗೆ ಬೇರೆ ಬಣ್ಣದಿಂದ ಗುರುತಿಸದೆ ಇರಬಹುದು. ತರಬೇತುದಾರರು ಶಿಬಿರಾರ್ಥಿಗಳ ಹತ್ತಿರ "ಇದು ಏನನ್ನು ಸೂಚಿಸುತ್ತದೆ" ಎಂಬುದನ್ನು ವಿವರಿಸಲು ತಿಳಿಸಬೇಕು. ತಮ್ಮ ಜೀವನದ ಅಭಿವೃದ್ಧಿಗೆ ಅವಶ್ಯಕವಾದ ಅಂಶಗಳನ್ನು ಪಡೆಯದೇ ಇರುವ ಮಕ್ಕಳ ಭವಿಷ್ಯವೇನು? ಎಂಬ ಪ್ರಶ್ನೆಯನ್ನು ಶಿಬಿರಾರ್ಥಿಗಳಿಗೆ ಹಾಕಬೇಕು. ಶೇಕಡಾ 33 ಮಕ್ಕಳು ತಮ್ಮ ಜೀವನದ ಅಭಿವೃದ್ಧಿಗೆ ಅವಶ್ಯಕವಾದ ಅಂಶಗಳನ್ನು ಪಡೆಯಲು ಸಾಧ್ಯವಾಗದ ದೇಶದ ಭವಿಷ್ಯ ಏನಾಗಬಹುದು? ಎಂಬ ಪ್ರಶ್ನೆಯನ್ನು ಸಹ ಶಿಬಿರಾರ್ಥಿಗಳ ಮುಂದಿಡಬೇಕು. ನಾವು ಬಾಲಕಾರ್ಮಿಕತೆಯ ನಿವಾರಣೆಗೆ ಕೆಲಸ ಮಾಡಬೇಕು. ಬೇರೆ ದಾರಿಯೇ ಇಲ್ಲ ಎಂಬ ವಿಚಾರವನ್ನು ಮನದಟ್ಟು ಮಾಡಬೇಕು.

**ಫಲಿತಾಂಶಗಳು**

- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ಆಳವಾಗಿ ಚಿಂತಿಸಲು ಆರಂಭಿಸುತ್ತಾರೆ.





### 2.4.3.2 ಉಪ ಚಟುವಟಿಕೆ 2 – "ಬಾಲಕಾರ್ಮಿಕರ ಸ್ಥಾನದಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದು"

#### 2.4.3.2.1 ಪ್ರಕ್ರಿಯೆ

- ತರಬೇತುದಾರರು ಶಿಬಿರಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು. ಒಂದು ಗುಂಪಿಗೆ ಬಾಲಕಾರ್ಮಿಕರಾಗಿ ವರ್ತಿಸುವಂತೆ ತಿಳಿಸಬೇಕು. ಇನ್ನೊಂದು ಗುಂಪಿಗೆ ಇತರ ಸಾಮಾನ್ಯ ಮಕ್ಕಳಂತೆ ವರ್ತಿಸಲು ತಿಳಿಸುವುದು.
- ತರಬೇತುದಾರರು ದಿನದ ಬೇರೆ ಬೇರೆ ಅವಧಿಯನ್ನು ಘೋಷಿಸಿದಾಗ, ಎರಡು ಗುಂಪಿನ ಶಿಬಿರಾರ್ಥಿಗಳು ಅವರು ಪ್ರತಿನಿಧಿಸುತ್ತಿರುವ ಮಕ್ಕಳು ಆ ಸಮಯದಲ್ಲಿ ಯಾವ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ಅಭಿನಯದ ಮೂಲಕ ತೋರಿಸಬೇಕು. ಉದಾ: "ಬೆಳಿಗ್ಗೆ ಆರು ಘಂಟೆ" ಎಂದ ಕೂಡಲೆ ಬಾಲಕಾರ್ಮಿಕರನ್ನು ಪ್ರತಿನಿಧಿಸುತ್ತಿರುವ ಶಿಬಿರಾರ್ಥಿಗಳು ಮಕ್ಕಳು ಕೆಲಸಕ್ಕೆ ಹೋಗಲು ತಯಾರಾಗುತ್ತಿರುವುದನ್ನು ತೋರಿಸಬೇಕು. ಸಾಮಾನ್ಯ ಮಕ್ಕಳನ್ನು ಪ್ರತಿನಿಧಿಸುತ್ತಿರುವವರು ಮಕ್ಕಳು ಇನ್ನು ಸವಿನಿದ್ರೆಯಲ್ಲಿದ್ದು ಅವರನ್ನು ಪೋಷಕರು ಕೊಂಡಾಟದಿಂದ ಎಬ್ಬಿಸಲು ಪ್ರಯತ್ನಿಸುತ್ತಿರುವುದನ್ನು ಅಭಿನಯದ ಮೂಲಕ ತೋರಿಸಬೇಕು.
- ತರಬೇತುದಾರರು ಬೇರೆ ಬೇರೆ ಸಮಯವನ್ನು ಅಂದರೆ ಬೆಳಿಗ್ಗೆ ಏಳು ಘಂಟೆ, ಹತ್ತು ಘಂಟೆ, ಮಧ್ಯಾಹ್ನ ಹನ್ನೆರಡು ಘಂಟೆ ಹಾಗೂ ಸಂಜೆ ಮೂರು ಘಂಟೆ, ಆರು ಘಂಟೆ, ರಾತ್ರಿ ಒಂಭತ್ತು ಘಂಟೆ ಮಧ್ಯರಾತ್ರಿ ಹನ್ನೆರಡು ಘಂಟೆ ಇತ್ಯಾದಿ ಘೋಷಿಸಿದಾಗ ಎರಡು ಗುಂಪಿನವರು ತಾವು ಪ್ರತಿನಿಧಿಸುತ್ತಿರುವ ಮಕ್ಕಳು ಆ ಸಮಯದಲ್ಲಿ ತೊಡಗಿರುವ ಚಟುವಟಿಕೆಗಳನ್ನು ಅಭಿನಯದ ಮೂಲಕ ತೋರಿಸಬೇಕು.
- ಇದಾದ ನಂತರ ತರಬೇತುದಾರರು ಈ ಕೆಳಗಿನ ಪ್ರಶ್ನೆಗಳನ್ನು ಹಾಕಿ ಚರ್ಚೆಗೆ ಪ್ರಚೋದಿಸಬೇಕು.
  - ಎರಡು ಗುಂಪಿನ ಮಕ್ಕಳ ದೈನಂದಿನ ಚಟುವಟಿಕೆಗಳಲ್ಲಿರುವ ವ್ಯತ್ಯಾಸಗಳೇನು?
  - ಈ ವ್ಯತ್ಯಾಸಗಳ ಪರಿಣಾಮಗಳೇನು?
  - ಬಾಲಕಾರ್ಮಿಕರು ಯಾವುದಾದರೂ ಹಕ್ಕುಗಳನ್ನು ಕಡಿದುಕೊಂಡಿದ್ದಾರೆಯೇ?
  - ಮೇಲಿನ ಚಟುವಟಿಕೆಗಳಿಂದ ನಾವೇನು ಗ್ರಹಿಸಬಹುದು?


#### 2.4.3.2.2 ಫಲಿತಾಂಶಗಳು

- ಶಿಬಿರಾರ್ಥಿಗಳು ಬಾಲಕಾರ್ಮಿಕರು ಪ್ರತಿದಿನ ಪಡುತ್ತಿರುವ ಕಷ್ಟಕಾರ್ಪಣ್ಯಗಳನ್ನು ಅರ್ಥಮಾಡಿಕೊಳ್ಳುವರು
- ಶಿಬಿರಾರ್ಥಿಗಳು ಬಾಲಕಾರ್ಮಿಕರು ಏನನ್ನು ಕಳೆದುಕೊಳ್ಳುತ್ತಿದ್ದಾರೆಂದು ಅರ್ಥಮಾಡಿಕೊಳ್ಳುವರು.

#### 2.4.3.2.3 ಸೂಚನೆಗಳು

- ಕೆಲವು ಶಿಬಿರಾರ್ಥಿಗಳು ಬಾಲಕಾರ್ಮಿಕರಾಗಿ ಅಭಿನಯಿಸಲು ಶಕ್ತರಾಗದೇ ಇರಬಹುದು. ಅವರಿಗೆ ಬಾಲಕಾರ್ಮಿಕರ ದಿನನಿತ್ಯದ ಕೆಲಸ ಕಾರ್ಯಗಳ ಪರಿಚಯ ಇಲ್ಲದೆ ಇರಬಹುದು. ಅಂತವರು ಕೆಲವು ಬಾಲಕಾರ್ಮಿಕರೊಂದಿಗೆ ಮಾತನಾಡಿ ಅವರ ದಿನನಿತ್ಯದ ಜೀವನವನ್ನು ಅರ್ಥಮಾಡಿಕೊಳ್ಳಬೇಕು.





## 2.5 ಬಾಲಕಾರ್ಮಿಕತೆಯ ವಿಸ್ತಾರ, ಆಳ – ಕಾರಣಗಳು ಮತ್ತು ಪರಿಣಾಮಗಳು, ಅಪಾಯಕಾರಿ ಬಾಲಕಾರ್ಮಿಕತೆ – ನಿಕೃಷ್ಟ ಬಾಲಕಾರ್ಮಿಕತೆ.


ಸಮಯ: 60 ನಿಮಿಷಗಳು

### 2.5.1 ಉದ್ದೇಶಗಳು


- ಬಾಲಕಾರ್ಮಿಕತೆಯ ಎಲ್ಲಾ ಮಟ್ಟದಲ್ಲಿನ ಅಗಾಧತೆಯ ಪರಿಚಯ ಮಾಡಿಕೊಡುವುದರ ಜೊತೆಗೆ ಅವರ ಕ್ಷೇತ್ರದಲ್ಲಿನ ಬಾಲಕಾರ್ಮಿಕತೆಯ ಅಗಾಧತೆಯನ್ನು ಪರಿಚಯಿಸುವುದು.

### 2.5.2 ಪಠ್ಯ

ಎ) ವಿಶ್ವದಲ್ಲಿ ಸುಮಾರು 210 ಮಿಲಿಯನ್ 5–14 ವರ್ಷದ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಇದು ಪ್ರಪಂಚದ ಮಕ್ಕಳ ಪ್ರಮಾಣದಲ್ಲಿ ಸುಮಾರು 1/5 ಭಾಗದಷ್ಟಿದೆ.





ಬಿ) ಭಾರತದಲ್ಲಿ 5–14 ವರ್ಷದ 203 ಮಿಲಿಯ ಮಕ್ಕಳಲ್ಲಿ 116 ಮಿಲಿಯ ಮಕ್ಕಳು ಶಾಲೆಯಲ್ಲಿದ್ದರೆ, 12.6 ಮಿಲಿಯನ್ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎಂದು ಅಂದಾಜಿಸಲಾಗಿದೆ. ಉಳಿದ 74 ಮಿಲಿಯನ್ ಮಕ್ಕಳ ಸ್ಥಿತಿ ಗೊತ್ತಿಲ್ಲ.






ಸಿ) ಕರ್ನಾಟಕದಲ್ಲಿ 10 ಮಿಲಿಯನ್ 5–14 ವರ್ಷದ ಮಕ್ಕಳಿದ್ದು ಅವರಲ್ಲಿ 0.85 ಮಿಲಿಯ ಮಕ್ಕಳು ಶಾಲೆಯಿಂದ ಹೊರಗೆ ಇದ್ದಾರೆ.




ಮುಂದುವರಿದ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಸಹ ಬಾಲಕಾರ್ಮಿಕರನ್ನು ನಾವು ಕಾಣಬಹುದು. ಇದು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹೆಚ್ಚಾಗಿದೆ.

ಈ ಕೆಳಗಿನವುಗಳು ಬಾಲಕಾರ್ಮಿಕತೆಯ ಕಾರಣಗಳೆಂದು ಪ್ರಚಲಿತದಲ್ಲಿವೆ. ಆದರೆ ಇವುಗಳನ್ನು ಬಹಳ ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಇವುಗಳಲ್ಲಿ ಹೆಚ್ಚಿನವುಗಳು ಸಬೂಬುಗಳು ಮಾತ್ರ. ಆದರೆ ನಿಜವಾದ ಕಾರಣಗಳು ಅಲ್ಲ.

- ಪೋಷಕರ ಅನಕ್ಷರತೆ.
- ಬಡತನ
- ಶಿಕ್ಷಣ ಸೌಲಭ್ಯಗಳು ಇಲ್ಲದೆ ಇರುವುದು.
- ನಿರುದ್ಯೋಗ
- ಶೋಷಣೆ
- ಮೂಢನಂಬಿಕೆಗಳು
- ಅನಾರೋಗ್ಯ
- ಕಡಿಮೆ ಸಂಬಳ
- ಜೀತ ಪದ್ಧತಿ
- ರಾಜಕೀಯ ಬದ್ಧತೆ ಇಲ್ಲದಿರುವುದು.
- ಅನುಷ್ಠಾನದಲ್ಲಿ ನಿಜವಾದ ಆಸಕ್ತಿ ಇಲ್ಲದಿರುವುದು.

ಈಗಾಗಲೇ ತಿಳಿಸಿದಂತೆ, ಹೆಚ್ಚಿನವು ಮೇಲ್ಮಟ್ಟದ ಕಾರಣಗಳು. ಪೋಷಕರು ಈ ಕಾರಣಗಳಿದ್ದು ಸಹ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದ ಸಾವಿರಾರು ಉದಾಹರಣೆಗಳು ಇವೆ.




ಈಗ ಹಲವಾರು ಸಾಮಾಜಿಕ ಭದ್ರತೆ ಯೋಜನೆಗಳಿದ್ದು, ಪೋಷಕರು ಅವುಗಳ ಲಾಭ ಪಡೆದುಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬಹುದು. ಪೋಸಕರಿಗೆ ಮನಸ್ಸಿದ್ದರೆ, ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಉತ್ತಮ ಬಾಲ್ಯ ಕೊಡಲು ಹಲವಾರು ಮಾರ್ಗಗಳಿವೆ. ಹಲವಾರು ಸಂದರ್ಭಗಳಲ್ಲಿ ಪೋಷಕರ ಅನಾಸಕ್ತಿಯೇ ಮೂಲಕಾರಣವಾಗಿದೆ. ಅವರು ಶಿಕ್ಷಣ ಅಂದರೆ ಶ್ರೀಮಂತಿಕೆಯ ಸಂಕೇತ, ಬಡವರು ಸಣ್ಣ ಪ್ರಾಯದಿಂದಲೇ ಕೆಲಸ ಮಾಡಲು ಆರಂಭಿಸಬೇಕು ಎಂಬುದಾಗಿ ಯೋಚಿಸುತ್ತಾರೆ. ಅವರಿಗೆ ಈ ಬಗ್ಗೆ ತಿಳುವಳಿಕೆಯ ಅವಶ್ಯಕತೆ ಇದೆ.

#### 2.5.2.1 ಬಾಲಕಾರ್ಮಿಕತೆಯ ಪರಿಣಾಮಗಳು

ಬಾಲಕಾರ್ಮಿಕತೆಯ ಪರಿಣಾಮಗಳು ಬಹಳ ಮುಖ್ಯವಾದವು. ಪೋಷಕರು ಬಾಲಕಾರ್ಮಿಕತೆಯನ್ನು ಸರಿಯಾಗಿ ಅಂತರ್ಗತ ಮಾಡಿಕೊಂಡರೆ ಅವರೇ ಖುದ್ದಾಗಿ ತಮ್ಮ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡುತ್ತಾರೆ.

#### (ಎ) ಅನಕ್ಷರತೆ

ಬಾಲಕಾರ್ಮಿಕತೆಯಿಂದ ಮಕ್ಕಳು ಅನಕ್ಷರಸ್ಥರಾಗುವರು. ಇದರಿಂದ ಅವರು ಜೀವನವಿಡಿ ಚಿಕ್ಕ ಚಿಕ್ಕ ವಿಚಾರಗಳಿಗೆ ಇತರರನ್ನು ಅವಲಂಬಿಸ ಬೇಕಾಗುವುದು. ಇದು ಅವರ ಅಭಿವೃದ್ಧಿಗೆ ಮಾರಕವಾಗುವುದು.







**(ಬಿ) ಕಡಿಮೆ ಸಂಪಾದನೆ / ಸಂಬಳ**

ಬಾಲಕಾರ್ಮಿಕರು ದೊಡ್ಡವರಾದ ಮೇಲೆ, ಕೌಶಲ್ಯ ರಹಿತ ಕೆಲಸಗಳನ್ನು ಮಾಡಬೇಕಾಗುವುದು. ಇದರಿಂದ ಅವರಿಗೆ ಕಡಿಮೆ ಸಂಬಳ ದೊರಕುವುದು. ಶಿಕ್ಷಣ ಪಡೆದು ಹೆಚ್ಚು ಸಂಪಾದನೆ ಮಾಡಲು ಬಹಳ ಅವಕಾಶಗಳು ಇವೆ.



**(ಸಿ) ಜೀವನವು ಕಷ್ಟಮಯವಾಗಿರುವುದು.** ಇಡೀ ಜೀವಮಾನ ದುಃಖ ಮತ್ತು ನೋವಿನಿಂದ ಕೂಡಿದೆ



**(ಡಿ) ಸರಿಯಾದ ಬೆಳವಣಿಗೆ ಇರುವುದಿಲ್ಲ.**

ಬಾಲಕಾರ್ಮಿಕರು ಚಿಕ್ಕ ವಯಸ್ಸಿನಿಂದಲೇ ಕೆಲಸ ಮಾಡುವುದರಿಂದ ಹಾಗೂ ಅನಾರೋಗ್ಯ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಅವರ ಬೆಳವಣಿಗೆ ಸರಿಯಾಗಿ ಆಗುವುದಿಲ್ಲ. ಅವರು ಯೌವ್ವನಾವಸ್ಥೆಯಲ್ಲೇ ಮುದುಕರಂತೆ ಕಾಣುತ್ತಾರೆ.



**(ಈ) ದುರಾಭ್ಯಾಸಗಳಿಗೆ ಬಲಿಯಾಗುವುದು.**

ಬಾಲಕಾರ್ಮಿಕತೆ ಮಕ್ಕಳನ್ನು ದುಶ್ಚಟ ಕಡೆಗೆ ತೆಗೆದುಕೊಂಡು ಹೋಗಬಹುದು. ಅವರು ಕುಡಿತ ಅಥವಾ ಇತರ ದುರಭ್ಯಾಸಗಳಿಗೆ ದಾಸರಾಗಬಹುದು.





**(ಎಫ್) ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಬಹುದು.**


ಬಾಲಕಾರ್ಮಿಕತೆ ಅವರನ್ನು ಸಮಾಜ ವಿರೋಧಿ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಬಹುದು. ಅವರು ಮಾದಕ ದ್ರವ್ಯಗಳ ಸಾಗಾಟ, ಕಳ್ಳತನ, ದರೋಡೆ, ಸುಲಿಗೆ ಇತ್ಯಾದಿಗಳಲ್ಲಿ ತೊಡಗಬಹುದು.




**(ಜಿ) ಹೆಣ್ಣು ಮಕ್ಕಳು ಬಲಾತ್ಕಾರಕ್ಕೆ ತುತ್ತಾಗಬಹುದು.**




**(ಹೆಚ್) ಬಾಲಕಾರ್ಮಿಕತೆ ಅವರನ್ನು ಕಾಯಿಲೆಗೆ ತುತ್ತಾಗಿಸಬಹುದು**




**(ಐ) ಬಾಲಕಾರ್ಮಿಕತೆ ಮಕ್ಕಳನ್ನು ಹೆಳವರನ್ನಾಗಿಸಬಹುದು (ಅಂಗವಿಕಲರು)**





**(ಜೆ) ತಮ್ಮ ಜೀವನವನ್ನು ಕಳೆದು ಕೊಳ್ಳಬಹುದು**



**(ಕೆ)** ಮುಂದಕ್ಕೆ ಜೀವನದಲ್ಲಿ ಅವರನ್ನು ಸಮಾಜ ಮತ್ತು ಕುಟುಂಬದ ಇತರರು ನಿರಂತರವಾಗಿ ಶೋಷಣೆಗೆ ಒಳಪಡಿಸಬಹುದು – ಕಾರಣ ಅವರ ಅನಕ್ಷರತೆ, ಬಡತನ, ಅಜ್ಞಾನ, ಕೌಶಲ್ಯ ಇಲ್ಲದೆ ಇರುವುದು, ಸರಿಯಾಗಿ ಬೆಳವಣಿಗೆ ಆಗದೆ ಇರುವುದು ಇತ್ಯಾದಿ.

**(ಎಲ್)** ಬಾಲಕಾರ್ಮಿಕತೆಯಿಂದ, ದೊಡ್ಡವರಿಗೆ ಕೆಲಸ ಸಿಗದಾಗುವುದು. ಇದಲ್ಲದೆ ಅವರಿಗೆ ಸಂಬಳ ಕಡಿಮೆ ಆಗುವುದು. ಆದುದರಿಂದ ಬಾಲಕಾರ್ಮಿಕತೆ ದೊಡ್ಡವರ ಕೆಲಸದ ಮೇಲೆ ಸಹ ಪರಿಣಾಮ ಬೀರುವುದು.


**(ಎಂ) ಇತರ ಪರಿಣಾಮಗಳು**

- ಬೇರೆ ಬೇರೆ ರೀತಿಯ ನೋವುಗಳು
- ಒತ್ತಡದಿಂದ ಆಗುವ ಪರಿಣಾಮಗಳು
- ಸಂತಾನ ಹೀನತೆ

### 2.5.3 ವಿಧಾನಗಳು

- ಉಪನ್ಯಾಸ
- ಪ್ರಾತ್ಯಕ್ಷಿಕೆ
- ನಿರ್ದೇಶಿತ ಮಾತುಕತೆ
- ಗುಂಪು ಚರ್ಚೆ





### 2.5.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಚಿತ್ರದ ಕಾರ್ಡುಗಳು
- ಮ್ಯಾನ್ಯುಯೆಲ್‌ನ ಚಿತ್ರಗಳು

### 2.5.5 ಪ್ರಕ್ರಿಯೆ

- ಸಂಪನ್ಮೂಲ ವ್ಯಕ್ತಿಗಳು ವಿಷಯವನ್ನು ಸಣ್ಣ ಉಪನ್ಯಾಸದ ಮೂಲಕ ಮಂಡಿಸುವರು.
- ಸಂಪನ್ಮೂಲ ವ್ಯಕ್ತಿಗಳು ಕೈಪಿಡಿಯಲ್ಲಿ ಕೊಟ್ಟಿರುವ ಗ್ರಾಫಿಕ್ಸ್‌ಗಳನ್ನು ಉಪಯೋಗಿಸಿ, ಬಾಲಕಾರ್ಮಿಕತೆಯ ಅಗಾಧತೆಯ ಪರಿಚಯ ಮಾಡಿಕೊಡುವುದು. ಸಂಪನ್ಮೂಲ ವ್ಯಕ್ತಿಗಳು ಜಿಲ್ಲೆಯ, ಸಾಧ್ಯವಾದರೆ ತಾಲೂಕುಗಳ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ಉಪಯೋಗಿಸಬೇಕು.
- ಅವರ ಹತ್ತಿರ ತಮ್ಮ ಪ್ರದೇಶದಲ್ಲಿನ ಬಾಲಕಾರ್ಮಿಕತೆಯ ಯೋಜನೆ ಮಾಡಲು ತಿಳಿಸುವುದು. ಅದನ್ನು ಗ್ರಾಫ್‌ನಲ್ಲಿ ಹಾಕಿ ತೋರಿಸಬೇಕು.
- ಕರಿಹಲಗೆಯ ಮೇಲೆ ಒಂದು ಗೆರೆ ಎಳೆದು ಅದನ್ನು 2 ಭಾಗಗಳನ್ನಾಗಿ ವಿಂಗಡಿಸಬೇಕು. ಅದರ ಒಂದು ಭಾಗದಲ್ಲಿ "ನಮ್ಮ ಕನಸಿನ ಶಾಲೆ" ಎಂದು ಬರೆಯಬೇಕು. ಇನ್ನೊಂದು ಭಾಗದಲ್ಲಿ "ನಮ್ಮ ಹಳ್ಳಿಯ ಶಾಲೆ" ಎಂದು ಬರೆಯಬೇಕು. ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳ ಹತ್ತಿರ ಅವರ ಕನಸಿನ ಶಾಲೆ ಹೇಗಿರಬೇಕು? ಅದರಲ್ಲಿ ಏನೇನು ಇರಬೇಕು ಎಂಬುದನ್ನು ಕೇಳಿ, ಅವರು ಹೇಳಿದ್ದನ್ನು ಸರಿ ಪಡಿಸಿ, ಕರಿ ಹಲಗೆಯಲ್ಲಿ ಬರೆದಿರುವ "ನಮ್ಮ ಕನಸಿನ ಶಾಲೆ" ಕೆಳಗೆ ಬರೆಯುತ್ತಾ ಹೋಗಬೇಕು.

| ನಮ್ಮ ಕನಸಿನ ಶಾಲೆ | ನಮ್ಮ ಹಳ್ಳಿ ಶಾಲೆ |
|---|---|
| – ಒಳ್ಳೆಯ ಕಟ್ಟಡ | – |
| – ಒಳ್ಳೆಯ ಶೌಚಾಲಯ | – |
| – | – |
| – | – |
| – | – |
| – | – |



- ಚರ್ಚೆಯನ್ನು ಶಿಬಿರಾರ್ಥಿಗಳು "ನಮ್ಮ ಕನಸಿನ ಶಾಲೆಯಲ್ಲಿ" ಹಳ್ಳಿಯ ಎಲ್ಲಾ ಮಕ್ಕಳು ಕಲಿಯುವಂತೆ ಮಾಡಬೇಕು ಎಂದು ಹೇಳುವವರೆಗೆ ಮುಂದುವರೆಸಬೇಕು.
- ನಂತರ ಹಳ್ಳಿಯ ಶಾಲೆಯಲ್ಲಿನ ವ್ಯವಸ್ಥೆಯನ್ನು ಪಟ್ಟಿ ಮಾಡಬೇಕು. ಅದನ್ನು "ನಮ್ಮ ಹಳ್ಳಿಯ ಶಾಲೆ" ಕೆಳಗೆ ಬರೆಯಬೇಕು.

- ಈ ಎರಡು ಪಟ್ಟಿಯಲ್ಲಿ ಬಹಳಷ್ಟು ವ್ಯತ್ಯಾಸ ಕಂಡು ಬರುವುದು. ಸಂಪನ್ಮೂಲ ವ್ಯಕ್ತಿಗಳು ಈ ವ್ಯತ್ಯಾಸ ಏಕೆ ಎಂಬುದನ್ನು ಚರ್ಚಿಸಬೇಕು.
- ನಮ್ಮ ಹಳ್ಳಿಯ ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿಲ್ಲ ಎಂಬ ವಿಚಾರನ್ನು ತೆಗೆದುಕೊಂಡು ಚರ್ಚೆ ಮುಮದುವರಿಸಬೇಕು.
- ನಮ್ಮ ಹಳ್ಳಿಯ ಎಲ್ಲಾ ಮಕ್ಕಳು ಏಕೆ ಶಾಲೆಗೆ ಹೋಗುತ್ತಿಲ್ಲ? ಅವರೇನು ಮಾಡುತ್ತಿದ್ದಾರೆ? ಅವರೆಲ್ಲಿದ್ದಾರೆ? ಎಂಬ ಪ್ರಶ್ನೆಗಳನ್ನು ಶಿಬಿರಾರ್ಥಿಗಳ ಮುಂದಿಡಬೇಕು. ಇದನ್ನು ಅವರು ಉಪಗುಂಪುಗಳಲ್ಲಿ ಚರ್ಚಿಸಬೇಕು.
- ಉಪಗುಂಪುಗಳು ತಮ್ಮ ಚರ್ಚಾವರದಿಯನ್ನು ದೊಡ್ಡ ಗುಂಪಿನಲ್ಲಿ ಮಂಡಿಸುವ ವ್ಯವಸ್ಥೆ ಮಾಡಬೇಕು.
- ಸಂಪನ್ಮೂಲ ವ್ಯಕ್ತಿಗಳು ಬಾಲಕಾರ್ಮಿಕತೆಯ ಪರಿಣಾಮಗಳಿಗೆ ಸಂಬಂಧಪಟ್ಟ ಚಿತ್ರಣಗಳನ್ನು ಮತ್ತು ಫೋಟೋಗಳನ್ನು ಶಿಬಿರಾರ್ಥಿಗಳ ಮುಂದೆ ಪ್ರದರ್ಶಿಸಬೇಕು. ಅವುಗಳನ್ನು ಒಂದೊಂದಾಗಿ ಪ್ರದರ್ಶಿಸುತ್ತಾ, ಶಿಬಿರಾರ್ಥಿಗಳು ಅವರ ಅನಿಸಿಕೆಗಳನ್ನು ಹೇಳಲು ಪ್ರಚೋದಿಸಬೇಕು.
- ಸಂಪನ್ಮೂಲ ವ್ಯಕ್ತಿಗಳು, ಉದಾಹರಣೆಗಳ ಮೂಲಕ, ಕಾರಣ ಮುಖ್ಯವಲ್ಲ, ಆದರೆ ಪರಿಣಾಮಗಳು ಮುಖ್ಯ ಎಂಬುದನ್ನು ವಿವರಿಸಬೇಕು. ಕಾರಣಗಳಿಗಿಂತ ಪರಿಣಾಮಗಳು ಹೆಚ್ಚು ಹಾನಿಕಾರಕ ಎಂಬುದನ್ನು ವಿವರಿಸಬೇಕು. ಅವುಗಳು ಮಕ್ಕಳ ಜೀವನವನ್ನು ಹಾಳುಮಾಡುತ್ತದೆ ಎಂದು ಮನವರಿಕೆ ಮಾಡಬೇಕು.
- ಸಂಪನ್ಮೂಲ ವ್ಯಕ್ತಿಗಳು 'ಮಕ್ಕಳು' ಎಂದರೆ ಯಾರು? ಬಾಲಕಾರ್ಮಿಕತೆ ಎಂದರೇನು? ಅಪಾಯಕಾರಿ ಬಾಲಕಾರ್ಮಿಕತೆ ಎಂದರೇನು? ಎಂಬುದನ್ನು ಉದಾಹರಣೆಗಳ ಮೂಲಕ ಮತ್ತು ಚಿತ್ರಗಳ ಮೂಲಕ ವಿವರಿಸಬೇಕು.


## 2.5.6 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಅಗಾಧತೆ ಮತ್ತು ಅದರ ಸಂಪೂರ್ಣ ಮಟ್ಟಗಳನ್ನು ಅರ್ಥ ಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳುವರು.

## 2.5.7 ಸೂಚನೆ

- ಸಂಪನ್ಮೂಲ ವ್ಯಕ್ತಿಗಳು ಬಾಲಕಾರ್ಮಿಕತೆಯ ಅಗಾಧತೆಯ ಗ್ರಾಫ್ ತಯಾರಿಸಬೇಕು ಅಥವಾ ಕರ್ನಾಟಕ ಬಾಲಕಾರ್ಮಿಕ ಯೋಜನೆಯು ತಯಾರಿಸಿ ಅದನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಕಳುಹಿಸಿ ಕೊಡಬೇಕು.
- ಕರ್ನಾಟಕ ಬಾಲಕಾರ್ಮಿಕ ಯೋಜನೆಯು ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳ ಚಿತ್ರಗಳನ್ನು ಪೋಸ್ಟರ್ ಗಾತ್ರದಲ್ಲಿ ಮುದ್ರಿಸಿ ಅದನ್ನು ಸಂಪನ್ಮೂಲ ವ್ಯಕ್ತಿಗಳಿಗೆ ಕಳುಹಿಸಿಕೊಡಬೇಕು.





## 2.6 ಶಾಲೆಯಿಂದ ಹೊರಗಿರುವ ಮಕ್ಕಳ ವಿಶೇಷ ಅಗತ್ಯತೆಗಳು

ಸಮಯ: 60 ನಿಮಿಷಗಳು

### 2.6.1 ಉದ್ದೇಶಗಳು

- ಶಾಲೆಯಿಂದ ಹೊರಗಿರುವ ಮಕ್ಕಳ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು.
- ಇಂತಹ ಮಕ್ಕಳ ವಿಶೇಷ ಅವಶ್ಯಕತೆಗಳನ್ನು ಗುರುತಿಸಲು ಸಹಾಯ ಮಾಡುವುದು.
- ಇಂತಹ ಮಕ್ಕಳು ಶಾಲೆಗೆ ಬರುವಂತೆ ಮಾಡಲು ಪ್ರೇರೇಪಿಸುವುದು.

### 2.6.2 ಪಠ್ಯ


ನಾವು ಶಾಲೆಯಿಂದ ಹೊರಗಿರುವ ಮಕ್ಕಳು ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವಿಸುತ್ತಿರುವುದನ್ನು ನೋಡಿದ್ದೇವೆ. ಈ ಪರಿಸ್ಥಿಯು ಅವರನ್ನು ಬಹಳ ಸಂಕಷ್ಟದಲ್ಲಿ ಬೇಯುವಂತೆ ಮಾಡಿರಬಹುದು. ಇವರಲ್ಲಿ ಕೆಲವು ಮಕ್ಕಳು ಈಗಾಗಲೇ ಅಲ್ಪ ಸ್ವಲ್ಪ ಸಂಪಾದಿಸುತ್ತಿದ್ದು, ಅವರಿಗೆ ಆರ್ಥಿಕ ಆಸಕ್ತಿ ಇರಬಹುದು. ಇನ್ನು ಕೆಲವು ಮಕ್ಕಳು ಕೆಲವು ದುರಾಭ್ಯಾಸಗಳನ್ನು ಮೈಗೂಡಿಸಿಕೊಂಡಿರಬಹುದು. ಅವರ ಮನೋಭಾವನೆ ಬೇರೆ ಬೇರೆಯಾಗಿರಬಹುದು. ಚಿಂದಿ ಆಯುವ ಮತ್ತು ಭಿಕ್ಷೆ ಬೇಡುವ ಕಸುಬಿನಲ್ಲಿರುವ ಮಕ್ಕಳಿಗೆ ಚರ್ಮರೋಗ ಇರಬಹುದು. ಇವರಲ್ಲಿ ಕೆಲವು ಮಕ್ಕಳು ಈಗಾಗಲೇ ಶಾಲೆಗೆ ಸೇರಿ, ಶಾಲೆಯ ವಾತಾವರಣ ಅವರಲ್ಲಿ ಆಸಕ್ತಿ ಮೂಡಿಸದೇ ಇದ್ದುದರಿಂದ ಹಾಗೂ ಶಾಲೆಯ ಹಿಂಸೆಯಿಂದ ಶಾಲೆಯನ್ನು ಬಿಟ್ಟಿರಬಹುದು. ಬೇರೆ ಬೇರೆ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿರುವ ಮಕ್ಕಳ ಅವಶ್ಯಕತೆ ಬೇರೆ ಬೇರೆ ಆಗಿರುವುದು. ಈ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬಂದು ಶಾಲೆಯಲ್ಲಿ ಉಳಿಸಿಕೊಳ್ಳುವುದು ಬಹಳ ಸುಲಭಕರ ಕೆಲಸವಲ್ಲ. ಮಕ್ಕಳಲ್ಲಿ ಶಾಲೆಯ ವಾತಾವರಣ ತಮಗೆ ಸರಿಯಾಗುವುದಿಲ್ಲಾ ಎಂಬ ಭಾವನೆ ಬರಬಾರದು. ನಾವು ಈ ಮಕ್ಕಳಿಗೆ ಒಪ್ಪಿಗೆಯಾಗುವ ಶಾಲಾ ವಾತಾವರಣವನ್ನು ನಿರ್ಮಾಣ ಮಾಡಬೇಕು.

ಶಾಲೆಗೆ ಕರೆದುಕೊಂಡ ಬಾಲಕಾರ್ಮಿಕರನ್ನು ಬಹಳ ಸಹಾನುಭೂತಿಯಿಂದ ನೋಡಿಕೊಳ್ಳಬೇಕು. ಇದರಲ್ಲಿ ಶಾಲಾ ಶಿಕ್ಷಕಿಯರು ಮತ್ತು ಸಾರ್ವಜನಿಕರ ಪಾತ್ರ ಅತ್ಯಂತ ಮಹತ್ವದ್ದಾಗಿರುತ್ತದೆ. ಶಿಕ್ಷಕಿಯರನ್ನು ಈ ಬಗ್ಗೆ ಸರಿಯಾಗಿ ಪ್ರೇರೇಪಿಸಿ ಪ್ರೋತ್ಸಾಹಿಸಬೇಕು.

ಈ ಕೆಳಗಿನವುಗಳು ಶಾಲೆಗೆ ಸೇರಿದ ಬಾಲಕಾರ್ಮಿಕ ಮಕ್ಕಳ ವಿಶೇಷ ಅಗತ್ಯತೆಗಳು

- ಅವರ ಮನೆಯಲ್ಲಿ ಕಲಿಯುವ ವಾತಾವರಣ ನಿರ್ಮಾಣವಾಗಬೇಕು.
- ಅವರ ಪೋಷಕರಿಗೆ ಶಿಕ್ಷಣದ ಬಗ್ಗೆ ಕ್ರಿಯಾತ್ಮಕ ಅರಿವು ಮೂಡಿಸಬೇಕು.
- ಶಾಲೆಗೆ ಹೋಗಲು ಬೇಕಾದ ಪರಿಕರಗಳು
- ಅವರಿಗೆ ಬೇಕಾದ ಆರ್ಥಿಕ ಸಹಾಯ





- ಕೆಲವು ಮಕ್ಕಳಿಗೆ ಪ್ರಾಥಮಿಕ ಶಾಲೆಗೆ ಸೇರುವ ಪ್ರಾಯ ಮೀರಿರಬಹುದು. ಶಿಕ್ಷಕಿಯರು ಮತ್ತು ಇತರ ವಿದ್ಯಾರ್ಥಿಗಳು ಹಾಗೂ ಸಮುದಾಯದವರು ಈ ಮಕ್ಕಳ ಬಗ್ಗೆ ಸಹಾನುಭೂತಿಯುಳ್ಳವರಾಗಿರಬೇಕು.
- ಶಾಲಾ ಶಿಕ್ಷಕಿಯರು ಈ ಮಕ್ಕಳ ಶೈಕ್ಷಣಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳನ್ನು ಪೂರೈಸಬೇಕು.
- ಅವರಿಗೆ ನಿರಂತರವಾಗಿ ಪ್ರೇರಣೆಯ ಅವಶ್ಯಕತೆ ಇದೆ.
- ಕೆಲವು ಮಕ್ಕಳನ್ನು ಅವರ ಮಿತಿ ಮೀರಿದ ಪ್ರಾಯದಿಂದ ನೇರವಾಗಿ ಶಾಲೆಗೆ ಸೇರಿಸಲು ಆಸ್ಪದ ಇರುವುದಿಲ್ಲ. ಅವರಿಗೆ ಸೇತುಬಂಧ ಕೋರ್ಸಿನ ಅವಶ್ಯಕತೆ ಇದೆ.
- ದೊಡ್ಡ ಮಕ್ಕಳಿಗೆ ವೃತ್ತಿ ಕೌಶಲ್ಯ ಶಿಕ್ಷಣದ ಅವಶ್ಯಕತೆ ಇದೆ.
- ಪ್ರತೀ ಮಕ್ಕಳಿಗೆ ಪ್ರತ್ಯೇಕವಾದ ಪುನರ್ವಸತಿ ತಂತ್ರದ ಅವಶ್ಯಕತೆ ಇದೆ. ವೈಯಕ್ತಿಕ ವಿಧಾನ ಅವಶ್ಯಕತೆ ಇದೆ.
- ಇವರ ಪೊಷಕರಿಗೆ ತರಬೇತಿಯ ಅವಶ್ಯಕತೆ ಇದೆ.

### 2.6.3 ವಿಧಾನಗಳು

ಕೇಸ್ ಸ್ಟಡೀಸ್‌ಗಳ ಅಧ್ಯಯನ

ಗುಂಪು ಚರ್ಚೆ

ಉಪನ್ಯಾಸ / ವಿಶ್ಲೇಷಣೆ

### 2.6.4 ಪರಿಕರಗಳು

ಕೇಸ್ ಸ್ಟಡೀಸ್‌ಗಳು


ಕರಿಹಲಗೆ

ಕಂದು ಬಣ್ಣದ ಹಾಳೆಗಳು

ಬಣ್ಣದ ಪೆನ್ನುಗಳು

ಮಾರ್ಕರ್ಸ್‌ಗಳು





## 2.6.5 ಪ್ರಕ್ರಿಯೆ

ಸಂಪನ್ಮೂಲ ವ್ಯಕ್ತಿಗಳು ಈ ಕೆಳಗಿನ ಕೇಸ್ ಸ್ಟಡೀಸ್‌ಗಳನ್ನು ಶಿಬಿರಾರ್ಥಿಗಳಿಗೆ ಅಧ್ಯಯನ ಮಾಡಲು ತಿಳಿಸಬೇಕು.

**ಕೇಸ್ ಸ್ಟಡಿ:**

ರಂಗಾಪುರ ಒಂದು ದೊಡ್ಡ ಹಳ್ಳಿ ಆಗಿದ್ದು, ಅಲ್ಲಿ ಪದವಿ ಪೂರ್ವ ಕಾಲೇಜು ಇದೆ. ವೆಂಕಟೇಶ್ ರಂಗಾಪುರ ಗ್ರಾಮ ಪಂಚಾಯತ್ ಅಧ್ಯಕ್ಷ. ವೆಂಕಟೇಶ್ ಬಹಳ ತಿಳುವಳಿಕೆ ಇರುವ ವ್ಯಕ್ತಿ. ಅವನು ಅವರ ತಾಲೂಕಿನ ಮಟ್ಟದಲ್ಲಿ ವ್ಯವಸ್ಥೆ ಮಾಡಿದ್ದ "ಬಾಲಕಾರ್ಮಿಕತೆ ನಿರ್ಮೂಲನೆ" ಕಾರ್ಯಾಗಾರದಲ್ಲಿ ಭಾಗವಹಿಸಿದ್ದ, ಕಾರ್ಯಾಗಾರದಿಂದ ಮರಳಿ ಬಂದ ನಂತರ ಈ ವಿಚಾರವನ್ನು ತನ್ನ ಕೆಲವು ಗೆಳೆಯರೊಂದಿಗೆ ಮತ್ತು ಪಂಚಾಯತ್‌ನ ಸದಸ್ಯರೊಂದಿಗೆ ಚರ್ಚಿಸಿದನು. ಮುಂದಿನ ಪಂಚಾಯತ್ ಸಭೆಯಲ್ಲಿ ರಂಗಾಪುರ ಗ್ರಾಮ ಪಂಚಾಯತ್‌ನ್ನು ಮುಂದಿನ ಮೂರು ತಿಂಗಳಲ್ಲಿ ಬಾಲಕಾರ್ಮಿಕ ರಹಿತ ಗ್ರಾಮ ಪಂಚಾಯತ್ ಆಗಿ ಪರಿವರ್ತಿಸುವುದು ಎಂಬ ನಿರ್ಣಯವನ್ನು ತೆಗೆದುಕೊಂಡರು, ಇದಕ್ಕಾಗಿ ಪಂಚಾಯತ್‌ನ ಅಧ್ಯಕ್ಷರ ನೆಲೆಯಲ್ಲಿ ಗ್ರಾಮ ಪಂಚಾಯತ್‌ನ ಎಲ್ಲಾ ಸದಸ್ಯರ, ಎಲ್ಲಾ ಶಾಲೆಗಳ ಎಸ್.ಡಿ.ಎಂ.ಸಿ ಸದಸ್ಯರ, ಎಲ್ಲಾ ಶಾಲಾ ಹಾಗೂ ಪದವಿ ಪೂರ್ವ ಕಾಲೇಜಿನ ಶಿಕ್ಷಕಿಯರ, ಅಂಗನವಾಡಿ ಮಾತೆಯರ, ಯುವಕ ಮಂಡಲ, ಯುವತಿ ಮಂಡಲ, ಮಹಿಳಾ ಮಂಡಲ, ಸ್ವ ಸಹಾಯ ಸಂಘಗಳ ಹಾಗೂ ಧಾರ್ಮಿಕ ಮುಖಂಡರ ಮತ್ತು ಇತರ ಊರ ಗಣ್ಯರ ಸಭೆಯನ್ನು ವ್ಯವಸ್ಥೆ ಮಾಡಿದನು.

ಸಭೆಯಲ್ಲಿ ವೆಂಕಟೇಶ್ ಬಾಲಕಾರ್ಮಿಕ ಸಮಸ್ಯೆ, ಬಾಲಕಾರ್ಮಿಕತೆಯ ಪರಿಣಾಮ, ಬಾಲಕಾರ್ಮಿಕ ಮಕ್ಕಳು ಪಡುತ್ತಿರುವ ಭವಣೆಗಳನ್ನು ಸಭೆಗೆ ವಿವರಿಸಿ, ಪಂಚಾಯತ್‌ನ ವ್ಯಾಪ್ತಿಯಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆಗೆ ಅವರೆಲ್ಲರ ಸಹಕಾರ ಮತ್ತು ಸಲಹೆಯನ್ನು ಕೋರಿದ. ಸಭೆ ವಿಷಯುವನ್ನು ಧೀರ್ಘವಾಗಿ ಚರ್ಚಿಸಿ, ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬಾಲಕಾರ್ಮಿಕತೆಯನ್ನು ಸಂಪೂರ್ಣವಾಗಿ ನಿವಾರಿಸಲು ಕೆಲವು ತಂತ್ರಗಳನ್ನು ರೂಪಿಸಿಕೊಂಡರು. ಈ ಬಗ್ಗೆ ಪಂಚಾಯತ್‌ನ ಎಲ್ಲಾ ವರ್ಗದ ಜನರನ್ನು ಒಳಗೊಂಡ ತಂಡಗಳನ್ನು ರಚಿಸಿಕೊಂಡರು. ಈ ತಂಡಗಳಿಗೆ ಈ ಕೆಳಗಿನ ಕೆಲಸಗಳನ್ನು ನಿಗದಿ ಮಾಡಿದರು.


- ಬಾಲಕಾರ್ಮಿಕರನ್ನು ಗುರುತಿಸುವುದು
- ಮಾಲೀಕರಿಂದ ಮಕ್ಕಳನ್ನು ಬಿಡುಗಡೆ ಗೊಳಿಸಲು ಮಾಲೀಕರ ಮನವೊಲಿಸುವುದು.
- ಪೋಷಕರನ್ನು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲು ಮನವೊಲಿಸುವುದು
- ಈ ಮಕ್ಕಳಿಗೆ ಶಾಲೆಗೆ ಹೋಗಲು ಪ್ರೋತ್ಸಾಹಿಸುವುದು.
- ಈ ಮಕ್ಕಳ ಪುನರ್ವಸತಿ

ಈ ಮಕ್ಕಳ ಕುಟುಂಬದ ಪರಿಸ್ಥಿತಿ ಅಧ್ಯಯನ ಮಾಡಿ, ಪಂಚಾಯತ್ ಗಮನಕ್ಕೆ ತರುವುದು.

ಈ ತಂಡಗಳು 15 ದಿವಸಗಳಲ್ಲಿ 6–14 ವರ್ಷ ಪ್ರಾಯದ ಶಾಲೆಗೆ ಹೋಗದೆ ಕೆಲಸ ಮಾಡುತ್ತಿದ್ದ 42 ಕುಟುಂಬಗಳ 56 ಮಕ್ಕಳನ್ನು ಗುರುತಿಸಿದರು.



ಅವರಲ್ಲಿ 18 ಮಕ್ಕಳು 6–8 ವರ್ಷ ಪ್ರಾಯದವರಾಗಿದ್ದು, ಅವರನ್ನು ನೇರವಾಗಿ ಶಾಲೆಗೆ ಸೇರಿಸಲಾಯಿತು. ಉಳಿದ 38 ಮಕ್ಕಳು 9–14 ವರ್ಷದ ಪ್ರಾಯದವರಾಗಿದ್ದರು. ಗ್ರಾಮ ಪಂಚಾಯತ್‌ನ ಶಾಲಾ ಶಿಕ್ಷಕಿಯರು ಮತ್ತು ಅಲ್ಲಿನ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ನೇತೃತ್ವದಲ್ಲಿ ಈ ಮಕ್ಕಳಿಗೆ 4 ತಿಂಗಳ ಸೇತುಬಂಧ ಶಾಲೆ ನಡೆಸಲು ಮುಂದೆ ಬಂದರು. ಈ ಶಾಲೆಯನ್ನು ಪದವಿ ಪೂರ್ವ ಕಾಲೇಜಿನಲ್ಲಿ ನಡೆಸುವುದೆಂದು ನಿಶ್ಚಯಿಸಿ ಸೇತುಬಂಧ



ಶಾಲೆಯ ಕೆಲಸಕಾರ್ಯಗಳನ್ನು ತಾವು ಹಂಚಿಕೊಂಡರು. ಊರಿನ ಗಿರಣಿ ಮಾಲೀಕರು ಆಹಾರ ವಸ್ತುಗಳನ್ನು ಕೊಡಲು ಹಾಗೂ ಹೋಟೆಲ ಮಾಲೀಕರು ಅವುಗಳನ್ನು ಬೇಯಿಸಿ, ಸೇತುಬಂಧ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ತಯಾರಿಸಿ ಕೊಡಲು ಮುಂದೆ ಬಂದರು

ಪಂಚಾಯತ್ ಅಧ್ಯಕ್ಷರು ಅವಶ್ಯಕವಾದ ಇತರ ಸಲಕರಣೆಗಳನ್ನು ಪಂಚಾಯತ್‌ನಿಂದ ಕೊಡಿಸಿದರು. ಸೇತು ಬಂಧ ಶಾಲೆಯ ನಂತರ 34 ಮಕ್ಕಳನ್ನು ವಿವಿಧ ಶಾಲೆಗಳಿಗೆ ಸೇರಿಸಲಾಯಿತು. 4 ಮಕ್ಕಳು 14 ವರ್ಷ ಪ್ರಾಯದವರಾಗಿದ್ದು, ಅವರು ಶಾಲೆಗೆ ಹೋಗಲು ಆಸಕ್ತಿ ತೋರಿಸಲಿಲ್ಲ. ಆದರೆ ವೃತ್ತಿ ಶಿಕ್ಷಣ ತರಬೇತಿ ಪಡೆಯಲು ಮುಂದೆ ಬಂದರು. ಅವರನ್ನು ಶ್ರಮಿಕ ವಿದ್ಯಾಪೀಠದ ವೃತ್ತಿ ಶಿಕ್ಷಣ ತರಬೇತಿಗೆ ಕಳುಹಿಸುವ ಏರ್ಪಾಡು ಮಾಡಿದರು.

ಗ್ರಾಮ ಪಂಚಾಯತ್‌ನ ಸದಸ್ಯರು ಮತ್ತು ನಾಗರೀಕರು, ತಮ್ಮ ಗ್ರಾಮದಲ್ಲಿ ಮುಂದೆ ಬಾಲಕಾರ್ಮಿಕತೆ ಆಗದಂತೆ ನೋಡಿಕೊಳ್ಳಲು ತಂತ್ರಗಳನ್ನು ರೂಪಿಸಸುವುದೆಂದು ನಿರ್ಧರಿಸಿದರು. ಎಲ್ಲಾ ಗ್ರಾಮ ಪಮಚಾಯತ್ ಸದಸ್ಯರು ತಮ್ಮ ತಮ್ಮ ವಾರ್ಡಿನ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸುವ ಜವಾಬ್ದಾರಿಯನ್ನು ತೆಗೆದುಕೊಂಡರು. ಎಲ್ಲಾ ಸಂಘ ಸಂಸ್ಥೆಗಳ ಪದಾಧಿಕರಾರಿಗಳು, ಸದಸ್ಯರು ಹಾಗೂ ಶಿಕ್ಷಕಿಯರು ಈ ಬ್ಗಗೆ ಪಂಚಾಯತ್ ಸದಸ್ಯರಿಗೆ ಸಹಕಾರ ಕೊಡಲು ನಿರ್ಧರಿಸಿದರು. ಶಾಲಾ ಪ್ರಾಯದ ಮಕ್ಕಳ 100% ಶಾಲೆಗೆ ದಾಖಲಾತಿ, ಹಾಜರಾತಿ ಮತ್ತು ಉಳಿಯುವಿಕೆಯನ್ನು ಸಾಧಿಸಲು ವಾರ್ಡ ಮಟ್ಟದಲ್ಲಿ ಪಂಚಾಯತ್ ಸದಸ್ಯರ ನೇತೃತ್ವದಲ್ಲಿ ಸಮಿತಿ ರಚಿಸಿಕೊಂಡರು.

ಪಂಚಾಯತ್‌ನ ಎಲ್ಲಾ ವೈಯಕ್ತಿಕ ಅಭಿವೃದ್ಧಿ ಯೋಜನೆಗಳನ್ನು, ಮಕ್ಕಳಿಗೆ ಶಾಲೆಗೆ ಕಳುಹಿಸಲು ತೊಂದರೆ ಇರುವ ಪೋಷಕರಿಗೆ ವಿಸ್ತರಿಸಲು ನಿರ್ಧಾರವನ್ನು ಪಂಚಾಯತ್ ಸಭೆಯಲ್ಲಿ ತೆಗೆದುಕೊಂಡರು.

ಪಂಚಾಯತ್ ಅಧ್ಯಕ್ಷ ವೆಂಕಟೇಶ್ ಮತ್ತು ಇತರ ಕೆಲವು ಸದಸ್ಯರು, ಬಾಲಕಾರ್ಮಿಕತೆಯಿಂದ ಬಿಡುಗಡೆ ಆದ ಮಕ್ಕಳು ಕಲಿಯುತ್ತಿರುವ ಶಾಲೆಗಳಿಗೆ ಮತ್ತು ಅವರ ಮನೆಗಳಿಗೆ ಆಗಾಗ ಭೇಟಿ ಕೊಡುವ ಪರಿಪಾಠವನ್ನು ಅಳವಡಿಸಿಕೊಂಡರು.


ಈ ಕೇಸ್ ಸ್ಟಡಿಯ ಅಧ್ಯಯನ ಮತ್ತು ಚರ್ಚೆ ಆದ ನಂತರ, ಶಿಬಿರಾರ್ಥಿಗಳು ತಮ್ಮ ತಮ್ಮ ಗುಂಪಿನಲ್ಲಿ, ಶಾಲೆಯಿಂದ ಹೊರಗಿರುವ ಮಕ್ಕಳ ವಿಶೇಷ ಅವಶ್ಯಕತೆಗಳನ್ನು ಪಟ್ಟಿ ಮಾಡಲು ಸೂಚಿಸುವುದು.

ಈ ಅವಶ್ಯಕತೆಗಳನ್ನು ಪೂರೈಸುವ ಮಾರ್ಗಗಳನ್ನು ಸಹ ಚರ್ಚಿಸುವುದು.

### 2.6.6 ನಿರೀಕ್ಷಿತ ಫಲಿತಾಂಶ

- ಶಾಲೆಯಿಂದ ಹೊರಗಿರುವ ಮಕ್ಕಳಿಗೆ ಕೆಲವು ವಿಶೇಷ ನೆರವಿನ ಅವಶ್ಯಕತೆ ಇದೆ ಎಂಬುದನ್ನು ಶಿಬಿರಾರ್ಥಿಗಳು ಅರ್ಥ ಮಾಡಿಕೊಳ್ಳುವರು.





# 2.7 ಶಿಕ್ಷಣ ಮತ್ತು ಅಭಿವೃದ್ಧಿ

ಸಮಯ: 60 ನಿಮಿಷಗಳು

## 2.7.1 ಉದ್ದೇಶಗಳು

- ಶಿಬಿರಾರ್ಥಿಗಳಿಗೆ ಶಿಕ್ಷಣದಿಂದಾಗುವ ಲಾಭಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವುದು.
- ಶಿಬಿರಾರ್ಥಿಗಳಿಗೆ ಶಿಕ್ಷಣದಿಂದ ಮಾತ್ರ ಬಾಲಕಾರ್ಮಿಕ ಸಮಸ್ಯೆ ಪರಿಹಾರ ಸಾಧ್ಯ ಎಂಬುದನ್ನು ಮನವರಿಕೆ ಮಾಡಿಕೊಡುವುದು.
- ಬಾಲಕಾರ್ಮಿಕತೆಯ ನಿರ್ಮೂಲನಾ ಕಾರ್ಯಕ್ರಮವನ್ನು ಪ್ರೋತ್ಸಾಹಿಸಲು ಶಿಬಿರಾರ್ಥಿಗಳನ್ನು ಪ್ರೇರೇಪಿಸುವುದು.

## 2.7.2 ಪಠ್ಯ


### 2.6.2.1 ಶಿಕ್ಷಣ ಮತ್ತು ಅಭಿವೃದ್ಧಿ:

ಅಭಿವೃದ್ಧಿಯು ಶಿಕ್ಷಣವನ್ನು ನೇರವಾಗಿ ಹೊಂದಿಕೊಂಡಿರುತ್ತದೆ. ಶಿಕ್ಷಣವು ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ. ಶಿಕ್ಷಣವು ಜನರಲ್ಲಿ ಪ್ರಶ್ನೆ ಕೇಳುವ ಕಿಚ್ಚು, ಜ್ಞಾನ, ಮಾಹಿತಿ ಸಂಗ್ರಹಿಸುವ ಶಕ್ತಿ, ಸರಿ ತಪ್ಪು ಎಂಬುದನ್ನು ವಿವೇಚಿಸುವ ಶಕ್ತಿ, ಉತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳುವ ಶಕ್ತಿ, ಉತ್ತಮವಾಗಿ ಜೀವಿಸುವ ಕೌಶಲ್ಯ ಮುಂತಾದವುಗಳನ್ನು ಒದಗಿಸುತ್ತದೆ. ಈ ಎಲ್ಲಾ ಕೌಶಲ್ಯಗಳನ್ನು ಉಪಯೋಗಿಸಿಕೊಂಡು ಜನರು ಜೀವನದಲ್ಲಿ ಮುಂದೆ ಬರಲು ಸಾಧ್ಯವಿದೆ.

ಈಗ ಶಿಕ್ಷಣ ಒಂದು ಮೂಲಭೂತ ಹಕ್ಕು. ಶಿಕ್ಷಣವು ಸಮುದಾಯದ ಸಂಪನ್ಮೂಲ. ಆದುದರಿಂದ ಸಮುದಾಯದ ಎಲ್ಲರೂ ಶಿಕ್ಷಣವನ್ನು ಸಮಾನವಾಗಿ ಪಡೆದುಕೊಳ್ಳುವ ವ್ಯವಸ್ಥೆ ಇರುವುದು ಅವಶ್ಯಕ. ಆ ಪ್ರದೇಶದಲ್ಲಿ ಹುಟ್ಟಿದ ಎಲ್ಲಾ ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳಲು ಅವಕಾಶ ಇರಬೇಕು. ಹುಟ್ಟಿದ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿ ಅವರು ಕನಿಷ್ಟ ಕಡ್ಡಾಯ ಶಿಕ್ಷಣ ಪಡೆದುಕೊಳ್ಳುವಂತೆ ಮಾಡಿದರೆ ಬಾಲಕಾರ್ಮಿಕತೆಯೇ ಇರುವುದಿಲ್ಲ. ಆದರೆ ಇದು ಆಗುತ್ತಿಲ್ಲ. ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿ ಅವರು ಕನಿಷ್ಟ ಕಡ್ಡಾಯ ಶಿಕ್ಷಣವನ್ನು ಪಡೆದುಕೊಳ್ಳುವಂತೆ ಮಾಡವುದು ಬಾಲಕಾರ್ಮಿಕತೆಗೆ ಶಾಶ್ವತ ಪರಿಹಾರ, ಉಳಿದವುಗಳೆಲ್ಲಾ ತಾತ್ಕಾಲಿಕ ಪರಿಹಾರ ಮಾತ್ರವಾಗಿದೆ. ಸರಕಾರವು ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಶಾಲೆಯಲ್ಲಿ ಉಳಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಆದರೆ ಇದರ ಪಲಿತಾಂಶ ಅಷ್ಟು ಆಶಾದಾಯಕವಾಗಿಲ್ಲ.

ಬಾಲಕಾರ್ಮಿಕತೆಯ ನಿರ್ಮೂಲನೆಯ ಹೊಣೆ ಹೊತ್ತವರು ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅನುಷ್ಠಾನದ ಜವಾಬ್ದಾರಿ ಇರುವವರು ಪ್ರೋ ಆ್ಯಕ್ಟಿವ್ ಆಗಿ ಕೆಲಸ ಮಾಡುವುದು ಅವಶ್ಯಕ. ಶಾಲೆಗೆ ಬಂದವರಿಗೆ ಮಾತ್ರ ಕಲಿಸುತ್ತೇವೆ ಎಂಬ ಇರಾದೆ ಹೋಗಿ ಎಲ್ಲಾ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಿ ಕಲಿಸುತ್ತೇವೆ ಎಂಬ ಧೋರಣೆ ಅಧಿಕಾರಿಗಳಲ್ಲಿ ಮತ್ತು ಇತರೆ ತಳವರ್ಗದ ಕಾರ್ಯಕರ್ತರಲ್ಲಿ ಹುಟ್ಟಿ ಬೆಳೆಯಬೇಕು. ಶಿಕ್ಷಣವನ್ನು ಎಲ್ಲಾ ಮಕ್ಕಳಿಗೆ ಒದಗಿಸುವುದು ನಮ್ಮ ಸಾಮಾಜಿಕ ಬಾಧ್ಯತೆ ಎಂಬ ಯೋಚನೆ ಅನುಷ್ಠಾನಾಧಿಕಾರಿಗಳಲ್ಲಿ ಬರಬೇಕು. ಮಕ್ಕಳಿಗೆ ಶಿಕ್ಷಣ ಒದಗಿಸುವುದು ಇಡೀ ಸಮುದಾಯದ, ಜನ ಪ್ರತಿನಿಧಿಗಳ ಹಾಗೂ ಇತರ ಸಮುದಾಯ





ಆಧಾರಿತ ಸಂಸ್ಥೆಗಳ ಜವಾಬ್ದಾರಿಯಾಗಿದೆ.

ಸರಕಾರ ಹಲವಾರು ಯೋಜನೆಗಳನ್ನು ರೂಪಿಸಿದ್ದಾಗ್ಯೂ ಹಾಗೂ ಹಲವಾರು ಸಮೀಕ್ಷೆ ಮತ್ತು ಗಣತಿಯನ್ನು ನಡೆಸಿದ್ದಾಗ್ಯೂ ಯಾಕೆ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಎಂಬುದು ಯೋಚಿಸತಕ್ಕ ವಿಷಯವಾಗಿರುತ್ತದೆ. ಇದು ನಮ್ಮಲ್ಲಿ ಏನೋ ಕೊರತೆ / ಸಮಸ್ಯೆ ಇದೆಯೆಂಬುದನ್ನು ಎತ್ತಿ ತೋರಿಸುತ್ತದೆ. ಸಮಸ್ಯೆಯನ್ನು ಪರಿಹಾರ ಮಾಡುವ ಸ್ಥಾನದಲ್ಲಿರುವವರು ಸಮಸ್ಯೆಗಳನ್ನು ಜಮಖಾನದಡಿ ತಳ್ಳಬಾರದು. ಅವರು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಪರಿಹಾರ ತರಲು ಪ್ರಯತ್ನಿಸಬೇಕು. ಅದೂ ಅಲ್ಲದೆ ಕೆಳಗಿನ ಹಂತದಲ್ಲಿ ಎಲ್ಲಾ ಸರಿಯಾಗಿದೆ ಏನೂ ಸಮಸ್ಯೆಗಳಿಲ್ಲ ಎಂಬ ವರದಿಯನ್ನು ಸಲ್ಲಿಸುವ ಪರಿಪಾಠ ನಿಲ್ಲಬೇಕು. ಮೇಲಾಧಿಕಾರಿಗಳು ಕೆಳ ವರ್ಗದವರು ನಿಜವಾದ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಲು ಪ್ರೋತ್ಸಾಹಿಸಬೇಕು.

**2.6.2.2 ಶಿಕ್ಷಣ ರಂಗದಲ್ಲಿ ಸಿಗುವ ಸೌಲಭ್ಯಗಳು**

1. 1 ರಿಂದ 7 ನೇ ತರಗತಿಯವರೆಗೆ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಲಿಯುತ್ತಿರವ ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರ. ಇದೇ ರೀತಿಯಲ್ಲಿ ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರ.
2. ಪದವಿ ಪೂರ್ವದವರೆಗೆ ಎಲ್ಲಾ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ.
3. ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕದ ಮಾಫಿ ವ್ಯವಸ್ಥೆ.
4. ಸರಕಾರಿ ಶಾಲೆಗಳಲ್ಲಿ 5 ರಿಂದ 7 ನೇ ತರಗತಿವರೆಗೆ ಕಲಿಯುತ್ತಿರುವ ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿನಿಯರಿಗೆ ಉಚಿತ ಶಾಲಾ ಬ್ಯಾಗ್ ನೀಡಲಾಗುವುದು.
5. ಸರಕಾರಿ ಅನುದಾನಿತ ಹಾಗೂ ಅನುದಾನ ಶಾಲೆಗಳಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳಿಗೆ ವಿವಿಧ ಇಲಾಖೆಗಳಿಂದ ವಿದ್ಯಾರ್ಥಿ ವೇತನಗಳು.
6. ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್ಲುಗಳು
7. ಗುಡ್ಡಗಾಡು ಜನಾಂಗದ ಮಕ್ಕಳಿಗೆ ಆಶ್ರಮ ಶಾಲೆಗಳು.
8. ಹಿಂದುಳಿದವರ ಮಕ್ಕಳಿಗೆ ಮೊರಾರ್ಜಿ ವಸತಿ ಶಾಲೆಗಳು.
9. ಪೂರ್ವ ಪ್ರಾಥಮಿಕ ಶಿಕ್ಷಣ ಒದಗಿಸಲು ಅಂಗನವಾಡಿಗಳು.
10. ಹತ್ತನೇ ತರಗತಿಯವರೆಗಿನ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ.
11. ಪ್ರೌಢಶಾಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್

**2.6.2.3 ಶಿಕ್ಷಣದಿಂದ ಆಗುವ ಲಾಭಗಳು**

- ಜ್ಞಾನ
- ವಿಶ್ಲೇಷಣಾ ಶಕ್ತಿ
- ಪ್ರಶ್ನೆ ಕೇಳುವ ಶಕ್ತಿ
- ಧೈರ್ಯ
- ಮಾಹಿತಿ ಸಂಗ್ರಹಣಾ ಶಕ್ತಿ
- ಸಂವಹನಾ ಕೌಶಲ್ಯಗಳು



- ಅರ್ಥ ಮಾಡಿಕೊಳ್ಳುವುದು ಮತ್ತು ಗ್ರಹಿಸಿಕೊಳ್ಳುವುದು
- ಉತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳುವ ಶಕ್ತಿ
- ಉತ್ತಮ ಕೌಶಲ್ಯಗಳು
- ಉತ್ತಮ ಸಂಪಾದನೆ
- ಉತ್ತಮವಾದ ಆರೋಗ್ಯದ ಅಭ್ಯಾಸಗಳು
- ಸುಲಭವಾಗಿ ಶೋಷಣೆಗೊಳಪಡದಿರುವುದು
- ಒಳ್ಳೆಯದು ಮತ್ತು ಕೆಟ್ಟದನ್ನು ವಿಶ್ಲೇಷಿಸುವ ಶಕ್ತಿ
- ನಿರ್ಧಾರ ತೆಗೆದುಕೊಳ್ಳುವ ಶಕ್ತಿ
- ನಾಯಕತ್ವದ ಗುಣಗಳು

### 2.7.3 ವಿಧಾನಗಳು

- ಉಪನ್ಯಾಸ
- ಕೇಸ್ ಸ್ಟಡೀಸ್
- ಚರ್ಚೆ
- ಮಂಡನೆ ಮತ್ತು ಪ್ರದರ್ಶನ

### 2.7.4 ಪರಿಕರಗಳು

- ಕೇಸ್ ಸ್ಟಡಿಗಳು
- ಕರಿಹಲಗೆ
- ಸೀಮೆಸುಣ್ಣ
- ಪೋಸ್ಟರುಗಳು ಮತ್ತು ಫೋಟೋಗಳು
- ಕಂದು ಬಣ್ಣದ ಹಾಳೆಗಳು
- ಬಣ್ಣದ ಪೆನ್ನುಗಳು
- ಮಾರ್ಕರ್ಸ್




## 2.7.5 ಪ್ರಕ್ರಿಯೆ

### 2.7.5.1 ಕೇಸ್ ಸ್ಟಡಿ 1

ಸಂಪನ್ಮೂಲ ವ್ಯಕ್ತಿಗಳು ಈ ಕೆಳಗಿನ ಕೇಸ್ ಸ್ಟಡೀಸ್‌ಗಳನ್ನು ಶಿಬಿರಾರ್ಥಿಗಳ ಮುಂದೆ ಮಂಡಿಸುವರು.

ಅಫ್ಜಲ್‌ಪುರದಲ್ಲಿ ರೆಹಮಾನ್ ಮತ್ತು ಖಾದರ್ ಎಂಬ ಸಹೋದರರು ಇದ್ದರು. ಇಬ್ಬರೂ ಸಹ ಕೂಲಿ ಕಾರ್ಮಿಕರು ಹಾಗೂ ಭೂ ರಹಿತರು. ಮುಂದೆ ಅವರಿಗೆ ಮದುವೆ ಆಯಿತು. ಕಾಲಾಂತರದಲ್ಲಿ ಇಬ್ಬರಿಗೂ ಮೂರು ಮೂರು ಮಕ್ಕಳಾದವು.

ರೆಹಮಾನ್ ಮತ್ತು ಅವನ ಹೆಂಡತಿ ಮಕ್ಕಳಿಗೆ ಶಿಕ್ಷಣ ಕೊಡಿಸುವ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡು, ಅವರನ್ನು ಶಾಲೆಗೆ ಸೇರಿಸಿದರು.




ಖಾದರ್ ಮಕ್ಕಳನ್ನು ಶಾಲೆಗೆ ಸೇರಿಸುವುದು ವ್ಯರ್ಥ ಎಂದು ಭಾವಿಸಿದನು. ಹಿರಿಯ ಮಗನನ್ನು ಗ್ಯಾರೇಜಿಗೆ ಕೆಲಸಕ್ಕೆ ಸೇರಿಸಿದನು. ಕಿರಿಯ ಮಗನನ್ನು ಹೋಟೆಲ್‌ಗೆ ಸೇರಿಸಿದನು. ಮಗಳು ಮನೆಯಲ್ಲಿ ತಾಯಿ ಜೊತೆಯಲ್ಲಿ ಬೀಡಿ ಕಟ್ಟುತ್ತಿದ್ದಳು.






ರೆಹಮಾನನ ಮಕ್ಕಳು ಹಳ್ಳಿ ಶಾಲೆಯ ಶಿಕ್ಷಣ ಮುಗಿಸಿದರು, ಅನಂತರ ಹೈಸ್ಕೂಲಿಗೆ ಹೋದರು ಅಲ್ಲಿಂದ ಮುಂದೆ ಕಾಲೇಜಿಗೆ ಹೋದರು. ಮಕ್ಕಳು ಬುದ್ಧಿವಂತರಾಗಿದ್ದರು. ಕಾಲೇಜು ಶಿಕ್ಷಣ ಪಡೆಯಲು ಬ್ಯಾಂಕಿನಿಂದ ಸಾಲ ಪಡೆದಿದ್ದರು. ಅವರ ದೊಡ್ಡ ಮಗ ಮತ್ತು ಮಗಳು ಹೈಸ್ಕೂಲು ಶಿಕ್ಷಕಿಯರಾದರು. ಸಣ್ಣ ಮಗ ಪಶು ವೈದ್ಯನಾದನು. ಮೂರು ಜನರು ತಾವು ಕೆಲಸ ಮಾಡುವಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಅವರು ತಮ್ಮ ತಂದೆ ತಾಯಿಗೆ ಸಹ ಸ್ವಲ್ಪ ಸ್ಥಳಖರೀದಿಸಿ ಮನೆ ಕಟ್ಟಿ ಕೊಟ್ಟಿರುತ್ತಾರೆ. ರೆಹಮಾನ್ ಮತ್ತು ಅವನ ಹೆಂಡತಿ ಸ್ವಲ್ಪ ಸಮಯ ತಮ್ಮ ಮಕ್ಕಳ ಮನೆಯಲ್ಲಿ ಕಳೆಯುತ್ತಾರೆ. ಸ್ವಲ್ಪ ಸಮಯ ತಮ್ಮ ಮನೆಯಲ್ಲಿ ಕಳೆಯುತ್ತಾರೆ.





ಗ್ಯಾರೇಜಿನಲ್ಲಿ ಕೆಲಸ ಮಾಡುತ್ತಿದ್ದ ಖಾದರ್‌ನ ಮಗ ರೌಡಿ ಆದ. ಅವನು ಕೊಲೆ, ಅಪಹರಣ ಮುಂತಾದವುಗಳಲ್ಲಿ ಭಾಗಿಯಾಗಲು ಪ್ರಾರಂಭಿಸಿದ. ಒಂದು ದಿವಸ ಅವನನ್ನು ಪೊಲೀಸರು ಬಂಧಿಸಿ ಅವನ ಮೇಲೆ ಮೊಕದ್ದಮೆ ಹೂಡಿದರು. ಅವನಿಗೆ ನ್ಯಾಯಾಲಯ ಮರಣ ದಂಡನೆ ವಿಧಿಸಿತು. ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಎರಡನೆಯ ಮಗನಿಗೆ ಏಡ್ಸ್ ತಗುಲಿತು. ಮಗಳು ಬಹಳ ಕಷ್ಟ ಪಟ್ಟು ಕೆಲಸ ಮಾಡುವವಳಾಗಿದ್ದರೂ ಸಹ ಅವಳು ಅನಕ್ಷರಸ್ಥೆಯಾದ್ದರಿಂದ ಇನ್ನೊಬ್ಬ ಕೂಲಿಯವನನ್ನು ಮದುವೆ ಆಗ ಬೇಕಾಯಿತು. ಖಾದರ್ ಮತ್ತು ಅವನ ಹೆಂಡತಿ ಬೇಸರದಿಂದ ಮತ್ತು ಬಡತನದಿಂದ ತಮ್ಮ ಮುಪ್ಪಿನ ಜೀವನ ಸಾಗಿಸಬೇಕಾಯಿತು.






### 2.7.5.2 ರಂಗಪ್ಪ ಮತ್ತು ರಂಗವ್ವಳ ಕಥೆ

ರಂಗಪ್ಪ ಮತ್ತು ರಂಗವ್ವ ಕೂಲಿ ಕಾರ್ಮಿಕರು. ಅವರಿಗೆ ಇಬ್ಬರು ಮಕ್ಕಳು. ಮಗಳು ದೊಡ್ಡವಳು ಮಗ ಸಣ್ಣವನು. ರಂಗಪ್ಪ ಮತ್ತು ರಂಗವ್ವ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಕನಸು ಕಾಣುತ್ತಿದ್ದರು. ಆದರೆ ಅವರು ಶಿಕ್ಷಣದ ವೆಚ್ಚದ ಬಗ್ಗೆ ಹೆದರಿ ಕೊಂಡಿದ್ದರು. ಅವರು ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಿ ಸಲಹೆಯನ್ನು ಕೇಳಿದರು.



ಹೆಣ್ಣು ಮಕ್ಕಳಿಗೆ ಕಾಲೇಜಿನವರೆಗೆ ಉಚಿತ ಶಿಕ್ಷಣ ದೊರೆಯುವುದು. ಅವರು ಯಾವುದೇ ಶುಲ್ಕ ಕೊಡುವ ಅವಶ್ಯಕತೆ ಇಲ್ಲ ಎಂದು ಮುಖ್ಯೋಪಾಧ್ಯಾಯರು ತಿಳಿಸಿದರು. ಮಕ್ಕಳಿಗೆ ಉಚಿತ ಪುಸ್ತಕ ಸಿಗುತ್ತದೆ. ಶಾಲೆಗಳಲ್ಲಿ ಸಮವಸ್ತ್ರ ಸಿಗುವುದು. ಉನ್ನತ ಶಿಕ್ಷಣ ಪಡೆಯಲು ಹಾಸ್ಟೆಲ್ ಸೌಲಭ್ಯ ಪಡೆಯಬಹುದು ಎಂಬುದಾಗಿ ಸಹ ತಿಳಿಸಿದರು.

ರಂಗಪ್ಪ ಮತ್ತು ರಂಗವ್ವ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದರು. ಎರಡು ವರ್ಷಗಳ ನಂತರ ಮಗನನ್ನು ಸಹ ಶಾಲೆಗೆ ಸೇರಿಸಿದರು. ಮಕ್ಕಳು ಹೈಸ್ಕೂಲುವರೆಗಿನ ಶಿಕ್ಷಣವನ್ನು ಊರಿನಲ್ಲಿಯೇ ಪಡೆದರು. ಕಾಲೇಜು ಶಿಕ್ಷಣವನ್ನು ಹಾಸ್ಟೆಲಿನಲ್ಲಿ ಇದ್ದು ಪಡೆದುಕೊಂಡರು. ರಂಗಪ್ಪ ಮತ್ತು ರಂಗವ್ವನ ಮಗಳು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಆಗಿದ್ದಾಳೆ. ಮಗ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದಾನೆ.








ಬಡವರಿಗೆ ತಮ್ಮ ಮಕ್ಕಳಿಗೆ ಶಿಕ್ಷಣ ಒದಗಿಸಲು ಬೇಕಾದಷ್ಟು ಅವಕಾಶಗಳಿವೆ


- ಶಿಕ್ಷಣಕ್ಕೆ ಶುಲ್ಕ ಇರುವುದಿಲ್ಲ.
- ಮಧ್ಯಾಹ್ನದ ಊಟ ಉಪಹಾರ ಸಿಗುವುದು.
- ಉಚಿತ ಪುಸ್ತಕಗಳು.
- ಸಮವಸ್ತ್ರ
- ವಿಧ್ಯಾರ್ಥಿ ನಿಲಯಗಳು.

ಇದಲ್ಲದೆ ಆಹಾರ, ಆರೋಗ್ಯ ಸೇವೆ, ವಸತಿ ಮುಂತಾದವುಗಳನ್ನು ಒದಗಿಸಲು ಸಾಮಾಜಿಕ ಭದ್ರತಾ ಯೋಜನೆಗಳು ಇದೆ.

### 2.7.6 ನಿರೀಕ್ಷಿತ ಫಲಿತಾಂಶಗಳು

- ಶಿಬಿರಾರ್ಥಿಗಳು ಶಿಕ್ಷಣಕ್ಕೆ ಮಾತ್ರ ಬಾಲಕಾರ್ಮಿಕತೆಗೆ ಶಾಶ್ವತ ಪರಿಹಾರ ಒದಗಿಸಲು ಸಾಧ್ಯ ಎಂಬುದನ್ನು ಅರಿತುಕೊಳ್ಳುವರು.
- ಶಿಬಿರಾರ್ಥಿಗಳು ಅಭಿವೃದ್ಧಿ ಮತ್ತು ಶಿಕ್ಷಣ ಒಂದಕ್ಕೊಂದು ನೇರವಾಗಿ ಸಂಬಂಧ ಇರುವಂತವು ಎಂಬುದನ್ನು ಅರ್ಥ ಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ಬಾಲಕಾರ್ಮಿಕ ಮಕ್ಕಳಿಗೆ ಶಿಕ್ಷಣ ಪಡೆದುಕೊಳ್ಳಲು ಸಾಕಷ್ಟು ಅವಕಾಶಗಳಿವೆ ಹಾಗೂ ಅವುಗಳನ್ನು ಅವರ ಪೋಷಕರು ಉಪಯೋಗಿಸಿಕೊಳ್ಳಬೇಕಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವರು.





## 2.8 ಮಕ್ಕಳ ಹಕ್ಕುಗಳ ಮತ್ತು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಕಾನೂನಿನ ಅವಕಾಶಗಳು

ಸಮಯ: 60 ನಿಮಿಷಗಳು

### 2.8.1 ಉದ್ದೇಶಗಳು

- ಶಿಬಿರಾರ್ಥಿಗಳಿಗೆ ಮಕ್ಕಳ ಹಕ್ಕುಗಳನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು.
- ಸಮುದಾಯ ಮತ್ತು ಸರಕಾರಗಳಿಗೆ ಮಕ್ಕಳಿಗೆ ತಮ್ಮ ಹಕ್ಕುಗಳನ್ನು ಅನುಭವಿಸವ ಅವಕಾಶ ಕಲ್ಪಿಸಿ ಕೊಡುವ ಬಾಧ್ಯತೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಡುವುದು.
- ಶಿಬಿರಾರ್ಥಿಗಳಿಗೆ ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಕಾನೂನಿನ ಅವಕಾಶಗಳಿವೆ ಎಂಬುದನ್ನು ಮನವರಿಕೆ ಮಾಡಿಕೊಡುವುದು.
- ಶಿಬಿರಾರ್ಥಿಗಳಿಗೆ ಬಾಲಕಾರ್ಮಿಕತೆಯ ನಿರ್ಮೂಲನೆ ಒಂದು ಸಾಮಾಜಿಕ ಪ್ರಕ್ರಿಯೆ ಇದಕ್ಕೆ ಸಮಾಜದ ತಳಸ್ಥರ ಸಂಸ್ಥೆಗಳ ಜನತಾ ಪ್ರತಿನಿಧಿಗಳ ಹಾಗೂ ಸಮುದಾಯದ ಸಹಾಯ ಹಾಗೂ ನೆರವಿನ ಅವಶ್ಯಕತೆ ಇದೆ ಎಂಬುದನ್ನು ಮನದಟ್ಟು ಮಾಡುವುದು.
- ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಇರುವಂತಹ ಬೇರೆ ಬೇರೆ ಕಾನೂನುಗಳ ಬಗ್ಗೆ ಅರಿವು ಮೂಡಿಸಿಕೊಳ್ಳುವುದು. ಅವುಗಳನ್ನು ಕ್ಷೇತ್ರದಲ್ಲಿ ಉಪಯೋಗಿಸುವ ಕೌಶಲ್ಯಗಳನ್ನು ಪಡೆದುಕೊಳ್ಳುವುದು.

### 2.8.2 ಪಠ್ಯ

ನಾವು ಹಿಂದಿನ ಅವಧಿಗಳಲ್ಲಿ ಮಕ್ಕಳು ಯಾವ ರೀತಿಯಲ್ಲಿ ಶೋಷಣೆಗೊಳಗಾಗುತ್ತಿದ್ದಾರೆ ಮತ್ತು ಕಷ್ಟ ಪಡುತ್ತಿದ್ದಾರೆ ಹಾಗೂ ಯಾವ ರೀತಿಯಲ್ಲಿ ಅವರನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಚರ್ಚಿಸಿದ್ದೇವೆ. ಮಕ್ಕಳನ್ನು ಕೆಲಸ ಮಾಡಲು ಒತ್ತಾಯಿಸಲು ಯಾವುದೇ ಕಾನೂನು ಇರುವುದಿಲ್ಲ. ಮಕ್ಕಳನ್ನು ಕೆಲಸ ಮಾಡುವಂತೆ ಒತ್ತಾಯಿಸುವುದು ಕಾನೂನಿಗೆ ಮತ್ತು ನಮ್ಮ ಸಂವಿಧಾನಕ್ಕೆ ವಿರೋಧವಾದದು.


ಮಕ್ಕಳ ಕಾನೂನುಗಳು:

ಮಕ್ಕಳ ಕಾನೂನುಗಳು ಮಕ್ಕಳ ಕಾನೂನಿನ ಸಮಾವೇಶವನ್ನು ಯು.ಎನ್ ಸಂಸ್ಥೆ ವ್ಯವಸ್ಥೆ ಮಾಡಿತ್ತು. ಈ ಸಮಾವೇಶದ ನಿರ್ಣಯಗಳನ್ನು ಅಮೇರಿಕಾ ದೇಶ ಬಿಟ್ಟು ಉಳಿದ ಎಲ್ಲಾ ದೇಶಗಳು ಒಪ್ಪಿಕೊಂಡು ತಮ್ಮ ದೇಶದ ಕಾನೂನುಗಳಲ್ಲಿ ಸೇರಿಸಿಕೊಂಡಿವೆ. ಇದು 1990ರ ಸೆಪ್ಟೆಂಬರ್ 2 ರಂದು ಅಂರತಾಷ್ಟ್ರೀಯ ಕಾನೂನಾಗಿರುತ್ತದೆ. ಮಕ್ಕಳ ಹಕ್ಕುಗಳನ್ನು ಈ ಕೆಳಗಿನಂತೆ ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

**1. ಜೀವಿಸುವ ಹಕ್ಕು**

- ಜೀವದ ಹಕ್ಕು
- ಆರೋಗ್ಯದ ಸೌಲಭ್ಯದ ಹಕ್ಕು
- ಉತ್ತಮವಾದ ಪೌಷ್ಟಿಕಾಂಶದ ಆಹಾರ ಪಡೆಯುವ ಹಕ್ಕು
- ಹೆಸರನ್ನು ಹೊಂದುವ ಹಕ್ಕು
- ಪೌರತ್ವವನ್ನು ಪಡೆಯುವ ಹಕ್ಕು
- ಪೋಷಕರಿಂದ ಬೆಳೆಸಿಕೊಳ್ಳುವ ಹಕ್ಕು.





**2. ರಕ್ಷಣೆಯ ಹಕ್ಕು**

- ಎಲ್ಲಾ ರೀತಿಯ ಶೋಷಣೆಯಿಂದ ಮತ್ತು ದುರುಪಯೋಗದಿಂದ ರಕ್ಷಿಸಿಕೊಳ್ಳುವ ಹಕ್ಕು
- ಯುದ್ಧಗಳು ನಡೆಯುವಾಗ ಮತ್ತು ತುರ್ತು ಪರಿಸ್ಥಿತಿಗಳಲ್ಲಿ ರಕ್ಷಣೆ ಪಡೆಯುವ ಹಕ್ಕು

**3. ಅಭಿವೃದ್ಧಿ ಹೊಂದುವ ಹಕ್ಕು**

- ಶಿಕ್ಷಣ ಪಡೆಯುವ ಹಕ್ಕು
- ಬಾಲ್ಯದಲ್ಲಿ ಸಹಾಯ ಪಡೆಯುವ ಹಕ್ಕು
- ಸಾಮಾಜಿಕ ಭದ್ರತೆಯ ಹಕ್ಕು
- ಮನೋರಂಜನೆಯ ಹಕ್ಕು
- ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹಕ್ಕು
- ವಿರಾಮದ ಹಕ್ಕು

**4. ಭಾಗವಹಿಸುವ ಹಕ್ಕು.**

- ಮಕ್ಕಳ ಹಕ್ಕುಗಳಿಗೆ ಮನ್ನಣೆ ಕೊಡುವುದು
- ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವ ಹಕ್ಕು
- ಅವಶ್ಯಕವಾದ ಮಾಹಿತಿಗಳನ್ನು ಪಡೆಯುವ ಹಕ್ಕು
- ಯೋಚಿಸುವ ಹಕ್ಕು
- ಧಾರ್ಮಿಕ ಹಕ್ಕು

ಮಕ್ಕಳ ಹಕ್ಕುಗಳ ಸಮಾವೇಶವು 18 ವರ್ಷದ ಒಳಗಿನವರನ್ನು ಮಕ್ಕಳೆಂದು ಪರಿಗಣಿಸಿದೆ. ಇವರಿಗೆ ಅವರ ಹಕ್ಕುಗಳನ್ನು ಉಪಯೋಗಿಸಕೊಳ್ಳುವ ಅವಕಾಶಗಳನ್ನು ಕಲ್ಪಿಸಿಕೊಡುವುದು ಪೋಷಕರ ಸಮುದಾಯದ ಮತ್ತು ಸರಕಾರದ ಆದ್ಯ ಕರ್ತವ್ಯವಾಗಿದೆ.

ನಮ್ಮ ಸಂವಿಧಾನದ ಪ್ರಕಾರ, 14 ವರ್ಷಕ್ಕಿಂತ ಕೆಳಗಿನವರನ್ನು ಕೆಲಸ ಮಾಡಿಸುವುದು ಶಿಕ್ಷಾರ್ಹ ಅಪರಾಧವಾಗಿದೆ.


14 ವರ್ಷ ಒಳಗಿನ ಮಕ್ಕಳನ್ನು ಯಾವುದೇ ವ್ಯವಸ್ಥೆಯಲ್ಲಿ ಕೆಲಸ ಮಾಡಿಸುವುದು ಕಾನೂನಿಗೆ ವಿರೋಧವಾಗಿದೆ.

ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೆ ಅವರ ಹೊಲಗಳಲ್ಲಿ ಕೆಲಸ ಮಾಡಿಸುವುದು ಸಹ ಅಪರಾಧವಾಗಿದೆ.

ಹೊಸ ನಿಯಮದ ಪ್ರಕಾರ ಶಾಲಾ ಪ್ರಾಯದ ಮಕ್ಕಳನ್ನು ಮನೆಯಗೆಲಸಕ್ಕೆ ನೇಮಿಸಿಕೊಳ್ಳುವುದು ಸಹ ಶಿಕ್ಷಾರ್ಹ ಅಪರಾಧ

ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಪ್ರಕಾರ ಮಕ್ಕಳನ್ನು ಅಪಾಯಕಾರಿ ಕೆಲಸದಲ್ಲಿ ತೊಡಗಿಸಿಕೊಂಡರೆ ಅಂತಹ ಮಾಲೀಕರನ್ನು ಶಿಕ್ಷೆಗೆ ಒಳಪಡಿಸಬಹುದಾಗಿದೆ.





### 2.8.3 ವಿಧಾನಗಳು

- ಉಪನ್ಯಾಸ
- ಗುಂಪು ಚರ್ಚೆ
- ಪ್ರದರ್ಶನ

### 2.8.4 ಪರಿಕರಗಳು


- ಫೋಟೋಗಳು ಮತ್ತು ಪೋಸ್ಟರ್‌ಗಳು
- ಕಂದು ಬಣ್ಣದ ಹಾಳೆಗಳು
- ಪೆನ್ನುಗಳು
- ಮಾರ್ಕರ್ಸ್
- ಬಿಳಿ ಹಾಳೆಗಳು

### 2.8.5 ಪ್ರಕ್ರಿಯೆ

- ಸಂಪನ್ಮೂಲ ವ್ಯಕ್ತಿಗಳು ಈ ಕೆಳಗಿನ ವಿಧಾನಗಳನ್ನು ಅನುಸರಿಸಬಹುದು
  1. ಸುಲಭದಿಂದ ಸಂಕೀರ್ಣದೆಡೆಗೆ
  2. ಗೊತ್ತಿರುವುದರಿಂದ ಗೊತ್ತಿಲ್ಲದ ವಿಚಾರದೆಡೆಗೆ
- ಶಿಬಿರಾರ್ಥಿಗಳಿಗೆ ಕೆಲವೊಂದು ಬಾಲಕಾರ್ಮಿಕತೆಯ ಕಾನೂನುಗಳ ಪರಿಚಯವಿರಬಹುದು.
- ಶಿಬಿರಾರ್ಥಿಗಳನ್ನು ಸಣ್ಣ ಗುಂಪುಗಳನ್ನಾಗಿ ಮಾಡಿ ಅವರಿಗೆ ಗೊತ್ತಿರುವ ಬಾಲಕಾರ್ಮಿಕತೆಯ ಕಾನೂನುಗಳು ಅಥವಾ ನಿಯಮಗಳನ್ನು ಪಟ್ಟಿ ಮಾಡಲು ತಿಳಿಸುವುದು.
- ಇದು ಸಂಪನ್ಮೂಲ ವ್ಯಕ್ತಿಗಳಿಗೆ ಶಿಬಿರಾರ್ಥಿಗಳ ಬಾಲಕಾರ್ಮಿಕತೆ ನಿರ್ಮೂಲನಾ ಕಾನೂನಿನ ಪರಿಜ್ಞಾನದ ಮಟ್ಟವನ್ನು ಗುರುತಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಪರಿಚಯವಿಲ್ಲದ ಕಾನೂನಿನ ಅಂಶಗಳನ್ನು ಮಾತ್ರ ತಿಳಿಸಲು ಅವಕಾಶವಾಗುವುದು.
- ಶಿಬಿರಾರ್ಥಿಗಳು ಮಕ್ಕಳ ಹಕ್ಕುಗಳನ್ನು ಸ್ಥಳಿಯ ಉದಾಹರಣೆಗಳೊಂದಿಗೆ ಮಂಡಿಸಬೇಕು. ಇದಲ್ಲದೆ ಇನ್ನಿತರ ಕಾನೂನುಗಳನ್ನು ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಸಹ ಶಿಬಿರಾರ್ಥಿಗಳ ಗಮನಕ್ಕೆ ತರಬೇಕು. (ಕಾನೂನಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಭಾಗ 3 ರಿಂದ ಪಡೆಯಬಹುದಾಗಿದೆ)
- ಸಂಪನ್ಮೂಲ ವ್ಯಕ್ತಿಗಳು ಈ ಕೆಳಗಿನ ಘಟನೆಗಳನ್ನು ಕೊಟ್ಟು ಅವುಗಳಲ್ಲಿ ಆಗಿರುವ ಮಕ್ಕಳ ಹಕ್ಕಿನ ಉಲ್ಲಂಘನೆಯನ್ನು ಗುರುತಿಸಲು ತಿಳಿಸುವುದು.



ಅ) ಗೀತಾ 10 ವರ್ಷದ ಪ್ರಾಯದ ಬಾಲಕಿ ಅವಳನ್ನು ಕೆಲಸ ಮಾಡುವ ದಂಪತಿಗಳ ಮನೆಯಲ್ಲಿ ಬೆಳಿಗ್ಗೆ 6.00 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ಕೆಲಸ ಮಾಡಿಸಲಾಗುತ್ತಿದೆ.



ಆ) ಲಕ್ಷ್ಮಣ ಶ್ರೀಮಂತ ರೈತನ ಮನೆಯಲ್ಲಿ ಜೀತದಾಳಾಗಿ ಕೆಲಸ ಮಾಡುತ್ತಿದ್ದಾನೆ. ಅವನು ಸರಿಯಾದ ಊಟ ಇಲ್ಲದೆ ಹಾಗೂ ತೆರೆದ ಪ್ರದೇಶದಲ್ಲಿ ನಿದ್ರಿಸಿ ಜೀವಿಸಬೇಕಾಗಿದೆ.

ಇ) ಸುನೀತಾ ಮತ್ತು ವಿನೀತಾ ಕ್ರಮವಾಗಿ 11 ಮತ್ತು 13 ವರ್ಷ ಪ್ರಾಯದವರಾಗಿದ್ದು ಅವರು ಶಾಲೆಗೆ ಹೋಗದೆ ತಮ್ಮ ತಂದೆಯ ಹೊಲದಲ್ಲಿ ಇಡೀ ದಿವಸ ಕೆಲಸ ಮಾಡುತ್ತಿದ್ದಾರೆ.

ಈ) ಸುಬ್ಬಕ್ಕ 13 ವರ್ಷದವಳಾಗಿದ್ದು, ತನ್ನ ಊರಿನಿಂದ ದೂರದಲ್ಲಿ ಒಬ್ಬರ ಮನೆಯಲ್ಲಿ ಮನೆಗೆಲಸದವಳಾಗಿ ಕೆಲಸ ಮಾಡುತ್ತಿದ್ದಾಳೆ. ಅವಳು ಇಡೀ ದಿನ ಕೆಲಸ ಮಾಡಬೇಕಾಗಿದೆ. ಇದಲ್ಲದೆ ಅವಳನ್ನು ಮನೆಯ ಯಜಮಾನ ಲೈಂಗಿಕವಾಗಿ ಶೋಷಿಸುತ್ತಿದ್ದಾನೆ.

ಉ) ಸಿರಾಜುದ್ದೀನ್ ತಮ್ಮ ಮನೆಯಿಂದ ದೂರದಲ್ಲಿ ರೇಷ್ಮೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದನು. ಅವನು ಕಾಯಿಲೆ ಬಿದ್ದ, ಕಾರ್ಖಾನೆ ಮಾಲೀಕ ಇದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ ಮತ್ತು ಅವನಿಗೆ ವೈದ್ಯಕೀಯ ಸೌಲಭ್ಯ ಒದಗಿಸಲಿಲ್ಲ. ಕೊನೆಯಲ್ಲಿ ಹುಡುಗ ತೀರಿದ.

- ಅವಧಿಯ ಸಮಾಪ್ತಿಗೊಳಿಸುವಾಗ ಇನ್ನೊಮ್ಮೆ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಇರುವಂತಹ ವಿವಿಧ ಕಾನೂನುಗಳನ್ನು ಮತ್ತು ನಿಯಮಗಳನ್ನು ಪುನರ್‌ಮನನ ಮಾಡಬೇಕು.
- ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಈ ಕೆಳಗಿನ ವಿಚಾರಗಳನ್ನು ಮನದಟ್ಟು ಮಾಡಬೇಕು.
- "ಕಾನೂನುಗಳು ತಾವೇ ಯಾವುದೇ ಕ್ರಮ ಜರುಗಿಸುವುದಿಲ್ಲ, ಆದರೆ ವ್ಯಕ್ತಿಗಳು ಮನಸಗಸು ಮಾಡಿದರೆ ಕಾನೂನುಗಳನ್ನು ಉಪಯೋಗಿಸಿಕೊಂಡು ಬಾಲಕಾರ್ಮಿಕತೆಯನ್ನು ತೊಡೆದು ಹಾಕಬಹುದು. ಆ ವ್ಯಕ್ತಿಗಳು ನೀವಾಗಬೇಕು".


### 2.8.6 ನಿರೀಕ್ಷಿತ ಫಲಿತಾಂಶ

- ಶಿಬಿರಾರ್ಥಿಗಳು ಮಕ್ಕಳ ಹಕ್ಕುಗಳನ್ನು ಅರ್ಥ ಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ನಿರ್ಮೂಲನೆಗೆ ಹಲವಾರು ಕಾರಣಗಳಿವೆ ಎಂಬುದನ್ನು ಅರ್ಥಮಾಡಿಕೊಳ್ಳುವರು.
- ಶಿಬಿರಾರ್ಥಿಗಳು ಮಕ್ಕಳ ಹಕ್ಕುಗಳಿಗೋಸ್ಕರ ಕೆಲಸ ಮಾಡಲು ನಿರ್ಧರಿಸುವರು.

### 2.8.7 ಸೂಚನೆಗಳು

- ಸಂಪನ್ಮೂಲ ವ್ಯಕ್ತಿಗಳು ಬಾಲಕಾರ್ಮಿಕತೆಗೆ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಪಟ್ಟ ಫೋಟೋಗಳನ್ನು ಚಿತ್ರಗಳನ್ನು ಸಂಗ್ರಹಿಸಬೇಕು.
  - ಸಂಪನ್ಮೂಲ ವ್ಯಕ್ತಿಗಳು ಇವುಗಳನ್ನು ತರಬೇತಿ ಸಂದರ್ಭಗಳಲ್ಲಿ ಪ್ರದರ್ಶಿಸಬೇಕು.
  - ಹೆಚ್ಚಿನ ಮಾಹಿತಿಯನ್ನು ಭಾಗ 3 ರಿಂದ ಪಡೆಯಬಹುದು.





## 2.9 ಬಾಲಕಾರ್ಮಿಕತೆ – ಹೆಣ್ಣು ಮಕ್ಕಳು – ಮಕ್ಕಳ ಸಾಗಾಟ

### 2.9.1 ಉದ್ದೇಶಗಳು

- ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು.
- ಹೆಣ್ಣು ಮಕ್ಕಳು ಕೆಲಸ ಮಾಡುತ್ತಿರುವ ವಿವಿಧ ಸ್ಥಳಗಳನ್ನು ಅರ್ಥಮಾಡಿಕೊಳ್ಳುವುದು.
- ಮಕ್ಕಳ ಸಾಗಾಟದ ವಿಷ ವರ್ತುಲದ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದು.

### 2.9.2 ಪಠ್ಯ

"ಸಂತೋಷದಿಂದ ಇರುವ ಹೆಣ್ಣುಮಗು ನಮ್ಮ ರಾಷ್ಟ್ರದ ಭವಿಷ್ಯ" ಇದು ನಮ್ಮ ದೇಶ ಹಮ್ಮಿಕೊಂಡ ಹೆಣ್ಣು ಮಕ್ಕಳ ಆಂದೋಲನದ ಧ್ಯೇಯ ವಾಕ್ಯವಾಗಿದೆ. ನಮ್ಮ ಸಂಪ್ರದಾಯ, ಆಚಾರ ವಿಚಾರ ಮತ್ತು ಸಾಮಾಜಿಕ ವ್ಯವಸ್ಥೆ ಹೆಣ್ಣು ಮಗುವಿಗಿಂತ ಗಂಡು ಮಗುವಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತವೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಆರ್ಥಿಕ ಹೊರೆ ಎಂದು ಪರಿಗಣಿಸಲಾಗುತ್ತಿದೆ. ಇದರಿಂದ ಅವರು ಎಷ್ಟು ಮುಂದುವರಿಯಬೇಕೋ ಅಥವಾ ಎಷ್ಟು ಬೆಳೆಯಬೇಕೋ ಅಷ್ಟು ಬೆಳೆಯಲು ಸಾಧ್ಯವಾಗುತ್ತಿಲ್ಲ.


ಒಂದು ಸಮೀಕ್ಷೆಯ ಪ್ರಕಾರ ದೇಶದ ಸುಮಾರು 17% ಮನೆ ಕೆಲಸದವರು 15 ವರ್ಷದ ಒಳಗಿನ ಮಕ್ಕಳಾಗಿರುತ್ತಾರೆ, ಅದರಲ್ಲಿ ಶೇಕಡ 90 ರಷ್ಟು ಹೆಣ್ಣು ಮಕ್ಕಳು. ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಿಂದ ಹೆಣ್ಣು ಮಕ್ಕಳನ್ನು ಅವರಿಗೆ ಉತ್ತಮ ಜೀವನದ ಆಸೆ ತೋರಿಸಿ ಮನೆಯಿಂದ ಹೊರಗೆ ಕರೆದುಕೊಂಡು ಹೋಗಲಾಗುತ್ತಿದೆ. ಇವರು ಅಂತಾರಾಷ್ಟ್ರೀಯ ಅಪರಾಧ ಜಗತ್ತಿನ ಸಂಪರ್ಕಜಾಲಕ್ಕೆ ಸಿಕ್ಕಿ ಹಾಕಿ ಕೊಳ್ಳುವರು ಅಥವಾ ಗುಲಾಮರಾಗಿ ಮಾರಾಟವಾಗುವರು ಅಥವಾ ಲೈಂಗಿಕ ವ್ಯಾಪಾರಕ್ಕೆ ದೂಡಲ್ಪಡುವರು, ಹೀಗೆ ಸಾಗಾಟವಾಗುವವರಲ್ಲಿ 50% ಮಕ್ಕಳಾಗಿರುತ್ತಾರೆ ಎನ್ನುವುದು ಗಮನಾರ್ಹ ಅಂಶವಾಗಿದೆ.

ಸಾಗಾಟವಾಗುವ ಹೆಣ್ಣು ಮಕ್ಕಳು ಲೈಂಗಿಕವಾಗಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಎಲ್ಲಾ ವಿಧದ ಶೋಷಣೆಗೆ ಒಳಪಡುತ್ತಾರೆ. ಅವರು ಅತ್ಯಂತ ಹಾನಿಕಾರಕ ವಾತಾವರಣದಲ್ಲಿ ಕೆಲಸ ಮಾಡಬೇಕಾಗಿದ್ದು, ಹಲವಾರು ಕಾಯಿಲೆಗಳಿಂದ ನರಳುತ್ತಿರುವರು. ಇದರಲ್ಲಿ ಏಡ್ಸ್, ಅನಿಯಮಿಕ್, ಬಸಿರು ಹಾಗೂ ಗರ್ಭಪಾತ ಸೇರಿರಬಹುದು.

ಸರ್ಕಾರ ಹೆಣ್ಣುಮಕ್ಕಳ ಜೀವನವನ್ನು ಉತ್ತಮ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಬಗ್ಗೆ ಸರಕಾರವು "ಎಲ್ಲರಿಗೂ ಶಿಕ್ಷಣ" ಎಂಬ ಯೋಜನೆಯನ್ನು ಘೋಷಿಸಿದ್ದು, ಇದರ ಮೂಲಕ 19–24 ಮಿಲಿಯನ್ 6–14 ವರ್ಷದ ಮಕ್ಕಳಿಗೆ ಶಿಕ್ಷಣ ಒದಗಿಸಬೇಕು ಎಂಬ ಗುರಿ ಇರುತ್ತದೆ. ಇದರಲ್ಲಿ ಶೇ. 50ರಷ್ಟು ಹೆಣ್ಣು ಮಕ್ಕಳಾಗಿರುತ್ತಾರೆ. ಹೆಣ್ಣು ಮಕ್ಕಳ ಜೀವನ ಮಟ್ಟದ ಅಭಿವೃದ್ಧಿ ಬಗ್ಗೆ ಕಾರ್ಯಯೋಜನೆಯನ್ನು 1991–2000 ನೇ ಅವಧಿಯಲ್ಲಿ ಘೋಷಿಸಲಾಗಿದೆ. ಇದು ಹೆಣ್ಣು ಮಕ್ಕಳ ಜೀವನ ಮಟ್ಟದ ಅಭಿವೃದ್ಧಿ ಬಗ್ಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಭ್ರೂಣ ಹತ್ಯೆ ಮತ್ತು ಇನ್‌ಫೆಂಟಿಸೈಡ್‌ನ್ನು ನಿಲ್ಲಿಸುವುದು.
2. ಲಿಂಗ ಬೇಧವನ್ನು ನಿಲ್ಲಿಸುವುದು.





3. ಮನೆಯ ಸಮೀಪ ಕುಡಿಯುವ ನೀರನ್ನು ಒದಗಿಸುವುದು.
4. ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ನಿಲ್ಲಿಸುವುದು.
5. ಹೆಣ್ಣು ಮಕ್ಕಳ ಶೋಷಣೆ ಮತ್ತು ದುರುಪಯೋಗವನ್ನು ನಿಲ್ಲಿಸುವುದು.

ಹೆಣ್ಣು ಮಕ್ಕಳ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಕಾಶ ಮಾಡಿಕೊಡಲಾಯಿತು.

**ಚರ್ಚಿಸಲು ವಿಷಯಗಳು:**

- ನಮ್ಮ ಸಮಾಜದಲ್ಲಿರುವ ಲಿಂಗಬೇಧ
- ಹೆಣ್ಣು ಮಕ್ಕಳು ಲಿಂಗ ಬೇಧದಿಂದ ಎದುರಿಸುತ್ತಿರುವ ಸಮಸ್ಯೆಗಳು
- ಹೆಣ್ಣು ಮಕ್ಕಳು ಶಾಲೆಯನ್ನು ಅರ್ಧದಲ್ಲಿ ತ್ಯಜಿಸುವುದು.
- ಹೆಣ್ಣು ಮಕ್ಕಳ ದುರುಪಯೋಗ
- ಹೆಣ್ಣು ಮಕ್ಕಳ ಆರೋಗ್ಯ ಮತ್ತು ಅಪೌಷ್ಟಿಕತೆಯ ಸಮಸ್ಯೆಗಳು
- ಹೆಣ್ಣು ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಕ್ಷೇತ್ರಗಳು
- ಮಕ್ಕಳ ಸಾಗಾಟ ಮತ್ತು ಅದರ ಪರಿಣಾಮ


## 2.9.3 ವಿಧಾನಗಳು

- ಪಾತ್ರಾಭಿನಯ – ಲಿಂಗ ಬೇಧದ ಬಗ್ಗೆ
- ಉಪನ್ಯಾಸ
- ಗುಂಪು ಚರ್ಚೆ
- ಮಂಡನೆ
- ಕೇಸ್ ಸ್ಟಡೀಸ್‌ಗಳ ಅಭ್ಯಾಸ

## 2.9.4 ಪರಿಕರಗಳು

- ಪಾತ್ರಾಭಿನಯಕ್ಕೆ ವಿಷಯ – ಲಿಂಗಬೇಧ
- ಕೇಸ್ ಸ್ಟಡೀಸ್‌ಗಳು
- ಕರಿಹಲಗೆ
- ಕಂದು ಬಣ್ಣದ ಹಾಳೆ
- ಬಣ್ಣದ ಪೆನ್ನುಗಳು





## 2.9.5 ಪ್ರಕ್ರಿಯೆ

- ಕಿರು ಉಪನ್ಯಾಸದ ಮೂಲಕ ವಿಷಯವನ್ನು ಮಂಡಿಸುವುದು.
- ಈ ಕೆಳಗಿನ ಪ್ರಶ್ನೆಗಳನ್ನು ಗುಂಪುಗಳಲ್ಲಿ ಚರ್ಚಿಸಿ, ಗುಂಪು ಚರ್ಚೆಯಲ್ಲಿ ಹೊರ ಬಂದ ವಿಚಾರವನ್ನು ಮಾತ್ರ ದೊಡ್ಡ ಗುಂಪಿನಲ್ಲಿ ಹಂಚಿಕೊಳ್ಳುವುದು.
- ನಮ್ಮ ಸಮಾಜದಲ್ಲಿರುವ ಲಿಂಗಬೇಧ
- ಹೆಣ್ಣು ಮಕ್ಕಳು ಲಿಂಗ ಬೇಧದಿಂದ ಎದುರಿಸುತ್ತಿರುವ ಸಮಸ್ಯೆಗಳು
- ಹೆಣ್ಣು ಮಕ್ಕಳು ಶಾಲೆಯನ್ನು ಅರ್ಧದಲ್ಲಿ ಬಿಡುವುದು.
- ಹೆಣ್ಣು ಮಕ್ಕಳ ದುರುಪಯೋಗ
- ಹೆಣ್ಣು ಮಕ್ಕಳ ಆರೋಗ್ಯ ಮತ್ತು ಅಪೌಷ್ಟಿಕತೆಯ ಸಮಸ್ಯೆಗಳು
- ಹೆಣ್ಣು ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಕ್ಷೇತ್ರಗಳು
- ಮಕ್ಕಳ ಸಾಗಾಟ ಮತ್ತು ಅದರ ಪರಿಣಾಮ
- "ಲಿಂಗಬೇಧ" ವಿಚಾರ ಪಾತ್ರಾಭಿನಯ ಮಾಡಿಸುವುದು. "ಮನೆಯಲ್ಲಿನ ಮತ್ತು ಕಛೇರಿಯಲ್ಲಿನ ಲಿಂಗಬೇಧ" ದ ಪಾತ್ರಾಭಿನಯ ಮಾಡಿಸುವುದು.
- ಈ ಕೆಳಗಿನ ಕೇಸ್ ಸ್ಟಡೀಸ್‌ಗಳನ್ನು ಸಣ್ಣ ಗುಂಪುಗಳಲ್ಲಿ ಚರ್ಚಿಸುವ ವ್ಯವಸ್ಥೆ ಮಾಡುವುದು.


**ಕೇಸ್ ಸ್ಟಡಿ – 1**

ಗಂಗಮ್ಮ 16 ವರ್ಷದವಳಾಗಿದ್ದು 10 ನೇ ತರಗತಿಯವರೆಗೆ ಕಲಿತಿದ್ದು, ಆಂಧ್ರಪ್ರದೇಶದ ತಿರುಪತಿಯ ಹತ್ತಿರದ ಒಂದು ಹಳ್ಳಿಗೆ ಸೇರಿದವಳಾಗಿದ್ದಳು. ಅವಳ ಕುಟುಂಬದಲ್ಲಿ ವೃದ್ಧರಾದ ತಾಯಿ ತಂದೆಯರು, ಮೂರು ಮಂದಿ ತಂಗಿಯರು ಮತ್ತು ಇಬ್ಬರು ತಮ್ಮಂದಿರಿದ್ದರು. ಅವಳ ಕುಟುಂಬವು ದೊಡ್ಡ ಕುಟುಂಬವಾದುದರಿಂದ ಕಷ್ಟ ಹಾಗೂ ಬಡತನದಲ್ಲಿ ಜೀವನ ನಡೆಸುತ್ತಿತ್ತು. ಇಡೀ ಕುಟುಂಬವನ್ನು ಸಲಹುವ ಭಾರ ಗಂಗಮ್ಮಳ ಹೆಗಲ ಮೇಲಿತ್ತು. ಅವಳ ತಂದೆ ತಾಯಿಯರು ಯಾವುದೇ ಗಳಿಕೆಯ ಕೆಲಸ ಮಾಡುವ ಸ್ಥಿತಿಯಲ್ಲಿರಲಿಲ್ಲ. ಮನೆಯ ಕಷ್ಟ ಕಾರ್ಪಣ್ಯಗಳಿಂದ ಹಾಗೂ ತಮಿಳುನಾಡಿನಲ್ಲಿ ಕೆಲಸ ಸಿಗಬಹುದೆಂಬ ನಿರೀಕ್ಷೆಯಲ್ಲಿ ಗಂಗಮ್ಮ ಚೆನ್ನೈಗೆ ಹೋದಳು. ಚೆನ್ನೈನಲ್ಲಿ ಅವಳು ತಿಳಿದುಕೊಂಡ ಹಾಗೆ ಉತ್ತಮ ಕೆಲಸದ ಅವಕಾಶ ಇರಲಿಲ್ಲ.

ಗಂಗಮ್ಮ ಚೆನ್ನೈನಲ್ಲಿ ತನ್ನ ರಾಜ್ಯದ ಒಬ್ಬ ಮಹಿಳೆಯನ್ನು ಭೇಟಿ ಮಾಡಿದಳು. ಆ ಮಹಿಳೆ ಅವಳಿಗೆ ಉತ್ತಮ ಸಂಪಾದನೆಯ ಸಿದ್ದ ಉಡುಪುಗಳ ತಯಾರಿಯ ಕಾರ್ಖಾನೆಯಲ್ಲಿ ಕೆಲಸವನ್ನು ಕೊಡಿಸುವುದಾಗಿ ನಂಬಿಸಿದಳು. ಗಂಗಮ್ಮ ಮಹಿಳೆಯ ಮಾತನ್ನು ನಂಬಿ ಅವಳ ಜೊತೆಯಲ್ಲಿ ಹೋದಳು. ಮಹಿಳೆ ಗಂಗಮ್ಮನನ್ನು ವೇಶ್ಯಾವಾಟಿಕೆಗೆ ಮಾರಿ, ಕಾಣದಾದಳು.

ಒಂದು ತಿಂಗಳ ಕಾಲ ಅತ್ಯಾಚಾರ, ಮಾನಸಿಕ ಹಾಗೂ ದೈಹಿಕ ಹಿಂಸೆಗೆ ಒಳಗಾದ ನಂತರ ಗಂಗಮ್ಮ ಆ ಜೀವನ್ನಕೆ ಶರಣು ಹೋದಳು. ಅವಳಿಗೆ ಲೈಂಗಿಕ ಕಾಯಿಲೆಗಳು ಅಂಟಿಕೊಂಡವು. ಅವಳಿಗೆ 18 ನೇ ವರ್ಷದ ಪ್ರಾಯದಲ್ಲಿ ಏಡ್ಸ್ ಬಂತು. ಅದನ್ನು ಅವಳು ಯಾರಿಗೂ ತಿಳಿಸಲಿಲ್ಲ. ಅವಳಿಗೆ ಸಂಪಾದನೆ ಮುಖ್ಯವಾಗಿತ್ತು. ಅವಳು ಕಾಯಿಲೆಯನ್ನು ಗುಟ್ಟಾಗಿ ಇಡುವ ನಿರ್ಧಾರ ಬಿಟ್ಟರೆ, ಬೇರೆ ಯಾವುದೇ ಮಾರ್ಗವಿರಲಿಲ್ಲ. ಆದುದರಿಂದ ಗಂಗಮ್ಮ ಸೋಂಕು ರೋಗ ಇರುವಾಗಲೇ ವೇಶ್ಯಾವಾಟಿಕೆ ಕೆಲಸವನ್ನು ಮುಂದುವರೆಸಿದಳು.





**ಕೇಸ್ ಸ್ಟಡಿ – 2**

ನೀಲಿಮ ಉತ್ತರ ಪ್ರದೇಶದವಳು. ಅವಳ ಪ್ರಾಯ 15 ವರ್ಷ. ಅವಳು ಮತ್ತು ಅವಳ ತಂದೆ ತಾಯಿ ಅನಕ್ಷರಸ್ಥರು. ಅವಳ ತಂದೆ ತನ್ನ ಕಠಿಣ ಬಡತನದಿಂದ ಮದುವೆಯ ರೂಪದಲ್ಲಿ ಅವಳನ್ನು ಮಾರಾಟ ಮಾಡಿದನು.

ಅವಳು ಮದುವೆಯಾಗಿ ತನ್ನ ಗಂಡನ ಮನೆಗೆ ಹೋದಳು. ಅಲ್ಲಿ ನಾನಾ ರೀತಿಯ ಚಿತ್ರ ಹಿಂಸೆಗೆ ಒಳಗಾದಳು. ಹಗಲು ಹೊತ್ತಿನಲ್ಲಿ ಮನೆ ಕೆಲಸ ಮಾಡಬೇಕಾಗಿತ್ತು. ರಾತ್ರಿ ಹೊತ್ತಿನಲ್ಲಿ ಅವಳ ಗಂಡನ ಸ್ನೇಹಿತರು ಮತ್ತು ಸಂಬಂಧಿಕರ ಜೊತೆಯಲ್ಲಿ ಮಲಗಬೇಕಾಗಿತ್ತು.

ಅವಳು ಹೇಗೋ ಅಲ್ಲಿಂದ ತಪ್ಪಿಸಿಕೊಂಡಳು. ಈಗ ಅವಳ ತಂದೆಯ ಮನೆಯಲ್ಲಿ ತನ್ನ ಮಗಳ ಜೊತೆಯಲ್ಲಿ ಜೀವಿಸುತ್ತಿದ್ದಾಳೆ. ಅವಳು ದಿನಗೂಲಿ ನೌಕರಳಾಗಿ ಸಂಪಾದನೆ ಮಾಡಿ ತನ್ನ ಮತ್ತು ತನ್ನ ಮಗಳ ಹೊಟ್ಟೆಯನ್ನು ಹೊರೆದುಕೊಳ್ಳುತ್ತಿದ್ದಾಳೆ.


### 2.9.6 ನಿರೀಕ್ಷಿತ ಫಲಿತಾಂಶ

- ಹೆಣ್ಣು ಮಕ್ಕಳ ಅವರ ವಯಸ್ಸು ಹಾಗೂ ಲಿಂಗದ ಆಧಾರದಲ್ಲಿ ಹೆಚ್ಚು ಅಪಾಯಕಾರಿ ಪರಿಸ್ಥಿತಿಯಲ್ಲಿ ಇರುತ್ತಾರೆ ಎಂಬುದನ್ನು ಮನಗಾಣುತ್ತಾರೆ.
- ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಹೆಣ್ಣು ಮಕ್ಕಳು ಮನೆಯಲ್ಲಿ ಕೆಲಸ ಮಾಡುತ್ತಿದ್ದು, ಅವರನ್ನು ಬಾಲಕಾರ್ಮಿಕರೆಂದು ಗುರುತಿಸುತ್ತಿಲ್ಲ ಎಂಬ ವಿಚಾರವನ್ನು ಗ್ರಹಿಸುವರು.
- ಶಿಬಿರಾರ್ಥಿಗಳು ಮಕ್ಕಳ ಅಕ್ರಮ ಸಾಗಾಟದ ಬಗ್ಗೆ ತಿಳಿದು ಕೊಳ್ಳುತ್ತಾರೆ. ಇವರಲ್ಲಿ ಹೆಚ್ಚಿನವರು ಹುಡುಗಿಯರು ಎಂಬುದನ್ನು ಸಹ ಗುರುತಿಸುತ್ತಾರೆ.

### 2.9.7 ಚರ್ಚೆಗಾಗಿ ಪ್ರಶ್ನೆಗಳು

- ಮಕ್ಕಳನ್ನು ಲೈಂಗಿಕ ವ್ಯಾಪಾರಕ್ಕೆ ದೂಡಲು ಕಾರಣಗಳೇನು?
- ಇಂತಹ ಸಂದರ್ಭಗಳಲ್ಲಿ ಬಳಸುವ ವಿಧಾನ ಮತ್ತು ಸಾಗಾಟದ ವಿಧಾನ ಯಾವುದು?
- ನಿಮ್ಮ ಪ್ರದೇಶದಲ್ಲಿ ಮಕ್ಕಳು ಕಾಣೆಯಾಗುತ್ತಿದ್ದಾರೆಯೇ?
- ಸಾಗಾಟವಾಗುವ ಮಕ್ಕಳನ್ನು ಗುರುತಿಸಿ, ರಕ್ಷಿಸಿ ಪುನರ್ವಸತಿ ಗೊಳಿಸುವ ಹೊಣೆ ಯಾರದ್ದು?
- ನಾವು ಮಕ್ಕಳು ಸಾಗಾಟವಾಗದ ಹಾಗೆ ಯಾವ ರೀತಿಯಲ್ಲಿ ಕಾಪಾಡಬಹುದು?





## 2.10 ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಪಾತ್ರ

### 2.10.1 ಉದ್ದೇಶಗಳು

- ಅಂಗನವಾಡಿ ಶಿಕ್ಷಕಿಯರಿಗೆ ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅವರ ಪಾತ್ರವನ್ನು ಮತ್ತು ಜವಾಬ್ದಾರಿಯನ್ನು ಅರ್ಥಮಾಡಿಕೊಳ್ಳಲು ಸಹಕರಿಸುವುದು.
- ಅಂಗನವಾಡಿ ಶಿಕ್ಷಕಿಯರು ವೈಯಕ್ತಿಕವಾಗಿ ಹಾಗೂ ಸಂಘಟನೆಯ ಮಟ್ಟದಲ್ಲಿ ಬಾಲಕಾರ್ಮಿಕತೆಯ ನಿವಾರಣೆಗೆ ನಿರ್ದಿಷ್ಟವಾದ ಕ್ರಿಯಾ ಯೋಜನೆ ರಚಿಸಿಕೊಳ್ಳಲು ಸಹಾಯ ಮಾಡುವುದು.

### 2.10.2 ಪಠ್ಯ

i. ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸುವುದು

- ಅಂಗನವಾಡಿಗೆ ಹೋಗಲು ತಯಾರಿ, ಅಂಗನವಾಡಿಗೆ ಹೋಗುವುದು ಅಂಗನವಾಡಿಯಲ್ಲಿ ಹೊಸ ಹೊಸ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇತ್ಯಾದಿಗಳು ಮಕ್ಕಳನ್ನು ಮುಂದೆ ಅವರು ಶಾಲೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುತ್ತವೆ.
- ಅಂಗನವಾಡಿಗೆ ಮಕ್ಕಳನ್ನು ಕಳುಹಿಸುವ ಅನುಭವವು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅವಶ್ಯವಾದ ತಯಾರಿ ಮಾಡಲು ಸಹಾಯ ಮಾಡುವುದು.

ii. ಮಕ್ಕಳಿಗೆ ಆರೋಗ್ಯಕರವಾಗಿ ಜೀವನವನ್ನು ಆರಂಭಿಸಲು ಸಹಾಯ ಮಾಡುವುದು.


- ಅಂಗನವಾಡಿಯಲ್ಲಿನ ಸರ್ವಾಂಗೀಣವಾದ ಪೌಷ್ಠಿಕ ಆಹಾರದ ಹಾಗೂ ಆರೋಗ್ಯ ಸೇವೆಯಿಂದ ಮಕ್ಕಳು ಬಲಿಷ್ಠವಾಗಿ ಹಾಗೂ ಗಟ್ಟಿಯಾಗಿ ಬೆಳೆದು ಅವರು ಕಾಯಿಲೆ ಬೀಳುವುದು ಕಡಿಮೆ ಆಗುವುದು.
- ಮಕ್ಕಳು ಆರೋಗ್ಯವಂತರಾಗಿರುವುದರಿಂದ, ಕುಟುಂಬದ ಮೇಲೆ ಆರ್ಥಿಕ ಹೊರೆ ಕಡಿಮೆ ಆಗುವುದು.

iii. ಶಾಲೆಗೆ ಸೇರಲು ಅವಶ್ಯವಾದ ಕಲಿಕೆಯ ಅಡಿಪಾಯವನ್ನು ಒದಗಿಸುವುದು.

- ಪೂರ್ವ ಪ್ರಾಥಮಿಕ ಶಿಕ್ಷಣವು ಮಕ್ಕಳ ಮುಂದಿನ ಶಾಲಾ ಶಿಕ್ಷಣಕ್ಕೆ ಅವಶ್ಯಕವಾದ ಬಣ್ಣ, ಆಕಾರ ಇತ್ಯಾದಿಗಳ ಜ್ಞಾನವನ್ನು ಒದಗಿಸುವುದು.
- ಅಂಗನವಾಡಿಯ ಚಟುವಟಿಕೆಗಳು ಮಕ್ಕಳ ಸಾಕ್ಷರತೆ, ಅಂಕಗಣಿತ ಕೌಶಲ್ಯವನ್ನು ವೃದ್ಧಿ ಪಡಿಸುವುದು.

iv. 0–6 ವರ್ಷದ ಮಕ್ಕಳು ಅಂಗನವಾಡಿಗೆ ನಿರಂತರವಾಗಿ ಹಾಜರಾಗುವುದರಿಂದ, ಅವರು ಮುಖ್ಯವಾಹಿನಿಯಲ್ಲಿ ಉತ್ತಮವಾಗಿ ಕಲಿಯುವುದರಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರಮಾಣ ಕನಿಷ್ಠವಾಗುವುದು. ಮಕ್ಕಳ ಉತ್ತಮ ಕಲಿಕೆಯಿಂದ/ ಯಶಸ್ಸಿನಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಕಡಿಮೆ ಆಗಿ, ಬಾಲಕಾರ್ಮಿಕರಾಗುವುದು ನಿಲ್ಲುತ್ತದೆ. ಅಂಗನವಾಡಿ ಶಿಕ್ಷಕಿಯರು ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸರಿಯಾಗಿ ತಯಾರು ಮಾಡಿ, ಮಕ್ಕಳು ಬಾಲಕಾರ್ಮಿಕರಾಗುವುದನ್ನು ನೇರವಾಗಿ ತಡೆಯುತ್ತಿದ್ದಾರೆ.





v. ಐ.ಸಿ.ಡಿ.ಎಸ್ ಹಾಗೂ ಅಂಗನವಾಡಿ ಕಾರ್ಯಕ್ರಮದ ಸವಲತ್ತುಗಳು, ಶಾಲೆಯನ್ನು ಮಧ್ಯದಲ್ಲಿ ಬಿಡುವ ಹಾಗೂ ಬಾಲಕಾರ್ಮಿಕರಾಗುವ ಸ್ಥಿತಿಯಲ್ಲಿರುವ ಅತ್ಯಂತ ಬಡಕುಟುಂಬಗಳ ಮಕ್ಕಳನ್ನು ತಲುಪುತ್ತಿಲ್ಲ. ಅಂಗನವಾಡಿ ಶಿಕ್ಷಕಿಯರು ಬಡಕುಟುಂಬಗಳ ಮತ್ತು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ತಲುಪಲು ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. (ವಲಸೆ ಹೋಗುವ ಕುಟುಂಬದ ಮಕ್ಕಳು... ಇತ್ಯಾದಿ)

- ಅತ್ಯಂತ ಬಡಕುಟುಂಬಗಳನ್ನು ಗುರುತಿಸಿ, ಎಲ್ಲಾ 0–6 ವರ್ಷ ಪ್ರಾಯದ ಮಕ್ಕಳನ್ನು ಅಂಗನವಾಡಿಯಲ್ಲಿ ನೊಂದಾಯಿಸಿಕೊಳ್ಳಿ
- ಮಕ್ಕಳಿಗೆ ಹೆಚ್ಚುವರಿ ಪೌಷ್ಠಿಕ ಆಹಾರ, ಲಸಿಕೆ, ಆರೋಗ್ಯ ಸೇವೆ, ಪೂರ್ವ ಪ್ರಾಥಮಿಕ ಶಿಕ್ಷಣ ಮುಂತಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಿ.
- ಇಂತಹ ಮಕ್ಕಳು ಅಂಗನವಾಡಿಯಲ್ಲಿ ಕನಿಷ್ಠ ಎರಡು ಗಂಟೆ ಇರುವಂತೆ ನೋಡಿಕೊಳ್ಳಿರಿ.
- ಅಂಗನವಾಡಿ ಬರೀ ಪೌಷ್ಠಿಕ ಆಹಾರ ಒದಗಿಸುವ ಕೇಂದ್ರವಾಗಿರದೆ ಪೂರ್ವ ಪ್ರಾಥಮಿಕ ಶಿಕ್ಷಣ ಸಹ ಒದಗಿಸುವ ಕೇಂದ್ರ ಎಂಬ ವಿಚಾರವನ್ನು ಪೋಷಕರಿಗೆ ಅದರಲ್ಲೂ ಮಾತೆಯರಿಗೆ ಮನದಟ್ಟು ಮಾಡಿರಿ.

vi. ಅಂಗನವಾಡಿಗೆ ಬರುವ ಎಲ್ಲಾ ಮಕ್ಕಳನ್ನು 5 ವರ್ಷ ಹತ್ತು ತಿಂಗಳು ತುಂಬಿದ ಕೂಡಲೇ ಅವರನ್ನು ಪ್ರಾಥಮಿಕ ಶಾಲೆಗೆ ದಾಖಲು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಶಾಲಾ ಪ್ರಾಯದ ಮಕ್ಕಳ ಗಣತಿಯಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳ ಹಾಗೂ ಕೆಲಸದಲ್ಲಿ ಇರುವ ಶಾಲಾ ಪ್ರಾಯದ ಮಕ್ಕಳನ್ನು ಗುರುತಿಸಲು ಶಿಕ್ಷಕಿಯರಿಗೆ ಸಹಾಯ ಮಾಡಿರಿ.

vii. ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಗುರುತಿಸಿ, ಅವರ ಪೋಷಕರನ್ನು ಅದರಲ್ಲೂ ಮಾತೆಯರನ್ನು ಅವರ ಮಕ್ಕಳನ್ನು ಶಾಲೆಗೆ ನಿರಂತರವಾಗಿ ಕಳುಹಿಸಲು ಪ್ರಚೋದಿಸಿರಿ.


viii. ಕುಟುಂಬಗಳ ಆರ್ಥಿಕ ತೊಂದರೆಗಳ ಬಗ್ಗೆ ಸೂಕ್ಷ್ಮತೆಯಿಂದ ಇರಿ. ಅವರಿಗೆ ಆರ್ಥಿಕ ತೊಂದರೆ ಇದ್ದಾಗ್ಯೂ ಮಗುವನ್ನು ಅಂಗನವಾಡಿಯಲ್ಲಿ ಬಳಸಿಕೊಳ್ಳಲು ದಾರಿ ಹುಡುಕಿರಿ. ಇಂತಹ ಕುಟುಂಬಗಳನ್ನು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಹಾಗೂ ಜೀವನಾಧಾರವನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವ ಸರಕಾರೇತರ ಸಂಸ್ಥೆಗಳಿಗೆ, ಗ್ರಾಮಪಂಚಾಯತ್ ಹಾಗೂ ಸರಕಾರಿ ಇಲಾಖೆಗಳ ಸಂಪರ್ಕಕ್ಕೆ ತನ್ನಿರಿ.

ix. ಅಂಗನವಾಡಿ ಗೋಡೆಗಳಿಗೆ ಆಕರ್ಷಕ ಬಣ್ಣ ಮಾಡಿ, ಬಣ್ಣ ಬಣ್ಣದ ಹಾಗೂ ಸುಂದರವಾದ ಚಾರ್ಟುಗಳನ್ನು, ಪೋಷ್ಟರ್‌ಗಳನ್ನು, ನಕಾಷೆಗಳನ್ನು ಪ್ರದರ್ಶಿಸುವ ಮೂಲಕ, ಅಂಗನವಾಡಿ ಆಟದ ಬಯಲನ್ನು ಚೊಕ್ಕವಾಡಿ ಇಡುವುದರ ಮೂಲಕ ಹಾಗೂ ಮಕ್ಕಳಿಗೆ ಆಟದ ಸಾಮಾನುಗಳನ್ನು ಉಪಯೋಗಿಸುವುದರ ಮೂಲಕ ಅಂಗನವಾಡಿಯನ್ನು ಆಕರ್ಷಕವಾಗಿ ಇಟ್ಟುಕೊಳ್ಳಿರಿ. ಮಕ್ಕಳಿಗೆ ಮತ್ತು ಅವರ ಮಾತೆಯಂದಿರಿಗೆ ಆಸಕ್ತಿದಾಯಕವಾದ ಕಲಿಕೆಯ ವಾತಾವರಣವನ್ನು ಒದಗಿಸಿರಿ.

x. ಶಾಲೆಗೆ ಸೇರಲು ಅಗತ್ಯವಾದ ಚಟುವಟಿಕೆಗಳನ್ನು ಆಯೋಜಿಸಿರಿ. (ರೋಲ್‌ಪ್ಲೇ. ಆಟಗಳು. ಆಸಕ್ತಿದಾಯದಕವಾದ ಕಲಿಕಾ ಸಾಮಗ್ರಿಗಳು)

- ಮಗು ಮನೆಯಿಂದ ಹೊರಗೆ ಇರಲು ಕಲಿಯುತ್ತದೆ. ಒಂದೇ ಜಾಗದಲ್ಲಿ ಸ್ವಲ್ಪ ಹೊತ್ತು ಕುಳಿತು ಕೊಟ್ಟ ಕೆಲಸವನ್ನು ಮುಗಿಸಲು ಕಲಿಯುತ್ತದೆ. ಇತರ ಮಕ್ಕಳೊಂದಿಗೆ ಸೇರಿ ಆಟ ಆಡಲು ಹಾಗೂ ತನ್ನ ವೈಯಕ್ತಿಕ ಶುಚಿತ್ವ ಕಾಪಾಡಲು ಕಲಿಯುವುದು. (ಶೌಚಾಲಯವನ್ನು ಸರಿಯಾಗಿ ಉಪಯೋಗಿಸುವುದು, ತಿನ್ನುವ ಮೊದಲು ಕೈ ತೊಳೆದುಕೊಳ್ಳುವುದು ಇತ್ಯಾದಿ)





- ಮಗು ಕಲಿಕೆಯನ್ನು ಸ್ಥಿರಗೊಳಿಸಿಕೊಳ್ಳುತ್ತದೆ: ಭಾಷಾ ಕೌಶಲ್ಯಗಳು (ಗ್ರಹಿಸುವಿಕೆ, ಮಾತನಾಡುವುದು, ಅರ್ಥಮಾಡಿಕೊಳ್ಳುವುದು) ಕಣ್ಣು ಮತ್ತು ಕೈಯ ಸಂಪರ್ಕ... ಇತ್ಯಾದಿಗಳು

xi. ಮಕ್ಕಳು ನಿರಂತರವಾಗಿ ಅಂಗನವಾಡಿಗೆ ಬರಲು ಹಾಗೂ ಅವರು 5 ವರ್ಷ 10 ತಿಂಗಳು ಆದ ನಂತರ ಶಾಲೆಗೆ ಸೇರುವಂತೆ ಮಾಡಲು ಪೋಷಕರೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು ಅವಶ್ಯಕ.

xii. ಬಾಲಕಾರ್ಮಿಕತೆಯಿಂದ ಆಗುವ ನಷ್ಟಗಳು ಹಾಗೂ ಶಾಲಾ ಶಿಕ್ಷಣದಿಂದಾಗುವ ಅನುಕೂಲತೆಗಳ ಬಗ್ಗೆ ಪೋಷಕರಿಗೆ ತಿಳಿಸಿ ಹೇಳುವುದು ಅವಶ್ಯ.

xiii. ಮಕ್ಕಳ ತಾಯಂದಿರ ಸಮಿತಿ ರಚಿಸಿ, ಅವರು ಆಗಾಗ ಸಭೆ ಸೇರುವಂತೆ ನೋಡಿಕೊಳ್ಳಬೇಕು. ಈ ಸಭೆಯಲ್ಲಿ ಅವರ ಮಕ್ಕಳ ಸಾಧನೆಯನ್ನು ತಿಳಿಸಬೇಕು ಹಾಗೂ ಶಾಲೆ ಮತ್ತು ಅಂಗನವಾಡಿಯಿಂದ ಆಗುವ ಲಾಭಗಳನ್ನು ಸಹ ಅವರಿಗೆ ಮನದಟ್ಟು ಮಾಡಬೇಕು. ಅವರಿಗೆ ತಮ್ಮ ಮಕ್ಕಳನ್ನು ನಿರಂತರವಾಗಿ ಅಂಗನವಾಡಿ ಮತ್ತು ಶಾಲೆಗೆ ಕಳುಹಿಸಲು ಒತ್ತಾಯ ತರಬೇಕು.

xiv. ಅಂಗನವಾಡಿಗೆ ಸರಿಯಾಗಿ ಬರದೆ ಇರುವ ಮಕ್ಕಳು ಹಾಗೂ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಕುಟುಂಬಗಳಿಗೆ ಮನೆ ಭೇಟಿ ಕೊಡುವುದು ಅತ್ಯಂತ ಅವಶ್ಯಕ. ಇಂತಹ ಕುಟುಂಬಗಳಿಗೆ ಹೆಚ್ಚು ಹೆಚ್ಚು ಭೇಟಿ ಕೊಡಬೇಕು.

ಅಂತಹ ಕುಟುಂಬಗಳು ಯಾವುವೆಂದರೆ

- ಪ.ಜಾತಿ/ ಪ. ಪಂಗಡದ ಕುಟುಂಬಗಳು
- ಸರಿಯಾದ ಆದಾಯ ಇಲ್ಲದ ಕುಟುಂಬಗಳು
- ಅಂಗನವಾಡಿಗೆ/ ಶಾಲೆಗೆ ಸರಿಯಾಗಿ ಹಾಜರಾಗದೆ ಇರುವ ಮಕ್ಕಳ ಕುಟುಂಬಗಳು
- ಏಕ ಪೋಷಕರ ಕುಟುಂಬ
- ಎರಡಕ್ಕಿಂತ ಹೆಚ್ಚು ಮಕ್ಕಳು ಇರುವ ಕುಟುಂಬಗಳು
- ಆರೋಗ್ಯದ ತೊಂದರೆ ಇರುವ ಹಾಗೂ ಕುಡಿತದ ಚಟ ಇರುವ ಕುಟುಂಬಗಳು


xv. ಅಂಗನವಾಡಿ ಶಿಕ್ಷಕಿಯರು ಶಾಲಾ ಶಿಕ್ಷಕಿಯರು, ಎಸ್.ಡಿ.ಎಂ.ಸಿ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಹತ್ತಿರದ ಸಂಪರ್ಕ ಇಟ್ಟುಕೊಳ್ಳಬೇಕು. ಬಾಲಕಾರ್ಮಿಕತೆಯನ್ನು ತಡೆಯಲು ಇವರ ಸಹಾಯ/ ಸಹಕಾರ ತೆಗೆದುಕೊಳ್ಳಬೇಕು.

xvi. ಅಂಗನವಾಡಿ ಶಿಕ್ಷಕಿಯರು ಕುಟುಂಬಗಳ ಜೊತೆ ಹಾಗೂ ಸಮುದಾಯದ ಜೊತೆಯಲ್ಲಿ ನಿಕಟವಾದ ಸಂಬಂಧ ಇಟ್ಟುಕೊಂಡು ಕೆಲಸ ಮಾಡಬೇಕು.

xvii. ಕುಟುಂಬಗಳ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಅವಶ್ಯಕತೆಗಳನ್ನು ಗುರುತಿಸಿ ಅವುಗಳನ್ನು ತಮ್ಮ ಸಂಪರ್ಕ ಜಾಲದ ಸಹಾಯದಿಂದ ಒದಗಿಸಲು ಅಥವಾ ಪರಿಹರಿಸಲು ಪ್ರಯತ್ನಿಸಬೇಕು.

xviii. ಬಾಲಕಾರ್ಮಿಕತೆಯನ್ನು ನಿವಾರಿಸಲು ಹಾಗೂ ಬಾಲಕಾರ್ಮಿಕತೆಯ ಬಗ್ಗೆ ಇರುವ ತಪ್ಪಯ ನಂಬಿಕೆಗಳನ್ನು ದೂರ ಮಾಡಲು, ಪೋಷಕರನ್ನು, ಸಮುದಾಯದವರನ್ನು ಹೆಚ್ಚಿನ ಮಾಹಿತಿ ಕೊಟ್ಟು ಸೂಕ್ಷ್ಮತೆಗೊಳಿಸಬೇಕು.





### 2.10.3 ವಿಧಾನಗಳು

- ಉಪನ್ಯಾಸ/ ಚರ್ಚೆ
- ಪ್ರಶ್ನೆಗಳು/ ಉತ್ತರ
- ಗುಂಪು ಚರ್ಚೆ ಮತ್ತು ಅಧ್ಯಯನಗಳು

### 2.10.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಕಂದು ಬಣ್ಣದ ಹಾಳೆಗಳು
- ಸ್ಕೆಚ್ ಪೆನ್ನುಗಳು

### 2.10.5 ಪ್ರಕ್ರಿಯೆ


ತರಬೇತಿದಾರರು ತರಬೇತಿಯ ವಿಷಯವನ್ನು ಉಪನ್ಯಾಸದ ಮೂಲಕ ಮಂಡಿಸುವುದು. ನಂತರ ಶಿಬಿರಾರ್ಥಿಗಳನ್ನು ನಾಲ್ಕು ಉಪಗುಂಪುಗಳನ್ನಾಗಿ ವಿಂಗಡಿಸಿ ಅವರಿಗೆ ಈ ಕೆಳಗಿನ ವಿಷಯಗಳನ್ನು/ ಪ್ರಶ್ನೆಗಳನ್ನು ಚರ್ಚಿಸಿ ವರದಿ ತಯಾರಿಸಲು ತಿಳಿಸುವುದು.

- ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಪಾತ್ರ ಮತ್ತು ಜವಾಬ್ದಾರಿಗಳು ಏನು?
- ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ತರುವಲ್ಲಿ ಅಂಗನವಾಡಿ ಶಿಕ್ಷಕಿಯರು ವೈಯಕ್ತಿಕವಾಗಿ ಮತ್ತು ಸಾಂಘಿಕವಾಗಿ ಏನು ಮಾಡಬಹುದು?
- ಗುಂಪುಗಳಿಗೆ ಇವುಗಳನ್ನು ಚರ್ಚಿಸಲು 20 ನಿಮಿಷ ಸಮಯ ಕೊಡಬಹುದು.
- ಪ್ಲೀನರಿಯಲ್ಲಿ ಗುಂಪುಗಳಿಗೆ ತಮ್ಮ ವರದಿಗಳನ್ನು ಮಂಡಿಸಲು ತಿಳಿಸಬಹುದು.
- ಈ ಸಂದರ್ಭದಲ್ಲಿ ಇಡೀ ಗುಂಪು ಚರ್ಚೆಯಲ್ಲಿ ಭಾಗವಹಿಸುವಂತೆ ಪ್ರಚೋದಿಸಬೇಕು.
- ತರಬೇತಿದಾರರು, ಚರ್ಚೆಯಲ್ಲಿ ಹೊರಬಂದ ಸಲಹೆಗಳನ್ನು ಕರಿಹಲಗೆಯ ಮೇಲೆ ನಮೂದಿಸಬೇಕು.
- ಕೊನೆಯಲ್ಲಿ ತರಬೇತಿದಾರರು ಇಡೀ ಅವಧಿಯಲ್ಲಿ ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ಅಂಗನವಾಡಿ ಶಿಕ್ಷಕಿಯರ ಪಾತ್ರ ಮತ್ತು ಜವಾಬ್ದಾರಿ ಬಗ್ಗೆ ಮೂಡಿಬಂದ ವಿಷಯಗಳನ್ನು ಕ್ರೋಢಿಕರಿಸಿ ಮಂಡಿಸಬೇಕು.

### 2.10.6 ನಿರೀಕ್ಷಿತ ಫಲಿತಾಂಶ



- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ನಿರ್ಮೂಲನೆಯಲ್ಲಿ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳನ್ನು ಗ್ರಹಿಸಿಕೊಳ್ಳುವರು
- ಶಿಬಿರಾರ್ಥಿಗಳು ತಮ್ಮ ತಮ್ಮ ಶಾಲಾ ವಲಯದಲ್ಲಿ ಬಾಲಕಾರ್ಮಿಕತೆಯ ನಿವಾರಣೆಗಾಗಿ ಕ್ರಿಯಯೋಜನೆ ರಚಿಸಿಕೊಳ್ಳುವರು



## 2.11 ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಪಾತ್ರ

### 2.11.1 ಉದ್ದೇಶಗಳು

- ಅಂಗನವಾಡಿ ಶಿಕ್ಷಕಿಯರಿಗೆ ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಪಾತ್ರಗಳನ್ನು ಅರ್ಥಮಾಡಿಕೊಳ್ಳಲು ಸಹಕರಿಸುವುದು.
- ಬಾಲಕಾರ್ಮಿಕತೆಯ ನಿವಾರಣೆಗೆ ತಮ್ಮ ಸಂಘಟನೆಯಲ್ಲಿ ಒಂದು ಕ್ರಿಯಾ ಯೋಜನೆ ರಚಿಸಿಕೊಳ್ಳಲು ಸಹಾಯ ಮಾಡುವುದು.

### 2.11.2 ಪಠ್ಯ

ಬಾಲಕಾರ್ಮಿಕತೆಯಂತಹ ಸಾಮಾಜಿಕ ಕಳಕಳಿಯ ವಿಚಾರಗಳ ಬಗ್ಗೆ ಕೆಲಸ ಮಾಡಲು ಪ್ರೇರಣೆ ಹೊಂದಿದ ಅಂಗನವಾಡಿ ಶಿಕ್ಷಕಿಯರು ತಾವು ಪ್ರತ್ಯೇಕಿಸಲ್ಪಟ್ಟು ಏಕಾಂಗಿ ಆಗಿದ್ದೇವೆ ಎಂಬ ಭಾವನೆ ಹೊಂದಿ ಒಬ್ಬೊಬ್ಬರಿಗೆ ಕೆಲಸ ಮಾಡಲು ಅಸಾಧ್ಯವಾಗಬಹುದು. ಈ ಸಮಸ್ಯೆಯ ಪರಿಹಾರಕ್ಕಾಗಿ ಸ್ಥಳೀಯ ಅಂಗನವಾಡಿ ಶಿಕ್ಷಕಿಯರೊಂದಿಗೆ, ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳೊಂದಿಗೆ, ಸಮುದಾಯದ ಇತರ ಸದಸ್ಯರೊಂದಿಗೆ ಸೇರಿಕೊಂಡು ಒಂದು ಸಹಾಯದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅವಶ್ಯವಾಗಿದೆ.


ಅಂಗನವಾಡಿ ಶಿಕ್ಷಕಿಯರು ಸಭೆಯ ಸಂದರ್ಭಗಳಲ್ಲಿ, ಬಾಲಕಾರ್ಮಿಕತೆಯ ವಿಷಯವನ್ನು ಮಂಡಿಸಿ ಇತರ ಅಂಗನವಾಡಿ ಶಿಕ್ಷಕಿಯರನ್ನು ಸೂಕ್ಷ್ಮತೆಗೊಳಿಸಿರಿ

- ಸ್ಥಳೀಯ ಬಾಲಕಾರ್ಮಿಕತೆಯ ಬಗ್ಗೆ ಇರುವ ಮಾಹಿತಿಯನ್ನು ಹಂಚಿಕೊಳ್ಳಿರಿ
- ಬಾಲಕಾರ್ಮಿಕತೆಯ ಬಗ್ಗೆ ಇರುವ ಸಂಪನ್ಮೂಲ ಪರಿಕರಗಳನ್ನು ಇತರರೊಂದಿಗೆ ಹಂಚಿಕೊಳ್ಳಿರಿ.
- ಸ್ಥಳೀಯ ಪ್ರಾಧಿಕಾರವನ್ನು ಹಾಗೂ ತಾಯಂದಿರ ಗುಂಪು, ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು ಇತ್ಯಾದಿಗಳು ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ಆಸಕ್ತಿ ತೋರಿಸುವಂತೆ ಪ್ರೇರೇಪಿಸಿರಿ.
- ಅಂಗನವಾಡಿಯನ್ನು ಬಲಪಡಿಸಿ ಬಾಲಕಾರ್ಮಿಕತೆಯನ್ನು ಹೇಗೆ ಹೋಗಲಾಡಿಸುತ್ತೀರಿ ಎಂಬುದಕ್ಕೆ ಯೋಜನೆ ತಯಾರಿಸಿರಿ.

ಅರಿವನ್ನು ಹೆಚ್ಚಿಸುವ ಆಂದೋಲನಗಳಿಗೆ ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಸಹಾಯವನ್ನು ಪಡೆದುಕೊಳ್ಳಿರಿ. ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳು ಮಕ್ಕಳಿಗೆ ಉತ್ತಮ ಪೂರ್ವಪ್ರಾಥಮಿಕ ಶಿಕ್ಷಣ ಸೌಲಭ್ಯಗಳು ಸಿಕ್ಕುವಂತೆ ಪ್ರಭಾವ ಬೀರ ಬಹುದಾಗಿದೆ ಹಾಗೂ "ಬಾಲಕಾರ್ಮಿಕತೆ" ಸಾಮಾಜಿಕ ಕಳಕಳಿಯ ವಿಷಯವನ್ನು ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಸೇರಿಸಲು ಒತ್ತಾಯ ತರಬಹುದಾಗಿದೆ.

ಅಂಗನವಾಡಿ ಶಿಕ್ಷಕಿಯರ ಸಂಘಗಳು ಬಾಲಕಾರ್ಮಿಕತೆಯ ಬಗ್ಗೆ ಅರಿವನ್ನು ಹೆಚ್ಚಿಸಲು ಹಾಗೂ ಎಲ್ಲರಿಗೂ ಉತ್ತಮವಾದ ಅಂಗನವಾಡಿ ಸೌಲಭ್ಯ ಒದಗಿಸುವ ಬಗ್ಗೆ ಅಂಗನವಾಡಿ ಶಿಕ್ಷಕಿಯರಿಗೆ, ಪೋಷಕರಿಗೆ, ಮಕ್ಕಳಿಗೆ ಮತ್ತು ಸಮುದಾಯದವರಿಗೆ ತರಬೇತಿಯನ್ನು ಹಮ್ಮಿಕೊಳ್ಳಬಹುದಾಗಿದೆ. ಅವರು ಅಂಗನವಾಡಿ ಹಾಗೂ ಶಾಲಾ ದಾಖಲಾತಿ, ಹಾಜರಾತಿ, ಶಾಲೆಯಲ್ಲಿ ಮಧ್ಯದಲ್ಲಿ ಬಿಡುವುದು ಇತ್ಯಾದಿಗಳನ್ನು ಪರಿವೀಕ್ಷಣೆ ಮಾಡಿ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿನ ಕುಂದುಕೊರತೆಗಳನ್ನು ಗುರುತಿಸಲು ಸಹಾಯ ಮಾಡಬಹುದು. ಅವರು ಇತರ ಸಂಸ್ಥೆಗಳ ಜೊತೆ ಸೇರಿ ಅಂಗನವಾಡಿ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಅನುದಾನ ಸಿಗಲು ಪ್ರಯತ್ನಿಸಬಹುದು ಹಾಗೂ ಉತ್ತಮವಾದ ಪೂರ್ವಪ್ರಾಥಮಿಕ





ಶಿಕ್ಷಣದ ವ್ಯವಸ್ಥೆ, ಉತ್ತಮ ಪೌಷ್ಟಿಕಾಂಶದ ಆಹಾರ, ಉತ್ತಮ ಲಸಿಕೆ ವ್ಯವಸ್ಥೆ ಮಾಡಲು ಮತ್ತು ಪಠ್ಯ ಕ್ರಮದಲ್ಲಿ ಬಾಲಕಾರ್ಮಿಕತೆಯ ವಿಷಯವನ್ನು ಸೇರಿಸಲು ಅಂಗನವಾಡಿ ಶಿಕ್ಷಕಿಯರಿಗೆ ಉತ್ತಮ ಕೆಲಸದ ಪರಿಸರ ಹಾಗೂ ಸ್ಥಾನಮಾನ ಒದಗಿಸಲು ಪ್ರಯತ್ನಿಸಬೇಕು. ಶಿಕ್ಷಣಕ್ಕೆ ಸಂಬಂಧಪಟ್ಟ ಕಾನೂನುಗಳ ಮತ್ತು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಕಾನೂನು ಅನುಷ್ಠಾನ ಮಾಡಲು ಒತ್ತಾಯ ಮಾಡಬಹುದು.

**ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳು ಏನು ಮಾಡಬಹುದು?**

- ತಮ್ಮ ಸದಸ್ಯರ ಕೆಲಸದ ಪರಿಸರವನ್ನು ಅಭಿವೃದ್ಧಿ ಪಡಿಸುವುದು.
- ಸರಕಾರದ ಜೊತೆಯಲ್ಲಿ ಸೇರಿಕೊಂಡು ಅಂಗನವಾಡಿ ಶಿಕ್ಷಕಿಯರ ನೀತಿ ನಿಯಮಗಳು, ನೇಮಕಾತಿ ಹಾಗೂ ಕೆಲಸದ ಸೂಚಿ ಇತ್ಯಾದಿಗಳನ್ನು ಅಭಿವೃದ್ಧಿ ಪಡಿಸಲು ಸಹಕರಿಸುವುದು.
- ಅಂಗನವಾಡಿ ಶಿಕ್ಷಕಿಯರು ಹೊಸ ಹೊಸ ಹಾಗೂ ಪರಿಣಾಮಕಾರಿಯಾದ ಪೂರ್ವ ಪ್ರಾಥಮಿಕ ಕಲಿಕೆಯ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಹಕರಿಸುವುದು.
- ಮಾಹಿತಿ ಮತ್ತು ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು ಸಹಕರಿಸುವುದು.
- ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ ಶಿಕ್ಷಕಿಯರಿಗೆ ಹಾಗೂ ಅನೌಪಚಾರಿಕ ಶಿಕ್ಷಣದಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕಿಯರಿಗೆ ಹೆಚ್ಚಿನ ಬೆಂಬಲ ಕೊಡುವುದು.
- ಶಿಕ್ಷಣ ತಜ್ಞರಿಗೆ ಸಾಂಸ್ಥಿಕ ಸದಸ್ಯತನ ಮತ್ತು ಬೆಂಬಲ ಕೊಡುವುದು.
- ಸ್ಥಳೀಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಾಲಕಾರ್ಮಿಕತೆಯ ವಿರುದ್ಧ ಆಂದೋಲನ ಹಮ್ಮಿಕೊಳ್ಳುವುದು.
- ಅಂಗನವಾಡಿ ಶಿಕ್ಷಕಿಯರ ಸಂಪರ್ಕ ಜಾಲವನ್ನು ಬಲಪಡಿಸುವುದು. ಇತರ ಕಾರ್ಮಿಕ ಸಂಘಟನೆಗಳ ಜೊತೆ ಈ ಬಗ್ಗೆ ಸಂಪರ್ಕ ವ್ಯವಸ್ಥೆ ಮಾಡಿಕೊಳ್ಳುವುದು. ಮಕ್ಕಳ ಬಗ್ಗೆ ಕೇಂದ್ರೀಕೃತವಾಗಿ ಕೆಲಸ ಮಾಡುತ್ತಿರುವ ಹಾಗೂ ಇತರ ಸಾಮಾಜಿಕ ಅಭಿವೃದ್ಧಿ ಸಂಸ್ಥೆಗಳ ಜೊತೆ ಕೆಲಸ ಮಾಡುವುದು, ಮತ್ತು ಈ ಬಗ್ಗೆ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಪರ್ಕ ಜಾಲವನ್ನು ರೂಪಿಸುವುದು.
- ನಿಯಮಗಳ ಸುಧಾರಣೆಗೆ, ಕಾರ್ಯಕ್ರಮಗಳ ಅಭಿವೃದ್ಧಿಗೆ ಮತ್ತು ಶಿಕ್ಷಣದ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಿ ಹೆಚ್ಚು ಜನರಿಗೆ ಲಭ್ಯವಾಗುವಂತೆ ಮಾಡಿ, ಬಾಲಕಾರ್ಮಿಕತೆಯನ್ನು ತಡೆಯುವಲ್ಲಿ ಹಾಗೂ ನಿವಾರಣೆ ಮಾಡುವ ಬಗ್ಗೆ ಸರಕಾರದ ಜೊತೆಯಲ್ಲಿ ಕನ್‌ಸ್ಟ್ರಕ್ಟಿವ್, ಕ್ರಿಟಿಕಲ್, ಮತ್ತು ಮುಕ್ತ ಚರ್ಚೆಯಲ್ಲಿ ತೊಡಗಿಸುವುದು,


### 2.11.3 ವಿಧಾನಗಳು

- ಉಪನ್ಯಾಸ/ ಗುಂಪು ಚರ್ಚೆ

### 2.11.4 ಪರಿಕರಗಳು



- ಕರಿಹಲಗೆ
- ಸೀಮೆಸುಣ್ಣ
- ಚಾರ್ಟ್ ಹಾಳೆಗಳು
- ಸ್ಕೆಚ್ ಪೆನ್ನುಗಳು




### 2.11.5 ಪ್ರಕ್ರಿಯೆ

- ಏಕಾಂಗಿಯಾಗಿ ಕೆಲಸ ಮಾಡುವುದಕ್ಕೂ ಇತರರ ಜೊತೆಯಲ್ಲಿ ಸೇರಿಕೊಂಡು ಕೆಲಸ ಮಾಡುವುದಕ್ಕೂ ಇರುವ ವ್ಯತ್ಯಾಸಗಳನ್ನು ಹಾಗೂ ಲಾಭಗಳನ್ನು ಹಾಗೂ ಸಮಾನ ಮನಸ್ಕರ ಜೊತೆಯಲ್ಲಿ ಮತ್ತು ಅಂಗನವಾಡಿ ಶಿಕ್ಷಕಿಯರ ಸಂಘಟನೆ, ಮಹಿಳಾ ಮಂಡಳಿಗಳು, ಸ್ವ-ಸಹಾಯ ಸಂಘಗಳು ಇತ್ಯಾದಿ. ಸಂಸ್ಥೆಗಳ ಜೊತೆಯಲ್ಲಿ ಸೇರಿಕೊಂಡು ಕೆಲಸ ಮಾಡುವಾಗ ಆಗುವ ಲಾಭವನ್ನು ಉಪನ್ಯಾಸದ ಮೂಲಕ ವಿವರಿಸಿರಿ.
- ಶಿಬಿರಾರ್ಥಿಗಳನ್ನು ಉಪಗುಂಪುಗಳನ್ನಾಗಿ ಮಾಡಿ ಅವರಿಗೆ ಈ ಕೆಳಗಿನ ಕೆಲಸ ಕೊಡಿರಿ.
    - ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳು, ಬಾಲಕಾರ್ಮಿಕತೆಯ ನಿವಾರಣೆಗೆ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳನ್ನು ಪಟ್ಟಿ ಮಾಡುವುದು.
    - ಅನುಷ್ಠಾನ ಮಾಡಲು ಸಾಧ್ಯವಾಗುವಂತಹ ಯೋಜನೆ ತಯಾರಿಸುವುದು
    - ಉಪಗುಂಪುಗಳಲ್ಲಿ ಚರ್ಚಿಸಿ ತಯಾರಿಸಿದ್ದನ್ನು ಇಡೀ ಸಭೆಯಲ್ಲಿ ಮಂಡಿಸಿ ಚರ್ಚಿಸಿರಿ.

### 2.11.6 ನಿರೀಕ್ಷಿತ ಫಲಿತಾಂಶ

- ಅಂಗನವಾಡಿ ಶಿಕ್ಷಕಿಯರು ಬಾಲಕಾರ್ಮಿಕತೆಯ ತಡೆಗಟ್ಟುವಿಕೆ ಹಾಗೂ ನಿವಾರಣೆಯಲ್ಲಿ ಅವರ ಸಂಘಟನೆಯ ಪಾತ್ರವನ್ನು ಅರ್ಥಮಾಡಿಕೊಳ್ಳುವರು
- ಅವರು ಅನುಷ್ಠಾನ ಮಾಡಲು ಯೋಗ್ಯವಾದ ಕ್ರಿಯಾ ಯೋಜನೆಯನ್ನು ತಯಾರಿಸಲು ಶಕ್ತರಾಗುವರು.





# 2.12 ಮಕ್ಕಳ ಸಾಗಾಟ ಮತ್ತು ಪರಿವೀಕ್ಷಣೆ

## 2.12.1 ಉದ್ದೇಶಗಳು

- ಬಾಲಕಾರ್ಮಿಕತೆಯ ನಿರ್ಮೂಲನೆಗೆ ಪರಿಣಾಮಕಾರಿ ಪರಿವೀಕ್ಷಣೆ ಅಗತ್ಯ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳುವುದು.
- ಬಾಲಕಾರ್ಮಿಕತೆಯ ಪರಿವೀಕ್ಷಣೆಯಲ್ಲಿ ಅಂಗನವಾಡಿ ಶಿಕ್ಷಕಿಯರ ಪಾತ್ರವನ್ನು ಗುರುತಿಸಿಕೊಳ್ಳುವುದು.

## 2.12.2 ಪಠ್ಯ


ಸುವ್ಯವಸ್ಥಿತವಾದ ಪರಿವೀಕ್ಷಣೆ ಮತ್ತು ಮಕ್ಕಳ ಜಾಡು ಹಿಡಿಯುವ ವ್ಯವಸ್ಥೆಯು ಎಲ್ಲಾ ಮಕ್ಕಳು ಶಾಲೆಗೆ ಸೇರಿ ಮತ್ತು ಶಾಲೆಯಲ್ಲಿ ಉಳಿದುಕೊಳ್ಳುವಂತೆ ಮಾಡಲು ಪೂರ್ವಾಪೇಕ್ಷಿತ ಅವಶ್ಯಕತೆ ಆಗಿದೆ. ಇದು ಅವಶ್ಯಕತೆ ಇರುವ ಮಕ್ಕಳನ್ನು ಗುರುತಿಸಿ, ಸಮಯಕ್ಕೆ ಸರಿಯಾಗಿ ತಪ್ಪು ತಿದ್ದಿಕೊಂಡು ಮತ್ತು ಪರಿಹಾರ ಕಂಡುಕೊಳ್ಳಲು ಹಾಗೂ ಅವರು ಶಿಕ್ಷಣ ವ್ಯವಸ್ಥೆಯಲ್ಲಿ ಉಳಿದುಕೊಳ್ಳುವಂತೆ ನೋಡಿಕೊಳ್ಳಲು ಅವಶ್ಯಕವಾಗಿದೆ.

ಶಾಲಾ ಶಿಕ್ಷಕಿಯರ ಅತ್ಯಂತ ಪ್ರಮುಖ ಕರ್ತವ್ಯ ತಮ್ಮ ಶಾಲಾ ವಲಯದ ಶೇ. 100ರಷ್ಟು ಮಕ್ಕಳು ಶಾಲೆಗೆ ಸೇರುವಂತೆ ಹಾಗೂ ಹಾಜರು ಆಗುವಂತೆ ನೋಡಿಕೊಳ್ಳುವುದಾಗಿದ್ದು, ಇದನ್ನು ಸಾಧಿಸಬೇಕಾದರೆ ಅವರು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಜಾಡು ಹಿಡಿಯುವ ಮತ್ತು ಪರಿವೀಕ್ಷಣೆ ಮಾಡುವ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುವುದು. ಇಂತಹ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಕೆಲಸಕ್ಕೆ ಸೇರುವ ಅಪಾಯದಲ್ಲಿ ಇರುವರು.

ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಕೆಲಸಕ್ಕೆ ಸೇರಿಕೊಳ್ಳದಂತೆ ನೋಡಿಕೊಳ್ಳಲು ಹಾಗೂ ಅವರ ನಿರಂತರ ಹಾಜರಿ ಮತ್ತು ಸಾಧನೆಯನ್ನು ಸೇತುಬಂಧ ಶಾಲೆಗಳಲ್ಲಿ ಮತ್ತು ಮುಖ್ಯವಾಹಿನಿಯ ಶಾಲೆಗಳಲ್ಲಿ, ಪರಿವೀಕ್ಷಣೆ ಮಾಡುವುದು ಅವಶ್ಯವಾಗಿದೆ. ಬಾಲಕಾರ್ಮಿಕತೆಯು ಒಂದು ಸಂಕೀರ್ಣವಾದ ವಿಚಾರವಾಗಿದ್ದು, ಇದಕ್ಕೆ ಸಾಮಾಜಿಕ, ಆರ್ಥಿಕ ಮತ್ತು ಅಭಿವೃದ್ಧಿಯ ಆಯಾಮಗಳಿರುತ್ತವೆ. ಆದುದರಿಂದ ಬಾಲಕಾರ್ಮಿಕತೆಯನ್ನು ಅತ್ಯಂತ ನಿಕಟವಾಗಿ ಬೇರೆ ಬೇರೆ ಮಟ್ಟದಲ್ಲಿ ಪರಿವೀಕ್ಷಣೆ ಮಾಡುವುದು ಅವಶ್ಯಕತೆ ಇದೆ. ಅಂದರೆ ಶಾಲೆ, ಎಸ್.ಡಿ.ಎಂ.ಸಿ, ಗ್ರಾಮ ಪಂಚಾಯತ್, ಸಮುದಾಯ, ವಾರ್ಡ್ ಮಟ್ಟದ ಬಾಲಕಾರ್ಮಿಕ ಸಮಿತಿ. ಇದಕ್ಕೆ ಸರಿಯಾದ ತರಬೇತಿ, ಯೋಜನೆ ತಯಾರಿ ಮತ್ತು ಆಲೋಚನೆ ಅವಶ್ಯಕ. ಪೋಷಕರನ್ನು ಸಮುದಾಯದ ಧುರೀಣರನ್ನು, ಯುವಕರನ್ನು ಹಾಗೂ ಮಹಿಳೆಯರನ್ನು, ಬಾಲಕಾರ್ಮಿಕತೆಯ ಬಗ್ಗೆ ಮಾಹಿತಿ ಸಂಗ್ರಹಿಸಲು, ಗುರುತಿಸಲು, ವರದಿ ಮಾಡಲು ಮತ್ತು ಸಂಬಂಧಪಟ್ಟವರಿಗೆ ತಿಳಿಸಲು ಉಪಯೋಗಿಸಬಹುದಾಗಿದೆ.

ಮಕ್ಕಳ ಸಾಗಾಟದ ಹೆಚ್ಚಿನ ಘಟನೆಗಳು ಋತುಮಾನಕ್ಕೆ ಸಂಬಂಧಪಟ್ಟಿದ್ದು, ಇವುಗಳಿಗೆ ನಿರ್ದಿಷ್ಟವಾದ ಕಾರಣಗಳು ಮತ್ತು ವ್ಯವಸ್ಥೆಗಳಿವೆ. ಇಂತಹ ವ್ಯವಸ್ಥೆಯನ್ನು ಗುರುತಿಸಿ ಅವರ ಮೇಲೆ ಕಣ್ಣಿಟ್ಟು ಮಕ್ಕಳ ಸಾಗಾಟವನ್ನು ನಿಲ್ಲಿಸಲು ಸಾಧ್ಯವಿದೆ. ಇದಕ್ಕೆ ವಿವಿಧ ಮಟ್ಟದ ಬಾಲಕಾರ್ಮಿಕ ಸಮಿತಿಗಳ ಸಹಕಾರ ಅವಶ್ಯಕ. ಮುಖ್ಯವಾಗಿ ಶಾಲಾ ಮಟ್ಟದ ಸಮಿತಿ, ಗ್ರಾಮ ಪಂಚಾಯತ್ ಮಟ್ಟದ ಸಮಿತಿ, ಅಂಗನವಾಡಿ ಮಟ್ಟದ ಸಮಿತಿ, ಜನವಸತಿ ಮಟ್ಟದ ಸಮಿತಿಗಳನ್ನು ಪ್ರಚೋದಿಸಿ ಅವರು ಬಾಲಕಾರ್ಮಿಕತೆಯ ತಡೆಗೆ ಹಾಗೂ ಅವರ ಪುನರ್ವಸತಿಗೆ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಅಂಗನವಾಡಿ ಶಿಕ್ಷಕಿಯರು ಒಂದು ನಿರ್ದಿಷ್ಟವಾದ ಕ್ರಿಯಾಯೋಜನೆಯ ಅಭಿವೃದ್ಧಿಗೆ ಪರಿವೀಕ್ಷಣೆ ಸಹಕಾರರಾಗಿ ಅದರ ಮೂಲಕ ಗುರುತಿಸುವಿಕೆ ಮತ್ತು ಪುನರ್ವಸತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಿದೆ.





## 2.12.3 ವಿಧಾನಗಳು

- ಗುಂಪು ಚರ್ಚೆ
- ಪಿ.ಆರ್.ಎ

## 2.11.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಚಾರ್ಟ್ ಹಾಳೆಗಳು
- ಸ್ಕೆಚ್ ಪೆನ್ನುಗಳು


## 2.12.5 ಪ್ರಕ್ರಿಯೆ

- ಸಂಪನ್ಮೂಲ ವ್ಯಕ್ತಿಗಳು ಅವಧಿಯ ವಿಷಯವನ್ನು ಉಪನ್ಯಾಸದ ಮೂಲಕ ಮಂಡಿಸಬೇಕು.
- ನಂತರ ವಿಷಯವನ್ನು ಇಡೀ ಗುಂಪಿನಲ್ಲಿ ಚರ್ಚಿಸಬೇಕು.
- ಉಪಗುಂಪುಗಳಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ಚರ್ಚಿಸಬೇಕು
    - ಬಾಲಕಾರ್ಮಿಕತೆಯ ಪರಿವೀಕ್ಷಣೆಗೆ ಅವಶ್ಯಕವಾದ ದಾರಿ ಹಾಗೂ ಮೂಲಗಳ ಗುರುತಿಸುವಿಕೆ
    - ಬಾಲಕಾರ್ಮಿಕತೆಯ ಪರಿವೀಕ್ಷಣೆಯಲ್ಲಿ ಶಿಕ್ಷಕಿಯರ ಪಾತ್ರ
- ಉಪಗುಂಪುಗಳಲ್ಲಿ ಹಳ್ಳಿಯ ನಕ್ಷೆ ರಚಿಸಿ ಅದರಲ್ಲಿ ಅಪಾಯಕಾರಿ ಪ್ರದೇಶಗಳು, ಮಕ್ಕಳು, ಇತರೆ ಭಾಗೀದಾರರು ಮತ್ತು ಸಂಸ್ಥೆಗಳನ್ನು ಗುರುತಿಸಲು ತಿಳಿಸುವುದು.
- ಅವರ ಪ್ರದೇಶಕ್ಕೆ ಅವಶ್ಯಕವಾದ ಪರಿವೀಕ್ಷಣಾ ಯೋಜನೆಯನ್ನು ತಯಾರಿಸುವುದು.
- ಕೊನೆಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಇಡೀ ಅವಧಿಯಲ್ಲಿ ಮೂಡಿಬಂದ ವಿಷಯಗಳನ್ನು ಕ್ರೋಢಿಕರಿಸಿ ಪಟ್ಟಿ ಮಾಡಿ ಮಂಡಿಸಬೇಕು.

## 2.12.6 ನಿರೀಕ್ಷಿತ ಫಲಿತಾಂಶ

- ಅಂಗನವಾಡಿ ಶಿಕ್ಷಕಿಯರು ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ಪರಿಣಾಮಕಾರಿ ಪರಿವೀಕ್ಷಣೆಯ ಅಗತ್ಯತೆಯನ್ನು ಮನಗಾಣುತ್ತಾರೆ.
- ಅಂಗನವಾಡಿ ಶಿಕ್ಷಕಿಯರು ಪರಿವೀಕ್ಷಣೆಯಲ್ಲಿ ತಮ್ಮ ಪಾತ್ರವನ್ನು ಗುರುತಿಸಿಕೊಳ್ಳುವರು.





# 2.13 ಬಾಲಕಾರ್ಮಿಕತೆಯ ಕ್ವಿಜ್

ಸಮಯ: 60 ನಿಮಿಷಗಳು

## 2.13.1 ಉದ್ದೇಶಗಳು

- ಬಾಲಕಾರ್ಮಿಕತೆಯ ಬಗ್ಗೆ ಸರಿಯಾದ ಅರಿವು ಉಂಟು ಮಾಡುವುದು.
- ಈಗಾಗಲೆ ತಿಳಿದುಕೊಂಡ ವಿಚಾರಗಳನ್ನು ಶಿಬಿರಾರ್ಥಿಗಳಲ್ಲಿ ಸ್ಪಷ್ಟೀಕರಿಸುವುದು.
- ಶಿಬಿರಾರ್ಥಿಗಳಲ್ಲಿ ಬಾಲಕಾರ್ಮಿಕತೆ ಬಗ್ಗೆ ಆಂತರಿಕ ಕ್ರಿಯಾತ್ಮಕ ಅರಿವನ್ನು ಉಂಟು ಮಾಡುವುದು.

## 2.13.2 ವಿಧಾನಗಳು

ಕ್ವಿಜ್

ಪ್ರಶ್ನೆಗಳನ್ನು ಕೇಳುವುದು.

## 2.13.3 ಪರಿಕರಗಳು

- ಕರಿಹಲಗೆ, ಸೀಮೆಸುಣ್ಣ
- ಡ್ರಾಯಿಂಗ್ ಹಾಳೆಗಳು,
- ಕಂದು ಬಣ್ಣದ ಹಾಳೆಗಳು,
- ನಾಮ ಫಲಕಗಳು
- ಬಣ್ಣದ ಪೆನ್ನು
- ಮಾರ್ಕರ್ಸ್‌ಗಳು

## 2.8.4 ಪ್ರಕ್ರಿಯೆ

- ಶಿಬಿರಾರ್ಥಿಗಳಿಗೆ, ಇದು ಪರೀಕ್ಷೆ ಅಲ್ಲ, ಅವರ ಜ್ಞಾನವನ್ನು ಪರೀಕ್ಷೆ ಮಾಡಲು ಪ್ರಶ್ನೆಗಳನ್ನು ಕೇಳುತ್ತಿಲ್ಲ. ಇದು ಒಂದು ಮನಸ್ಸಿಗೆ ಸಂತೋಷ ಕೊಡುವ ಚಟುವಟಿಕೆ ಎಂದು ತಿಳಿಸಬೇಕು.
- ಶಿಬಿರಾರ್ಥಿಗಳನ್ನು ಸಮಾನ ಸಂಖ್ಯೆಯ ಗುಂಪುಗಳನ್ನಾಗಿ ಮಾಡಬೇಕು. ಉದಾ:– 15 ಶಿಬಿರಾರ್ಥಿಗಳು ಇದ್ದರೆ ಅವರನ್ನು 5 ಜನರ ಮೂರು ಗುಂಪುಗಳನ್ನಾಗಿ ಮಾಡಬಹುದು. ಶಿಬಿರಾರ್ಥಿಗಳ ಸಂಖ್ಯೆ ಹೆಚ್ಚು ಇದ್ದರೆ, ಕ್ವಿಜ್‌ಗೆ ಸ್ವಯಂ ಪ್ರೇರಿತರಾಗಿ ಬರಲು ಕರೆ ಕೊಡಿರಿ ಉಳಿದವರು ಪ್ರೇಕ್ಷಕರಾಗಿರುತ್ತಾರೆ.
- ಮೂರು ಗುಂಪುಗಳಿಗೆ ಹೆಸರು ಕೊಡಬೇಕು. ಹೆಸರಿನ ಬೋರ್ಡುಗಳು ಅವರ ಮುಂದೆ ಇಡಬೇಕು.



- ಪ್ರತಿಗುಂಪಿಗೆ 5 ಪ್ರಶ್ನೆಗಳನ್ನು ಕೇಳಾಗುವುದು. ಅವರು ಅದನ್ನು 60 ಸೆಕೆಂಡುಗಳಲ್ಲಿ ಉತ್ತರಿಸಬೇಕು. ಉತ್ತರಿಸದೆ ಇದ್ದರೆ ಅದು ಮುಂದಿನ ಗುಂಪಿಗೆ ಹೋಗುವುದು. ಈ ಗುಂಪಿಗೆ ಉತ್ತರಿಸಲು 30 ಸೆಕೆಂಡುಗಳ ಸಮಯ ಒದಗಿಸಬೇಕು.
- ಗುಂಪು ತನಗೆ ನಿಗದಿ ಪಡಿಸಿದ ಪ್ರಶ್ನೆಯನ್ನು ಉತ್ತರಿಸಿದರೆ ಅದಕ್ಕೆ 15 ಅಂಕಗಳು ದೊರೆಯುತ್ತದೆ. ಎರಡನೆ ಗುಂಪು ಉತ್ತರಿಸಿದರೆ 10 ಅಂಕಗಳನ್ನು ಮತ್ತು ಮೂರನೆ ಗುಂಪು ಉತ್ತರಿಸಿದರೆ 5 ಅಂಕಗಳನ್ನು ಕೊಡಲಾಗುವುದು.
- ಕ್ವಿಜ್ ನಡೆಸುವವರು ಸರಿಯಾಗಿ ತಯಾರಿ ಮಾಡಿಕೊಳ್ಳಬೇಕು. ಯಾವುದೇ ಆಭಾಸಕ್ಕೆ. ಅನುಮಾನಕ್ಕೆ, ವಿರಸಕ್ಕೆ ಎಡೆ ಮಾಡಿಕೊಡಬಾರದು.
- ಶಿಬಿರಾರ್ಥಿಗಳ ಸಂಖ್ಯೆ ಹೆಚ್ಚು ಇದ್ದರೆ ಶಿಬಿರಾರ್ಥಿಗಳನ್ನು ಅಂಕ ಲೆಕ್ಕ ಹಾಕುವ ಕೆಲಸಕ್ಕೆ ನೇಮಿಸಿಕೊಳ್ಳಬಹುದು ಇಲ್ಲದೆ ಇದ್ದರೆ ಅದನ್ನು ಇನ್ನೊಬ್ಬ ತರಬೇತುದಾರರು ಮಾಡಬೇಕು.


### 2.13.5 ಸಮಯ ನಿಗದಿ

| | |
|---|---|
| ತಯಾರಿ | 10 ನಿಮಿಷ |
| ಕ್ವಿಜ್ ಪ್ರಕ್ರಿಯೆ | 45 ನಿಮಿಷ |
| ಚರ್ಚೆ | 10 ನಿಮಿಷ |

### 2.13.6 ಕ್ವಿಜ್ ಪ್ರಶ್ನೆಗಳು

1. ನಿಮ್ಮ ಭಾಗದಲ್ಲಿ ಬಾಲಕಾರ್ಮಿಕರು ಹೆಚ್ಚಾಗಿ ಇರುವ ಕ್ಷೇತ್ರ.
   - (ಎ) ಹೋಟೆಲ್
   - (ಬಿ) ಶ್ರೀಮಂತ ವ್ಯಕ್ತಿಗಳ ಮನೆ
   - (ಸಿ) ಸಾಗಾಟದ ವ್ಯವಸ್ಥೆ
   - (ಡಿ) ಕೃಷಿ ಕ್ಷೇತ್ರ
2. ಮಕ್ಕಳು ಬಾಲಕಾರ್ಮಿಕರಾಗಿರುವುದರಿಂದ ಏನನ್ನು ಹೆಚ್ಚಾಗಿ ಕಳೆದುಕೊಳ್ಳುತ್ತಾರೆ.
   - (ಎ) ಶಾಲೆ / ಶಿಕ್ಷಣ
   - (ಬಿ) ಆಹಾರ
   - (ಸಿ) ಮನೋರಂಜನೆ
   - (ಡಿ) ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ
3. ಮಕ್ಕಳನ್ನು ಶಾಲೆಗೆ ಕಳುಹಿಸುವ ಪ್ರಾಥಮಿಕ ಜವಾಬ್ದಾರಿ ಯಾರದ್ದು.
   - (ಎ) ಪೋಷಕರು
   - (ಬಿ) ಶಾಲಾ ಶಿಕ್ಷಕಿಯರು
   - (ಸಿ) ಗ್ರಾಮ ಪಂಚಾಯತ್
   - (ಡಿ) ಅಂಗನವಾಡಿ ಶಿಕ್ಷಕಿ
4. ಮಕ್ಕಳ ಅಭಿವೃದ್ಧಿಗೆ / ಬೆಳವಣಿಗೆಗೆ ಅವಶ್ಯವಾದವುಗಳು
   - (ಎ) ಶಿಕ್ಷಣ
   - (ಬಿ) ಆಹಾರ / ಆರೋಗ್ಯ
   - (ಸಿ) ವಸತಿ / ಭದ್ರತೆ
   - (ಡಿ) ಮೇಲಿನ ಎಲ್ಲವುಗಳು






5. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಕಾರಣಗಳು
   (ಎ) ಅವರು ವಿರೋಧಿಸುವುದಿಲ್ಲ ಮತ್ತು ಕಡಿಮೆ ಸಂಬಳ ಕೊಡಬಹುದು
   (ಬಿ) ಎಳೆ ಪ್ರಾಯದಲ್ಲಿ ಕೆಲಸ ಮಾಡುವುದು ಮಕ್ಕಳಿಗೆ ಒಳ್ಳೆಯದು
   (ಸಿ) ತಮ್ಮ ಜೀವನದಲ್ಲಿ ಸ್ಥಿರವಾಗಲು ಒಂದು ಅವಕಾಶ
   (ಡಿ) ರಾಷ್ಟ್ರಕ್ಕೆ ತನ್ನ ಉತ್ಪಾದನೆ ಹೆಚ್ಚಿಸಿ ಕೊಳ್ಳಲು ಆಸ್ಪದ ಆಗುವುದು
6. ಹೆಚ್ಚಿನ ಬಾಲಕಾರ್ಮಿಕರು ಕೆಲಸ ಮಾಡುವ ಅವಧಿ
   (ಎ) ಪ್ರತಿ ದಿನಕ್ಕೆ ಸುಮಾರು 4 ಗಂಟೆಗಳು
   (ಬಿ) ಪ್ರತಿ ದಿನಕ್ಕೆ ಸುಮಾರು 18 ಗಂಟೆಗಳು
   (ಸಿ) ಪ್ರತಿ ದಿನಕ್ಕೆ ಸುಮಾರು 10 ಗಂಟೆಗಳು
   (ಡಿ) ಇಡೀ ದಿನ
7. ಈ ಕೆಳಗಿನವುಗಳಲ್ಲಿ ಬಾಲಕಾರ್ಮಿಕತೆಗೆ ಉದಾಹರಣೆ ಯಾವುದು.
   (ಎ) 14 ವರ್ಷದ ಬಾಲಕಿ ತನ್ನ ಮನೆಯಲ್ಲಿ ಬೆಳಿಗ್ಗೆ ಮತ್ತು ಸಂಜೆ ಮನೆಯ ಕೆಲಸದಲ್ಲಿ ಸಹಾಯ ಮಾಡುತ್ತಾಳೆ.
   (ಬಿ) 12 ವರ್ಷದ ಬಾಲಕ, ತನ್ನ ಶಾಲಾ ತೋಟದಲ್ಲಿ, ಕ್ರಾಫ್ಟ್ ಅವಧಿಯಲ್ಲಿ ಕೆಲಸ ಮಾಡುತ್ತಾನೆ.
   (ಸಿ) 11 ವರ್ಷದ ಬಾಲಕ ಶನಿವಾರ ಮಧ್ಯಾಹ್ನ ಮತ್ತು ಭಾನುವಾರ ತನ್ನ ತಾಯಿಗೆ ಸೌದೆ ಹೆಕ್ಕಲು ಸಹಾಯ ಮಾಡುತ್ತಾನೆ.
   (ಡಿ) 12 ವರ್ಷದ ಬಾಲಕಿ ತನ್ನ ಪೋಷಕರೊಂದಿಗೆ ವಾರದ 6 ದಿನಗಳಲ್ಲಿ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಾಳೆ.
8. ಈ ಕಾರಣದಿಂದ ಬಾಲಕಾರ್ಮಿಕತೆಯನ್ನು ನಿಷೇಧಿಸಲಾಗಿದೆ.
   (ಎ) ಮಕ್ಕಳು ತಮ್ಮ ಮಕ್ಕಳ ಜೀವನದ ಅನುಭವವನ್ನು ಕಳೆದುಕೊಳ್ಳುತ್ತಾರೆ.
   (ಬಿ) ಮಕ್ಕಳು ಹಣ ಕಳೆದುಕೊಳ್ಳುತ್ತಾರೆ.
   (ಸಿ) ಮಕ್ಕಳು ತಮ್ಮ ಪೋಷಕರೊಂದಿಗೆ ಜೀವಿಸಲು ಆಸ್ಪದವಾಗುವುದಿಲ್ಲ.
   (ಡಿ) ಮಕ್ಕಳಿಗೆ ಆಟವಾಡಲು ಸಮಯ ಸಿಗುತ್ತಿಲ್ಲ.
9. ಅಪಾಯಕರಿ ಬಾಲಕಾರ್ಮಿಕತೆಯ ಸಂಭವನೀಯ ಫಲಿತಾಂಶ.
   (ಎ) ಶೌರ್ಯದ ಕೆಲಸ
   (ಬಿ) ಹೆಚ್ಚು ಕೂಲಿ / ಸಂಬಳ
   (ಸಿ) ಸಾವು / ಅಂಗವಿಕಲತೆ
   (ಡಿ) ಮಕ್ಕಳ ಕೌಶಲ್ಯ ಅಭಿವೃದ್ಧಿ ಆಗುವುದು
10. ನೀವು ನಿಮ್ಮ ಗ್ರಾಮದಲ್ಲಿ ಬಾಲಕಾರ್ಮಿಕತೆಯನ್ನು ಕಂಡಾಗ ಏನು ಮಾಡುತ್ತೀರಿ.
   (ಎ) ಗ್ರಾಮದ ದೇವಸ್ಥಾನದ ಪೂಜಾರಿಗೆ ತಿಳಿಸುತ್ತೀರಿ
   (ಚರ್ಚಿನ ಪಾದ್ರಿ ಅಥವಾ ಮಸೀದಿಯ ಮೌಲ್ವಿಗೆ)
   (ಬಿ) ಗ್ರಾಮದ ಜಮೀನುದಾರರಿಗೆ ತಿಳಿಸುತ್ತೀರಿ.
   (ಸಿ) ಗ್ರಾಮ ಪಂಚಾಯತ್‌ನ ಸಾಮಾಜಿಕ ನ್ಯಾಯ ಉಪಸಮಿತಿಯ ಗಮನಕ್ಕೆ ತರುತ್ತೀರಿ.
   (ಡಿ) ಗ್ರಾಮದ ಹೋಟೆಲ್ ಮಾಲೀಕರಿಗೆ ತಿಳಿಸುತ್ತೀರಿ



11. ನಿಮ್ಮ ಮಕ್ಕಳು ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರೆ, ಈ ತರಬೇತಿಯ ನಂತರ ನೀವೇನು ಮಾಡುವಿರಿ.
    - (ಎ) ಅವರನ್ನು ಅಲ್ಲಿಯೇ ಕೆಲಸ ಮುಂದುವರಿಸಲು ಬಿಟ್ಟು ಹೆಚ್ಚು ಸಂಬಳ ಕೇಳುವಿರಿ.
    - (ಬಿ) ಅವರನ್ನು ಕೆಲಸದಿಂದ ಬಿಡಿಸಿ ಮನೆಯಲ್ಲಿ ಕುಳಿತುಕೊಳ್ಳುವಂತೆ ಮಾಡುವಿರಿ.
    - (ಸಿ) ಅವರನ್ನು ಕೆಲಸದಿಂದ ಬಿಡಿಸಿ ನಿಮ್ಮ ಜೊತೆಯಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುವಿರಿ.
    - (ಡಿ) ಅವರನ್ನು ಶಾಲೆಗೆ ಕಳುಹಿಸುವಿರಿ.
12. ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದರೆ ಅವರು ಮುಂದಕ್ಕೆ ನಿಮಗೆ
    - (ಎ) ಒಂದು ಎಂಡೋಮೆಂಟ್ ವಿಮಾ ಪಾಲಿಸಿ
    - (ಬಿ) ಜೀವ ವಿಮಾ ಪಾಲಿಸಿ
    - (ಸಿ) ಅಪಘಾತ ವಿಮಾ ಪಾಲಿಸಿ
    - (ಡಿ) ಮೇಲಿನವು ಯಾವುದೂ ಅಲ್ಲ
13. ಮಕ್ಕಳು ಶಾಲೆಗೆ ಹಾಜರು ಆಗುತ್ತಿಲ್ಲ ಏಕೆ.
    - (ಎ) ಶಾಲೆ ಬಹಳ ದೂರ ಇದೆ.
    - (ಬಿ) ಶಾಲೆಯ ಪಾಠ ಪ್ರವಚನಗಳು ಅವರಿಗೆ ಹಿಡಿಸುವುದಿಲ್ಲ.
    - (ಸಿ) ಶಿಕ್ಷಕಿಯರು ಬಹಳ ಕ್ರೂರವಾಗಿ ವರ್ತಿಸುತ್ತಾರೆ
    - (ಡಿ) ಮೇಲಿನ ಎಲ್ಲಾ ಸಮಸ್ಯೆಗಳು ಇರಬಹುದು
14. ಶಾಲೆಗಳು ಮಕ್ಕಳ ಶಿಕ್ಷಣಕ್ಕೆ ಈ ಕೆಳಗಿನ ಯಾವ ಸೌಲಭ್ಯಗಳನ್ನು ಒದಗಿಸುತ್ತವೆ.
    - (ಎ) ಮಧ್ಯಾಹ್ನದ ಊಟ ಮಾತ್ರ
    - (ಬಿ) ಸಮವಸ್ತ್ರ ಮತ್ತು ಪುಸ್ತಕಗಳು ಮಾತ್ರ
    - (ಸಿ) ಉಚಿತ ಶಿಕ್ಷಣ ಮಾತ್ರ
    - (ಡಿ) ಮೇಲಿನ ಎಲ್ಲವುಗಳು
15. ನಿಮಗೆ ಒಬ್ಬಳು ಮಗಳು ಮತ್ತು ಒಬ್ಬ ಮಗ ಇದ್ದರೆ ನೀವೇನು ಮಾಡುತ್ತೀರಿ.
    - (ಎ) ಮಗನನ್ನು ಮಾತ್ರ ಶಾಲೆಗೆ ಕಳುಹಿಸುತ್ತೀರಿ
    - (ಬಿ) ಮಗಳನ್ನು ಮಾತ್ರ ಶಾಲೆಗೆ ಕಳುಹಿಸುತ್ತೀರಿ
    - (ಸಿ) ಇಬ್ಬರನ್ನು ಶಾಲೆಗೆ ಕಳುಹಿಸುತ್ತೀರಿ
    - (ಡಿ) ಇಬ್ಬರನ್ನು ಶಾಲೆಗೆ ಕಳುಹಿಸುವುದಿಲ್ಲ.





## 2.14ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಹತ್ತಿರ ಸಂವಹನ ನಡೆಸುವುದು

### 2.14.1 ಉದ್ದೇಶಗಳು

- ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ವಿಶೇಷ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವುದು
- ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಬಗ್ಗೆ ಇರುವ ಮನೋಭಾವನೆಯನ್ನು ಬದಲಾಯಿಸಿಕೊಳ್ಳುವುದು

### 2.14.2 ಪಠ್ಯ


ಕಷ್ಟದ ಪರಿಸ್ಥಿತಿಯಲ್ಲಿ ಸಾವಿರಾರು ಮಕ್ಕಳು ಇದ್ದು ಅವರಿಗೆ ನೈತಿಕವಾದ ಮತ್ತು ಭೌತಿಕವಾದ ಸಹಾಯದ ಅವಶ್ಯಕತೆ ಇದೆ. ರಸ್ತೆಯಲ್ಲಿರುವ ಮಕ್ಕಳಿಗೆ, ಕೆಲಸಲ್ಲಿರುವ ಮಕ್ಕಳಿಗೆ, ಬಡವರ ಕುಟುಂಬದ ಮಕ್ಕಳಿಗೆ, ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವವರಿಗೆ ಯಾರಾದರೂ ಹಿರಿಯರ ಸಹಾಯದ ಅವಶ್ಯಕತೆ ಇದೆ. ಇಂತಹ ಮಕ್ಕಳೊಂದಿಗೆ ವ್ಯವಹರಿಸುವ ಪ್ರೌಢರು, ಅವರಲ್ಲಿ ಆತ್ಮಶಕ್ತಿಯನ್ನು ಬೆಳೆಸಬೇಕು. ಇವರಲ್ಲಿ ಹೆಚ್ಚಿನ ಮಕ್ಕಳನ್ನು ಲೈಂಗಿಕ, ಮಾನಸಿಕ ಹಾಗೂ ಭೌತಿಕ ದುರಪಯೋಗಕ್ಕೆ, ಹಿಂಸೆಗೆ ಮತ್ತು ಶೋಷಣೆಗೆ ಒಳಪಡಿಸಲಾಗುತ್ತಿದೆ. ಇಂತಹ ಮಕ್ಕಳಿಗೆ ತಮ್ಮ ವಿಚಾರಗಳನ್ನು ಹಂಚಿಕೊಂಡು ತಮ್ಮ ಕಷ್ಟಗಳನ್ನು, ನೋವುಗಳನ್ನು ಕಡಿಮೆ ಮಾಡಿಕೊಳ್ಳಲು ಯಾರಾದರೂ ಹಿರಿಯರ ಅವಶ್ಯಕತೆ ಇದೆ.

ಸಾಮಾಜಿಕ ಕಾರ್ಯಕರ್ತರು ಅಥವಾ ಪ್ರೌಢರು ಇಂತಹ ಮಕ್ಕಳು ತಮ್ಮ ಅನಿಸಿಕೆಗಳನ್ನು ಚಿತ್ರ ಬಿಡಿಸುವ, ಕಥೆ ಹೇಳುವ, ಆಟ ಆಡುವ ಕಲೆಗಳ ಹಾಗೂ ಚರ್ಚೆಯ ಮೂಲಕ ವ್ಯಕ್ತಪಡಿಸಲು ಸಹಾಯ ಮಾಡಲು ಸಾಧ್ಯವಿದೆ. ಸಾಮಾಜಿಕ ಕಾರ್ಯಕರ್ತರು/ ಪ್ರೌಢರು ಮಕ್ಕಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡು ಅವರು ಯಾವುದೇ ಭಯ ಅಥವಾ ಅಳುಕು ಇಲ್ಲದೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಸಹಾಯ ಮಾಡಬಹುದು.

ಸೇತು ಬಂಧ ಕೇಂದ್ರಕ್ಕೆ ಬರುವ ಪ್ರತಿಯೊಬ್ಬ ಮಗು ಹರ್ಷದಾಯಕವಲ್ಲದ ಅನುಭವದಿಂದ ಬರುವುದು. ಇವರು ಕೆಲಸ ಮಾಡುತ್ತಿದ್ದು, ಶೋಷಣೆಗೆ ಒಳಗಾದವರು ಇರಬಹುದು. ಒಡೆದು ಹೋದ ಕುಟುಂಬದಿಂದ ಬಂದವರು, ನಿರಾಶ್ರಿತರು ಅಥವಾ ಬಾಲಾಪರಾಧಿಗಳು ಇರಬಹುದು. ಅವರು ಸಂಸ್ಥೆ ನೀತಿ ನಿಯಮಗಳನ್ನು ಇಷ್ಟ ಪಡದೆ ಇರಬಹುದು. ಅವರಲ್ಲಿ ಸಿಟ್ಟು ಮತ್ತು ಏಕಾಂಗಿತನ ಇರುತ್ತದೆ. ಆದುದರಿಂದ ಈ ಮಕ್ಕಳನ್ನು ಮತ್ತು ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಇದಕ್ಕೆ ಕೆಲವೊಂದು ನಿಯಮಗಳು ಇರುವುದು ಅವಶ್ಯಕ. ಇದರಿಂದ ಶಿಕ್ಷಕಿಯರಿಗೆ ಮತ್ತು ಸಾಮಾಜಿಕ ಕಾರ್ಯಕರ್ತರಿಗೆ ಸಹಾಯವಾಗುವುದು. ಅವುಗಳು:

- ಮಕ್ಕಳ ಮಾಹಿತಿಯನ್ನು ಸಂಗ್ರಹಿಸಲು ಆತುರದ ಅವಶ್ಯಕತೆ ಇಲ್ಲ
- ಪರಸ್ಪರ ಅರ್ಥಮಾಡಿಕೊಂಡ, ನಂಬಿಕೆ ಸಂಬಂಧವನ್ನು ನಿಧಾನವಾಗಿ ಬೆಳೆಸಬೇಕು. ಮಕ್ಕಳಿಗೆ ಸಂಸ್ಥೆಯ ಕಾರ್ಯಕರ್ತರ ಮೇಲೆ ನಂಬಿಕೆ ಬರಬೇಕು. ಇದು ಮಕ್ಕಳ ಬಗ್ಗೆ ಆಸಕ್ತಿ ಮತ್ತು ಪ್ರೀತಿ ತೋರಿಸಿದಾಗ ಮಾತ್ರ ಸಾಧ್ಯ.
- ಮಕ್ಕಳ ಅನುಭವಗಳ/ ಭಾವನೆಗಳ ಬಗ್ಗೆ ಹೆಚ್ಚು ಒತ್ತು ಕೊಡಬೇಕು.





- ಮಗುವಿನ ಜೊತೆಯಲ್ಲಿ ಮಾತನಾಡುವಾಗ ಬರೀ ಪ್ರಶ್ನೆ ಕೇಳದೆ. ಕಥೆ, ಹಾಸ್ಯ ಪ್ರಸಂಗಗಳ ಮೂಲಕ ವಾತಾವರಣವನ್ನು ತಿಳಿಸಗೊಳಿಸಿರಿ. ವಾತುಕತೆ ಜೀವಂತವಾಗಿದ್ದು ಭಾಗವಹಿಸುವಿಕೆಯಿಂದ ಕೂಡಿರುವುದು ಅವಶ್ಯಕ.
- ಮಕ್ಕಳ ಭಾವನೆಗಳನ್ನು ಮತ್ತು ಅವರ ಮನಸ್ಸಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಹೆಚ್ಚಿನ ಮಕ್ಕಳಿಗೆ ಕಠಿಣವಾದ ಮತ್ತು ಬಹಳ ಕೆಟ್ಟದಾದ ಅನುಭವಗಳು ಇರುತ್ತವೆ.


ಮಕ್ಕಳು ಪರಿಣಾಮಕಾರಿಯಾಗಿ ಅಭಿವ್ಯಕ್ತಿ ಮಾಡಲು ಹಾಗೂ ಅದರ ಕಷ್ಟದ ಪರಿಸ್ಥಿತಿಯಿಂದ ಹೊರ ತರಲು, ಅವರ ಜೊತೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಈ ಕೆಳಗಿನ ವಿಚಾರಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

- ಮಕ್ಕಳ ಜೊತೆಯ ಕಣ್ಣಿನ ಸಂಪರ್ಕ ಇಟ್ಟುಕೊಂಡು ಅವರ ಮುಖದಲ್ಲಿ ಬದಲಾವಣೆಗಳನ್ನು ಅವಲೋಕಿಸಿರಿ.
- ಇನ್ನೊಬ್ಬರು ಏನು ಅಭಿವ್ಯಕ್ತಿಗೊಳಿಸುತ್ತಿದ್ದಾರೆ ಎಂಬುದಕ್ಕೆ ಹೆಚ್ಚು ಗಮನ ಕೊಡಬೇಕು.
- ಉತ್ತಮವಾಗಿ ಗ್ರಹಿಸುವವರು/ ಆಲಿಸುವವರು ಆಗಬೇಕು.
- ಬಾಯಿ ಮಾತಿಲ್ಲದೆ ಇತರ ವಿವಿಧ ಸಂವಹನೆಗಳ ಬಗ್ಗೆ ಗಮನ ಕೊಡಿರಿ.
- ಇನ್ನೊಬ್ಬ ವ್ಯಕ್ತಿ ಮಾತನಾಡುವ ಭಾಷೆಯನ್ನು ಅವರೊಂದಿಗಿನ ಸಂವಹನದಲ್ಲಿ ಬಳಸಬೇಕು. ಸಾಧ್ಯವಾದರೆ ಸ್ಥಳೀಯ ಭಾಷೆಯನ್ನು ಉಪಯೋಗಿಸಬೇಕು.
- ಮಕ್ಕಳ ಜೊತೆಯಲ್ಲಿ ಮಾತನಾಡುವಾಗ ಅವರು ಅರ್ಥಮಾಡಿಕೊಳ್ಳುವ ಭಾಷೆಯನ್ನು ಉಪಯೋಗಿಸಿರಿ. ಅವರು ಪ್ರಶ್ನೆ ಕೇಳಲು ಪ್ರೋತ್ಸಾಹಿಸಿರಿ. ಮುಂದಿನ ಚರ್ಚೆಗೆ ಆಸ್ಪದ ಕೊಡದ ಪ್ರಶ್ನೆಗಳನ್ನು ಕೇಳಬೇಡಿರಿ. ಅವುಗಳಿಂದ ಏನೂ ಉಪಯೋಗವಿಲ್ಲಾ.
- ನೀವು ಮಾತನಾಡುತ್ತಿರುವ ವ್ಯಕ್ತಿ ನಿಮ್ಮನ್ನು ಅರ್ಥ ಮಾಡಿಕೊಂಡಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಿರಿ.

ಸೇತು ಬಂಧ ಕೇಂದ್ರಕ್ಕೆ ಬರುವ ಪ್ರತಿಯೊಬ್ಬ ಮಗು ಹರ್ಷದಾಯಕವಲ್ಲದ ಅನುಭವದಿಂದ ಬರುವುದು. ಇವರು ಕೆಲಸ ಮಾಡುತ್ತಿದ್ದು, ಶೋಷಣೆಗೆ ಒಳಗಾದವರು ಇರಬಹುದು. ಒಡೆದು ಹೋದ ಕುಟುಂಬದಿಂದ ಬಂದವರು, ನಿರಾಶ್ರಿತರು ಅಥವಾ ಬಾಲಾಪರಾಧಿಗಳು ಇರಬಹುದು. ಅವರು ಸಂಸ್ಥೆ ನೀತಿ ನಿಯಮಗಳನ್ನು ಇಷ್ಟ ಪಡದೆ ಇರಬಹುದು. ಅವರಲ್ಲಿ ಸಿಟ್ಟು ಮತ್ತು ಏಕಾಂಗಿತನ ಇರುತ್ತದೆ. ಆದುದರಿಂದ ಈ ಮಕ್ಕಳನ್ನು ಮತ್ತು ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಇದಕ್ಕೆ ಕೆಲವೊಂದು ನಿಯಮಗಳು ಇರುವುದು ಅವಶ್ಯಕ. ಇದರಿಂದ ಶಿಕ್ಷಕಿಯರಿಗೆ ಮತ್ತು ಸಾಮಾಜಿಕ ಕಾರ್ಯಕರ್ತರಿಗೆ ಸಹಾಯವಾಗುವುದು. ಅವುಗಳು:

- ಮಕ್ಕಳ ಮಾಹಿತಿಯನ್ನು ಸಂಗ್ರಹಿಸಲು ಆತುರದ ಅವಶ್ಯಕತೆ ಇಲ್ಲ
- ಪರಸ್ಪರ ಅರ್ಥಮಾಡಿಕೊಂಡ, ನಂಬಿಕೆ ಸಂಬಂಧವನ್ನು ನಿಧಾನವಾಗಿ ಬೆಳೆಸಬೇಕು. ಮಕ್ಕಳಿಗೆ ಸಂಸ್ಥೆಯ ಕಾರ್ಯಕರ್ತರ ಮೇಲೆ ನಂಬಿಕೆ ಬರಬೇಕು. ಇದು ಮಕ್ಕಳ ಬಗ್ಗೆ ಆಸಕ್ತಿ ಮತ್ತು ಪ್ರೀತಿ ತೋರಿಸಿದಾಗ ಮಾತ್ರ ಸಾಧ್ಯ.
- ಮಕ್ಕಳ ಅನುಭವಗಳ/ ಭಾವನೆಗಳ ಬಗ್ಗೆ ಹೆಚ್ಚು ಒತ್ತು ಕೊಡಬೇಕು.
- ಮಗುವಿನ ಜೊತೆಯಲ್ಲಿ ಮಾತನಾಡುವಾಗ ಬೇರ ಪ್ರಶ್ನೆ ಕೇಳಿರಿ. ಕಥೆ, ಹಾಸ್ಯ ಪ್ರಸಂಗಗಳ ಮೂಲಕ ವಾತಾವರಣವನ್ನು ತಿಳಿಸಗೊಳಿಸಿರಿ. ವಾತುಕತೆ ಜೀವಂತವಾಗಿದ್ದು ಭಾಗವಹಿಸುವಿಕೆಯಿಂದ ಕೂಡಿರುವುದು ಅವಶ್ಯಕ.
- ಮಕ್ಕಳ ಭಾವನೆಗಳನ್ನು ಮತ್ತು ಅವರ ಮನಸ್ಸಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು





ಅವಶ್ಯಕ. ಹೆಚ್ಚಿನ ಮಕ್ಕಳಿಗೆ ಕಠಿಣವಾದ ಮತ್ತು ಬಹಳ ಕೆಟ್ಟದಾದ ಅನುಭವಗಳು ಇರುತ್ತವೆ.

ಉತ್ತಮವಾದ ಹಾಗೂ ಸಂತೋಷಕರವಾದ ಬಾಲ್ಯವನ್ನು ಅನುಭವಿಸಿದ ಮಗು ತನ್ನ ಸಂವೇದನೆಯನ್ನು ಯಾವುದೇ ಅಡೆತಡೆ, ನಾಚಿಕೆ ಇಲ್ಲದೆ ಬೇರೆ ಬೇರೆ ರೂಪದಲ್ಲಿ ವ್ಯಕ್ತಪಡಿಸುತ್ತದೆ. ನೋವಿನ ಅನುಭವ ಇರುವ ಮಕ್ಕಳು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವಾಗ ಈ ಕೆಳಗಿನ ಅಡೆತಡೆಗಳನ್ನು ಗಮನಿಸುವುದು ಅವಶ್ಯಕ.

- ಮಗುವಿನಲ್ಲಿ ನಂಬಿಕೆಯ ಕೊರತೆ, ಬೆಂಬಲದ ಕೊರತೆ, ಹಾಗೂ ಮಗುವನ್ನು ನೋಡಿಕೊಳ್ಳುವ ಪ್ರೌಢರಲ್ಲಿ ಋಣಾತ್ಮಕ ಮನೋಭಾವನೆ.
- ಅದು ಇವರ ಸಂವೇದನೆಗಳಾದ ಅಪನಂಬಿಕೆ, ದುಃಖ, ಅಪರಾಧಿ ಮನೋಭಾವ ಇತ್ಯಾದಿಗಳಿಂದ ತೊಂದರೆಗಳಾಗಬಹುದು.
- ಮೊದಲನೇ ಅಥವಾ ಎರಡನೇ ಮಾತುಕತೆಯಲ್ಲಿ ಮಗು ಸತ್ಯವನ್ನು ಹೇಳದೇ ಇರಬಹುದು. ಇದು ಏತಕ್ಕಾಗಿ ಎಂಬುದನ್ನು ಅರ್ಥಮಾಡಿಕೊಳ್ಳಿರಿ ಹಾಗೀ ಇದು ಕೆಲವು ಸಂವೇದನೆಗಳನ್ನು ವ್ಯಕ್ತ ಪಡಿಸುವ ವಿಧಾನ ಎಂದು ತಿಳಿದುಕೊಳ್ಳಿರಿ. ಮಗುವಿಗೆ ಶಿಕ್ಷಕಿಯರಲ್ಲಿ ಅಥವಾ ಸಾಮಾಜಿಕ ಕಾರ್ಯಕರ್ತರಲ್ಲಿ ನಂಬಿಕೆ ಹುಟ್ಟಲು ಸಮಯ ಕೊಡಿರಿ.
- ಮಕ್ಕಳೊಂದಿಗಿನ ನಿಮ್ಮ ಸಂವಹನವನ್ನು ಅಭಿವೃದ್ಧಿ ಪಡಿಸಲು ಅತ್ಯಂತ ಉತ್ತಮ ವಿಧಾನವು– ನಿಮ್ಮ ಸಹೋದ್ಯೋಗಿಗಳ ಹತ್ತಿರ ನೀವು ಮಕ್ಕಳೊಂದಿಗೆ ಮಾತನಾಡುವಾಗ ನಿಮ್ಮ ವಿಶ್ಲೇಷಿಸಲು ತಿಳಿಸಿರಿ. ಅವರ ಹತ್ತಿರ ನಿಮ್ಮ ಸಂವಹನವನ್ನು ಅಭಿವೃದ್ಧಿ ಪಡಿಸಲು ಅವಶ್ಯಕವಾದ ಸಲಹೆಗಳನ್ನು ಕೊಡಲು ತಿಳಿಸಿರಿ.


### 2.14.3 ವಿಧಾನಗಳು

- ಉಪನ್ಯಾಸ ಮತ್ತು ಚರ್ಚೆ
- ಪ್ರಶ್ನೆ ಮತ್ತು ಉತ್ತರಗಳು
- ಗುಂಪು ಚರ್ಚೆ

### 2.14.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ
- ಚಾರ್ಟ್ ಹಾಳೆಗಳು
- ಸ್ಕೆಚ್ ಪೆನ್ನುಗಳು






### 2.14.5 ಪ್ರಕ್ರಿಯೆ

- ತರಬೇತಿದಾರರು ಅವಧಿಯ ವಿಷಯವನ್ನು ಕೂಲಂಕುಷವಾಗಿ ಉಪನ್ಯಾಸದ ಮೂಲಕ ಗುಂಪಿನ ಎದುರು ಮಂಡಿಸಬೇಕು.
- ಉಪನ್ಯಾದ ನಂತರ 5 ನಿಮಿಷಗಳ ಕಾಲ ಉಪನ್ಯಾದ ವಿಷಯಕ್ಕೆ ಸಂಬಂಧ ಪಟ್ಟಂತೆ ಮೆದುಳು ಮಂಥನಕ್ಕೆ ಅವಕಾಶ ಮಾಡಿಕೊಡಬೇಕು.
- ಮುಂದೆ ಶಿಬಿರಾರ್ಥಿಗಳನ್ನು 4 ಉಪಗುಂಪುಗಳನ್ನಾಗಿ ವಿಂಗಡಿಸಿ ಅವರಿಗೆ ಚರ್ಚೆಗೆ ಈ ಕೆಳಗಿನ ವಿಷಯಗಳನ್ನು ಕೊಡಬೇಕು.
    - ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಶಿಕ್ಷಕಿಯರು ಯಾವ ರೀತಿ ನೋಡಿಕೊಳ್ಳಬೇಕು ಹಾಗೂ ಅವರನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸುವ ಬಗೆ ಹೇಗೆ?
    - ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಜೊತೆಯಲ್ಲಿ ವ್ಯವಹರಿಸುವಾಗ ಎದುರಾಗುವ ಸಮಸ್ಯೆಗಳಾವುವು?
    - ಅಪಾಯಕಾರಿ ಅಂಚಿನ ಮಕ್ಕಳ ಜೊತೆ ವ್ಯವಹರಿಸಲು ಶಿಕ್ಷಕಿಯರಿಗೆ ಬೇಕಾದ ತರಬೇತಿ ಅವಶ್ಯಗಳು ಯಾವುವು?
- ಉಪಗುಂಪುಗಳ ಚರ್ಚೆಯ ಸಾರಾಂಶವನ್ನು ಇಡೀ ಗುಂಪಿನ ಎದುರು ಮಂಡಿಸಿ ಚರ್ಚಿಸಬೇಕು.
- ಕೊನೆಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಇಡೀ ಅವಧಿಯಲ್ಲಿ ಮೂಡಿ ಬಂದ ವಿಷಯಗಳನ್ನು ಕ್ರೋಢಿಕರಿಸಿ, ಮಂಡಿಸಿ ನಂತರ ಸಮಾಪ್ತಿಗೊಳಿಸಬೇಕು

### 2.14.6 ನಿರೀಕ್ಷಿತ ಫಲಿತಾಂಶ

- ಶಿಕ್ಷಕಿಯರು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ನಿರ್ಧಿಷ್ಟ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವರು.
- ಶಿಕ್ಷಕಿಯರು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳೊಂದಿಗೆ ವ್ಯವಹರಿಸುವ ವಿಧಿ ವಿಧಾನಗಳನ್ನು ತಿಳಿದುಕೊಳ್ಳುವರು.





## 2.15 ನಾವೇನು ಮಾಡಬಹುದು?

ಸಮಯ: 60 ನಿಮಿಷಗಳು

### 2.15.1 ಉದ್ದೇಶಗಳು

- ಶಿಬಿರಾರ್ಥಿಗಳು ತಾವು ಮನಸ್ಸುಮಾಡಿದರೆ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಬಹಳಷ್ಟು ಕೆಲಸ ಮಾಡಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವರು.
- ಈ ಬಗ್ಗೆ ಕೆಲಸ ಮಾಡಲು ಮನಸ್ಸು ಇರಬೇಕು ಅಷ್ಟೇ ಎನ್ನುವುದನ್ನು ಅರ್ಥ ಮಾಡಿಕೊಳ್ಳುವರು.
- ಅವರಿಗೆ ಬಾಲಕಾರ್ಮಿಕತೆಯನ್ನು ಗುರುತಿಸುವ ಮತ್ತು ಪುನರ್ವಸತಿಗೊಳಿಸುವ ಕೌಶಲ್ಯಗಳನ್ನು ಒದಗಿಸುವುದು.
- ಅವರನ್ನು ಬಾಲಕಾರ್ಮಿಕತೆಯ ನಿರ್ಮೂಲನೆ ತಮ್ಮ ಜೀವನದ ಒಂದು ಧ್ಯೇಯ ಎಂದು ಪರಿಗಣಿಸಲು ಪ್ರೋತ್ಸಾಹಿಸುವುದು.

### 2.15.2 ಪಠ್ಯ

i. ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸುವುದು

- ಅಂಗನವಾಡಿಗೆ ಹೋಗಲು ತಯಾರಿ, ಅಂಗನವಾಡಿಗೆ ಹೋಗುವುದು ಅಂಗನವಾಡಿಯಲ್ಲಿ ಹೊಸ ಹೊಸ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇತ್ಯಾದಿಗಳು ಮಕ್ಕಳನ್ನು ಮುಂದೆ ಅವರು ಶಾಲೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುತ್ತವೆ.
- ಅಂಗನವಾಡಿಗೆ ಮಕ್ಕಳನ್ನು ಕಳುಹಿಸುವ ಅನುಭವವು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅವಶ್ಯವಾದ ತಯಾರಿ ಮಾಡಲು ಸಹಾಯ ಮಾಡುವುದು.

ii. ಮಕ್ಕಳಿಗೆ ಆರೋಗ್ಯಕರವಾಗಿ ಜೀವನವನ್ನು ಆರಂಭಿಸಲು ಸಹಾಯ ಮಾಡುವುದು.

- ಅಂಗನವಾಡಿಯಲ್ಲಿನ ಸರ್ವಾಂಗೀಣವಾದ ಪೌಷ್ಠಿಕ ಆಹಾರದ ಹಾಗೂ ಆರೋಗ್ಯ ಸೇವೆಯಿಂದ ಮಕ್ಕಳು ಬಲಿಷ್ಠವಾಗಿ ಹಾಗೂ ಗಟ್ಟಿಯಾಗಿ ಬೆಳೆದು ಅವರು ಕಾಯಿಲೆ ಬೀಳುವುದು ಕಡಿಮೆ ಆಗುವುದು.
- ಮಕ್ಕಳು ಆರೋಗ್ಯವಂತರಾಗಿರುವುದರಿಂದ, ಕುಟುಂಬದ ಮೇಲೆ ಆರ್ಥಿಕ ಹೊರೆ ಕಡಿಮೆ ಆಗುವುದು.

iii. ಶಾಲೆಗೆ ಸೇರಲು ಅವಶ್ಯವಾದ ಕಲಿಕೆಯ ಅಡಿಪಾಯವನ್ನು ಒದಗಿಸುವುದು.

- ಪೂರ್ವ ಪ್ರಾಥಮಿಕ ಶಿಕ್ಷಣವು ಮಕ್ಕಳ ಮುಂದಿನ ಶಾಲಾ ಶಿಕ್ಷಣಕ್ಕೆ ಅವಶ್ಯಕವಾದ ಬಣ್ಣ, ಆಕಾರ ಇತ್ಯಾದಿಗಳ ಜ್ಞಾನವನ್ನು ಒದಗಿಸುವುದು.
- ಅಂಗನವಾಡಿಯ ಚಟುವಟಿಕೆಗಳು ಮಕ್ಕಳ ಸಾಕ್ಷರತೆ, ಅಂಕಗಣಿತ ಕೌಶಲ್ಯವನ್ನು ವೃದ್ಧಿ ಪಡಿಸುವುದು.



iv. 0–6 ವರ್ಷದ ಮಕ್ಕಳು ಅಂಗನವಾಡಿಗೆ ನಿರಂತರವಾಗಿ ಹಾಜರಾಗುವುದರಿಂದ, ಅವರು ಮುಖ್ಯವಾಹಿನಿಯಲ್ಲಿ ಉತ್ತಮವಾಗಿ ಕಲಿಯುವುದರಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರಮಾಣ ಕನಿಷ್ಠವಾಗುವುದು. ಮಕ್ಕಳ ಉತ್ತಮ ಕಲಿಕೆಯಿಂದ/ಯಶಸ್ಸಿನಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಕಡಿಮೆ ಆಗಿ, ಬಾಲಕಾರ್ಮಿಕರಾಗುವುದು ನಿಲ್ಲುತ್ತದೆ. ಅಂಗನವಾಡಿ ಶಿಕ್ಷಕಿಯರು ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸರಿಯಾಗಿ ತಯಾರು ಮಾಡಿ, ಮಕ್ಕಳು ಬಾಲಕಾರ್ಮಿಕರಾಗುವುದನ್ನು ನೇರವಾಗಿ ತಡೆಯುತ್ತಿದ್ದಾರೆ.

v. ಐ.ಸಿ.ಡಿ.ಎಸ್ ಹಾಗೂ ಅಂಗನವಾಡಿ ಕಾರ್ಯಕ್ರಮದ ಸವಲತ್ತುಗಳು, ಶಾಲೆಯನ್ನು ಮಧ್ಯದಲ್ಲಿ ಬಿಡುವ ಹಾಗೂ ಬಾಲಕಾರ್ಮಿಕರಾಗುವ ಸ್ಥಿತಿಯಲ್ಲಿರುವ ಅತ್ಯಂತ ಬಡಕುಟುಂಬಗಳ ಮಕ್ಕಳನ್ನು ತಲುಪುತ್ತಿಲ್ಲ. ಅಂಗನವಾಡಿ ಶಿಕ್ಷಕಿಯರು ಬಡಕುಟುಂಬಗಳ ಮತ್ತು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ತಲುಪಲು ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. (ವಲಸೆ ಹೋಗುವ ಕುಟುಂಬದ ಮಕ್ಕಳು... ಇತ್ಯಾದಿ)


- ಅತ್ಯಂತ ಬಡಕುಟುಂಬಗಳನ್ನು ಗುರುತಿಸಿ, ಎಲ್ಲಾ 0–6 ವರ್ಷ ಪ್ರಾಯದ ಮಕ್ಕಳನ್ನು ಅಂಗನವಾಡಿಯಲ್ಲಿ ನೊಂದಾಯಿಸಿಕೊಳ್ಳಿ
- ಮಕ್ಕಳಿಗೆ ಹೆಚ್ಚುವರಿ ಪೌಷ್ಠಿಕ ಆಹಾರ, ಲಸಿಕೆ, ಆರೋಗ್ಯ ಸೇವೆ, ಪೂರ್ವ ಪ್ರಾಥಮಿಕ ಶಿಕ್ಷಣ ಮುಂತಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಿ.
- ಇಂತಹ ಮಕ್ಕಳು ಅಂಗನವಾಡಿಯಲ್ಲಿ ಕನಿಷ್ಠ ಎರಡು ಗಂಟೆ ಇರುವಂತೆ ನೋಡಿಕೊಳ್ಳಿರಿ.
- ಅಂಗನವಾಡಿ ಬರೀ ಪೌಷ್ಠಿಕ ಆಹಾರ ಒದಗಿಸುವ ಕೇಂದ್ರವಾಗಿರದೆ ಪೂರ್ವ ಪ್ರಾಥಮಿಕ ಶಿಕ್ಷಣ ಸಹ ಒದಗಿಸುವ ಕೇಂದ್ರ ಎಂಬ ವಿಚಾರವನ್ನು ಪೋಷಕರಿಗೆ ಅದರಲ್ಲೂ ಮಾತೆಯರಿಗೆ ಮನದಟ್ಟು ಮಾಡಿರಿ.

vi. ಅಂಗನವಾಡಿಗೆ ಬರುವ ಎಲ್ಲಾ ಮಕ್ಕಳನ್ನು 5 ವರ್ಷ ಹತ್ತು ತಿಂಗಳು ತುಂಬಿದ ಕೂಡಲೇ ಅವರನ್ನು ಪ್ರಾಥಮಿಕ ಶಾಲೆಗೆ ದಾಖಲು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಶಾಲಾ ಪ್ರಾಯದ ಮಕ್ಕಳ ಗಣತಿಯಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳ ಹಾಗೂ ಕೆಲಸದಲ್ಲಿ ಇರುವ ಶಾಲಾ ಪ್ರಾಯದ ಮಕ್ಕಳನ್ನು ಗುರುತಿಸಲು ಶಿಕ್ಷಕಿಯರಿಗೆ ಸಹಾಯ ಮಾಡಿರಿ.

vii. ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಗುರುತಿಸಿ, ಅವರ ಪೋಷಕರನ್ನು ಅದರಲ್ಲೂ ಮಾತೆಯರನ್ನು ಅವರ ಮಕ್ಕಳನ್ನು ಶಾಲೆಗೆ ನಿರಂತರವಾಗಿ ಕಳುಹಿಸಲು ಪ್ರಚೋದಿಸಿರಿ.

viii. ಕುಟುಂಬಗಳ ಆರ್ಥಿಕ ತೊಂದರೆಗಳ ಬಗ್ಗೆ ಸೂಕ್ಷ್ಮತೆಯಿಂದ ಇರಿ. ಅವರಿಗೆ ಆರ್ಥಿಕ ತೊಂದರೆ ಇದ್ದಾಗ್ಯೂ ಮಗುವನ್ನು ಅಂಗನವಾಡಿಯಲ್ಲಿ ಬಳಸಿಕೊಳ್ಳಲು ದಾರಿ ಹುಡುಕಿರಿ. ಇಂತಹ ಕುಟುಂಬಗಳನ್ನು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಹಾಗೂ ಜೀವನಾಧಾರವನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವ ಸರಕಾರೇತರ ಸಂಸ್ಥೆಗಳಿಗೆ, ಗ್ರಾಮಪಂಚಾಯತ್ ಹಾಗೂ ಸರಕಾರಿ ಇಲಾಖೆಗಳ ಸಂಪರ್ಕಕ್ಕೆ ತನ್ನಿರಿ.





ix. ಅಂಗನವಾಡಿ ಗೋಡೆಗಳಿಗೆ ಆಕರ್ಷಕ ಬಣ್ಣ ಮಾಡಿ, ಬಣ್ಣ ಬಣ್ಣದ ಹಾಗೂ ಸುಂದರವಾದ ಚಾರ್ಟುಗಳನ್ನು, ಪೋಷ್ಟರ್‌ಗಳನ್ನು, ನಕಾಷೆಗಳನ್ನು ಪ್ರದರ್ಶಿಸುವ ಮೂಲಕ, ಅಂಗನವಾಡಿ ಆಟದ ಬಯಲನ್ನು ಚೊಕ್ಕವಾಡಿ ಇಡುವುದರ ಮೂಲಕ ಹಾಗೂ ಮಕ್ಕಳಿಗೆ ಆಟದ ಸಾಮಾನುಗಳನ್ನು ಉಪಯೋಗಿಸುವುದರ ಮೂಲಕ ಅಂಗನವಾಡಿಯನ್ನು ಆಕರ್ಷಕವಾಗಿ ಇಟ್ಟುಕೊಳ್ಳಿರಿ. ಮಕ್ಕಳಿಗೆ ಮತ್ತು ಅವರ ಮಾತೆಯಂದಿರಿಗೆ ಆಸಕ್ತಿದಾಯಕವಾದ ಕಲಿಕೆಯ ವಾತಾವರಣವನ್ನು ಒದಗಿಸಿರಿ.

x. ಶಾಲೆಗೆ ಸೇರಲು ಅಗತ್ಯವಾದ ಚಟುವಟಿಕೆಗಳನ್ನು ಆಯೋಜಿಸಿರಿ. (ರೋಲ್‌ಪ್ಲೇ. ಆಟಗಳು. ಆಸಕ್ತಿದಾಯದಕವಾದ ಕಲಿಕಾ ಸಾಮಗ್ರಿಗಳು)

- ಮಗು ಮನೆಯಿಂದ ಹೊರಗೆ ಇರಲು ಕಲಿಯುತ್ತದೆ. ಒಂದೇ ಜಾಗದಲ್ಲಿ ಸ್ವಲ್ಪ ಹೊತ್ತು ಕುಳಿತು ಕೊಟ್ಟ ಕೆಲಸವನ್ನು ಮುಗಿಸಲು ಕಲಿಯುತ್ತದೆ. ಇತರ ಮಕ್ಕಳೊಂದಿಗೆ ಸೇರಿ ಆಟ ಆಡಲು ಹಾಗೂ ತನ್ನ ವೈಯಕ್ತಿಕ ಶುಚಿತ್ವ ಕಾಪಾಡಲು ಕಲಿಯುವುದು. (ಶೌಚಾಲಯವನ್ನು ಸರಿಯಾಗಿ ಉಪಯೋಗಿಸುವುದು, ತಿನ್ನುವ ಮೊದಲು ಕೈ ತೊಳೆದುಕೊಳ್ಳುವುದು ಇತ್ಯಾದಿ)
- ಮಗು ಕಲಿಕೆಯನ್ನು ಸ್ಥಿರಿಗೊಳಿಸಿಕೊಳ್ಳುತ್ತದೆ: ಭಾಷಾ ಕೌಶಲ್ಯಗಳು (ಗ್ರಹಿಸುವಿಕೆ, ಮಾತನಾಡುವುದು, ಅರ್ಥಮಾಡಿಕೊಳ್ಳುವುದು) ಕಣ್ಣು ಮತ್ತು ಕೈಯ ಸಂಪರ್ಕ... ಇತ್ಯಾದಿಗಳು

xi. ಮಕ್ಕಳು ನಿರಂತರವಾಗಿ ಅಂಗನವಾಡಿಗೆ ಬರಲು ಹಾಗೂ ಅವರು 5 ವರ್ಷ 10 ತಿಂಗಳು ಆದ ನಂತರ ಶಾಲೆಗೆ ಸೇರುವಂತೆ ಮಾಡಲು ಪೋಷಕರೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು ಅವಶ್ಯಕ.

xii. ಬಾಲಕಾರ್ಮಿಕತೆಯಿಂದ ಆಗುವ ನಷ್ಟಗಳು ಹಾಗೂ ಶಾಲಾ ಶಿಕ್ಷಣದಿಂದಾಗುವ ಅನುಕೂಲತೆಗಳ ಬಗ್ಗೆ ಪೋಷಕರಿಗೆ ತಿಳಿಸಿ ಹೇಳುವುದು ಅವಶ್ಯ.


xiii. ಮಕ್ಕಳ ತಾಯಂದಿರ ಸಮಿತಿ ರಚಿಸಿ, ಅವರು ಆಗಾಗ ಸಭೆ ಸೇರುವಂತೆ ನೋಡಿಕೊಳ್ಳಬೇಕು. ಈ ಸಭೆಯಲ್ಲಿ ಅವರ ಮಕ್ಕಳ ಸಾಧನೆಯನ್ನು ತಿಳಿಸಬೇಕು ಹಾಗೂ ಶಾಲೆ ಮತ್ತು ಅಂಗನವಾಡಿಯಿಂದ ಆಗುವ ಲಾಭಗಳನ್ನು ಸಹ ಅವರಿಗೆ ಮನದಟ್ಟು ಮಾಡಬೇಕು. ಅವರಿಗೆ ತಮ್ಮ ಮಕ್ಕಳನ್ನು ನಿರಂತರವಾಗಿ ಅಂಗನವಾಡಿ ಮತ್ತು ಶಾಲೆಗೆ ಕಳುಹಿಸಲು ಒತ್ತಾಯ ತರಬೇಕು.

xiv. ಅಂಗನವಾಡಿಗೆ ಸರಿಯಾಗಿ ಬರದೆ ಇರುವ ಮಕ್ಕಳು ಹಾಗೂ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಕುಟುಂಬಗಳಿಗೆ ಮನೆ ಭೇಟಿ ಕೊಡುವುದು ಅತ್ಯಂತ ಅವಶ್ಯಕ. ಇಂತಹ ಕುಟುಂಬಗಳಿಗೆ ಹೆಚ್ಚು ಹೆಚ್ಚು ಭೇಟಿ ಕೊಡಬೇಕು.

ಅಂತಹ ಕುಟುಂಬಗಳು ಯಾವುವೆಂದರೆ

- ಪ.ಜಾತಿ/ ಪ. ಪಂಗಡದ ಕುಟುಂಬಗಳು
- ಸರಿಯಾದ ಆದಾಯ ಇಲ್ಲದ ಕುಟುಂಬಗಳು
- ಅಂಗನವಾಡಿಗೆ/ ಶಾಲೆಗೆ ಸರಿಯಾಗಿ ಹಾಜರಾಗದೆ ಇರುವ ಮಕ್ಕಳ ಕುಟುಂಬಗಳು
- ಏಕ ಪೋಷಕರ ಕುಟುಂಬ
- ಎರಡಕ್ಕಿಂತ ಹೆಚ್ಚು ಮಕ್ಕಳು ಇರುವ ಕುಟುಂಬಗಳು
- ಆರೋಗ್ಯದ ತೊಂದರೆ ಇರುವ ಹಾಗೂ ಕುಡಿತದ ಚಟ ಇರುವ ಕುಟುಂಬಗಳು





xv. ಅಂಗನವಾಡಿ ಶಿಕ್ಷಕಿಯರು ಶಾಲಾ ಶಿಕ್ಷಕಿಯರು, ಎಸ್.ಡಿ.ಎಂ.ಸಿ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಹತ್ತಿರದ ಸಂಪರ್ಕ ಇಟ್ಟುಕೊಳ್ಳಬೇಕು. ಬಾಲಕಾರ್ಮಿಕತೆಯನ್ನು ತಡೆಯಲು ಇವರ ಸಹಾಯ/ ಸಹಕಾರ ತೆಗೆದುಕೊಳ್ಳಬೇಕು.

xvi. ಅಂಗನವಾಡಿ ಶಿಕ್ಷಕಿಯರು ಕುಟುಂಬಗಳ ಜೊತೆ ಹಾಗೂ ಸಮುದಾಯದ ಜೊತೆಯಲ್ಲಿ ನಿಕಟವಾದ ಸಂಬಂಧ ಇಟ್ಟುಕೊಂಡು ಕೆಲಸ ಮಾಡಬೇಕು.

xvii. ಕುಟುಂಬಗಳ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಅವಶ್ಯಕತೆಗಳನ್ನು ಗುರುತಿಸಿ ಅವುಗಳನ್ನು ತಮ್ಮ ಸಂಪರ್ಕ ಜಾಲದ ಸಹಾಯದಿಂದ ಒದಗಿಸಲು ಅಥವಾ ಪರಿಹರಿಸಲು ಪ್ರಯತ್ನಿಸಬೇಕು.

xviii. ಬಾಲಕಾರ್ಮಿಕತೆಯನ್ನು ನಿವಾರಿಸಲು ಹಾಗೂ ಬಾಲಕಾರ್ಮಿಕತೆಯ ಬಗ್ಗೆ ಇರುವ ತಪ್ಪಿನ ನಂಬಿಕೆಗಳನ್ನು ದೂರ ಮಾಡಲು, ಪೋಷಕರನ್ನು, ಸಮುದಾಯದವರನ್ನು ಹೆಚ್ಚಿನ ಮಾಹಿತಿ ಕೊಟ್ಟು ಸೂಕ್ಷ್ಮತೆಗೊಳಿಸಬೇಕು.

### 2.15.3 ವಿಧಾನಗಳು

- ಉಪನ್ಯಾಸ
- ಮುಕ್ತ ಚರ್ಚೆ


### 2.15.4 ಪರಿಕರಗಳು

- ಕರಿಹಲಗೆ
- ಸೀಮೆಸುಣ್ಣ

### 2.15.5 ಪ್ರಕ್ರಿಯೆ

- ಸಂಪನ್ಮೂಲ ವ್ಯಕ್ತಿಗಳು ಅವಧಿಯ ವಿಷಯವನ್ನು ಕಿರು ಉಪನ್ಯಾಸದ ಮೂಲಕ ಮಂಡಿಸುವುದು.
- ಸಂಪನ್ಮೂಲ ವ್ಯಕ್ತಿಗಳು ಈ ಕೆಳಗಿನ ಪ್ರಶ್ನೆಗಳನ್ನು ಕೇಳುವುದು.
  1. ನಿಮಗೆ ಬಾಲಕಾರ್ಮಿಕತೆಯನ್ನು ಗುರುತಿಸುವಲ್ಲಿ ಏನಾದರೂ ಪಾತ್ರವಿದೆಯೇ?
  2. ಇದ್ದರೆ ನೀವೇನು ಮಾಡುವಿರಿ?
- ಸಂಪನ್ಮೂಲ ವ್ಯಕ್ತಿಗಳು ಚರ್ಚೆಯಲ್ಲಿ ಎಲ್ಲಾ ಶಿಬಿರಾರ್ಥಿಗಳು ಭಾಗವಹಿಸಿ ಅವರ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ತಿಳಿಸಬೇಕು.
- ಪ್ರತಿಯೊಬ್ಬ ಶಿಬಿರಾರ್ಥಿ ಕನಿಷ್ಠ ಒಂದು ಚಟುವಟಿಕೆಯನ್ನು ಸೂಚಿಸಬೇಕು.





- ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳು ಸೂಚಿಸಿದ ಸರಿಯಾದ ಚಟುವಟಿಕೆಗಳನ್ನು ಕರಿಹಲಗೆ ಮೇಲೆ ಪಟ್ಟಿ ಮಾಡಬೇಕು.
- ಕೊನೆಯಲ್ಲಿ ನಾವೇನು ಮಾಡಬಹುದು ಎಂಬುದನ್ನು ಪುನರ್‌ಮನನ ಮಾಡಬೇಕು.

### 2.15.6 ಚಟುವಟಿಕೆ


"ನಮ್ಮನ್ನು ಅರ್ಥಮಾಡಿಕೊಳ್ಳುವುದು" ನಮೂನೆಯನ್ನು ಶಿಬಿರಾರ್ಥಿಗಳಿಗೆ ಹಂಚುವುದು. ಪ್ರತಿಯೊಬ್ಬ ಶಿಬಿರಾರ್ಥಿಗಳು ನಮೂನೆಯನ್ನು ಭರ್ತಿಮಾಡಬೇಕು. ತರಬೇತುದಾರರು ನಮೂನೆಯಲ್ಲಿನ ಒಂದೊಂದೇ ವಾಕ್ಯವನ್ನು ಗಟ್ಟಿಯಾಗಿ ಓದಿ ಹೇಳಿ ನಂತರ ಶಿಬಿರಾರ್ಥಿಗಳಿಗೆ ಅದನ್ನು ಭರ್ತಿಮಾಡಲು ಸ್ವಲ್ಪ ಸಮಯ ಕೊಡಬೇಕು.

**2.9.6.1 'ನಮ್ಮನ್ನು ಅರ್ಥಮಾಡಿಕೊಳ್ಳುವುದು'**

**2.9.6.1.1 ಈ ಕೆಳಗಿನ ವಾಕ್ಯಗಳನ್ನು ಭರ್ತಿಮಾಡಿರಿ**

1. ನಾನು ಬಾಲಕಾರ್ಮಿಕರ ಬಗ್ಗೆ ..........................................................
2. ನಾನು ಬಾಲಕಾರ್ಮಿಕರ ಸಮಸ್ಯೆಯ ಬಗ್ಗೆ ..........................................................
3. ನಾನು ಬಾಲಕಾರ್ಮಿಕತೆಯ ..........................................................
4. ನಾನು ಬಾಲಕಾರ್ಮಿಕತೆ .......................................................... ಎಂದು ನಂಬಿದ್ದೇನೆ.
5. ನಾನು ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ..........................................................
6. ಬಾಲಕಾರ್ಮಿಕತೆ .......................................................... ಎಂದು ನಂಬಿದ್ದೇನೆ
7. ಬಾಲಕಾರ್ಮಿಕತೆಯನ್ನು .......................................................... ಎಂಬುದನ್ನು ನಂಬಿದ್ದೇನೆ
8. ನನ್ನ ಹತ್ತಿರ ಬಾಲಕಾರ್ಮಿಕತೆಯನ್ನು ನಿವಾರಿಸಲು ಅವಶ್ಯಕವಾದ .......................................................... ಇದೆ
9. ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ಇರುವ ನನ್ನ ಶಕ್ತಿ ..........................................................





2.9.6.2 ತರಬೇತುದಾರರು ಶಿಬಿರಾರ್ಥಿಗಳಿಗೆ ಎರಡು ಕ್ರಿಯಾಯೋಜನೆ ಮತ್ತು ಭಾಧ್ಯತೆಯ ಕಾರ್ಡುಗಳನ್ನು ಹಂಚಿ, ಅದನ್ನು ಭರ್ತಿಮಾಡಲು ತಿಳಿಸುವರು. ಒಂದು ಕಾರ್ಡನ್ನು ಶಿಬಿರಾರ್ಥಿಗಳು ತಮ್ಮ ಹತ್ತಿರ ಇಟ್ಟುಕೊಳ್ಳಬೇಕು. ಉಳಿದ ಇನ್ನೊಂದು ಕಾರ್ಡನ್ನು ತರಬೇತುದಾರರಿಗೆ ಹಸ್ತಾಂತರಿಸಬೇಕು.

ಶಿಬಿರಾರ್ಥಿಗಳಿಗೆ ನಿರ್ದಿಷ್ಟವಾದ ಅಂಶಗಳನ್ನು ಮಾತ್ರ ನಮೂದಿಸಲು ಪ್ರೋತ್ಸಾಹಿಸಬೇಕು. ಸಾಮಾನ್ಯವಾದ ವಿಚಾರಗಳನ್ನು ಹಾಗು ಚಟುವಟಿಕೆಗಳನು ನಮೂದಿಸುವ ಅವಶ್ಯಕತೆ ಇಲ್ಲ. ಉದಾ: "ನಾನು ಬಾಲಕಾರ್ಮಿಕತೆಯ ನಿರ್ಮೂಲನದ ಬಗ್ಗೆ ಕೆಲಸ ಮಾಡುತ್ತೇನೆ" ಇದು ಯಾವ ಅರ್ಥವನ್ನು ಕೊಡುವುದಿಲ್ಲ ಹಾಗೂ ಯಾವುದೇ ಬದ್ಧತೆಯನ್ನು ತೋರಿಸುವುದಿಲ್ಲ. ಶಿಬಿರಾರ್ಥಿಗಳ ಹತ್ತಿರ ಮುಂದೆ ಸೂಚಿಸಿದಂತೆ ನಿರ್ದಿಷ್ಟವಾಗಿ ಬರೆಯಲು ತಿಳಿಸಿರಿ. "ನಾನು ಹತ್ತು ಬಾಲಕಾರ್ಮಿಕರ ಪೋಷಕರನ್ನು ಭೇಟಿಮಾಡಿ ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸುತ್ತೇನೆ" "ನಾನು ಎಲ್ಲಿಯಾದರೂ ಬಾಲಕಾರ್ಮಿಕತೆ ಕಂಡು ಬಂದರೆ ಮಾಲೀಕರೊಂದಿಗೆ ಮಾತನಾಡಿ ಅವರಿಗೆ ಬಾಲಕಾರ್ಮಿಕತೆಯ ಬಗ್ಗೆ ಇರುವ ಕಾನೂನನ್ನು ತಿಳಿಸಿ ಬಾಲಕಾರ್ಮಿಕರನ್ನು ಬಿಡುಗಡೆ ಮಾಡಿಸುತ್ತೇನೆ" "ನಿಷೇಧಿಸಲ್ಪಟ್ಟ ಬಾಲಕಾರ್ಮಿಕತೆ ಕಂಡುಬಂದರೆ ನಾನು ಕಾನೂನನ್ನು ಅನುಷ್ಠಾನಗೊಳಿಸಿ ಮಾಲೀಕರ ವಿರುದ್ಧ ಸಕ್ಷಮ ಪ್ರಾಧಿಕಾರದಲ್ಲಿ ದಾವೆಯನ್ನು ಹೂಡುತ್ತೇನೆ" ಇತ್ಯಾದಿಗಳು

ಕ್ರಿಯಾ ಯೋಜನೆ ಮತ್ತು ಭಾಧ್ಯತೆಯ ಕಾರ್ಡ್

ನಾನು ಬಾಲಕಾರ್ಮಿಕತೆಯ ನಿರ್ಮೂಲನೆಯ ಬಗ್ಗೆ ಈ ಕೆಳಗಿನ ಎರಡು ಚಟುವಟಿಕೆಯನ್ನು ನಡೆಸಲು ಭಾಧ್ಯನಾಗಿದ್ದೇನೆ.

1) ....................................................................................................

2) ....................................................................................................

ಹೆಸರು .......................................... ಹುದ್ದೆ ..........................................

ವಿಳಾಸ .......................................... ಸಂಪರ್ಕ ಸಂಖ್ಯೆ ......................................


..........................................

..........................................

## 2.15.7 ನಿರೀಕ್ಷಿತ ಫಲಿತಾಂಶಗಳು



- ಶಿಬಿರಾರ್ಥಿಗಳು, ಬಾಲಕಾರ್ಮಿಕತೆ ನಿವಾರಣೆ ಬಗ್ಗೆ ತಾವು ಸಾಕಷ್ಟು ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು ಎಂಬುದನ್ನು ಮನಗಾಣುತ್ತಾರೆ.
- ಶಿಬಿರಾರ್ಥಿಗಳು ಬಾಲಕಾರ್ಮಿಕತೆಯ ಬಗ್ಗೆ ತಮ್ಮ ಮನೋಭಾವನೆಯನ್ನು ಮೌಲ್ಯಮಾಪನ ಮಾಡಿಕೊಳ್ಳುವರು.



## 2.16 ಮೌಲ್ಯಮಾಪನ

ಸಮಯ: 30 ನಿಮಿಷಗಳು

### 2.16.1 ಮೌಲ್ಯಮಾಪನ

- ಸಂಪನ್ಮೂಲ ವ್ಯಕ್ತಿಗಳು ಶಿಬಿರಾರ್ಥಿಗಳಿಗೆ ಮುದ್ರಿತ ಮೌಲ್ಯಮಾಪನ ನಮೂನೆಗಳನ್ನು ವಿತರಿಸಬೇಕು.
- ಶಿಬಿರಾರ್ಥಿಗಳಿಗೆ ಮೌಲ್ಯಮಾಪನ ಮಾಡಲು 5–10 ನಿಮಿಷಗಳ ಕಾಲಾವಧಿಯನ್ನು ನೀಡಬೇಕು.
- ತರಬೇತಿಯ ಕೊನೆಯಲ್ಲಿ ಔಪಚಾರಿಕ ಅಥವಾ ಅನೌಪಚಾರಿಕ ಪದ್ಧತಿಯನ್ನು ಉಪಯೋಗಿಸಿ ಮೌಲ್ಯಮಾಪನ ಮಾಡಿರಿ.


  (ಎ) 2–3 ಶಿಬಿರಾರ್ಥಿಗಳ ಹತ್ತಿರ ತರಬೇತಿಯ ಬಗ್ಗೆ ಅನುಭವ ಹಂಚಿಕೊಳ್ಳಲು ತಿಳಿಸಬಹುದು ಅಥವಾ ಕೆಲವು ಪ್ರಶ್ನೆಗಳನ್ನು ಇಡೀ ಗುಂಪಿಗೆ ಹಾಕಿ ಅವರ ಅನುಭವವನ್ನು ಪಡೆದಿಕೊಳ್ಳಬಹುದು.

  (ಬಿ) ಮೊದಲೇ ತಯಾರಿಸಿದ ಪ್ರಶ್ನಾವಳಿಯ ಹಾಳೆಗಳನ್ನು ಕೊಟ್ಟು ಅವರ ಪ್ರತಿಕ್ರಿಯೆಗಳನ್ನು ಪಡೆಯಬಹುದು.

### 2.10.2 ಮುಕ್ತಾಯ

ಮುಕ್ತಾಯ ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳು ಸಾಮಾಜಿಕ ಒಪ್ಪಂದ ಪತ್ರಕ್ಕೆ ಸಹಿ ಹಾಕಬೇಕು. ಒಪ್ಪಂದ ಪತ್ರದ ನಮೂನೆಯನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಕೊನೆಯಲ್ಲಿ ಒಪ್ಪಂದವನ್ನು ಓದಿ ಎಲ್ಲರೂ ಶಪಥ ತೆಗೆದುಕೊಳ್ಳಬೇಕು.





## 2.16.2.1 ಮೌಲ್ಯಮಾಪನ ನಮೂನೆ


| |
|---|
| ಶಿಬಿರಾರ್ಥಿಗಳ ಹೆಸರು |
| ಹುದ್ದೆ ಮತ್ತು ವಿಳಾಸ |

ತರಬೇತಿ ಮೌಲ್ಯಮಾಪನ–ದಯವಿಟ್ಟು ನಿಮಗೆ ಸರಿ ಕಾಣಿಸಿದ ಅಂಶಗಳನ್ನು ಸೂಚಿಸಿರಿ: 4=ಅತೀ ಉನ್ನತ, 3=ಉನ್ನತ, 2=ತೃಪ್ತಿಕರ, 1=ಸಾಮಾನ್ಯ

**1. ಕಾರ್ಯಾಗಾರದ ಆಡಳಿತ ಮತ್ತು ವ್ಯವಸ್ಥೆ**

| ಸಂಖ್ಯೆ | ವಿವರ | 4 | 3 | 2 | 1 |
|---|---|---|---|---|---|
| 1. | ಕಾರ್ಯಾಗಾರವು ತನ್ನ ಉದ್ದೇಶವನ್ನು ಈಡೇರಿಸಿದೆಯೇ? | | | | |
| 2. | ಕಾರ್ಯಾಗಾರದ ನಿರ್ದೇಶಕರ ಪಾತ್ರ | | | | |
| 3. | [illegible] ಉಪಯೋಗಕ್ಕೆ ಬರುವುದು | | | | |
| 4. | ನೀವು ಮುಂದೆ ಕೈಗೆತ್ತಿಕೊಳ್ಳಬಹುದಾದ ಕೆಲಸಗಳಿಗೆ ಯಾವ ರೀತಿಯಲ್ಲಿ ಸಹಾಯವಾಗುವುದು | | | | |
| 5. | ಕಾರ್ಯಾಗಾರದ ವಿಧಾನ ಸಮರ್ಪಕವಾಗಿದೆಯೇ? | | | | |
| 6. | ಇತರ ಶಿಬಿರಾರ್ಥಿಗಳೊಂದಿಗಿನ ನಿಮ್ಮ ಚರ್ಚೆಯಿಂದ ಲಾಭವಾಗಿದೆಯೇ? | | | | |
| 7. | ಕಾರ್ಯಾಗಾರದ ಪರಿಕರಗಳು ಕಾರ್ಯಾಗಾರಕ್ಕೆ ಸಮರ್ಪಕವಾಗಿದೆಯೇ? | | | | |
| 8. | ಉದ್ದೇಶಗಳಿಗೆ ಅನುಗುಣವಾಗಿ ವಿಷಯಗಳನ್ನು ಅಳವಡಿಸಲಾಗಿದೆಯೇ? | | | | |





**2. ನಿಮ್ಮ ವಿವರವಾದ ಅನಿಸಿಕೆಗಳನ್ನು ಸೂಚಿಸಿರಿ.**

| ಯೋಚನೆ ಮಾಡಬೇಕಾದ ವಿಷಯಗಳು | ಸಲಹೆಗಳು ಮತ್ತು ಸೂಚನೆಗಳು |
|---|---|
| ಮೂಲಭೂತ ಸೌಕರ್ಯಗಳು, ಕ್ಯಾಂಪಸ್, ಸೌಲಭ್ಯಗಳು, ವಸತಿಗೃಹ, ಊಟದ ವ್ಯವಸ್ಥೆ ಇತ್ಯಾದಿ | |
| ಕಾರ್ಯಾಗಾರದ ಸೌಲಭ್ಯಗಳು, ಗ್ರಂಥಭಂಡಾರ, ಕಂಪ್ಯೂಟರ್ ಕೇಂದ್ರ, ತರಗತಿ ಕೊಠಡಿ, ದೃಶ್ಯ – ಶ್ರವಣ ಸಾಮಗ್ರಿಗಳು, ಕಾರ್ಯಾಗಾರದ ಪತ್ರಗಳು | |
| ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳು, ನಿರ್ದೇಶಕರು, ಗುಂಪು ಚರ್ಚೆ, ಸೆಮಿನಾರ್ ಇತ್ಯಾದಿಗಳು | |
| ಇತರ ಶಿಬಿರಾರ್ಥಿಗಳೊಂದಿಗಿನ ಚರ್ಚೆ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚೆ, ಆಡಳಿತ ಮತ್ತು ಗ್ರಂಥ ಭಂಡಾರ ಸಿಬ್ಬಂದಿಗಳೊಂದಿಗಿನ ಚರ್ಚೆಗೆ ಅವಕಾಶಗಳು | |


**3. ನಿಮಗೆ ಯಾವ ಮೂರು ಚಟುವಟಿಕೆಗಳು ಹೆಚ್ಚು ಉಪಕಾರಿಯಾದವು**

| ಕ್ರ.ಸಂ | ತರಬೇತಿ ಚಟುವಟಿಕೆಯ ಶೀರ್ಷಿಕೆ | ಷರಾ |
|---|---|---|
| 1. | | |
| 2. | | |
| 3. | | |

**4. ನಿಮಗೆ ಯಾವ ಮೂರು ಚಟುವಟಿಕೆಗಳು ಕಡಿಮೆ ಉಪಕಾರಿಯಾದವು**


| ಕ್ರ.ಸಂ | ತರಬೇತಿ ಚಟುವಟಿಕೆಯ ಶೀರ್ಷಿಕೆ | ಷರಾ |
|---|---|---|
| 1. | | |
| 2. | | |
| 3. | | |






**5. ಕಾರ್ಯಾಗಾರದ ನಂತರ ಕೆಲಸದ ಕ್ಷೇತ್ರದ ಅಭಿವೃದ್ಧಿಗೆ ಅವಕಾಶಗಳು**

| ಕ್ರ.ಸಂ | ಪ್ರಶ್ನೆಗಳ ವಿವರಣೆ | ಹೌದು/ಇಲ್ಲ |
|---|---|---|
| ಎ. | ನಿಮ್ಮ ಕೆಲಸದ ಪ್ರದೇಶದ ಅಭಿವೃದ್ಧಿಯ ಬಗ್ಗೆ ಯಾವುದಾದರೂ ಯೋಜನೆ ಬಂತೆ? | |
| ಬಿ | ಹೌದು ಎಂದಾದರೆ ಅದರ ಬಗ್ಗೆ ಸಂಕ್ಷಿಪ್ತ ವಿವರಣೆ | |
| | ಜ್ಞಾನ | |
| | ಕೌಶಲ್ಯ | |
| | ಮನೋಭಾವ | |
| ಸಿ | ಕಾರ್ಯಾಗಾರದ ಬಗ್ಗೆ ಇನ್ನಾವುದಾದರೂ ಸಲಹೆ | |



**6. ಈ ಕೆಳಗಿನ ಸೌಲಭ್ಯಗಳ ಬಗ್ಗೆ ನಿಮಗೆ ಯಾವ ರೀತಿಯಲ್ಲಿ ತೃಪ್ತಿ ಆಗಿದೆ**

| ಸಂಖ್ಯೆ | ವಿವರ | 4 | 3 | 2 | 1 |
|---|---|---|---|---|---|
| 1. | ವಸತಿಗೃಹ ಮತ್ತು ಕೊಠಡಿ ಸೇವೆ | | | | |
| 2. | ಊಟೋಪಹಾರ ಮತ್ತು ಇತರ ಸೌಲಭ್ಯಗಳು | | | | |
| 3. | ಆಹಾರದ ಗುಣಮಟ್ಟ ಸೇವೆ | | | | |
| 4. | [illegible] | | | | |



### 2.16.2.2 ಸಾಮಾಜಿಕ ಒಪ್ಪಂದ

ಈ ಕೆಳಗೆ ಸಹಿ ಮಾಡಿದ, ಬಾಲಕಾರ್ಮಿಕ ಪದ್ಧತಿ ನಿವಾರಣೆಯ ಬಗ್ಗೆ ________________ ರಲ್ಲಿ ________________ ದಿನಾಂಕದಂದು ನಡೆದ ತರಬೇತಿಯ ಶಿಬಿರಾರ್ಥಿಯಾದ ನಾನು, ನಮ್ಮ ಸಮಾಜದೊಂದಿಗೆ ಹಾಗೂ ರಾಷ್ಟ್ರದೊಂದಿಗೆ ಈ ಕೆಳಗಿನ ಷರತ್ತುಗಳ ಮೇಲೆ ಒಂದು ಸಾಮಾಜಿಕ ಒಪ್ಪಂದ ಮಾಡಿಕೊಂಡಿರುತ್ತೇನೆ.

- ನನ್ನ ಪರಿಸರದಲ್ಲಿ ಬಾಲಕಾರ್ಮಿಕತೆ ಸಂಪೂರ್ಣವಾಗಿ ನಿವಾರಣೆ ಆಗುವ ತನಕ ನಾನು ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ನಿರಂತರವಾಗಿ ಕೆಲಸ ಮಾಡುತ್ತೇನೆ.
- ನಾನು ನನ್ನ ಪ್ರದೇಶದಲ್ಲಿನ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಿ ಬಾಲಕಾರ್ಮಿಕತೆ ಪುನಃ ಹುಟ್ಟಿಕೊಳ್ಳದಂತೆ ನೋಡಿಕೊಳ್ಳುತ್ತೇನೆ.
- ಯಾವುದೇ ರೂಪದ ಬಾಲಕಾರ್ಮಿಕತೆಯನ್ನು ನಾನು ನಿಷೇಧಿಸುತ್ತೇನೆ
- ಸರಕಾರ, ಸ್ಥಳೀಯ ಸಂಸ್ಥೆಗಳು, ಹಾಗೂ ಸರಕಾರೇತರ ಸಂಸ್ಥೆಗಳು ಈ ಬಗ್ಗೆ ಹಮ್ಮಿಕೊಂಡ ಚಟುವಟಿಕೆಗಳಿಗೆ ಸಹಕಾರ ಕೊಡುತ್ತೇನೆ.

ಈ ಸಾಮಾಜಿಕ ಒಪ್ಪಂದವನ್ನು ದಿನಾಂಕ ________________ ರಂದು ಶ್ರೀ ________________________ ಅವರ ಸಮಕ್ಷಮ ಸಹಿ ಮಾಡಿರುತ್ತೇನೆ.


ತರಬೇತುದಾರರ ಸಹಿ
(ಸಮುದಾಯ ಮತ್ತು
ರಾಷ್ಟ್ರದ ಪರವಾಗಿ)

ಶಿಬಿರಾರ್ಥಿಗಳ ಸಹಿ
ದಿನಾಂಕ
ವಿಳಾಸ:________________
________________________
________________________
________________________



# ಭಾಗ – 3





## 3.1 ಬಾಲಕಾರ್ಮಿಕತೆಯ ಕಾರಣಗಳು

**3.1.1 ಬೇಡಿಕೆಯ ಕಾರಣಗಳು:** ಬೇಡಿಕೆಯ ಕಾರಣಗಳು ಮಾಲಕರಿಗೆ ಸಂಬಂಧಪಟ್ಟಿದ್ದು, ಅವರು ದೊಡ್ಡವರನ್ನು ಬಿಟ್ಟು ಮಕ್ಕಳನ್ನು ಕೆಲಸಕ್ಕೆ ತೊಡಗಿಸಿಕೊಳ್ಳುವುದಕ್ಕೆ ಇರುವ ಬೇಡಿಕೆಯ ಕಾರಣಗಳು.

3.1.1.1 ಮಾಲಕರಲ್ಲಿರುವ ಆಸೆಬುರುಕತನ: ಮಕ್ಕಳನ್ನು ಹೆಚ್ಚು ಹೊತ್ತು ಯಾವುದೇ ಬಿಡುವು ಕೊಡದೆ ದುಡಿಸಿಕೊಳ್ಳಬಹುದೆಂಬ ಆಸೆ ಹಾಗೂ ಮಕ್ಕಳು ಯಾವುದೇ ಸಂಘಟನೆ ಆಗುವುದಿಲ್ಲ ಮತ್ತು ಅವರು ಕೆಲಸಗಳನ್ನು ಚುರುಕಾಗಿ ಮಾಡುತ್ತಾರೆ ಎಂಬ ನಂಬಿಕೆ. ಬಾಲಕಾರ್ಮಿಕರು ಟೀ ಕುಡಿಯಲು ಅಥವಾ ಬೀಡಿ ಸೇದಲು ಸಮಯವನ್ನು ವ್ಯಯ ಮಾಡುವುದಿಲ್ಲ. ಅವರು ನಿರಂತರವಾಗಿ ಕೆಲಸ ಮಾಡುತ್ತಾರೆ. ಅದರಿಂದ ನಾವು ಹೆಚ್ಚು ಸಂಪಾದಿಸಬಹುದು ಎಂಬ ದುರಾಸೆ.

ಪೂರೈಕೆ ಅಂಶಗಳಷ್ಟೇ ಮುಖ್ಯವಾದ ಅಥವಾ ಸುಸಂಬದ್ಧವಾದ ಬಾಲಕಾರ್ಮಿಕತೆಗೆ ಇರುವ ಬೇಡಿಕೆ ಅಂಶಗಳನ್ನು ನಾವು ಹೆಚ್ಚಾಗಿ ಮರೆತುಬಿಡುತ್ತೇವೆ ಅಥವಾ ಗಮನಿಸದೇ ಇರುತ್ತೇವೆ. ಮಕ್ಕಳು ಏಕೆ ಬೇಡಿಕೆಯಲ್ಲಿದ್ದಾರೆ ಎಂಬುದು ಅರ್ಥಮಾಡಿಕೊಳ್ಳಬೇಕಾದ ನಿರ್ಣಾಯಕ ಕಾರಣವಾಗಿದೆ. "ಚುರುಕಿನ ಬೆರಳುಗಳು" ಮತ್ತು "ಕಡಿಮೆ ಉತ್ಪಾದನಾ ವೆಚ್ಚ" ಈ ವಾದಗಳು ಸಾಮಾನ್ಯವಾಗಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳಲು ಇರುವ ಮುಂದುವರಿದಿರುವ ವಿವರಣೆಗಳು. ಆದರೆ ಅಂತರರಾಷ್ಟ್ರೀಯಕಾರ್ಮಿಕ ಸಂಸ್ಥೆ ನಡೆಸಿದ ಕ್ಷೇತ್ರ ಸಂಶೋಧನೆಯು, "ಚುರುಕಿನ ಬೆರಳುಗಳ" ವಾದವನ್ನು ಸಂಪೂರ್ಣವಾಗಿ ತಪ್ಪುದಾರಿಗೆಳೆಯುವ ವಾದವೆಂದು ತಿಳಿಸಿದೆ.

ಮಾಲೀಕರು ಈ ಕೆಳಗಿನ ಕಾರಣಗಳಿಗಾಗಿ ಬಾಲಕಾರ್ಮಿಕತೆಗೆ ಆದ್ಯತೆ ನೀಡುತ್ತಾರೆ.

ಮಕ್ಕಳು ಹೆಚ್ಚು ವಿನೀತರಾಗಿರುತ್ತಾರೆ ಮತ್ತು ಕಡಿಮೆ ತೊಂದರೆ ನೀಡುವವರಾಗಿರುತ್ತಾರೆ.

ಅವರು ತಮ್ಮ ಹಕ್ಕುಗಳ ಬಗ್ಗೆ ತೀರಾ ಕಡಿಮೆ ಅರಿವು ಇರುವವರಾಗಿರುತ್ತಾರೆ.

ಅವರು ಮಾಡಿದ್ದನ್ನೇ ಮಾಡುವ, ಏಕರೀತಿಯ ಕೆಲಸವನ್ನು ಸುಲಭವಾಗಿ ಒಪ್ಪಿಕೊಂಡು ಮಾಡುತ್ತಾರೆ.

ಅವರು ಹೆಚ್ಚು ನಂಬಿಕೆ ಅರ್ಹರಾಗಿರುತ್ತಾರೆ ಮತ್ತು ಮುಗ್ಧರಾಗಿರುತ್ತಾರಾದ ಕಾರಣ ಕಳ್ಳತನ ಮಾಡುವ ಸಂಭವ ಕಡಿಮೆ ಇರುತ್ತದೆ.

ಅವರು ಕಾರ್ಮಿಕ ಸಂಘಗಳನ್ನು ರಚಿಸುವ ಕಾರ್ಯಕ್ಕೆ ಕೈ ಹಾಕುವುದಿಲ್ಲ.

ಅವರ ದುಡಿಮೆಯ ವೆಚ್ಚ ಕಡಿಮೆ ಅನ್ನುವುದರ ಜೊತೆಗೆ ಕೆಲಸಕ್ಕೆ ಗೈರುಹಾಜರಾಗುವ ಸಂಭವವೂ ಕಡಿಮೆ


**3.1.1.2 ಕಡಿಮೆ ಸಂಬಳ:** ಮಕ್ಕಳು ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ. ಕಡಿಮೆ ಉತ್ಪಾದನೆ ಇರುವ ಕೆಲಸಗಳಲ್ಲಿ ಮಕ್ಕಳನ್ನು ಉಪಯೋಗಿಸುತ್ತಾರೆ.

**3.1.1.3 ನಂಬಿಕೆಗಳು:** ಕೆಲವು ಕೆಲಸಗಳನ್ನು ಮಾಡಲು ಮಕ್ಕಳ ಸಣ್ಣ ಸಣ್ಣ ಬೆರಳುಗಳಿಗೆ ಮಾತ್ರ ಸಾಧ್ಯ ಎಂಬ ನಂಬಿಕೆ. ಉದಾ: ಜಮಖಾನ ತಯಾರಿ ಮತ್ತು ರೇಷ್ಮೆ ಉದ್ದಿಮೆಯಲ್ಲಿ ಹೆಚ್ಚಾಗಿ ಮಕ್ಕಳನ್ನೇ ತೊಡಗಿಸಿಕೊಳ್ಳುತ್ತಾರೆ. ಸಣ್ಣ ಹೆಣ್ಣು ಮಕ್ಕಳು ಮಾತ್ರ (ಅವರು ದೊಡ್ಡವರಾಗುವುದಕ್ಕಿಂತ ಮೊದಲು) ಹತ್ತಿಯನ್ನು ಕೀಳಲು ಸಾಧ್ಯ ಎಂಬ ನಂಬಿಕೆ.

**3.1.1.4 ಕಡಿಮೆ ವೆಚ್ಚ:** ಕಡಿಮೆ ವೆಚ್ಚದ ಹಾಗೂ ಕಡಿಮೆ ಉತ್ಪಾದನೆಯ ತಾಂತ್ರಿಕ ಪ್ರಕ್ರಿಯೆಗಳಲ್ಲಿ ಮಕ್ಕಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಾರೆ. ಉದಾ: ರೇಷ್ಮೆ ನೂಲು ನೇಯುವುದು.

**3.1.1.5 ಬಾಲಕಾರ್ಮಿಕ ಕಾನೂನುಗಳು ಸರಿಯಾಗಿ ಅನುಷ್ಠಾನವಾಗದೆ ಇರುವುದು:** ಬಾಲಕಾರ್ಮಿಕ





ಕಾನೂನನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದರಿಂದ ಬಾಲಕಾರ್ಮಿಕರನ್ನು ತೊಡಗಿಸಿಕೊಳ್ಳುವಿಕೆ ದಿನೇ ದಿನೇ ಹೆಚ್ಚಾಗುತ್ತಿದೆ. ಒಂದು ಕೇಸನ್ನು ಸರಿಯಾಗಿ ಅನುಷ್ಠಾನ ಮಾಡದಿದ್ದರೆ ಇದು ಅಸಂಖ್ಯಾತ ಮಾಲಕರಿಗೆ ಮಕ್ಕಳನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುತ್ತದೆ.

**3.1.2 ಪೂರೈಕೆಯ ಕಾರಣಗಳು:** ಕುಟುಂಬಗಳು ತಮ್ಮ ಮಕ್ಕಳನ್ನು ಬಾಲಕಾರ್ಮಿಕತೆಗೆ ತಳ್ಳುವಂತೆ ಮಾಡುವ ಶಕ್ತಿಗಳನ್ನು ಪೂರೈಕೆಯ ಕಾರಣಗಳು ಎಂದು ವರ್ಗೀಕರಿಸಲಾಗುತ್ತದೆ.

ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವಂತೆ ಒತ್ತಾಯಪಡಿಸುತ್ತಾರೆ. ಕಾರಣ ಮಾಲಕರು ಮಕ್ಕಳಿಗೆ ಆಹಾರ, ವಸತಿ ಇತ್ಯಾದಿಗಳನ್ನು ನೀಡಿ ಕಾಪಾಡುತ್ತಿದ್ದಾರೆ ಎನ್ನುವಂಥ ಸಾಮಾನ್ಯವಾಗಿ ಮಂಡಿಸಬಹುದಾದ ವಿವರಣೆಗಳು, ಮಾಲಕರಿಗೆ ಇದು ಅನುಕೂಲಕರವಾದ ವಾದವಾಗಿದೆ. ಆದರೆ ನಿಜವಾದ ಕಾರಣಗಳು ಸಂಪೂರ್ಣವಾಗಿ ಬೇರೆಯೇ ಆಗಿವೆ.

**3.1.2.1 ಬಡತನವೇ ಕಾರಣವೆಂಬ ವಾದ:** ಬಾಲಕಾರ್ಮಿಕತೆಯು ಬಹು ಜಟಿಲವಾದ ವಿಷಯವಾಗಿದ್ದು, ಸಮಾಜದ ಆರ್ಥಿಕ ಹಾಗೂ ಸಾಂಸ್ಕೃತಿಕ ವೈಲಕ್ಷಣಗಳಲ್ಲಿ ಇದು ಆಳವಾಗಿ ಬೇರೂರಿದೆ. ಬಾಲಕಾರ್ಮಿಕತೆಗೆ ಬಡತನವೇ ಮುಖ್ಯ ಕಾರಣವೆಂದು ನಂಬಿದ್ದಾಗ್ಯೂ, ಬಡತನವೇ ಅವಶ್ಯವಾಗಿ ಬಾಲಕಾರ್ಮಿಕತೆಯನ್ನುಂಟು ಮಾಡುತ್ತದೆಯೆಂದು ಹೇಳಲಾಗುವುದಿಲ್ಲ. ಒಂದು ದೇಶದ ಅತೀ ದಾರಿದ್ರ್ಯವಿರುವ ಪ್ರದೇಶದಲ್ಲಿ ಬಾಲಕಾರ್ಮಿಕತೆ ಅತ್ಯಧಿಕವಾಗಿದ್ದರೆ, ಅದೇ ದೇಶದ ಅಷ್ಟೇ ದಾರಿದ್ರ್ಯವಿರುವ ಇನ್ನೊಂದು ಭಾಗದಲ್ಲಿ ಅದು ಅತ್ಯಧಿಕ ಪ್ರಮಾಣದಲ್ಲಿಲ್ಲದೆ ಇರಬಹುದು. ಈ ರೀತಿಯ ವಿಷಯಕ್ಕೆ ಕೇರಳ ರಾಜ್ಯವು ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

ಸಾಕ್ಷರತೆ ಮತ್ತು ಶಿಕ್ಷಣವು ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆಯೆಂಬುದೂ ಕೂಡ ಕೇರಳ ರಾಜ್ಯದ ನಿದರ್ಶನದಿಂದ ಸೂಚಿತವಾಗುತ್ತದೆ. ಕೇವಲ 34,800 ಬಾಲಕಾರ್ಮಿಕರು ಇಡೀ ಕೇರಳ ರಾಜ್ಯದಲ್ಲಿದ್ದಾರೆ. ಇದು ಅದರ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇಕಡಾ ಒಂದಕ್ಕಿಂತ ಕಡಿಮೆ ಇದೆ. ಅದೇ ಆಂಧ್ರಪ್ರದೇಶ ರಾಜ್ಯದಲ್ಲಿ ಶೇಕಡಾ 7 ರಷ್ಟು ಮಕ್ಕಳು ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಬಾಲಕಾರ್ಮಿಕತೆ, ಶಾಲೆಗೆ ಹೋಗದಿರುವ ಮಕ್ಕಳ ಪ್ರಮಾಣ ಮತ್ತು ಕಡುಬಡತನದ ರೇಖೆಗಿಂತ ಕೆಳಗೆ ಜೀವಿಸುವ ವ್ಯಕ್ತಿಗಳ ಶೇಕಡಾವಾರು – ಇವುಗಳಲ್ಲಿರುವ ನಿರ್ಣಾಯಕ ಸ್ಥಿತಿಯ ಪರಸ್ಪರ ಸಂಬಂಧದತ್ತ ಗಮನಹರಿಸುವುದು ಯೋಗ್ಯವಾಗಿದೆ. ಬಾಲಕಾರ್ಮಿಕರ ಪಟ್ಟಿಯಲ್ಲಿ ಆಂಧ್ರಪ್ರದೇಶ ಮೊದಲನೆಯ ಸ್ಥಾನದಲ್ಲಿದ್ದರೆ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳು ಬಡತನದ ಪಟ್ಟಿಯಲ್ಲಿ ಮೇಲಿನ ಸ್ಥಾನಗಳಲ್ಲಿವೆ. ಆದುದರಿಂದ ಬಾಲಕಾರ್ಮಿಕತೆಗೆ ಕಾರಣ ಬಡತನಮಾತ್ರವಲ್ಲದೆ ಇತರ ಕಾರಣಗಳೂ ಇವೆ ಎಂಬುದು ನಿಶ್ಚಯ.

ಬಾಲಕಾರ್ಮಿಕತೆಯ ಹೆಚ್ಚಿನ ವ್ಯಾಪ್ತಿಗೆ ಕಾರಣೀಭೂತವಾಗಿರುವ ಇತರ ಪ್ರಮುಖ ಕಾರಣಗಳನ್ನು ಈ ಕೆಳಗೆ ನೀಡಲಾಗಿದೆ.

**3.1.2.2 ಪ್ರತ್ಯಕ್ಷಾನುಭವ, ನಂಬಿಕೆ ಮತ್ತು ಮನೋಭಾವನೆಗಳು:**

ತಂದೆ – ತಾಯಿಗಳ ಪ್ರತ್ಯಕ್ಷಾನುಭವ ಮತ್ತು ಸಾಮಾಜಿಕ ಮನೋಭಾವನೆಗಳು ಬಾಲಕಾರ್ಮಿಕ ಸಮಸ್ಯೆಯ ಮೇಲೆ ಗಾಢವಾದ ಪರಿಣಾಮ ಬೀರಿದೆ. ಅದರ ಫಲಿತಾಂಶಗಳ ಬಗ್ಗೆ ಸಾಕಷ್ಟು ಅರಿವಿಲ್ಲದ ಕಾರಣದಿಂದ ಬಾಲಕಾರ್ಮಿಕತೆಯು ಸ್ಥಳೀಯ ಸಂಪ್ರದಾಯ ಮತ್ತು ಪದ್ದತಿಗಳಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದೆಯೆಂದರೆ, ತಂದೆ ತಾಯಿಗಳು ಮತ್ತು ಮಕ್ಕಳಿಬ್ಬರೂ ಇದು ಕಾನೂನುಬಾಹಿರವೆಂದಾಗಲೀ ಅಥವಾ ಮಕ್ಕಳ ಹಿತಾಸಕ್ತಿಗೆ ಮಾರಕವಾಗಿದೆಯೆಂದಾಗಲೀ ಅರಿತುಕೊಳ್ಳಲಾಗದಷ್ಟು **ಮಟ್ಟಿಗೆ.**

**3.1.2.3 ತಂದೆ–ತಾಯಿಗಳ ಅನಕ್ಷರತೆ**



ತಂದೆ–ತಾಯಿಗಳ ಸಾಕ್ಷರತೆ ಬಾಲಕಾರ್ಮಿಕತೆಗೆ ನೆರವಾಗುವ ಅತೀ ಮುಖ್ಯವಾದ ಅಂಶವಾಗಿದೆ. ತಂದೆ–ತಾಯಿಗಳ ಸಾಕ್ಷರತೆ, ಬಹುಮುಖ್ಯವಾಗಿ ತಾಯಿಯ ಸಾಕ್ಷರತಾ ಮಟ್ಟವು ಆ ಕುಟುಂಬದ ಬಾಲಕಾರ್ಮಿಕತೆಯ ವ್ಯಾಪ್ತಿಯೊಂದಿಗೆ ನೇರ ಸಂಪರ್ಕವನ್ನು ಹೊಂದಿದೆ. ಆ ಕುಟುಂಬ ಎಷ್ಟು ಬಡತನವನ್ನು ಅನುಭವಿಸುತ್ತಿರಲಿ, ತಂದೆ–ತಾಯಿಗಳು ಕಲಿತವರಾಗಿದ್ದರೆ, ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿಯೇ ತೀರುತ್ತಾರೆ ಮತ್ತು ತಮ್ಮ ಮಗು ಪ್ರಬುದ್ಧ ಜೀವನ ನಡೆಸುವಂತಾಗಲು ಬೇಕಾದ ಕನಿಷ್ಠ ಶಿಕ್ಷಣವನ್ನು ನೀಡಿಯೇ ತೀರುತ್ತಾರೆ ಇದಕ್ಕೆ ವ್ಯತಿರಿಕ್ತವಾಗಿ ಅನಕ್ಷರಸ್ಥ ತಂದೆ–ತಾಯಿಗಳ ವಿಷಯದಲ್ಲಾಗುವುದೂ ಸತ್ಯವೇ ಆಗಿರುತ್ತದೆ. ಆರ್ಥಿಕ ಸ್ಥಾನಮಾನ ಮತ್ತು ಆದಾಯಗಳಿಕೆಯ ಮಟ್ಟ ಏನಾದರಾಗಲೀ, ಅನೇಕ ಅನಕ್ಷರಸ್ಥ ತಂದೆ–ತಾಯಿಗಳು. ಸಮುದಾಯದಲ್ಲಿ ಚಾಲ್ತಿಯಲ್ಲಿರುವ ಸಂಪ್ರದಾಯ ಮತ್ತು ರೂಢಿಗನುಗುಣವಾಗಿ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಬಯಸುತ್ತಾರೆ.

### 3.1.2.4 ಕುಟುಂಬದ ಕಸುಬು ಮತ್ತು ತುಂಡು ದರ ಮಜೂರಿಗಳು:

ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ಕುಟುಂಬಗಳಲ್ಲಿ ಮಕ್ಕಳು ತಂದೆ–ತಾಯಿಗಳು ತುಳಿದ ಹಾದಿಯನ್ನೇ ಕ್ರಮಿಸುವ ಸಂಪ್ರದಾಯ ಬೆಳೆದು ಬಂದಿರುತ್ತದೆ. ತಂದೆ–ತಾಯಿಗಳು ಅಪಾಯಕರವಾದ ಕಸುಬುಗಳಲ್ಲಿದ್ದರೆ ಮಕ್ಕಳು ಸಹ ಅದೇ ಕಸುಬುಗಳಲ್ಲಿ ನಿರತರಾಗುವ ಸಂಭವವೇ ಹೆಚ್ಚು. ಕುಟುಂಬದ ಕಸುಬು ಮಕ್ಕಳನ್ನು ಸಹ ಕುಟುಂಬದ ಕಲೆ ಮತ್ತು ಕರಕುಶಲ ಕಲೆಗೆ ಎಳೆದು ತರುತ್ತಾರೆ. ಮಕ್ಕಳಿಗೆ ಬಾಲ್ಯದಿಂದಲೇ ಅವರ ಕುಟುಂಬದ ಕರಕುಶಲತೆಯ ಬಗ್ಗೆ ತರಬೇತಿ ನೀಡಿದಲ್ಲಿ ಅವರು ಹರೆಯಕ್ಕೆ ಬರುವ ವೇಳೆಗೆ ತಮ್ಮ ಸ್ವಂತ ಕಾಲ ಮೇಲೆ ನಿಲ್ಲಬಲ್ಲವರಗುತ್ತಾರೆಂಬ ನಂಬಿಕೆ ಕೆಲವು ಕುಟುಂಬಗಳಲ್ಲಿವೆ, ತುಂಡು ದರದ ಆಧಾರದ ಮೇಲೆ ಸಂದಾಯಮಾಡುವಂತಹ ಕೈಗಾರಿಕೆ ಮತ್ತು ಕಸುಬುಗಳಲ್ಲಿ, ಕುಟುಂಬದ ಇತರ ಸದಸ್ಯರಿಗೆ ಸಹಾಯಮಾಡುವಂತೆ ಪದೇ ಪದೇ ಮಕ್ಕಳಿಗೆ ಹೇಳುತ್ತಾರೆ.

### 3.1.2.5 ಸಾಂಸ್ಕೃತಿಕ ಪದ್ದತಿಗಳು:

ಭಾರತೀಯ ಸಮಾಜದ ಹಿಂದೂ ಜಾತಿಗೆ ಸೇರಿದವರಲ್ಲಿ ಕೆಲವು ಆಳವಾಗಿ ಬೇರೂರಿದಂಥ ಸಾಮಾಜಿಕ ಪದ್ದತಿಗಳು ಬೆಳೆದುಕೊಂಡು ಬಂದಿವೆ. ಭಾರತದಲ್ಲಿ ಸಾಮಾಜಿಕ ರಚನೆ ಹೇಗೆ ರೂಪುಗೊಂಡಿದೆಯೆಂದರೆ ಕೆಲವು ಉದ್ಯೋಗಗಳು ವಂಶಪಾರಂಪರೆಯಾಗಿ ಮತ್ತು ಅದೇ ನಿರ್ದಿಷ್ಟ ಕಾತಿಗೆ ಸೇರಿದವರು ಮಾತ್ರ ಸೀಮಿತವಾಗಿರುತ್ತದೆ. ಇದಕ್ಕೆ ಉದಾಹರಣೆಯಾಗಿ ಆಂಧ್ರಪ್ರದೇಶ ರಾಜ್ಯವನ್ನೇ ತೆಗೆದುಕೊಳ್ಳೋಣ. ಒಂದು ಬ್ರಾಹ್ಮಣ ಕುಟುಂಬ, ತಾವು ಎಷ್ಟೇ ಬಡವರಾಗಿರಲಿ, ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಇಷ್ಟಪಡುವುದಿಲ್ಲ. ಆದರೆ ಹಿಂದುಳಿದ ವರ್ಗಕ್ಕೆ ಸೇರಿದ ಒಮದು ಕುಟುಂಬವು ಕುಟುಂಬದ ಜೀವನಾಧಾರಕ್ಕಾಗಿ ಮಕ್ಕಳ ಗಳಿಕೆ ಸಂಪೂರ್ಣವಾಗಿ ಬೇಕೇಬೇಕು ಅಥವಾ ಯವುದೇ ಅವಶ್ಯಕತೆ ಇಲ್ಲದಿದ್ದಾಗ್ಯೂ, ವಾಡಿಕೆಯಂತೆ ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಾರೆ. ಮಕ್ಕಳನ್ನು ಉದ್ಯೋಗಕ್ಕೆ ಕಳುಹಿಸುವುದೂ ಕೂಡ ಜಾತಿಯೊಂದಿಗೆ ನಿಕಟವಾಗಿಯೇ ಜತೆಗೂಡುತ್ತದೆ ಮತ್ತು ಬಹುಪಾಲು ಬಾಲಕಾರ್ಮಿಕರು ಹಿಂದುಳಿದ ವರ್ಗಗಳಿಂದ, ಅನುಸೂಚಿತ ಜಾತಿ ಮತ್ತು ಪಂಗಡಗಳಿಂದ ಬಂದಿರುವುದು ಅನುಭವದಿಂದ ತಿಳಿದುಬರುತ್ತದೆ. ಇಮತಹ ಕುಟುಂಬಗಳಲ್ಲಿ ಬಾಲಕಾರ್ಮಿಕತೆ ಇರುವುದಕ್ಕೆ ಕಾರಣ ಬಡತನವೆಂದು ಯಾರಾದರು ತಿಳಿದುಕೊಂಡರೆ, ಇದು ಸನ್ನಿವೇಶಗಳಡಿ ಇದೆಯೋ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿರುವುದೆನ್ನುವುದು ಅರಿವಿಗೆ ಬರುತ್ತದೆ.

### 3.1.2.6 ಲಿಂಗ ಪಕ್ಷಪಾತ:



ಭಾರತೀಯ ಸಮಾಜದಲ್ಲಿ ಲಿಂಗ ತಾರತಮ್ಯ ಅತೀ ಹೆಚ್ಚು ಚಾಲ್ತಿಯಲ್ಲಿದೆ. ಕೆಲವು ಕುಟುಂಬಗಳಲ್ಲಿ ಹೆಣ್ಣು ಮಗುವಿಗೆ ಅತೀ ಕಡಿಮೆ ಮೌಲ್ಯನೀಡುತ್ತಾರೆ ಮತ್ತು ಹೆಣ್ಣು ಮಗುವಿಗೆ ಶಿಕ್ಷಣ ನೀಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಂದೆ–ತಾಯಿ ಭಾವಿಸುತ್ತಾರೆ. ಆದಕಾರಣ ಅವರು ಗಂಡುಮಕ್ಕಳನ್ನು ಶಾಲೆಗೆ ಕಳುಹಿಸಲು ಬಯಸುತ್ತಾರೆ ಮತ್ತು ಹೆಣ್ಣು ಮಕ್ಕಳು ಎಲ್ಲ ರೀತಿಯ ಗೃಹಕೃತ್ಯದಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುತ್ತಾರೆ. ನಿಧಾನವಾಗಿ ಹೆಣ್ಣು ಮಕ್ಕಳು ಅಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳನ್ನು ಮುಖ್ಯವಾಗಿ ಅವಲಂಭಿಸಿ ಆ ಪ್ರದೇಶದ ಮಹಿಳೆಯರು ಸಾಮಾನ್ಯವಾಗಿ ಅನುಸರಿಸುವಂಥ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.


### 3.1.2.7 ಕುಟುಂಬದ ಗಾತ್ರ:

ಬಾಲಕಾರ್ಮಿಕತೆಗೆ ಇನ್ನೊಂದು ಕಾರಣ ದೊಡ್ಡ ಕುಟುಂಬಗಳು, ಬಡತನ, ಅನಕ್ಷರತೆ, ಕಡಿಮೆ ವರಮಾನ, ಮಕ್ಕಳನ್ನು ಸಾಕಲು ಕಡಿಮೆ ಸಾಮರ್ಥ್ಯ ಇವುಗಳ ವಿಷವರ್ತುಲದಲ್ಲಿ ಸಿಕ್ಕಿಕೊಂಡಿರುವ ಅನಕ್ಷರಸ್ಥ ಹಾಗೂ ತಿಳುವಳಿಕೆ ಸಾಲದ ತಂದೆ–ತಾಯಿಗಳು, ಪ್ರತಿಯೊಂದು ಮಗುವನ್ನು ಒಬ್ಬ ವರಮಾನಗಳಿಸುವ ಸದಸ್ಯನೆಂದು ಕಾಣುತ್ತಾರೆ ಮತ್ತು ಮಗುವನ್ನು ಕೆಲಸಕ್ಕೆ ಕಳುಹಿಸಲು ಅಪೇಕ್ಷಿಸುತ್ತಾರೆ. ಆದುದರಿಂದ ಭಾರೀ ಪ್ರಮಾಣದ (ಮ್ಯಾಕ್ರೋ) ಜನಸಂಖ್ಯಾ ಸ್ಫೋಟವು ಬಾಲಕಾರ್ಮಿಕತೆಗೆ ಕಾರಣವಾಗಿದೆ.

### 3.1.2.8 ತಂದೆ–ತಾಯಿಗಳ ಅಭ್ಯಾಸಗಳು

ಬಾಲಕಾರ್ಮಿಕತೆ ಕಾರಣಗಳಲ್ಲಿ ತಂದೆ ತಾಯಿಗಳ ಅಭ್ಯಾಸಗಳೂ ಸೇರಿವೆ. ತಂದೆ–ತಾಯಿಗಳಿಗೆ ಇರುವ ಕೆಟ್ಟ ಚಟಗಳು, ಅದರಲ್ಲೂ ಮುಖ್ಯವಾಗಿ ತಂದೆಯ ಚಟವು ಮಕ್ಕಳನ್ನು ಕೆಲಸಕ್ಕೆ ದೂಡುತ್ತದೆ ಎಂಬುದು ಹಲವಾರು ಅಧ್ಯಯನಗಳಿಂದ ಬೆಳಕಿಗೆ ಬಂದ ಸಂಗತಿಯಾಗಿದೆ. ಮಕ್ಕಳನ್ನು ಕಾರ್ಮಿಕ ಮಾರುಕಟ್ಟೆಗೆ ದೂಡುವುದರಲ್ಲಿ ಕುಡಿತದ ಚಟ ಒಂದು ಮುಖ್ಯ ಕಾರಣವಾಗಿದೆ. ಕುಟುಂಬದ ವಯಸ್ಕ ವರಮಾನ ಗಳಿಸುವ ಸದಸ್ಯನಿಗೆ ಏಟಾದಲ್ಲಿ ಅಥವಾ ಕಾಯಿಲೆಯಾದಲ್ಲಿ, ದೂರಮಾಡುವಿಕೆ ಅಥವಾ ವಿಚ್ಛೇದನಾ ಫಲಿತಾಂಶವಾಗಿ ಉಂಟಾದ ಒಡಕು, ಬಾಲಕಾರ್ಮಿಕತೆಗೆ ಬಹುಪಾಲು ಕಾರಣವಾಗಿರುತ್ತದೆ.





## 3.2 ಬಾಲಕಾರ್ಮಿಕತೆಯ ಪರಿಣಾಮಗಳು

**3.2.1 ಮಾನವ ಹಕ್ಕುಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕ್ರಿಯೆಯಾಗಿದೆ.

**3.2.2 ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆ:** ಬಾಲಕಾರ್ಮಿಕತೆ ಅಂತಾರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆಯಾಗಿದ್ದು, ಇದು ವ್ಯಾಪಾರ ಮತ್ತು ಸಾಮಾಜಿಕ ಬಹಿಷ್ಕಾರಗಳಿಗೆ ಎಡೆಮಾಡಿ ಕೊಡಬಹುದು.

**3.2.3 ಅನಕ್ಷರತೆ** : ಮಕ್ಕಳು ಬಾಲಕಾರ್ಮಿಕರಾಗುವುದರಿಂದ, ಅವರು ಶಿಕ್ಷಣದಿಂದ ವಂಚಿತರಾಗುವುದರಿಂದ ಅವರು ಅನಕ್ಷರಸ್ಥರಾಗುವರು. ಅವರು ಅನಕ್ಷರಸ್ಥರಾಗುವುದರಿಂದ ಜೀವನವಿಡಿ ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗುವುದು. ಅನಕ್ಷರತೆ ಅವರ ಅಭಿವೃದ್ಧಿಗೆ ಅಡ್ಡಿಬರುವುದು.

**3.2.4 ಬಡತನ** : ಶಿಕ್ಷಣ ಇಲ್ಲದೆ ಇರುವುದರಿಂದ ಅವರ ಅಭಿವೃದ್ಧಿ ಕುಂಠಿತವಾಗುವುದರಿಂದ, ಅವರು ಬಡತನದಲ್ಲಿ ಜೀವನ ನಡೆಸಬೇಕಾಗುವುದು. ಶಿಕ್ಷಣದಿಂದ ಉತ್ತಮ ಸಂಪಾದನೆ ಮಾಡಲು ಸಾಧ್ಯವಾಗುವುದು.

**3.2.5 ಅನಾರೋಗ್ಯ / ಕಾಯಿಲೆಗಳು** : ಬಾಲಕಾರ್ಮಿಕರು ಹಲವಾರು ಕಾಯಿಲೆಗಳಿಗೆ ತುತ್ತಾಗುವ ಸಂಭವ ಇರುವುದು. ಹೆಚ್ಚಿನವರು ಅನಾರೋಗ್ಯಕರವಾದ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಕಾಯಿಲೆಗಳಿಗೆ ತುತ್ತಾಗುವುದು.

**3.2.6 ಕುಂಠಿತ ಬೆಳವಣಿಗೆ** : ಬಾಲಕಾರ್ಮಿಕತೆಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುವುದು. ಅವರ ದೇಹ ಬೇಗನೆ ಮುಪ್ಪಾಗುವುದು.

**3.2.7 ಅವಘಡಗಳು – ಊನಾಗುವಿಕೆ** : ಬಾಲಕಾರ್ಮಿಕರು ಅಸುರಕ್ಷಿತ ವಾತಾವರಣದಲ್ಲಿ ಕೆಲಸ ಮಾಡಬೇಕಾದುದರಿಂದ, ಅವರು ಅವಘಡಗಳಿಗೆ ಸಿಕ್ಕಿ ತಮ್ಮ ಅಂಗಾಂಗಳನ್ನು ಊನಗೊಳಿಸಿಕೊಳ್ಳುವ ಸಂಭವ ಹೆಚ್ಚಾಗಿರುತ್ತದೆ.

**3.2.8 ಅವಘಡಗಳು – ಸಾವು :** ಬಾಲಕಾರ್ಮಿಕರು ದೊಡ್ಡವರ ಹಾಗೆ ಜಾಗರೂಕರಾಗಿರುವುದಿಲ್ಲ. ಇದರಿಂದ ಅವರು ಅಪಾಯಕಾರಿ ವಾತಾವರಣದಲ್ಲಿ ಕೆಲಸ ಮಾಡುವಾಗ ಜೀವ ಕಳೆದುಕೊಳ್ಳುವ ಸಂಭವ ಇರುವುದು.


**3.2.9 ದುರಾಭ್ಯಾಸಗಳಿಗೆ ಒಳಗಾಗುವುದು** : ಬಾಲಕಾರ್ಮಿಕರು ಮನೆಯಿಂದ ಹೊರಗೆ ಬೇರೆಯವರ ಜೊತೆಯಲ್ಲಿ ಕೆಲಸ ಮಡುವಾಗ ದುರಾಭ್ಯಾಸಗಳಿಗೆ ದಾಸರಾಗುವ ಸಂಭವ ಇರುತ್ತದೆ.

**3.2.10 ಅಪರಾಧಿಗಳಾಗುವುದು** : ಬಾಲಕಾರ್ಮಿಕರು, * ಅಪರಾಧಿಗಳ ಸಂಪರ್ಕಕ್ಕೆ ಬಂದು ಅಪರಾಧಿಗಳಾಗುವ ಸಂಭವ ಹೆಚ್ಚು ಇರುವುದು. ಅವರು ಸಮಾಜ ದ್ರೋಹಿಗಳಾಗುವ ಸಂಭವ ಇರುವುದು.

**3.2.11 ಉದ್ಯೋಗದ ಕೊರತೆ:** ಬಾಲಕಾರ್ಮಿಕತೆ ದೇಶದಲ್ಲಿ ದೊಡ್ಡವರ ಉದ್ಯೋಗದ ಕೊರತೆಯನ್ನು ಹುಟ್ಟು ಹಾಕುತ್ತದೆ.

**3.2.12 ಕೌಶಲ್ಯರಹಿತರನ್ನಾಗಿಸುವುದು:** ಬಾಲಕಾರ್ಮಿಕತೆ ಮಕ್ಕಳನ್ನು ಕೌಶಲ್ಯರಹಿತ ವ್ಯಕ್ತಿಗಳನ್ನಾಗಿ ರೂಪಿಸುವುದು





## 3.3 ಬಾಲಕಾರ್ಮಿಕತೆಯ ಪ್ರಮಾಣ

### 3.3.1 ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವ ಮಕ್ಕಳು

#### 3.3.1.1 ಜಾಗತಿಕ:

ಸುಮಾರು 211 ಮಿಲಿಯನ್ 6–14 ವರ್ಷದ ಮಕ್ಕಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರಬಹುದು ಎಂದು ಅಂದಾಜಿಸಲಾಗಿದೆ. ಪ್ರಪಂಚದ ಈ ವಯೋಮಿತಿಯಲ್ಲಿ ಇದು ಎಲ್ಲಾ ಮಕ್ಕಳ ಸಂಖ್ಯೆಯ 20% ಆಗಬಹುದು ಎಂದು ಅಂದಾಜಿಸಲಾಗಿದೆ. ಇವರಲ್ಲಿ ಸುಮಾರು 73 ಮಿಲಿಯನ್ ಮಕ್ಕಳನ್ನು 10ವರ್ಷಕ್ಕಿಂತ ಕೆಳಗಿನವರು. 5–17 ವರ್ಷದ ಪ್ರಾಯದ ಮಕ್ಕಳನ್ನು ತೆಗೆದುಕೊಂಡರೆ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿರುವವರು ಸುಮಾರು 352 ಮಿಲಿಯನ್ ಎಂದು ಅಂದಾಜಿಸಲಾಗಿದೆ. 5–14 ವರ್ಷದ ಬಾಲಕಾರ್ಮಿಕರಲ್ಲಿ ಲಿಂಗ ವ್ಯತ್ಯಾಸ ಹೆಚ್ಚು ಇರುವುದಿಲ್ಲ. ಆದರೆ ಹೆಚ್ಚಿನ ಪ್ರಾಯದ ಮಕ್ಕಳಲ್ಲಿ ಹುಡುಗರು ಹೆಚ್ಚು ಕೆಲಸ ಮಾಡುತ್ತಿರುವುದು ಕಂಡು ಬಂದಿದೆ.


#### 3.3.1.2 ಭಾರತ:

ಭಾರತದ ಮಕ್ಕಳ ಸಂಖ್ಯೆ 398 ಮಿಲಿಯನ್ ಎಂದು ಅಂದಾಜಿಸಲಾಗಿದ್ದು, ಅವರಲ್ಲಿ 203 ಮಿಲಿಯನ್ 5–14 ವರ್ಷ ವಯೋಮಿತಿಯವರು ಆಗಿರುತ್ತಾರೆ. ಇವರಲ್ಲಿ 116 ಮಿಲಿಯನ್ ಶಾಲೆಯಲ್ಲಿ ಇದ್ದಾರೆ. 12.6 ಮಿಲಿಯನ್ ಮಕ್ಕಳು ಪೂರ್ಣಾವಧಿಯ ಕೆಲಸಗಳಲ್ಲಿ ಇದ್ದಾರೆ. ಉಳಿದ 74 ಮಿಲಿಯನ್ ಮಕ್ಕಳ ಸ್ಥಿತಿಗತಿ ಗೊತ್ತಿರುವುದಿಲ್ಲ. ಇವರು ಕುಟುಂಬದ ಹೊಲಗದ್ದೆಗಳಲ್ಲಿ ಕೆಲಸಮಾಡುತ್ತಿರಬಹುದು ಅಥವಾ ತಮ್ಮ ಪೋಷಕರ ಜೊತೆಯಲ್ಲಿ ಅಥವಾ ಮನೆಗೆಲಸದವರಾಗಿ ಅಥವಾ ಜೀತದಾಳಾಗಿ ಅಥವಾ ಯಾವುದೇ ಕೆಲಸಮಾಡಿಕೊಂಡಿರಬಹುದು.

### 3.3.2 ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕತೆ

| | 1971 | 1981 | 1991 | 2001 |
|---|---|---|---|---|
| ಭಾರತ | 10753985 | 13640870 | 11285349 | 12666377 |
| ಕರ್ನಾಟಕ (35 ರಾಜ್ಯಗಳಲ್ಲಿ 7ನೇ ದೊಡ್ಡ ರಾಜ್ಯವಾಗಿದೆ) | 808719 | 1311530 | 976247 | 822615 |
| ಭಾರತಕ್ಕೆ ಹೋಲಿಸಿದಾಗ ಕರ್ನಾಟಕದ % | 7.5% | 8.29% | 8.65% | 6.49% |





### 3.3.3 ರಾಜ್ಯವಾರು ಬಾಲಕಾರ್ಮಿಕರ ಹಂಚಿಕೆ (ಕೆಲವು ದೊಡ್ಡ ರಾಜ್ಯಗಳಲ್ಲಿ ಮತ್ತು 5–14 ವರ್ಷ ಪ್ರಾಯದವರೆಗೆ)

| ರಾಜ್ಯಗಳು | 1981 | 1991 | 2001 |
|---|---|---|---|
| ಆಂಧ್ರ ಪ್ರದೇಶ | 1.95 | 1.66 | 1.36 |
| ಬಿಹಾರ್ | 1.10 | 0.94 | 1.12 |
| ಗುಜರಾತ್ | 0.62 | 0.52 | 0.49 |
| ಹರಿಯಾಣ | 0.19 | 0.11 | 0.25 |
| ಕರ್ನಾಟಕ | 1.13 | 0.98 | 0.85 |
| ಕೇರಳ | 0.09 | 0.03 | 0.03 |
| ಮಧ್ಯಪ್ರದೇಶ | 1.70 | 1.35 | 1.07 |
| ಮಹಾರಾಷ್ಟ್ರ | 1.56 | 1.07 | 0.76 |
| ಒರಿಸ್ಸಾ | 0.70 | 0.45 | 0.38 |
| ಪಂಜಾಬ್ | 0.22 | 0.14 | 0.18 |
| ರಾಜಸ್ಥಾನ್ | 0.82 | 0.77 | 1.26 |
| ತಮಿಳುನಾಡು | 0.98 | 0.58 | 0.42 |
| ಉತ್ತರ ಪ್ರದೇಶ | 1.43 | 1.41 | 1.93 |
| ಪಶ್ಚಿಮ ಬಂಗಾಳ | 0.61 | 0.71 | 0.86 |
| ಭಾರತ | 13.64 | 11.29 | 12.59 |

### 3.3.4 ಕರ್ನಾಟಕದಲ್ಲಿ ಬಾಲಕಾರ್ಮಿಕತೆ

**ಹೆಣ್ಣು ಮಗು ಹೆಚ್ಚು ಶೋಷಣೆಗೆ ಒಳಪಡುತ್ತದೆ.... "ಕೆಲಸ ಮತ್ತು ದಿನನಿತ್ಯದ ಮನೆಗೆಲಸದ ಮಧ್ಯೆ ಹೆಣ್ಣುಮಗು ಇಡೀ ದಿನ ಕೆಲಸ ಮಾಡುವುದು"**


ಭಾರತದಲ್ಲಿ ಮಕ್ಕಳು ವಿವಿಧ ರೀತಿಯ ಕೆಲಸಗಳನ್ನು ಮಾಡುತ್ತಾರೆ. ಲಿಂಗದ ಆಧಾರದಲ್ಲಿ ಕೆಲಸಗಳನ್ನು ವರ್ಗೀಕರಿಸಲಾಗಿರುತ್ತದೆ. ಕೃಷಿ ಕ್ಷೇತ್ರದಲ್ಲಿ, ಮನೆಯಲ್ಲಿ, ಬೇರೆ ಬೇರೆ ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಮಾಡುವ ಕೆಲಸ ಮತ್ತು ಗಂಡು ಮಕ್ಕಳು ಮಾಡುವ ಕೆಲಸ ಎಂಬುದಾಗಿ ಪ್ರತ್ಯೇಕಿಸಲಾಗಿದೆ. ಮನೆಯ ಹೆಚ್ಚಿನ ಕೆಲಸಗಳು ಹೆಚ್ಚಾಗಿ ಹೆಣ್ಣು ಮಕ್ಕಳ ಮೇಲೆ ಬೀಳುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣು ಮಕ್ಕಳು ಮನೆಯಲ್ಲಿನ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಅಡುಗೆಯನ್ನು ಮಾಡಬೇಕಾಗುವುದು, ಶುಚಿ ಮಾಡಬೇಕಾಗುವುದು, ಸೌದೆಯನ್ನು ತರಬೇಕಾಗುವುದು, ಇದಲ್ಲದೆ ದೊಡ್ಡವರಿಗೆ ಸಹಾಯವಾಗುವಂತಹ ಹಲವಾರು ಕೆಲಸಗಳನ್ನು ಮಾಡಬೇಕಾಗುವುದು.

ಅಸಂಘಟಿತ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳನ್ನು ಕಡಿಮೆ ಸಂಬಳದ, ಸಂಬಳವಿಲ್ಲದ ಅಥವಾ ಕೌಶಲ್ಯರಹಿತ ಕೆಲಸಗಳಲ್ಲಿ ತೊಡಗಿಸಿಕೊಳ್ಳಲಾಗುತ್ತದೆ. ಇದರಿಂದ ಅವರಿಗೆ ಯಾವ ರೀತಿಯ ಕೌಶಲ್ಯ ಸಂಪಾದನೆ ಆಗುವುದಿಲ್ಲ. ಆದರೆ ಗಂಡು ಮಕ್ಕಳು ಮಾಡುವ ಕೆಲಸಗಳು ಹೆಚ್ಚಾಗಿ ಒಂದು ರೀತಿಯ ಅಪ್ರೆಂಟಿಶಿಪ್ ತರಬೇತಿಯಾಗಿದ್ದು, ಅವರಿಗೆ ಕೌಶಲ್ಯ ಸಂಪಾದನೆಗೆ ಅವಕಾಶ ಇರುತ್ತದೆ.

ಕರ್ನಾಟಕದಲ್ಲಿ ಈ ಕೆಳಗಿನ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಹೆಚ್ಚಾಗಿ ಕಾಣಬಹುದಾಗಿದೆ.

- ಕೃಷಿ, ಜಾನುವಾರು ಸಾಕಾಣಿಕೆ, ತೋಟಗಾರಿಕೆ ಮತ್ತು ಮೀನುಗಾರಿಕೆ
- ಬೀಡಿ ತಯಾರಿ
- ಜೀತ ಪದ್ಧತಿ
- ಅಗರ ಬತ್ತಿ ತಯಾರಿಕೆ







- ನಗರಗಳಲ್ಲಿ ಚಿಂದಿ ಆಯುವಿಕೆ
- ಗಣಿಗಳಲ್ಲಿ ಮಕ್ಕಳು ಕೆಲಸ ಮಾಡುವುದು
- ಹೋಟೆಲ್‌ಗಳಲ್ಲಿ ದಾಬಾ ತಿಂಡಿ ತಿನಿಸುಗಳ ಅಂಗಡಿಗಳಲ್ಲಿ
- ರಸ್ತೆಗಳಲ್ಲಿ ಬೆಲೂನ್ ಚೆಂಡುಗಳು ಇತ್ಯಾದಿಗಳನ್ನು ಮಾರಾಟ ಮಾಡುವಲ್ಲಿ/ ರಸ್ತೆ ಮಾರಾಟಗಾರರು
- ಬೇಡುವುದು ಮತ್ತು ರಸ್ತೆ ಬದಿಯ ಸರ್ಕಸ್‌ನಲ್ಲಿ
- ಮಾಂಸ ಮಾರುವ ಅಂಗಡಿಗಳಲ್ಲಿ/ ಖಸಾಯಿ ಖಾನೆಗಳಲ್ಲಿ
- ಮನೆಗೆಲಸದವರಾಗಿ
- ವೇಶ್ಯವಾಟಿಕೆಗಳಲ್ಲಿ
- ಗ್ಯಾರೇಜುಗಳಲ್ಲಿ ಮತ್ತು ವಾಹನ ರಿಪೇರಿ ಸಂಸ್ಥೆಗಳಲ್ಲಿ
- ಕೃಷಿ, ತೋಟದುತ್ಪನ್ನ ಮತ್ತು ಆಹಾರದ ಸಂಸ್ಕರಣಾ ಕ್ಷೇತ್ರಗಳಲ್ಲಿ
- ಕಟ್ಟಡಗಳ ನಿರ್ಮಾಣಗಳಲ್ಲಿ
- ಇಟ್ಟಿಗೆ ಗೂಡುಗಳಲ್ಲಿ
- ರೇಷ್ಮೆ ಮತ್ತು ಸಣ್ಣ ಸಣ್ಣ ಅಸಂಘಟಿತ ಘಟಕಗಳಲ್ಲಿ

### 3.3.5 ಪ್ರಾಂತ್ಯ ಮಟ್ಟದ ಬಾಲಕಾರ್ಮಿಕತೆಯ ಪ್ರಮಾಣ

**ಕೆಲವು ದೊಡ್ಡ ರಾಜ್ಯಗಳಲ್ಲಿನ ಕೆಲಸಮಾಡುತ್ತಿರುವ ಮಕ್ಕಳ ಅನುಪಾತದ ಮೇರೆಗೆ ಬಾಲಕಾರ್ಮಿಕತೆಯ ಶ್ರೇಣಿಕರಣ**

| ರಾಜ್ಯಗಳು | 1983 | 1993/94 | 1999/00 |
|---|---|---|---|
| ಆಂಧ್ರ ಪ್ರದೇಶ | 01 | 01 | 01 |
| ಬಿಹಾರ್ | 12 | 11 | 12 |
| ಗುಜರಾತ್ | 10 | 10 | 04 |
| ಹರಿಯಾಣ | 11 | 12 | 13 |
| ಕರ್ನಾಟಕ | 03 | 03 | 03 |
| ಕೇರಳ | 14 | 14 | 14 |
| ಮಧ್ಯಪ್ರದೇಶ | 07 | 06 | 05 |
| ಮಹಾರಾಷ್ಟ್ರ | 08 | 07 | 09 |
| ಒರಿಸ್ಸಾ | 05 | 05 | 07 |
| ಪಂಜಾಬ್ | 04 | 13 | 11 |
| ರಾಜಸ್ಥಾನ್ | 02 | 02 | 02 |
| ತಮಿಳುನಾಡು | 06 | 04 | 08 |
| ಉತ್ತರ ಪ್ರದೇಶ | 09 | 09 | 10 |
| ಪಶ್ಚಿಮ ಬಂಗಾಳ | 13 | 08 | 06 |







ನಾವು ಗ್ರಾಹಕರಾಗಿ ಯಾವಾಗಲಾದರೂ ನಾವು ಖರೀದಿಸುತ್ತಿರುವ ಆಭರಣಗಳು, ಬಟ್ಟೆಗಳು, ಕುಡಿಯುತ್ತಿರುವ ಟೀ ಇತ್ಯಾದಿಗಳು ಎಲ್ಲಿಂದ ಬಂದಿವೆ? ಯಾರು ತಯಾರಿಸುತ್ತಿದ್ದಾರೆ ಎಂಬ ಬಗ್ಗೆ ಯೋಚಿಸುತ್ತಿದ್ದೇವೆಯೆ?

ನಾವು ಉಪಯೋಗಿಸುವ ಬಟ್ಟೆಗಳು, ಆಭರಣಗಳು, ಅಲಂಕಾರಿಕ ವಸ್ತುಗಳು, ಟೀ ಮುಂತಾದವುಗಳು ಹೆಚ್ಚಾಗಿ ಬಾಲಕಾರ್ಮಿಕರನ್ನೊಳಗೊಂಡು ತಯಾರಿಸಲ್ಪಟ್ಟ ವಸ್ತುಗಳಾಗಿವೆ. ಇಲ್ಲಿ 5 ವರ್ಷದಷ್ಟು ಕಡಿಮೆ ಪ್ರಾಯದ ಮಕ್ಕಳು ಇಡೀ ದಿವಸ ಅಪಾಯಕಾರಿ ಪರಿಸ್ಥಿತಿಯಲ್ಲಿ ತಮ್ಮ ಜೀವವನ್ನು ಅಪಾಯಕ್ಕೆ ಒಡ್ಡಿ ಕಡಿಮೆ ಸಂಬಳದ ಮೇಲೆ ರಕ್ತ ಸುರಿಸಿ ದುಡಿಯುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ತಮ್ಮ ಕೆಲಸಕ್ಕೆ ದಾಸರಾಗಿದ್ದು, ಗುಲಾಮರಾಗಿ, ಜೀತದಾಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಬಿಡುಗಡೆ ಅಥವಾ ಸ್ವಾತಂತ್ರ್ಯ ಕನಸಿನ ಗಂಟಾಗಿರುತ್ತದೆ. ಇವರ ಪೋಷಕರು ತೆಗೆದುಕೊಂಡಿದ್ದಾರೆ ಎನ್ನುವ ಸಾಲವನ್ನು ತೀರಿಸಿದಾಗ ಮಾತ್ರ ಇವರಿಗೆ ಮುಕ್ತಿ. ಈ ಹಿಂದೆ ಕೆಲವೊಮ್ಮೆ ಮಕ್ಕಳು ದೊಡ್ಡವರಾದ ನಂತರ ಅವರ ತಮ್ಮಂದಿರಿಗೆ ಅಥವಾ ತಂಗಿಯಂದಿರಿಗೆ ವಿಸ್ತರಿಸಲ್ಪಡುತ್ತದೆ. ಕಾರಣ ದೊಡ್ಡ ಮಕ್ಕಳು ಈ ಕೆಲಸಗಳನ್ನು ಮಾಡಲು ಅಶಕ್ತರಾಗುತ್ತಾರೆ ಯಾ ಕಾಯಿಲೆಯನ್ನು ಹೊಂದಿರುತ್ತಾರೆ ಯಾ ಸತ್ತಿರುತ್ತಾರೆ ಅಥವಾ ಊನಗೊಂಡಿರುತ್ತಾರೆ.

### 3.3.6 ಪ್ರಮುಖವಾದ ಬಾಲಕಾರ್ಮಿಕತೆಯ ಪ್ರಕಾರಗಳು

| ಕಾನೂನಿನ ಚೌಕಟ್ಟಿನೊಳಗೆ ಸುಮಾರು 6–8% ಬಾಲಕಾರ್ಮಿಕರು ಒಳಪಡುತ್ತಾರೆ. ಈ ಕೆಳಗಿನ ಕಾನೂನುಗಳು ಮಕ್ಕಳನ್ನು ಕಾನೂನಿನ ಚೌಕಟ್ಟಿನೊಳಗೆ ತರುತ್ತವೆ. | ಕಾನೂನಿನ ಪರಿಧಿಯ ಹೊರಗೆ | |
|---|---|---|
| | ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಸಂಬಂಧಿತ ಇತರ ಚಟುವಟಿಕೆಗಳು. (70% ರಷ್ಟು ಬಾಲಕಾರ್ಮಿಕತೆ) | ನಗರ ಪ್ರದೇಶ ಅಸಂಘಟಿತ ಕ್ಷೇತ್ರಗಳು |
| ▪ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾನೂನು 1986.<br>▪ ಕಾರ್ಖಾನೆಗಳ ಕಾನೂನು 1948<br>▪ ಪ್ಲಾಂಟೇಷನ್ ಕಾರ್ಮಿಕ ಕಾನೂನು. 1951<br>▪ ಗಣಿ ಕಾನೂನು 1952<br>▪ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾನೂನು 1966<br>▪ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಕೀರ್ಣಗಳ ಕಾನೂನು 1961<br>▪ ಬಾಲಾಪರಾಧಿಗಳ ನ್ಯಾಯ ಕಾನೂನು 2000 | **ಹುಡುಗಿಯರು**<br>▪ ಸೌದೆ ತರುವುದು ಮತ್ತು ಜಾನುವಾರುಗಳಿಗೆ ಆಹಾರಗಳನ್ನು ಸಂಗ್ರಹಿಸುವುದು<br>▪ ನೀರನ್ನು ತರುವುದು<br>▪ ಕಳೆ ತೆಗೆಯುವುದು<br>▪ ಆಹಾರ ಸಂಸ್ಕರಣೆ<br>▪ ಕೋಳಿ ಸಾಕಣೆ<br>▪ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು<br>**ಹುಡುಗರು**<br>▪ ಉಳುವುದು ಮತ್ತು ತೋಡುವುದು<br>▪ ಜಾನುವಾರುಗಳನ್ನು ಮೇಯಿಸುವುದು<br>▪ ವಸ್ತುಗಳ ಸಾಗಾಟ<br>▪ ಪೈರು ಕಟಾವು ಮತ್ತು ಕಾಳು ಬಿಡಿಸುವುದು<br>▪ ಮಾರಾಟ ಮತ್ತು ಖರೀದಿ<br>▪ ಉಪಕರಣಗಳಿಗೆ ಸಂಬಂಧಪಟ್ಟ ಕೆಲಸಗಳು | ▪ ಕಟ್ಟಡಗಳ ನಿರ್ಮಾಣ<br>▪ ಸಾಮಾನು ಸಾಗಾಟ<br>▪ ಮನೆಗೆಲಸ<br>▪ ಚರ್ಮದ ಕೆಲಸ<br>▪ ರಸ್ತೆ ಬದಿ ಮಾರಾಟಗಾರರು<br>▪ ಹೋಟೆಲ್ ಇತ್ಯಾದಿಗಳ ಸಹಾಯಕರು<br>▪ ಗ್ಯಾರೇಜ್‌ಗಳಲ್ಲಿ<br>▪ ಶೂ ಪಾಲಿಶ್<br>▪ ಕಸ ಗುಡಿಸುವುದು<br>▪ ಚಿಂದಿ ಆಯುವಿಕೆ<br>▪ ವೇಶ್ಯಾವಾಟಿಕೆಗಳಲ್ಲಿ<br>▪ ಬೀಡಿ ತಯಾರಿಕೆ<br>▪ ಹಪ್ಪಳ ತಯಾರಿಕೆ<br>▪ ಅಗರಬತ್ತಿ ತಯಾರಿಕೆ<br>▪ ಕಸೂತಿ ಕೆಲಸ<br>▪ ಹೊಸೈರಿ |





## 3.4 ಮಕ್ಕಳ ಹಕ್ಕುಗಳ ಬಗ್ಗೆ ನಡೆಸ ಸಂಯುಕ್ತ ರಾಷ್ಟ್ರಗಳ ಸಮಾವೇಶ 1989 (ಭಾರತವು ಸಮಾವೇಶದ ನಡವಳಿಕೆ ಸಹಿ ಮಾಡಿದೆ)

ಈ ಸಮಾವೇಶವು ಮಕ್ಕಳ ವಿಶೇಷವಾದ ಅಭದ್ರ ಪರಿಸ್ಥಿತಿಯನ್ನು ಗುರುತಿಸಿದೆ ಹಾಗೂ ಮಕ್ಕಳಿಗೆ ವಿಶೇಷ ನೆರವು ಮತ್ತು ಸಹಾಯದ ಅವಶ್ಯಕತೆಯನ್ನು ಗುರುತಿಸಿ ಅದನ್ನು ಗಮನಿಸುತ್ತದೆ. ಇದು ಒಂದು ರೀತಿಯಲ್ಲಿ ಮಕ್ಕಳನ್ನು ಸಶಸ್ತ್ರಗೊಳಿಸುವ ಪ್ರಕ್ರಿಯೆ ಆಗಿದ್ದು, ಎಲ್ಲಾ ಮಕ್ಕಳು ರಕ್ಷಣೆಯ ವಾತಾವರಣದಲ್ಲಿ ಜೀವಿಸಲು ಹಾಗೂ ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಬೆಳೆಯಲು ಅವಕಾಶ ಕಲ್ಪಿಸಿಕೊಡುವುದು.

ಈ ಸಮಾವೇಶದಲ್ಲಿ ಮಕ್ಕಳಿಗೆ ನಾಗರೀಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳನ್ನು ಒದಗಿಸಲಾಗಿದೆ. ಈ ನಾಲ್ಕು ಹಕ್ಕುಗಳು ಈ ಕೆಳಗಿನಂತೆ ಇದೆ.

**ಬದುಕುವ ಹಕ್ಕು:** ಇದು ಈ ಕೆಳಗಿನ ಹಕ್ಕುಗಳನ್ನು ಒಳಗೊಂಡಿರುತ್ತದೆ

- ಜೀವಿಸುವ ಹಕ್ಕು
- ಉನ್ನತ ಮಟ್ಟದ ಆರೋಗ್ಯದ ಹಕ್ಕು
- ಉನ್ನತ ಮಟ್ಟದ ಜೀವನದ ಹಕ್ಕು
- ಹುಟ್ಟಿದ ಕೂಡಲೇ ಹೆಸರು ಪಡೆಯುವ ಹಕ್ಕು
- ರಾಷ್ಟ್ರದ ಪೌರತ್ವ ಪಡೆಯುವ ಹಕ್ಕು
- ತಿಳಿದುಕೊಳ್ಳುವ ಹಕ್ಕು
- ತನ್ನ ಪೋಷಕರಿಂದ ಸಾಕಿಸಿಕೊಳ್ಳುವ ಹಕ್ಕು

**ರಕ್ಷಣೆಯ ಹಕ್ಕು:** ಇದು ಈ ಕೆಳಗಿನ ಹಕ್ಕುಗಳನ್ನು ಒಳಗೊಂಡಿರುತ್ತದೆ

- ಎಲ್ಲಾ ರೀತಿಯಲ್ಲಿ ಶೋಷಣೆಯಿಂದ ಸ್ವಾತಂತ್ರ್ಯದ ಹಕ್ಕು
- ಬೈಗುಳದಿಂದ ಮುಕ್ತಿಯ ಹಕ್ಕು
- ಅನಾಗರೀಕ ನಡತೆಯ ವಿರುದ್ಧ ಹಕ್ಕು
- ಯುದ್ದದ ಸಂದರ್ಭದಲ್ಲಿ ಮತ್ತು ತುರ್ತು ಪರಿಸ್ಥಿತಿಯಲ್ಲಿ ವಿಶೇಷ ರಕ್ಷಣೆಯ ಹಕ್ಕು.


**ಅಭಿವೃದ್ಧಿಯ ಹಕ್ಕು:** ಇದರಲ್ಲಿ ಈ ಕೆಳಗಿನ ಹಕ್ಕುಗಳು ಸೇರಿವೆ.

- ಶಿಕ್ಷಣದ ಹಕ್ಕು
- ಎಳೆ ಪ್ರಾಯದಲ್ಲಿ ಅಭಿವೃದ್ಧಿಯಾಗುವ ಹಕ್ಕು
- ಸಾಮಾಜಿಕ ಭದ್ರತೆಯ ಹಕ್ಕು
- ವಿರಾಮದ ಹಕ್ಕು
- ಸಾಂಸ್ಕೃತಿಕ ಹಕ್ಕು

**ಭಾಗವಹಿಸುವ ಹಕ್ಕು :** ಇದು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ

- ಮಕ್ಕಳ ವಿಚಾರಗಳಿಗೆ ಮನ್ನಣೆ ಪಡೆಯುವ ಹಕ್ಕು
- ವಿಚಾರಗಳನ್ನು ಪ್ರತಿಪಾದಿಸುವ ಹಕ್ಕು
- ಎಲ್ಲಾ ಅಗತ್ಯವಿರುವ ಮಾಹಿತಿಯನ್ನು ಪಡೆಯುವ ಹಕ್ಕು
- ಯೋಚಿಸುವ ಸ್ವಾತಂತ್ರ್ಯದ ಹಕ್ಕು
- ಧರ್ಮದ ಸ್ವಾತಂತ್ರ್ಯ ಹಕ್ಕು
- ಆತ್ಮ ಸಾಕ್ಷಿಯ ಹಕ್ಕು





## 3.5 ಅಂತಾರಾಷ್ಟ್ರಿಯ ಕಾರ್ಮಿಕ ಯೋಜನೆ ಮತ್ತು ಬಾಲಕಾರ್ಮಿಕತೆ

ಅಂತಾರಾಷ್ಟ್ರೀಯ ಕಾರ್ಮಿಕ ಸಂಘ ಇದು 1919 ರಲ್ಲಿ ಸ್ಥಾಪನೆ ಆಯಿತು. ಅಂದಿನಿಂದ ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಕೆಲಸ ಮಾಡುತ್ತಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘವು ತನ್ನ ಮೊದಲನೇ ಸಮಾವೇಶದಲ್ಲಿಯೇ 14 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳು ದುಡಿಯುವುದನ್ನು ನಿಷೇಧಿಸಿದೆ.

### 3.5.1 ಕನಿಷ್ಠ ಪ್ರಾಯದ ಸಮಾವೇಶ 1973

ಬಾಲಕಾರ್ಮಿಕತೆಯ ಬಗ್ಗೆ ವ್ಯವಸ್ಥೆ ಮಾಡಿದ ಅತ್ಯಂತ ಮಹತ್ವದ ಸಮಾವೇಶ ಇದಾಗಿದೆ. ಇದರಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಕನಿಷ್ಠ ವಯಸ್ಸನ್ನು ನಿರ್ಧಾರ ಮಾಡಲು ಒತ್ತು ಕೊಡಲು ತೀರ್ಮಾನಿಸಲಾಗಿತ್ತು. ಎಲ್ಲಾ ಸದಸ್ಯ ರಾಷ್ಟ್ರಗಳು ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ರಾಷ್ಟ್ರೀಯ ನೀತಿಯನ್ನು ಹಮ್ಮಿಕೊಳ್ಳುವಂತೆ ಕೋರಲು ನಿರ್ಣಯವನ್ನು ಕೈಗೊಳ್ಳಲಾಗಿದೆ. ಕಾರ್ಮಿಕರ ಕನಿಷ್ಠ ವಯಸ್ಸು ಕಡ್ಡಾಯ ಶಿಕ್ಷಣದ ಗರಿಷ್ಠ ವಯೋಮಿತಿಯಷ್ಟು ಇರುವುದು ಅವಶ್ಯಕ, ಆದರೆ ಯಾವ ಸಂದರ್ಭದಲ್ಲಿಯೂ ಅದು 15 ವರ್ಷಕ್ಕಿಂತ ಕಡಿಮೆ ಇರಬಾರದು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಶಿಕ್ಷಣದ ವ್ಯವಸ್ಥೆ ಮತ್ತು ಅವಕಾಶಗಳು ಕಡಿಮೆ ಇರುವುದರಿಂದ ಅಲ್ಲಿ ಗರಿಷ್ಠ ವಯೋಮಿತಿ 14 ಇರಬಹುದು, ಉಳಿದ ರಾಷ್ಟ್ರಗಳಲ್ಲಿ ಅದು ಆರಂಭದಲ್ಲಿ 15 ಆಗಿರಬೇಕು ಮತ್ತು ನಿಧಾನವಾಗಿ ವಯೋಮಿತಿಯನ್ನು 18 ರವರೆಗೆ ಏರಿಸಬೇಕು. ಕಾರ್ಮಿಕರಾಗಲು ಕನಿಷ್ಠ ವಯೋಮಿತಿ ಸ್ಥಿರವಾಗಿ ನಿಲ್ಲಬಾರದು ಅದು ಹೆಚ್ಚುತ್ತಾ ಹೋಗುವುದು ಅವಶ್ಯ.

### 3.5.2 ನಿಕೃಷ್ಟ ರೀತಿಯ ಬಾಲಕಾರ್ಮಿಕತೆಯ ಸಮಾವೇಶ 1999

ಈ ಸಮಾವೇಶದಲ್ಲಿ ಎಲ್ಲಾ ರೀತಿಯ ನಿಕೃಷ್ಟ ಪರಿಸ್ಥಿಯ ಬಾಲಕಾರ್ಮಿಕತೆಯನ್ನು ಕೂಡಲೇ ನಿಲ್ಲಿಸುವಂತೆ ನಿರ್ಣಯ ತೆಗೆದುಕೊಳ್ಳಲಾಯಿತು. ಇದನ್ನು 18 ವರ್ಷಕ್ಕಿಂತ ಕಡಿಮೆ ಇರುವ ಎಲ್ಲಾ ಮಕ್ಕಳಿಗೂ ಅನ್ವಯಿಸಲಾಯಿತು. ಸಮಾವೇಶದಲ್ಲಿ ನಿಕೃಷ್ಟ ರೀತಿಯ ಬಾಲಕಾರ್ಮಿಕತೆ ಎಂದರೆ ಏನು ಎಂಬುದಕ್ಕೆ ವಿವರಣೆಯನ್ನು ಕೊಡಲಾಯಿತು. ಗುಲಾಮಗಿರಿಯ ಎಲ್ಲಾ ಪ್ರಕಾರಗಳು ಹಾಗೂ ಇದೇ ರೀತಿಯ ಮಕ್ಕಳ ಮಾರಾಟ ಮತ್ತು ಮಕ್ಕಳ ಸಾಗಾಣಿಕೆ, ಮಕ್ಕಳನ್ನು ಯುದ್ಧಗಳಲ್ಲಿ ತೊಡಗಿಸಿಕೊಳ್ಳುವುದು, ಕಡ್ಡಾಯವಾಗಿ ಕೆಲಸಮಾಡಿಸುವುದು, ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು, ಮಕ್ಕಳನ್ನು ಅಶ್ಲೀಲ ಚಿತ್ರ ತಯಾರಿಸಲು ಬಳಸಿಕೊಳ್ಳುವುದು ಇತ್ಯಾದಿ.

ಈ ಸಮಾವೇಶದಲ್ಲಿ "ಅಪಾಯಕಾರಿ ಕೆಲಸ" ಎಂದರೆ ಏನೆಂಬುದನ್ನು ಸಹ ವಿವರಿಸಲಾಗಿದೆ. ಇದರ ಪ್ರಕಾರ ದೈಹಿಕ, ಮಾನಸಿಕ ಹಾಗೂ ಲೈಂಗಿಕವಾಗಿ ಮಕ್ಕಳನ್ನು ದುರುಪಯೋಗ ಗೊಳಿಸುವುದು, ಭೂಮಿ ಅಡಿಯಲ್ಲಿನ ಕೆಲಸ, ನೀರಿನ ಅಡಿಯಲ್ಲಿ ಕೆಲಸ ಹಾಗೂ ಅಪಾಯಕಾರಿ ಎತ್ತರದಲ್ಲಿನ ಕೆಲಸ, ಅಪಾಯಕಾರಿ ಯಂತ್ರಗಳೊಂದಿಗೆ ಕೆಲಸ ಇತ್ಯಾದಿ ಅಪಾಯಕಾರಿ ಕೆಲಸವೆಂದು ಪರಿಗಣಿಸಲಾಯಿತು.

### 3.5.3ಅಂತಾರಾಷ್ಟ್ರೀಯ ಬಾಲಕಾರ್ಮಿಕ ನಿರ್ಮೂಲನ ಕಾರ್ಯಕ್ರಮ



**(ಐ.ಪಿ.ಇ.ಸಿ)**

ಈ ಕಾರ್ಯಕ್ರಮವು 60 ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಅನುಷ್ಠಾನವಾಗುತ್ತಿದ್ದು, ಈ ಕಾರ್ಯಕ್ರಮದ ಮೂಲಕ ಆ ರಾಷ್ಟ್ರಗಳ ಬಾಲಕಾರ್ಮಿಕತೆಯ ನಿರ್ಮೂಲನ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಅಗತ್ಯವಾದ ನೆರವು, ತಾಂತ್ರಿಕ ಸಲಹೆ, ಸಹಕಾರ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

**ಐ.ಪಿ.ಇ.ಸಿ ಕಾರ್ಯಕ್ರಮದ ಆದ್ಯತೆಗಳು:**

- ಜೀತದಲ್ಲಿರುವ ಮಕ್ಕಳು
- ಅಪಾಯಕಾರಿ ಕೆಲಸದಲ್ಲಿ ತೊಡಗಿರುವ ಮಕ್ಕಳು
- ಅಪಾಯಕ್ಕೆ ಸಿಗಬಹುದಾದ ಹಾಗು ದುರ್ಬಲ ವರ್ಗದ ಮಕ್ಕಳು


ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು, ಬಾಲಕಾರ್ಮಿಕರನ್ನು ಕೆಲಸದ ಸ್ಥಳಗಳಿಂದ ಬಿಡಿಸಲು, ಅವರನ್ನು ಪುನರ್‌ವಸತಿ ಗೊಳಿಸಲು ಅಪಾಯಕಾರಿ ಕ್ಷೇತ್ರದಿಂದ ಬಾಲಕಾರ್ಮಿಕರನ್ನು ಬಿಡಿಸಲು, ಕೆಲಸ ಮಾಡುವ ಸ್ಥಳದ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಈ ಯೋಜನೆ ಸಹಾಯ ಮಾಡುವುದು.

**ಐ.ಪಿ.ಇ.ಸಿ ಮುಖ್ಯ ಚಟುವಟಿಕೆಗಳು:**

- ಪೋಷಕರನ್ನು ಪ್ರೇರೇಪಿಸಿ ಅವರು ಬಾಲಕಾರ್ಮಿಕತೆಯ ವಿರುದ್ಧವಾಗಿ ಕೆಲಸ ಮಾಡುವಂತೆ ಮಾಡುವುದು.
- ಸಮಸ್ಯೆಯ ಬಗ್ಗೆ ಅರಿವು ಕೊಡಲು ಸಾಂಸ್ಥಿಕ ವ್ಯವಸ್ಥೆಯನ್ನು ಮಾಡುವುದು ಮತ್ತು ಪರಿಸ್ಥಿತಿಯನ್ನು ವಿಶ್ಲೇಷಿಸುವುದು.
- ಬಾಲಕಾರ್ಮಿಕರನ್ನು ಬಿಡಿಸುವ, ಪುನರ್ವಸತಿಗೊಳಿಸುವ ಮತ್ತು ಅಭಿವೃದ್ಧಿ ಪಡಿಸುವ ಕಾನೂನುಗಳನ್ನು ರಚಿಸುವುದು, ಅಭಿವೃದ್ಧಿ ಪಡಿಸುವುದು, ಪ್ರಚಾರ ಮಾಡುವುದು ಮತ್ತು ಅದನ್ನು ಜ್ಯಾರಿಗೊಳಿಸುವುದು.

ಐ.ಪಿ.ಇ.ಸಿ ನಮ್ಮ ದೇಶದಲ್ಲಿ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಕರ್ನಾಟಕ ಬಾಲಕಾರ್ಮಿಕ ಯೋಜನೆ ಸಹ ಒಂದಾಗಿರುತ್ತದೆ.





## 3.6 ಕರ್ನಾಟಕ ಬಾಲಕಾರ್ಮಿಕ ಯೋಜನೆ

ಈ ಯೋಜನೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಇಟಲಿ ಸರಕಾರದ ದ್ವಿಪಕ್ಷಿಯ ತಾಂತ್ರಿಕ ಸಹಕಾರದ ಪ್ರಕ್ರಿಯೆಯ ಫಲಿತಾಂಶವಾಗಿದೆ. ಇದು ಮೂರು ವರ್ಷಗಳ ಯೋಜನೆ ಆಗಿದ್ದು 2005 ರಲ್ಲಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಇದರ ಮುಖ್ಯ ಗುರಿ ಕರ್ನಾಟಕ ರಾಜ್ಯದ ಬೀದರ್, ಮತ್ತು ಚಾಮರಾಜ ನಗರ ಜಿಲ್ಲೆಗಳಲ್ಲಿ ಬಾಲಕಾರ್ಮಿಕತೆಯ ನಿರ್ಮೂಲನೆ ಮತ್ತು ಬಾಲಕಾರ್ಮಿಕರ ಪುನರ್ ವಸತಿಗೊಳಿಸುವುದಾಗಿದೆ.

ಇದು ಒಂದು ಬಾಲಕಾರ್ಮಿಕತೆಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಂಪೂರ್ಣವಾದ ಯೋಜನೆಯಾಗಿದ್ದು, ನಾಲ್ಕು ಹಂತಗಳಲ್ಲಿ ಅನುಷ್ಠಾನವಾಗುವುದು. ಸಮುದಾಯ, ಕ್ಷೇತ್ರಮಟ್ಟ, ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದಲ್ಲಿ ಅನುಷ್ಠಾನವಾಗುವುದು. ಇದರಿಂದ ಎಲ್ಲಾ ಮಟ್ಟದಲ್ಲಿ ಯೋಜನೆಯ ಪರಿಣಾಮ ಉಂಟಾಗುವುದು.

**ಯೋಜನೆಯ ತಂತ್ರಗಳು:**


- ಸಮುದಾಯ, ಕ್ಷೇತ್ರ ಮತ್ತು ಸಣ್ಣ ಮಟ್ಟದ ಸೇವಾ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಗುರುತಿಸುವುದು.
- ಈ ಚಟುವಟಿಕೆಗಳ ಅಭಿವೃದ್ಧಿ, ಅನ್ವೇಷಣೆ ಇತ್ಯಾದಿಗಳನ್ನು ಹಮ್ಮಿಕೊಳ್ಳುವುದು.
- ಈ ಕ್ಷೇತ್ರಗಳಲ್ಲಿ ಉತ್ತಮವಾದ ಚಟುವಟಿಕೆಗಳನ್ನು ಗುರುತಿಸಿ ಇತರ ಕಡೆಗಳಲ್ಲಿ ಪ್ರಸಾರ ಮಾಡುವುದು ಮತ್ತು ಇವುಗಳ ಮೂಲಕ ಸಮುದಾಯಗಳನ್ನು ಸಶಕ್ತಗೊಳಿಸುವುದು.

ರಾಜ್ಯ ಮಟ್ಟದಲ್ಲಿ ಈ ಯೋಜನೆಯಿಂದ ದೊರಕುವ ಮಾಹಿತಿ ಮತ್ತು ಅನುಭವವನ್ನು ರಾಜ್ಯದ ಯೋಜನೆಯೊಂದಿಗೆ ಹಂಚಿಕೊಳ್ಳಲು ಅವಕಾಶ ಇದೆ. ಇದರಿಂದ ರಾಜ್ಯದ ನೀತಿಗಳು ಮತ್ತು ಯೋಜನೆಗಳು ಹೆಚ್ಚು ಉಪಯುಕ್ತವಾಗಲು ಸಾಧ್ಯವಿದೆ. ಈ ಯೋಜನಯಿಂದ ಆಗುವ ಸಂಶೋಧನೆ, ಸಾಕ್ಷಾಧಾರ ಮಾಹಿತಿಗಳನ್ನು ಪ್ರಸರಿಸುವ ಪ್ರಕ್ರಿಯೆ ಮುಂತಾದವುಗಳು. ಕರ್ನಾಟಕ ರಾಜ್ಯ ಬಾಲಕಾರ್ಮಿಕ ಕ್ರಿಯಾಯೋಜನೆಯನ್ನು ಪರಿಷ್ಕರಿಸಲು ಆಸ್ಪದ ಇದೆ.

ಕ್ಷೇತ್ರ ಮಟ್ಟದಲ್ಲಿ ಯೋಜನೆಯು ಬಾಲಕಾರ್ಮಿಕತೆಯ ಬೇಡಿಕೆ ಮತ್ತು ಪೂರೈಕೆಗಳನ್ನು ಗಮನದಲ್ಲಿಟ್ಟುಕೊಂಡಿದೆ. ಬೇಡಿಕೆಯ ವಿಭಾಗದಲ್ಲಿ, ಬಾಲಕಾರ್ಮಿಕತೆಯ ಕಾರಣಗಳನ್ನು ಅನ್ವೇಷಣೆ ಮಾಡಲು ಪ್ರಯತ್ನಿಸುತ್ತಿದೆ ಹಾಗೂ ಮಾಲೀಕರ ಮತ್ತು ಕಾರ್ಮಿಕ ಸಂಘಟನೆಗಳ ಜೊತೆಯಲ್ಲಿ ಕೆಲಸ ಮಾಡುತ್ತಾ ಬಾಲಕಾರ್ಮಿಕ ರಹಿತ ತಾಂತ್ರಿಕತೆಯನ್ನು ಪರಿಚಯಿಸಲು ಮತ್ತು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಲು ಪ್ರಯತ್ನಿಸುವುದು.

ಪೂರೈಕೆ ವಿಭಾಗದಲ್ಲಿ ಬಾಲಕಾರ್ಮಿಕತೆಯನ್ನು ತಡೆಯಲು ಪೋಷಕರಿಗೆ ಮತ್ತು ಹೆಚ್ಚು ಪ್ರಾಯದ ಬಾಲಕಾರ್ಮಿಕರಿಗೆ ಜೀವನಾಧಾರಗಳನ್ನು ಒದಗಿಸಲು, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳನ್ನು ಒದಗಿಸಲಾಗುವುದು. ಅದೇ ರೀತಿಯಲ್ಲಿ ವಿವಿಧ ಭಾಗೀದಾರರ ಮನಸ್ಸನ್ನು ಬದಲಾಯಿಸಲು ಸಹ ಪ್ರಯತ್ನಿಸಲಾಗುವುದು.





**ಕರ್ನಾಟಕ ಬಾಲಕಾರ್ಮಿಕ ಯೋಜನೆಯ ಧ್ಯೇಯಗಳು**

1. ಶಿಕ್ಷಣ ಮತ್ತು ಅರಿವಿನ ಮೂಲಕ ಬಾಲಕಾರ್ಮಿಕತೆ ಆಗದಂತೆ ನೋಡಿಕೊಳ್ಳುವುದು. ಮತ್ತು ಬಾಲಕಾರ್ಮಿಕರನ್ನು ಬಿಡುಗಡೆ ಗೊಳಿಸುವುದು
2. ಸ್ವ ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಮೂಲಕ ಗಳಿಕೆಯ ಶಕ್ತಿಯನ್ನು ಹೆಚ್ಚಿಸುವುದು.
3. ಸ್ವ ಸಹಾಯ ಸಂಘಗಳ ಮೂಲಕ ಸಾಮಾಜಿಕ ಬದಲಾವಣೆ ಹಾಗೂ ಸ್ವ ಸಹಾಯ ಸಂಘಗಳ ಒಕ್ಕೂಟ ರಚನೆ.
4. ಸಶಕ್ತಿಗಾಗಿ ಮತ್ತು ಸರಕಾರದ ಕಾರ್ಯಕ್ರಮಗಳ ಲಾಭ ಪಡೆಯಲು ಸಾಂಘಿಕ ಅನುಸಾಂದನೆ ನಡೆಸುವುದು.
5. ಹದಿಹರೆಯದವರಿಗೆ ವೃತ್ತಿ ಶಿಕ್ಷಣದ ತರಬೇತಿ.
6. ಸ್ಥಳೀಯ ಉದ್ಯಮಗಳಲ್ಲಿ ಕೆಲಸ ಮಾಡುವ ವಾತಾವರಣವನ್ನು ಉತ್ತಮಪಡಿಸುವುದು.
7. ಸಮುದಾಯ ಪರಿವೀಕ್ಷಣೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದು. ಸಮುದಾಯ ಪರಿವೀಕ್ಷಣೆ ವ್ಯವಸ್ಥೆಯಲ್ಲಿ ಪಾಲೊಳ್ಳುವ ಸಂಘ ಸಂಸ್ಥೆಗಳ ಶಕ್ತಿಯನ್ನು ಅಭಿವೃದ್ಧಿ ಪಡಿಸುವುದು. ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು, ಯುವಕ ಮಂಡಲಗಳು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು, ಅಂಗನವಾಡಿ ಸಭೆ, ಹಾಲಿನ ಸೊಸೈಟಿ, ಅರಣ್ಯ ಸಮಿತಿ, ನೀರಾವರಿ ಸಮಿತಿ, ಗ್ರಾಮ ಪಂಚಾಯತ್ ಮುಂತಾದ ಸಂಸ್ಥೆಗಳ ಶಕ್ತಿಯನ್ನು ಹೆಚ್ಚಿಸಿ ಅವರನ್ನು ಬಾಲಕಾರ್ಮಿಕತೆಯ ನಿರ್ಮೂಲನೆಯ ಪರಿವೀಕ್ಷಣೆಯಲ್ಲಿ ತೊಡಗಿಸಿಕೊಳ್ಳುವುದು.
8. ತಳಮಟ್ಟದ ಸಂಸ್ಥೆಗಳನ್ನು, ಕ್ಷೇತ್ರ, ಜಿಲ್ಲಾ ಮತ್ತು ರಾಜ್ಯಮಟ್ಟದ ಸಂಸ್ಥೆಗಳ ಬಲವರ್ಧನೆಗೊಳಿಸುವುದು.
9. ಸಂಶೋಧನೆ, ವಿನೂತನ ಕ್ರಮಗಳ ಅನ್ವೇಷಣೆಗಳಿಗೆ ಪ್ರೋತ್ಸಾಹ ನೀಡುವುದು. ಸೇತುಬಂಧ ಶಾಲೆ, ಕಲಿಕೆಯ ಸಾಮಗ್ರಿಗಳ ಅಭಿವೃದ್ಧಿ, ತಾಂತ್ರಿಕತೆಗೆ ಸಂಬಂಧಪಟ್ಟ ವಿಷಯಗಳು, ವೃತ್ತಿ ಶಿಕ್ಷಣ, ಬಾಲಕಾರ್ಮಿಕತೆಯ ಅನೌಪಚಾರಿಕ ವಿಷಯಗಳು, ಮಕ್ಕಳ ಸಾಗಾಟ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಸಲಹೆಗಳನ್ನು ವ್ಯವಸ್ಥೆ ಮಾಡುವುದು.



### 3.6.1 ಯೋಜನೆಯ ಪ್ರತಿಫಲಗಳು

- ಸಮುದಾಯದವರಿಗೆ ಬಲವರ್ಧನೆ ಮಾಡಿದರೆ ಮತ್ತು ಸರಿಯಾದ ಮಾಹಿತಿ ಒದಗಿಸಿದರೆ, ಯೋಜನೆಯಿಂದ ಒದಗಿಸಲ್ಪಡುವ ಕಾರ್ಯಕ್ರಮಗಳು ಸ್ವಯಂ ನಡೆದುಕೊಂಡು ಹೋಗಲು ದಾರಿ ಆಗುವುದು. ಬಾಲಕಾರ್ಮಿಕತೆ ಬಗ್ಗೆ ಸಮುದಾಯಕ್ಕೆ ಮಾಹಿತಿ ಮತ್ತು ಅರಿವು ಕೊಡಲು ಹೊಸ ಹೊಸ ಮಾದರಿಗಳನ್ನು ಉಪಯೋಗಿಸಲಾಗುವುದು. ಬಾಲಕಾರ್ಮಿಕತೆ ನಿರ್ಮೂಲನದ ಬಗ್ಗೆ ಇರುವ ಉತ್ತಮವಾದ ಪೋಸ್ಟರ್‌ಗಳನ್ನು ಉಪಯೋಗಿಸಲಾಗುತ್ತಿದೆ. ಇದಲ್ಲದೆ ಈ ಕೆಳಗಿನ ಐ.ಇ.ಸಿ ವಸ್ತುಗಳ ಪ್ರಕಾರಗಳನ್ನು ಉಪಯೋಗಿಸಲಾಗುವುದು.
    - ಗೋಡೆ ಬರಹ
    - ಡಾಕ್ಯುಮೆಂಟರಿ ವಿಡಿಯೋ ಸಿನೆಮಾಗಳು
    - ಗೊಂಬೆಗಳ ಆಟ
    - ಬೀದಿನಾಟಕ

ಬೀದಿ ನಾಟಕ ಮತ್ತು ಗೊಂಬೆ ಆಟಗಳು ಶಾಲಾ ಮಕ್ಕಳ ಮತ್ತು ಬಾಲಕಾರ್ಮಿಕರ ಮನಸ್ಸನ್ನು ಪರಿವರ್ತಿಸಲು ಸಹಕಾರಿ ಆಗುವುದು. ಬಾಲಕಾರ್ಮಿಕತೆಯ ನಿರ್ಮೂಲನೆ ಬಗ್ಗೆ ಇರುವ ಬೀದಿ ನಾಟಕಗಳ ಹೊತ್ತಿಗೆಗಳನ್ನು ಹೊರತರಲಾಗಿದೆ. ಇವನ್ನು ಆಸಕ್ತರು ಉಪಯೋಗಿಸಬಹುದಾಗಿದೆ.

- ಸಮುದಾಯದ ಪರಿವೀಕ್ಷಣೆ ವ್ಯವಸ್ಥೆಯನ್ನು ರೂಪಿಸಲಾಗುವುದು. ಈ ಕೆಳಗಿನ ಸಂಸ್ಥೆಗಳ ಸದಸ್ಯರು ಮುಖ್ಯ ಪಾತ್ರ ವಹಿಸಬಹುದು.
    - ಎಸ್.ಡಿ.ಎಂ.ಸಿ ಸದಸ್ಯರು
    - ಮಹಿಳಾ ಮಂಡಲ ಸದಸ್ಯರು
    - ಯುವಕ ಮಂಡಲ ಸದಸ್ಯರು
    - ಅಂಗನವಾಡಿ ಸಮಿತಿ
    - ಸ್ವ ಸಹಾಯ ಸಂಘಗಳ ಸದಸ್ಯರು
    - ಗ್ರಾಮ ಪಂಚಾಯತ್ ಸದಸ್ಯರು

ಇವರು ಬಿಡುಗಡೆ ಹೊಂದಿದ ಮತ್ತು ಪುನರ್ವಸತಿ ಆಗಿರುವ ಬಾಲಕಾರ್ಮಿಕರ ಶಿಕ್ಷಣದ ಅಭಿವೃದ್ಧಿ ಇತ್ಯಾದಿಗಳನ್ನು ಪರಿವೀಕ್ಷಣೆ ಮಾಡುವರು.

- ಯೋಜನೆಯು ಕುಟುಂಬವನ್ನು ಒಂದು ಘಟಕವಾಗಿ ತೆಗೆದುಕೊಂಡು, ಕುಟುಂಬದ ಅಭಿವೃದ್ಧಿಯ ಕಡೆಗೆ ಗಮನ ಕೊಡುತ್ತಿದೆ. ಇದರಿಂದ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆ ಮಾಡಿದಾಗ, ಕುಟುಂಬದ ಇತರ ಸದಸ್ಯರು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಲಾಭವನ್ನು ಪಡೆಯಬಹುದಾಗಿದೆ. ಯೋಜನೆಯ ಲಾಭವು ಇಡೀ ಕುಟುಂಬಕ್ಕೆ ಸಿಗುವುದರಿಂದ, ಕುಟುಂಬದ ಇತರ ಸದಸ್ಯರು ಸಹ ಲಾಭ ಪಡೆಯಲು ಅವಕಾಶ ಇದೆ.
- ಕುಟುಂಬಕ್ಕೆ ಜೀವನಾಧಾರ ಒದಗಿಸುವ ಕಸುಬುಗಳನ್ನು/ ಉಪಕಸುಬುಗಳನ್ನು ನಡೆಸಿ ಹೆಚ್ಚು ಸಂಪಾದಿಸುವ ಅಥವಾ ಸಂಪಾದನೆ ಹೆಚ್ಚು ಮಾಡುವಂತಾಗುವುದು ( ದುರ್ಬಲ ವರ್ಗದ ಪೋಷಕರಿಗೆ ಮತ್ತು ಹದಿಹರೆಯದ ಯುವಕರಿಗೆ)
- ಯೋಜನೆಯು ಉದ್ಯೋಗ ಮತ್ತು ಉದ್ಯೋಗಸತ್ವವನ್ನು ಮೂರು ಹಂತಗಳಲ್ಲಿ ಪ್ರಯತ್ನಿಸುತ್ತಿದೆ. ಪ್ರಾಥಮಿಕ ಹಂತ (ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು) ದ್ವಿತೀಯ ಹಂತ (ಉತ್ಪಾದನೆ ಮತ್ತು ಮಾರಾಟ) ಮತ್ತು ತೃತೀಯ ಹಂತ (ಸೇವಾಕ್ಷೇತ್ರ), ಯೋಜನೆಯು ಈ ಮೂರು ವಿಭಾಗಗಳಲ್ಲಿ ಅನುಷ್ಠಾನ ಗೊಳಿಸಬಹುದಾದ ಅನುಕೂಲಕರವಾದ,



ಪಾಲಿಸಬಹುದಾದ ಮತ್ತು ಉಪಯೋಗಿಸಬಹುದಾದ ವೃತ್ತಿ ಶಿಕ್ಷಣದ ಬಗ್ಗೆ ಸಂಶೋಧನೆ ನಡೆಸುವುದು.

- ಬಾಲಕಾರ್ಮಿಕತೆಯ ಕಾರಣಗಳು ಮತ್ತು ಪರಿಣಾಮಗಳ ಬಗ್ಗೆ ಸರಿಯಾದ ಚಿತ್ರಣ ಇರುವುದಿಲ್ಲ. ಕಾರ್ಮಿಕ ಕಾನೂನಿನ ಪ್ರಕಾರ 14 ವರ್ಷಗಳ ನಂತರ ಮಕ್ಕಳು ಕೆಲಸಮಾಡಬಹುದಾಗಿದೆ. ಆದರೆ ವೃತ್ತಿಶಿಕ್ಷಣವು 10+2 ಹಂತದಲ್ಲಿ ಮಾತ್ರ ಸಿಗುತ್ತದೆ. ಅಂದರೆ 18+ ವರ್ಷಗಳ ನಂತರ ಕಾರ್ಮಿಕರಾದರೆ, ಅವರು ಯಾವುದಾದರೂ ವೃತ್ತಿ ಶಿಕ್ಷಣದ ಲಾಭ ಪಡೆದುಕೊಳ್ಳಬಹುದು ಇಲ್ಲದೆ ಇದ್ದರೆ ಅವರು ಕೌಶಲ್ಯರಹಿತ ಕಾರ್ಮಿಕರಾಗಬೇಕಾಗುವುದು. ಅವರಿಗೆ ಉತ್ತಮ ಸಂಪಾದನೆ ಇರುವುದಿಲ್ಲ. ಇದರಿಂದ ಅವರು ಬಡತನದಿಂದ ಜೀವನ ಸವೆಸಬೇಕಾಗುವುದು. ಇದನ್ನು ತಪ್ಪಿಸಲು 14–18 ವರ್ಷದೊಳಗೆ ವೃತ್ತಿ ಶಿಕ್ಷಣ ದೊರಕಿಸುವ ವ್ಯವಸ್ಥೆ ಆಗಬೇಕು.
- ಸೇತುಬಂಧ ಶಾಲೆಯಲ್ಲಿ ಕಲಿಸಲು ಅನುಕೂಲಕರವಾದ ಮತ್ತು ಅವಶ್ಯಕವಾದ ಕಲಿಕಾ ವಸ್ತುಗಳನ್ನು ತಯಾರಿಸುವುದು.
- ಮಕ್ಕಳ ಚಲನವಲನಗಳನ್ನು ಗಮನದಲ್ಲಿ ಇಡುವ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿ ಉಪಯೋಗಿಸುವ ವ್ಯವಸ್ಥೆ ಆಗಬೇಕು.
- ಸಾಮಾಜಿಕ ಭದ್ರತೆ ಮತ್ತು ಬಾಲಕಾರ್ಮಿಕ ಪಾಲಿಸಿಗಳ ಬಗ್ಗೆ ಸಂಶೋಧನೆಯನ್ನು ಔಪಚಾರಿಕ ರಂಗದಲ್ಲಿನ ಬಾಲಕಾರ್ಮಿಕತೆಯ ನಿವಾರಣೆಗೆ ತಾಂತ್ರಿಕತೆಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಮಾಲಿಕರ ಮನವೊಲಿಸುವುದು.
- ತನಗೆ ವಹಿಸಿದ ಕೆಲಸವನ್ನು ನಿರ್ವಹಿಸಲು, ಯೋಜನೆಯು ಕಾರ್ಮಿಕರ ಸಂಘಟನೆ, ಮಾಲೀಕರ ಸಂಘಟನೆ, ಸರ್ಕಾರೇತರ ಸಂಸ್ಥೆಗಳು, ಸಂಘ ಸಂಸ್ಥೆಗಳು ಎಲ್ಲಾ ಹಂತ ಸರ್ಕಾರಿ ನೌಕರರು ಸೇರಿ ಕೆಲಸ ಮಾಡುವುದು.

ಈ ಯೋಜನೆಯಿಂದ

- ➢ 9–14 ವರ್ಷದ 5000 ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ ಅವರನ್ನು ಬಿಡುಗಡೆಗೊಳಿಸಿ, ಸೇತುಬಂಧ ಶಾಲೆಗೆ ಸೇರಿಸುವುದು. ಇದಕ್ಕಾಗಿ ಸೇತುಬಂಧ ಶಾಲೆಗಳನ್ನು ತೆರೆಯಲಾಗುವುದು.
- ➢ 14–18 ವರ್ಷದ 4000 ಹದಿಹರೆಯದವರಿಗೆ ವೃತ್ತಿಶಿಕ್ಷಣ ಒದಗಿಸುವುದು. ಇದರಿಂದ ಅವರಿಗೆ ಕೆಲಸ ಸಿಗುವ ಅವಕಾಶ ಹೆಚ್ಚಾಗುವುದು.
- ➢ 1000 ಜನರಿಗೆ (ಬಾಲಕಾರ್ಮಿಕರ ಮನೆಯವರು) ವೃತ್ತಿ ಶಿಕ್ಷಣ ಒದಗಿಸುವುದು.
- ➢ 180 ಸ್ವ ಸಹಾಯ ಸಂಘಗಳನ್ನು ಒಕ್ಕೂಟಗೊಳಿಸುವುದು. ಇದರಿಂದ ಸಾಂಘಿಕವಾಗಿ ಅವರು ತಮ್ಮನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಕಾರಿ ಆಗುವುದು.
- ➢ 100 ಜನ ಮಾಲಿಕರಿಗೆ ತಮ್ಮ ವ್ಯಾಪಾರ ವಹಿವಾಟುಗಳನ್ನು ಅಭಿವೃದ್ಧಿಗೊಳಿಸಲು ಸಹಕಾರ ಕೊಡುವುದು.



## 3.7 ಭಾರತದ ಸಂವಿಧಾನದಲ್ಲಿರುವ ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ಬಾಲಕಾರ್ಮಿಕತೆಗೆ ಸಂಬಂಧಪಟ್ಟಂತೆ ಇರುವ ವಿಶೇಷ ಪ್ರಾವಿಷನ್‌ಗಳು

ಭಾರತದ ಸಂವಿಧಾನದಲ್ಲಿ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಒದಗಿಸುವ ಬಗ್ಗೆ, ಮಕ್ಕಳಿಗೆ ರಕ್ಷಣೆ ಒದಗಿಸುವ ಬಗ್ಗೆ, ಸಂವಿಧಾನದಲ್ಲಿ ಹಲವಾರು ಪ್ರಾವಿಷನ್‌ಗಳನ್ನು ಮಾಡಿರುತ್ತಾರೆ.

ಅವುಗಳು ಈ ಕೆಳಗಿನಂತಿವೆ

**ಆರ್ಟಿಕಲ್ – 23** – ಇದು ಮಾನವ ಸಾಗಾಟ ಮತ್ತು ಕಡ್ಡಾಯ ಕೆಲಸದ ಬಗ್ಗೆ ಇದೆ. ಇದರಲ್ಲಿ ಮಾನವ ಸಾಗಾಟ, ಬೇಡುವುದು (ಭಿಕ್ಷೆ ಎತ್ತುವುದು) ಕಡ್ಡಾಯ ಕೆಲಸ ಇತ್ಯಾದಿಗಳನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿದರೆ ಕಾನೂನಿನಂತೆ ಶಿಕ್ಷೆಗೆ ಒಳಪಡಿಸಬಹುದು.

**ಆರ್ಟಿಕಲ್ – 24** – ಮಕ್ಕಳನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ತೊಡಗಿಸಿಕೊಳ್ಳುವುದರ ನಿಷೇಧದ ಬಗ್ಗೆ ಇದೆ. ಇದರ ಪ್ರಕಾರ 14 ವರ್ಷದ ಕೆಳಗಿನ ಮಕ್ಕಳನ್ನು ಯಾವುದೇ ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಅಥವಾ ಯಾವುದೇ ಅಪಾಯಕಾರಿ ಕೆಲಸದಲ್ಲಿ ತೊಡಗಿಸಿ ಕೊಳ್ಳುವುದನ್ನು ನಿಷೇಧಿಸಲಾಗಿದೆ.

**ಆರ್ಟಿಕಲ್ – 39 (ಇ) ಮತ್ತು (ಎಫ್)** – ಇದು ಸರ್ಕಾರ ಅನುಸರಿಸಬೇಕಾದ ಕೆಲವು ನಿಯಮಗಳ ಬಗ್ಗೆ ಇದೆ. ಇದರ ಪ್ರಕಾರ ಸರಕಾರ ಈ ಕೆಳಗಿನವುಗಳನ್ನು ಒದಗಿಸಬೇಕಾಗಿದೆ.

- ಕಾರ್ಮಿಕರ ಆರೋಗ್ಯ ಮತ್ತು ಶಕ್ತಿಯ ಬಗ್ಗೆ ನಿಯಮಗಳನ್ನು ರೂಪಿಸಬೇಕು (ಗಂಡಸರು ಮತ್ತು ಮಹಿಳೆಯರು)
- ಎಳೆ ಪ್ರಾಯದ ಮಕ್ಕಳ ವಯಸ್ಸನ್ನು ದುರುಪಯೋಗಪಡಿಸಿಕೊಳ್ಳಬಾರದು.
- ನಾಗರೀಕರಿಗೆ ಅವರ ಪ್ರಾಯ ಮತ್ತು ಶಕ್ತಿಗೆ ಅನುಗುಣವಾಗದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಾರದು.
- ಮಕ್ಕಳಿಗೆ ಅವರು ಆರೋಗ್ಯಕರವಾಗಿ ಬೆಳೆಯಲು ಅವಶ್ಯಕವಾದ ಎಲ್ಲಾ ಸವಲತ್ತುಗಳನ್ನು, ಸಹಕಾರವನ್ನು ಒದಗಿಸಬೇಕು. ಅವರು ಮರ್ಯಾದೆಯಲ್ಲಿ ಹಾಗೂ ಸ್ವಾತಂತ್ರ್ಯದಲ್ಲಿ ಬೆಳೆಯಲು ಅವಕಾಶ ಮಾಡಿಕೊಡಬೇಕು.

**ಆರ್ಟಿಕಲ್ – 21(ಎ)** – 6–14 ವರ್ಷದ ಎಲ್ಲಾ ಮಕ್ಕಳಿಗೆ ವೆಚ್ಚವಿಲ್ಲದ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸಬೇಕು.



## 3.8 ಪ್ರಸ್ತುತ ವಿವಿಧ ಕಾನೂನುಗಳಲ್ಲಿ ಇರುವ ಕಾನೂನು ಬದ್ದ ಅವಕಾಶಗಳು

**1. ಮಕ್ಕಳ (ಕೂಲಿಗಳಾಗಿ ಒತ್ತೆ ಇಡುವುದು) ಕಾಯಿದೆ, 1993**

ಈ ಕಾನೂನು ಮಕ್ಕಳನ್ನು ಒತ್ತೆ ಇಡುವುದನ್ನು ಪ್ರತಿಬಂಧಿಸುತ್ತದೆ.

**2. ಕಾರ್ಖಾನೆಗಳ ಕಾಯಿದೆ, 1948**

1948 ರ ಕಾರ್ಖಾನೆಗಳ ಕಾಯಿದೆಯು 67 ನೆಯ ಪರಚ್ಚೇಧದ ಪ್ರಕಾರ, 14 ವರ್ಷ ಪೂರ್ಣಗೊಳ್ಳದ ಯಾವ ಮಗುವನ್ನೂ ಯಾವುದೇ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಬಿಡುವ ಹಾಗಿಲ್ಲ.

**3. ಪ್ಲಾಂಟೇಶನ್ ಲೇಬರ್ ಆ್ಯಕ್ಟ್, 1951**

ಈ ಕಾಯಿದೆಯ 24 ನೆಯ ಪರಿಚ್ಛೇಧವು ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಳ್ಳುವುದನ್ನು ನಿಷೇಧಿಸುತ್ತದೆ. ಇದು 5 ಅಥವಾ ಅದಕ್ಕಿಂತ ಹೆಚ್ಚು ಹೆಕ್ಟೇರ್ ಇರುವ 15 ಅಥವಾ ಹೆಚ್ಚು ಮಂದಿ ಕಾರ್ಮಿಕರಿರುವ ಚಹಾ, ಕಾಫಿ, ರಬ್ಬರ್, ಏಲಕ್ಕಿ ಇತ್ಯಾದಿ ಎಲ್ಲ ರೀತಿಯ ತೋಟಗಾರಿಕೆಗಳಿಗೂ ಅನ್ವಯಿಸುತ್ತದೆ.

**4. ಗಣಿಗಳ ಕಾಯಿದೆ, 1952**

ಈ ಕಾಯಿದೆ ಹೀಗೆ ಹೇಳುತ್ತದೆ. "ನೆಲಮಟ್ಟದಿಂದ ಕೆಳಗೆ ಅಥವಾ ತೆರೆದ ಬಯಲಿನಲ್ಲಿ ನಡೆಯುತ್ತಿರುವ ಗಣಿಗಾರಿಕೆಯಲ್ಲಿ ಯಾವುದೇ ಮಗುವನ್ನು ಕೆಲಸಕ್ಕೆ ನೇಮಿಸುವಂತಿಲ್ಲ"

**5. ಮರ್ಚೆಂಟ್ ಶಿಪ್ಪಿಂಗ್ ಆ್ಯಕ್ಟ್, 1958**

ಇದರ 21 ನೆಯ ಪರಿಚ್ಛೇಧದ ಪ್ರಕಾರ, ಯಾವುದೇ ಮಗುವನ್ನು , ಯಾವುದೇ ರೀತಿಯಲ್ಲಿ, ಯಾವುದೇ ಮೋಟಾರು ಸಾರಿಗೆ ಸಂಸ್ಥೆಗಳಲ್ಲಿ ಕೆಲಸ ಮಾಡಲು ಬಿಡುವ ಹಾಗಿಲ್ಲ.

**6. ಅಪ್ರೆಂಟಿಸ್‌ಶಿಪ್ ಆ್ಯಕ್ಟ್, 961**


ಇದರ 3ನೇ ಪರಿಚ್ಛೇದ ಹೀಗೆ ಹೇಳುತ್ತದೆ. "ವರ್ಷ ಮೀರಿದ ಹೊರತು, ಹಾಗೂ ನಿಗದಿತ ದೈಹಿಕ ಹಾಗೂ ಶೈಕ್ಷಣಿಕ ಸಾಮರ್ಥ್ಯ ಹೊಂದಿದ ಯಾರೊಬ್ಬರೂ ಯಾವುದೇ ರೀತಿಯ ನಿಗದಿತ ವೃತ್ತಿಗಳಲ್ಲಿ ಅಪ್ರೆಂಟಿಸ್‌ಶಿಪ್ ತರಬೇತಿ ಪಡೆಯುವ ಹಾಗಿಲ್ಲ."

**7. ಬೀಡಿ ಮತ್ತು ಸಿಗಾರ್ ನೌಕರರ ಕಾಯಿದೆ, 1966**

ಈ ಕಾಯಿದೆಯ 24ನೆಯ ಪರಿಚ್ಛೇಧ ಹೀಗಿದೆ. "ಯಾವುದೇ ಕೈಗಾರಿಕೆಗಳ ಆವರಣದಲ್ಲಿ ಯಾವುದೇ ಮಗುವಿನ ಅಗತ್ಯ ಇರಕೂಡದು ಹಾಗೂ ಕೆಲಸ ಮಾಡಲು ಅವಕಾಶ ಕೊಡಬಾರದು."

ಕೈಗಾರಿಕಾ ಆವರಣ ಎಂದರೇನೆಂಬುದನ್ನು 2(1) ವಿಧಿಯು ವಿವರಿಸಿದೆ.





**8. ಜೀತ ಕಾರ್ಮಿಕ ಪದ್ದತಿ ನಿರ್ಮೂಲನಾ ಕಾಯಿದೆ, 1966**

ಈ ಕಾಯಿದೆಯ 4 ನೆಯ ಪರಿಚ್ಛೇಧ ಹೀಗೆ ಹೇಳುತ್ತದೆ. "ಜೀತಪದ್ದತಿಯನ್ನು ರದ್ದುಗೊಳಿಸಲಾಗಿದೆ. ಈ ಕಾಯಿದೆ ಜಾರಿಗೆ ಬಂದ ಮೇಲೆ ಯಾವೊಬ್ಬನೂ ಯಾರನ್ನೂ ಜೀತಕ್ಕೆ ಅಥವಾ ಬಲವಂತದ ಕೆಲಸಕಕ್ಕೆ ಹಚ್ಚುವ ಹಾಗಿಲ್ಲ. ಹಾಗೂ ಜೀತಕ್ಕೆಂದು ಯಾವುದೇ ಮುಂಗಡ ಕೊಡುವಂತಿಲ್ಲ."

**9. ಬಾಲಕಾರ್ಮಿಕ ತಡೆ ಹಾಗೂ ನಿಯಂತ್ರಣ ಕಾಯಿದೆ, 1986**

ಈ ಕಾಯಿದೆ 3 ನೇ ಪರಿಚ್ಛೇಧವು ಶೆಡ್ಯೂಲ್‌ನಲ್ಲಿ ನಮೂದಿಸಿದ ಕೆಲವು ಉದ್ಯೋಗಗಳಲ್ಲಿ ಮಕ್ಕಳು ಕೆಲಸ ಮಾಡುವುದನ್ನು ನಿಷೇಧಿಸಿದೆ. ಇದು ಕಾರ್ಖಾನೆಗಳ ಕಾಯಿದೆ 1948 ರಲ್ಲಿ ನಿರೂಪಿಸಿರುವ ಕಾರ್ಖಾನೆಗಳನ್ನು ಹೊರತು ಪಡಿಸಿ, ಉಳಿದ ಕಾರ್ಖಾನೆಗಳಿಗೆ ಅನ್ವಯವಾಗುತ್ತದೆ.

ಈ ಕಾಯಿದೆಯ 3ನೇ ಪರಿಚ್ಛೇಧವು ಶೆಡ್ಯೂಲ್‌ನಲ್ಲಿ ನಮೂದಿಸಿದ ಕೆಲವು ವೃತ್ತಿಗಳಲ್ಲಿ ಹಾಗೂ ಪ್ರಕ್ರಿಯೆಗಳಲ್ಲಿ ಮಕ್ಕಳು ಕೆಲಸ ಮಾಡುವುದನ್ನು ನಿಷೇಧಿಸಿದೆ. ಈ ಕಾಯಿದೆಯು ಕಾರ್ಖಾನೆಗಳ ಕಾಯಿದೆ, 1948 ರಲ್ಲಿ ನಿರೂಪಿಸಿರುವ ಕಾರ್ಖಾನೆಗಳನ್ನು ಹೊರತುಪಡಿಸಿ, ಉಳಿದ ಕಾರ್ಖಾನೆಗಳಿಗೆ ಅನ್ವಯವಾಗುತ್ತದೆ.

ಬಾಲಕಾರ್ಮಿಕ ಕಾಯಿದೆಯ ಅಡಿಯಲ್ಲಿ ಬರುವ ಎಲ್ಲ ಅಪರಾಧಗಳು ಹಾಗೂ ಕಾರ್ಖಾನೆಗಳ ಕಾಯಿದೆ, 1948, ಗಣಿ ಕಾಯಿದೆ 1952, ಮರ್ಚೆಂಟ್ ಶಿಪ್ಪಿಂಗ್ ಕಾಯಿದೆ 1958 ಮತ್ತು ಮೋಟಾರು ಸಾರಿಗೆ ಕೆಲಸಗಾರರ ಕಾಯಿದೆ 1961 ಇವುಗಳಿಗೆ ಸಂಬಂಧಿಸಿದ ಬಾಲಕಾರ್ಮಿಕ ನಿಯಮಗಳ ಉಲ್ಲಂಘನೆಯ ಈ ಕಾಯಿದೆಯ 14ನೆಯ ಪರಿಚ್ಛೇಧದ ಪ್ರಕಾರ ಮೊಕದ್ದಮೆಗೆ ಅರ್ಹವಾಗಿರುತ್ತದೆ.



## 3.9 ಹದಿಹರೆಯದ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾನೂನು 2000

18 ವರ್ಷ ಮೀರದ ವ್ಯಕ್ತಿಗಳನ್ನು ಹದಿ ಹರೆಯದವರು ಎಂದು ಕರೆಯಲಾಗುವುದು.

### 3.9.1 ಹದಿಹರೆಯದ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾನೂನು 2000

ಇದು ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಹದಿಹರೆಯದ ಹಾಗೂ ಮಕ್ಕಳ ಪಾಲನೆ ಮತ್ತು ರಕ್ಷಣೆಗೆ ಅವಶ್ಯಕವಾಗಿರುವ ಸಂಬಂಧ ಕಾನೂನುಗಳ ಕ್ರೋಢಿಕರಣ ಮತ್ತು ತಿದ್ದುಪಡಿಯ ಕಾನೂನು ಆಗಿದೆ. ಇದು ಮಕ್ಕಳಿಗೆ ಉತ್ತಮವಾದ ಪಾಲನೆ, ರಕ್ಷಣೆ ಹಾಗೂ ಚಿಕಿತ್ಸೆಯನ್ನು ಒದಗಿಸುತ್ತಿದೆ. ಮಕ್ಕಳಿಗೆ ಸಂಬಂಧಪಟ್ಟ ನಿರ್ಣಯ / ತೀರ್ಪುಗಳನ್ನು ತೆಗೆದುಕೊಳ್ಳುವಾಗ "ಮಕ್ಕಳ ಸ್ನೇಹಿ" ವಿಧಾನವನ್ನು ಅನುಸರಿಸುವುದು ಮತ್ತು ಈ ಕಾನೂನಿನ ಚೌಕಟ್ಟಿನಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳ ಮುಖಾಂತರ ಅವರ ಪುನರ್ವಸತಿಗೆ ವ್ಯವಸ್ಥೆ ಮಾಡುವುದು.

ಇದು ಕ್ರಿಮಿನಲ್ ನ್ಯಾಯಕ್ಕಿಂತ ಭಿನ್ನವಾಗಿದ್ದು, ಇದು ಮಕ್ಕಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಒತ್ತು ಕೊಡುವುದು. ಇಲ್ಲಿ ಸರಕಾರ ಹೆಚ್ಚು ಹೆಚ್ಚು ಸುಗಮಕಾರರಾಗಿ ಕೆಲಸ ಮಾಡುತ್ತಿದ್ದ ಕಾನೂನಿನ ಅನುಷ್ಠಾನಕ್ಕೆ ಹೆಚ್ಚು ಹೆಚ್ಚು ಸರಕಾರೇತರ ಸಂಸ್ಥೆಗಳನ್ನು ಹಾಗೂ ಸ್ಥಳೀಯ ಸಂಸ್ಥೆಗಳನ್ನು ತೊಡಗಿಸಿಕೊಳ್ಳುತ್ತಿದೆ. ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಹಾಗೂ ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳ ಲಾಲನೆ, ಪಾಲನೆ, ರಕ್ಷಣೆ, ಅಭಿವೃದ್ಧಿ, ಪುನರ್ವಸತಿ ಇತ್ಯಾದಿಗಳ ಬಗ್ಗೆ ಹೆಚ್ಚು ಹೆಚ್ಚು ಸಮುದಾಯವನ್ನು ಹಾಗೂ ಕುಟುಂಬವನ್ನು ತೊಡಗಿಸಿಕೊಳ್ಳುವುದು ಈ ಕಾನೂನಿನ ವಿಶೇಷವಾಗಿದೆ.

ಈ ಕಾನೂನನ್ನು ಸಂಯುಕ್ತ ರಾಷ್ಟ್ರ ಸಂಘದ, ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಕ್ಕೆ ಅನುಗುಣವಾಗಿ ರಚಿಸಲಾಗಿದೆ. ಇದನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹದಿಹರೆಯದ ಕಾನೂನು 1986 ರಲ್ಲಿ ಒದಗಿಸಿರುವ ಸೌಕರ್ಯಗಳನ್ನು ಉಪಯೋಗಿಸಿಕೊಂಡು ಅನುಷ್ಠಾನ ಮಾಡಬೇಕಾಗಿದೆ.

ಕಾನೂನನ್ನು 2000 ರಲ್ಲಿ ಜಾರಿ ಮಾಡಿದ್ದರೂ ಸಹ, ಹಲವಾರು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಇನ್ನು ಅನುಷ್ಠಾನ ಮಾಡಬೇಕಾಗಿದೆ. ಅನುಷ್ಠಾನದ ಹಂತದಲ್ಲಿ, ಹದಿಹರೆಯದ ನ್ಯಾಯದ ವ್ಯವಸ್ಥೆಯ ಮಕ್ಕಳಿಗೆ ಹಾಗೂ ಅವರ ಪರವಾಗಿ ವ್ಯವಹರಿಸುವ ಪೊಲೀಸರು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಕಾರ್ಯಕರ್ತರು, ಪೋಷಕರು ಅಥವಾ ಯಾವುದೇ ವ್ಯಕ್ತಿಗಳಿಗೆ ಸುಲಭವಾಗಿ ಸಿಗುವಂತಾಗಬೇಕು. ಕುಟುಂಬಗಳಿಗೆ ಹಾಗೂ ಸರಕಾರೇತರ ಸಂಸ್ಥೆಗಳಿಗೆ ಸಂಬಂಧ ಕಲ್ಪಿಸಬಹುದಾದ ಅನೌಪಚಾರಿಕ ಸ್ವರೂಪದ ಸೌಕರ್ಯ ರಚನೆಯ ಬೇಡಿಕೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

2001 ರ ಕಾನೂನಲ್ಲಿರುವ ಹೆಚ್ಚಿನ ವ್ಯಾಖ್ಯಾನಗಳು, ವಿಷಯಗಳು 1986 ರ ಕಾನೂನಿನಲ್ಲಿ ನಮೂದಿಸಿದವುಗಳೇ ಆಗಿವೆ. ಕೆಲವೊಂದು ವ್ಯಾಖ್ಯಾನಗಳ ಅರ್ಥವನ್ನು ವಿಸ್ತರಿಸಲಾಗಿದೆ ಹಾಗೂ ಕೆಲವೊಂದು ಹೊಸ ವ್ಯಾಖ್ಯಾನಗಳನ್ನು ಸಂಯುಕ್ತ ರಾಷ್ಟ್ರ ಸಂಘದ ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳನ್ನು ಗಮನಕ್ಕೆ ತೆಗೆದುಕೊಂಡು ಅಳವಡಿಸಲಾಗಿದೆ. ಉಪನಿಯಮ(ಇ) "ಪಾಲನೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳ" ವ್ಯಾಖ್ಯಾನವನ್ನು ಕೊಡುತ್ತಿದೆ. ಹಿಂದೆ 1986 ರ ಕಾನೂನಿನಲ್ಲಿ ಇವರನ್ನು ಗಣನೆಗೆ ತೆಗೆದುಕೊಳ್ಳದೆ ಇರುವ ಮಕ್ಕಳು ಎಂದು ಕರೆಯಲಾಗುತ್ತಿತ್ತು. ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳ ವ್ಯಾಖ್ಯಾನ ಮತ್ತು ಸ್ಕೋಪ್ ಅನ್ನು ವಿಸ್ತರಿಸಲಾಗಿದೆ. ಮಕ್ಕಳ ಹಕ್ಕುಗಳ ಸಮಾವೇಶದ ನಿರ್ಣಯಗಳಿಗೆ ಅನುಗುಣವಾಗಿ, ಕಾನೂನಿನಲ್ಲಿ ಹದಿಹರೆಯದ ವ್ಯಕ್ತಿ ಅಥವಾ ಮಕ್ಕಳ ವಯೋಮಿತಿಯನ್ನು ಎಲ್ಲಾ ಸಂದರ್ಭಗಳಲ್ಲಿ ಒಂದೇ ಇರಬೇಕು ಎಂಬುದಾಗಿ ಪರಿಗಣಿಸಲಾಗಿದೆ. ಅದು 18 ವರ್ಷ ತುಂಬಿರಬಾರದು.



ಹಳೆ ಕಾನೂನಿನಲ್ಲಿ ಇದ್ದ ಅಪರಾಧಿ ಬಾಲಕರು / ಹದಿಹರೆಯದವರು ಬದಲಾಗಿ ಹೊಸ ಕಾನೂನಿನಲ್ಲಿ "ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಬಾಲಕ / ಹದಿಹರೆಯದವರು" ಎಂಬುದನ್ನು ಸೇರಿಸಲಾಗಿದೆ. ಅಪರಾಧಿ ಎಂಬ ಶಬ್ದವನ್ನು ಕೈ ಬಿಡಲಾಗಿದೆ. ಇದರಿಂದ ಕಾನೂನು ಹೆಚ್ಚು ಸ್ನೇಹಯುತವಾಗಿದೆ. ಹೊಸ ಕಾನೂನಿನಲ್ಲಿ ಸ್ಥಳೀಯ ಸಂಸ್ಥೆಗಳನ್ನು ಸೇರಿಸಲಾಗಿದೆ. ಇವುಗಳಲ್ಲಿ ಮುಖ್ಯವಾದವುಗಳು ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್ ಸಂಸ್ಥೆಗಳು.

**3.9.2 ಬಾಲಕಾರ್ಮಿಕರ / ಹದಿಹರೆಯದವರ ಶೋಷಣೆ (26):** ಈ ನಿಯಮದ ಪ್ರಕಾರ ಯಾರಾದರೂ ಹದಿಹರೆಯದವರನ್ನು ಅಪಾಯಕಾರಿ ಕೆಲಸದಲ್ಲಿ ತೊಡಗಿಸಿದ್ದು, ಅವರನ್ನು ಜೀತದಾಳಾಗಿ ಇಟ್ಟುಕೊಂಡಿದ್ದು, ಅವರ ಸಂಪಾದನೆಯನ್ನು ಅವರಿಗೆ ಕೊಡುತ್ತಿಲ್ಲದಿದ್ದರೆ ಅಥವಾ ಅವರ ಸಂಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರೆ ಅಂತವರಿಗೆ ಕಾನೂನಿನ ಒಳಗೆ ಮೂರು ವರ್ಷ ಜೈಲುವಾಸ ಮತ್ತು ದಂಡ ವಿಧಿಸಬಹುದಾಗಿದೆ.


### 3.9.3 ಮಕ್ಕಳ ಕಲ್ಯಾಣ ಸಮಿತಿ

1. ಈ ಕಾನೂನಿನಲ್ಲಿ, ರಾಜ್ಯ ಸರಕಾರಕ್ಕೆ ಜಿಲ್ಲೆಗಳಿಗೆ ಅಥವಾ ಜಿಲ್ಲೆಗಳ ಸಮೂಹಕ್ಕೆ, ರಾಜ್ಯ ಪತ್ರದಲ್ಲಿ ನಮೂದಿಸಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲು ಅವಕಾಶ ಇದೆ. ಈ ಕಲ್ಯಾಣ ಸಮಿತಿಗಳು ಕಾನೂನಿನ ಚೌಕಟ್ಟಿನಲ್ಲಿ ಅವುಗಳಿಗೆ ಹತ್ತಿರವಾದ ಅಧಿಕಾರವನ್ನು "ಪಾಲನೆ ಮತ್ತು ರಕ್ಷಣೆಯ" ಅವಶ್ಯ ಇರುವ ಮಕ್ಕಳ ಅನುಕೂಲಕ್ಕಾಗಿ ಉಪಯೋಗಿಸಬೇಕು.
2. ಈ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರು ಹಾಗೂ ನಾಲ್ಕು ಜನ ಸದಸ್ಯರಾಗಿದ್ದು, ಅದರಲ್ಲಿ ಒಬ್ಬರು ಮಹಿಳೆಯರು ಹಾಗೂ ಇನ್ನೊಬ್ಬರು ಮಕ್ಕಳ ಸಂಬಂಧಪಟ್ಟ ವಿಷಯಗಳ ತಜ್ಞರು ಆಗಿರಬೇಕು.
3. ಅಧ್ಯಕ್ಷರ ಮತ್ತು ಸದಸ್ಯರ ಅರ್ಹತೆ ಮತ್ತು ಅವರ ಅಧಿಕಾರವನ್ನು ಸರಕಾರ ನಿಗದಿಪಡಿಸಬೇಕು.
4. ಸರಕಾರವು ಸದಸ್ಯರ ನೇಮಕವನ್ನು ಸರಿಯಾದ ವಿಚಾರಣೆಯ ನಂತರ ರದ್ದು ಪಡಿಸಬಹುದಾಗಿದೆ.
   i. ಈ ಕಾನೂನಿನ ಪ್ರಕಾರ ದತ್ತವಾದ ಕಾನೂನನ್ನು ದುರುಪಯೋಗಪಡಿಸಿಕೊಂಡಿದ್ದರೆ.
   ii. ವ್ಯಕ್ತಿಯು "ನೈತಿಕತೆಯ ಕೀಳುತನ" ಕ್ಕಾಗಿ ಶಿಕ್ಷೆಗೆ ಒಳಪಟ್ಟಿದ್ದರೆ, ಹಾಗೂ ಅವರ ಶಿಕ್ಷೆ ಖಾಯಂ ಆಗಿದ್ದರೆ ಮತ್ತು ಅವರಿಗೆ ಕ್ಷಮೆ ಸಿಕ್ಕದೆ ಇದ್ದರೆ.
   iii. ಯಾವುದೇ ಸರಿಯಾದ ಕಾರಣಗಳು ಇಲ್ಲದೆ ಮೂರು ಸಭೆಗಳಿಗೆ ನಿರಂತರವಾಗಿ ಗೈರು ಹಾಜರಿಯಾಗಿದ್ದರೆ.
5. ಸಮಿತಿಯು ಬೆಂಚ್ ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡಬೇಕಾಗಿದೆ. ಅವರಿಗೆ ಸಿ.ಆರ್.ಸಿ.ಸಿ 1973 ರಲ್ಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಒಂದನೇ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟಿಗೆ ಕೊಟ್ಟ ಅಧಿಕಾರ ಇದೆ.

### 3.9.4 ಸಮಿತಿಯ ಅಧಿಕಾರಗಳು

1. ಸಮಿತಿಗೆ ಮಕ್ಕಳ ಪಾಲನೆ, ರಕ್ಷಣೆ, ಚಿಕಿತ್ಸೆ, ಅಭಿವೃದ್ಧಿ ಮತ್ತು ಪುನರ್ವಸತಿಗೆ ಸಂಬಂಧಪಟ್ಟಂತೆ ಪೂರ್ಣ ಅಧಿಕಾರ ಇದೆ. ಅವರ ನಿರ್ಣಯವೇ ಆ ಮಟ್ಟದಲ್ಲಿ ಅಂತಿಮ ನಿರ್ಣಯ.
2. ಇಂತಹ ಸಮಿತಿಗೆ ಅವರ ಅಧಿಕಾರ ವ್ಯಾಪ್ತಿಯ ಪ್ರದೇಶದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ಕೇಸುಗಳನ್ನು ಕೈಗೆತ್ತಿಕೊಳ್ಳುವ ಅಧಿಕಾರ ಅವರಿಗೆ 2000 ಕಾನೂನಿನ ಪ್ರಕಾರ ಇದೆ.





## 3.10 ಬಾಲಕಾರ್ಮಿಕತೆಯ ಬಗ್ಗೆ ಭಾರತದ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳು

ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ 10–12–1996 ರಂದು ಸಿವಿಲ್ ದಾವೆ ಸಂಖ್ಯೆ 465/1986 ರ ಬಗ್ಗೆ ತನ್ನ ತೀರ್ಪನ್ನು ಕೊಡುತ್ತಾ, ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳನ್ನು ಕೆಲಸದ ಸ್ಥಳದಿಂದ ಬಿಡಿಸಿ ಅವರನ್ನು ಪುನರ್ವಸತಿಗೊಳಿಸುವ ಬಗ್ಗೆ ಹಾಗೂ ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಬಾಲಕಾರ್ಮಿಕತೆಯನ್ನು ಯಾವ ರೀತಿಯಲ್ಲಿ ಗುರುತಿಸಬೇಕು ಮತ್ತು ಅವರು ಕೆಲಸ ಮಾಡುವ ವಾತಾವರಣವನ್ನು ಅಭಿವೃದ್ಧಿ ಪಡಿಸಬೇಕು ಎಂಬುದರ ಬಗ್ಗೆ ಕೆಲವೊಂದು ನಿರ್ದೇಶನಗಳನ್ನು ಕೊಟ್ಟಿರುತ್ತದೆ. ಅವುಗಳು ಈ ಕೆಳಗಿನಂತಿವೆ.

(ಅ) ರಾಷ್ಟ್ರದ ಎಲ್ಲಾ ಜಿಲ್ಲೆಗಳಲ್ಲಿ ಸಮನಾಂತರವಾಗಿ ಒಂದೇ ಬಾರಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

(ಆ) ಕೆಲಸ ಮಾಡುತ್ತಿರುವ ಮಕ್ಕಳ ಗಣತಿಯನ್ನು ದಿನಾಂಕ 10–06–1997 ರ ಒಳಗೆ ಮುಗಿಸಬೇಕು.

(ಇ) ಅಪಾಯಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಬಿಡುಗಡೆಗೊಳಿಸಿ ಅವರಿಗೆ ಸರಿಯಾದ ಸಂಸ್ಥೆಗಳಲ್ಲಿ ಶಿಕ್ಷಣದ ವ್ಯವಸ್ಥೆ ಮಾಡಬೇಕು.

(ಈ) ಮಕ್ಕಳನ್ನು ಕೆಲಸದಲ್ಲಿ ಇಟ್ಟುಕೊಂಡಿರುವ ಮಾಲೀಕರಿಂದ ರೂ. 20000/– ವಸೂಲಿ ಮಾಡಿ ಅದನ್ನು ಈ ಬಗ್ಗೆ ರಚಿಸುವ ಕಲ್ಯಾಣ ನಿಧಿಯಲ್ಲಿ ಇಡಬೇಕು.


(ಉ) ಹೀಗೆ ಬಿಡುಗಡೆಗೊಳಿಸಿದ ಬಾಲಕಾರ್ಮಿಕ ಮಗುವಿನ ಕುಟುಂಬದಲ್ಲಿ ಒಬ್ಬರಿಗೆ ಸರಕಾರ ಕೆಲಸ ಒದಗಿಸಬೇಕು. ಹೀಗೆ ಒಂದು ವೇಳೆ ಕೆಲಸ ಒದಗಿಸಲು ಅಸಾಧ್ಯವಾದರೆ, ರಾಜ್ಯ ಸರಕಾರ ತನ್ನ ವತಿಯಿಂದ ರೂ. 5000/– ದೇಣಿಗೆಯಾಗಿ ಕಲ್ಯಾಣ ನಿಧಿಗೆ, ಆ ಮಗುವಿನ ಬಗ್ಗೆ ಕೊಡಬೇಕು.

(ಊ) ಬಿಡುಗಡೆಗೊಳಿಸಿದ ಮಕ್ಕಳ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಈ ಕಲ್ಯಾಣ ನಿಧಿಯಿಂದ ದೊರಕುವ ಬಡ್ಡಿಯಿಂದ ಮಗುವನ್ನು ಶಾಲೆಗೆ ಕಳುಹಿಸುವವರೆಗೆ ಕೊಡಬೇಕು. (ರೂ.20000/25000)

(ಋ) ಅಪಾಯಕಾರಿ ಅಲ್ಲದ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳ ಕೆಲಸದ ಅವಧಿ ದಿವಸಕ್ಕೆ 6 ಗಂಟೆಗಳಿಗಿಂತ ಹೆಚ್ಚಾಗಬಾರದು ಮತ್ತು ಪ್ರತಿ ದಿವಸ 2 ಗಂಟೆಗಳ ಕಾಲ ಶಿಕ್ಷಣ ಒದಗಿಸಬೇಕು. ಈ ಮಕ್ಕಳ ಶಿಕ್ಷಣದ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರು ಭರಿಸಬೇಕು.

(ಎ) ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸರಿಯಾದ ಯೋಜನೆ ತಯಾರಿಸಿಕೊಳ್ಳಬೇಕು ಮತ್ತು ತಯಾರಿ ಮಾಡಿಕೊಳ್ಳಬೇಕು. ಈ ರೀತಿಯಲ್ಲಿ ಯೋಜನೆ ತಯಾರಿಸುವಾಗ ಮತ್ತು ತಯಾರಿ ಮಾಡುವಾಗ ಬೇಕಾಗುವ ಆಡಳಿತ/ ಅನುಷ್ಠಾನ / ನಿಯಂತ್ರಣ ವ್ಯವಸ್ಥೆಗೆ ತಗಲುವ ಹೆಚ್ಚುವರಿ ವೆಚ್ಚ ಭರಿಸಬೇಕು (ಹೆಚ್ಚುವರಿ ಸಿಬ್ಬಂದಿ ವೆಚ್ಚ, ತರಬೇತಿ, ಗಣಕೀಕರಣ, ಸಾಗಾಟ ವೆಚ್ಚ)





## 3.11 ಅಪಾಯಕಾರಿ ಬಾಲಕಾರ್ಮಿಕತೆ


ಸುಮಾರು 171 ಮಿಲಿಯನ್ 5–17 ವಯೋಮಿತಿಯ ಮಕ್ಕಳು ಅಪಾಯಕಾರಿ ಬಾಲಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಈ ಪ್ರಕ್ರಿಯೆಯಲ್ಲಿ ಸಾವನಪ್ಪಿರಬಹುದು ಅಥವಾ ಖಾಯಂ ಆಗಿ ಹೆಳವರಾಗಿರಬಹುದು ಅಥವಾ ಖಾಯಿಲೆಗೆ ತುತ್ತಾಗಿರಬಹುದು. ಭದ್ರತೆ ಇಲ್ಲದ ಮತ್ತು ಅನಾರೋಗ್ಯ ಪರಿಸ್ಥಿತಿಯಲ್ಲಿ ಮಕ್ಕಳು ಕೆಲಸ ಮಾಡುತ್ತಿರಬಹುದು.

ಅಪಾಯಕಾರಿ ಬಾಲಕಾರ್ಮಿಕತೆ ಎಂದರೆ ಮಕ್ಕಳು ತಮ್ಮ ಜೀವವನ್ನು ಕಳೆದುಕೊಳ್ಳುವ ಕೆಲಸ ವ್ಯವಸ್ಥೆಯಲ್ಲಿ ಅಥವಾ ತಮ್ಮ ಅಂಗಾಂಗಗಳನ್ನು (ಖಾಯಂ ಆಗಿ) ಊನಗೊಳಿಸಿಕೊಳ್ಳುವ ಕೆಲಸದ ಪರಿಸ್ಥಿತಿಯಲ್ಲಿ ಕೆಲಸ ಮಾಡುವುದಕ್ಕೆ ಅಪಾಯಕಾರಿ ಬಾಲಕಾರ್ಮಿಕತೆ ಎಂದು ಕರೆಯಲಾಗುವುದು.

ಅಪಾಯಕಾರಿ ಬಾಲಕಾರ್ಮಿಕತೆ ಅತ್ಯಂತ ನಿಕೃಷ್ಠ ಬಾಲಕಾರ್ಮಿಕತೆ ಆಗಿದ್ದು, ಇದರಲ್ಲಿ ಯಾವುದೇ ಮಕ್ಕಳು ತೊಡಗಬಾರದು. ಯಾವುದೇ ಅಪಾಯಕಾರಿ ಬಾಲಕಾರ್ಮಿಕತೆಯಲ್ಲಿ ಮಕ್ಕಳು ಕೆಲಸ ಮಾಡಲೇಬಾರದು.

ಸುಮಾರು 22000 ಮಕ್ಕಳು ಪ್ರತಿ ವರ್ಷ ಕೆಲಸ ಮಾಡುವಾಗ ಅವರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ಕಾಯಿಲೆಗೆ ಬೀಳುವ ಹಾಗೂ ಅಪಘಾತಕ್ಕೆ ಸಿಕ್ಕುವ ಮಕ್ಕಳ ಲೆಕ್ಕ ಸರಿಯಾಗಿ ಸಿಗುತ್ತಿಲ್ಲ. ಆದರೆ ಪ್ರತಿ ವರ್ಷ ಸುಮಾರು 270 ಮಿಲಿಯ ಕೆಲಸದ ಅಪಘಾತಗಳು ಮತ್ತು 160 ಮಿಲಿಯ ಕೆಲಸದಿಂದ ಕಾಯಿಲೆಗೆ ಬೀಳುವುದು ನಡೆಯುತ್ತಿದೆ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಬಾಲಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇದೆ. ಅಪಾಯಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಕ್ಕಳು ಅಪಘಾತಕ್ಕೆ ತುತ್ತಾಗುವುದು ಹೆಚ್ಚು.





## 3.12 ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆ

ಅಪಾಯಕಾರಿ ಬಾಲಕಾರ್ಮಿಕತೆ ಅಲ್ಲದೆ, ಸುಮಾರು 8.4 ಮಿಲಿಯನ್ ಮಕ್ಕಳು (ಪ್ರಪಂಚಲ್ಲಿ) ನಿಕೃಷ್ಠ ಪರಿಸ್ಥಿತಿಯ ಬಾಲಕಾರ್ಮಿಕತೆಯಲ್ಲಿ ತೊಡಗಿರುತ್ತಾರೆ. ಅವರು "ಸಾಗಾಟದಲ್ಲಿ", "ಜೀತ ಪದ್ದತಿಯಲ್ಲಿ", "ಯುದ್ದದಲ್ಲಿ", ವೇಶ್ಯಾ ವೃತ್ತಿಯಲ್ಲಿ ಮತ್ತು ಇತರ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿರಬಹುದು.

ಇದು ಅತ್ಯಂತ ನಿಕೃಷ್ಠಹೀನ ಹಾಗೂ ಕಳವಳಕಾರಿ ಪರಿಸ್ಥಿತಿ ಆಗಿದ್ದು, ಇದರಿಂದ ಸಮಾಜ ಘಾತುಕ ಶಕ್ತಿಗಳು ಉದ್ಭವ ಆಗುವ ಸಂಭವ ಹೆಚ್ಚಾಗಿದೆ.

**ಹೀನ ರೀತಿಯ ಬಾಲಕಾರ್ಮಿಕತೆಯ ಪ್ರಕಾರಗಳು**

– ಮಕ್ಕಳನ್ನು ವೇಶ್ಯಾವೃತ್ತಿಯಲ್ಲಿ ತೊಡಗಿಸುವುದು.

– ಜೀತದಾಳಾಗಿ ಕೆಲಸ ಮಾಡಿಸುವುದು.


– ಯುದ್ದದಲ್ಲಿ ಭಾಗವಹಿಸುವುದು.

– ಅಮಲು ಪದಾರ್ಥಗಳನ್ನು ಸಾಗಾಟ ಮಾಡಿಸುವುದು.

– ಲೈಂಗಿಕ ಚಿತ್ರಗಳನ್ನು ತಯಾರಿಸಲು ಉಪಯೋಗಿಸುವುದು.

– ಇತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸುವುದು.





## 3.13 ಆಯ್ದ ಕೆಲವು ಮಿಥ್ಸ್ ಮತ್ತು ನಿಜ ಸಂಗತಿಗಳು

ಈ ಕೆಳಗಿನವುಗಳು ಬಾಲಕಾರ್ಮಿಕತೆಯ ಬಗ್ಗೆ ಪ್ರಚಲಿತದಲ್ಲಿರುವ ಕೆಲವು ಆಯ್ದ ಮಿಥ್ಸ್ ಮತ್ತು ನಿಜ ಸಂಗತಿಗಳು.

### 3.13.1 ಬಡತನವು ಬಾಲಕಾರ್ಮಿಕತೆಗೆ ಮುಖ್ಯ ಕಾರಣ.

ಬಡತನಕ್ಕೆ ಹಲವು ಆಯಾಮಗಳು ಮತ್ತು ಮುಖಗಳಿವೆ. ಕಡಿಮೆ ಸಂಪಾದನೆ, ಕಡಿಮೆ ಮಟ್ಟದ ಕೌಶಲ್ಯ ಮತ್ತು ಶಿಕ್ಷಣ, ಆಸ್ತಿ ಇಲ್ಲದೆ ಇರುವುದು, ತರಬೇತಿ ಮತ್ತು ಶಿಕ್ಷಣಕ್ಕೆ ಆಸ್ಪದ ಇಲ್ಲದೆ ಇರುವುದು, ಅನಾರೋಗ್ಯ, ಸರಿಯಾದ ಆಹಾರ ಮತ್ತು ಸೂರು ಇಲ್ಲದೆ ಇರುವುದು ಇತ್ಯಾದಿಗಳು. ಆದರೆ ಇವು ಮುಖ್ಯ ಕಾರಣಗಳಲ್ಲ. ಪೋಷಕರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು ಎಂಬ ಮನಸ್ಸು ಇದ್ದರೆ ಬಡತನ ಅಡ್ಡಿ ಆಗುವುದಿಲ್ಲ. ಅವರಿಗೆ ಕಷ್ಟವಾಗುವುದು ಆದರೆ ಅಸಾಧ್ಯವಾದುದಲ್ಲ. ಹಲವಾರು ಸಂಶೋಧನೆಗಳು ಮತ್ತು ಮೌಲ್ಯಮಾಪನಗಳು ಇದನ್ನು ಸಾಬೀತು ಪಡಿಸಿವೆ.


### 3.13.2 ಮಕ್ಕಳು ಕೆಲಸ ಮಾಡದಿದ್ದರೆ ಅವರು ಮತ್ತು ಅವರ ಕುಟುಂಬಗಳು ಉಪವಾಸ ಇರಬೇಕಾಗುವುದು

ಕುಟುಂಬದ ಎಲ್ಲಾ ಸದಸ್ಯರು ಮತ್ತು ಮಕ್ಕಳು ಕೆಲಸ ಮಾಡಿ ಸಹ ಉಪವಾಸ ಇರಬೇಕಾದ ಸಂಭವ ಇರುತ್ತದೆ. ಆಹಾರದ ಲಭ್ಯತೆ ಹಲವಾರು ವಿಚಾರಗಳ ಮೇಲೆ ಅವಲಂಬಿತವಾಗಿದೆ. ಉಪವಾಸವು/ ಆಹಾರದ ಅಲಭ್ಯತೆಯು ಹಲವಾರು ವಿಷಯಗಳ ಸಮ್ಮಿಶ್ರವಾಗಿದೆ. ಅದು ಆಹಾರದ ಬೆಲೆ ಜನರ ಆದಾಯ, ಕೊಳ್ಳುವ ಶಕ್ತಿ, ಆಹಾರದ ಲಭ್ಯತೆ, ಆಹಾರಕ್ಕೆ ಸಂಪರ್ಕ, ಇತ್ಯಾದಿ ಅವಲಂಬಿಸಿದೆ.

### 3.13.3 ಬಡಜನರಿಗೆ ಹೆಚ್ಚು ಮಕ್ಕಳು ಇರುವುದು ಬಾಲಕಾರ್ಮಿಕತೆಗೆ ಕಾರಣ.

ಇದು ಸರಿಯಾದ ಮಾಹಿತಿ ಅಲ್ಲ. ದೇಶದ ಸಂಪತ್ತು ಅದರ ಜನಸಂಖ್ಯೆ. ಜನರಿಗೆ ಸರಿಯಾದ ಶಿಕ್ಷಣ ಕೊಟ್ಟು ಮತ್ತು ಅಭಿವೃದ್ಧಿ ಪಥ ತೋರಿಸಿದರೆ, ಅವರ ಅಭಿವೃದ್ಧಿ ಆಗುತ್ತದೆ. ಅದರಿಂದ ದೇಶದ ಸಂಪತ್ತು ಹೆಚ್ಚಾಗುತ್ತದೆ. ನಾವು ಹೆಚ್ಚಾಗಿ ಸಂಖ್ಯೆಯನ್ನು ಗಮನಿಸುತ್ತೇವೆ. ಆದರೆ ಈ ಸಂಖ್ಯೆಯಲ್ಲಿ ಇರುವ ಶಕ್ತಿಯನ್ನು ಗಮನಿಸುವುದಿಲ್ಲ.





**3.13.4 ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕಿಂತ ಕೆಲಸಕ್ಕೆ ಕಳುಹಿಸಲು ಇಷ್ಟಪಡುತ್ತಾರೆ.**

ಇದು ತಪ್ಪು ಅಭಿಪ್ರಾಯ. ಸರ್ಕಾರೇತರ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಮಕ್ಕಳನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಸೇರಿಸಿರುವುದು ಇದಕ್ಕೆ ಸಾಕ್ಷಿ. ಸಾಮಾಜಿಕ ವ್ಯವಸ್ಥೆಯು ಪೋಷಕರು ಅವರ ಮಕ್ಕಳನ್ನು ಬಾಲಕಾರ್ಮಿಕತೆಗೆ ದೂಡುವಂತೆ ಪ್ರೋತ್ಸಾಹಿಸುತ್ತದೆ.

**3.13.5 ಮಕ್ಕಳಿಗೆ ಕೆಲಸ ಮಾಡಲು ಆಸೆ ಇದೆ.**


ಮಕ್ಕಳು ಕೆಲವೊಮ್ಮೆ ತಮಗೆ ಕೆಲಸಮಾಡಲು ಆಸಕ್ತಿ ಇದೆ ಎಂದು ತಿಳಿಸಬಹುದು. ಆದರೆ ಅವರಿಗೆ, ಅದರ ಬದಲಿನ ಅವಕಾಶ ಗೊತ್ತಿಲ್ಲದೆ ಇರುವುದರಿಂದ ಅವರು ಕೆಲಸ ಮಾಡುತ್ತೇವೆಂಬುದಾಗಿ ಹೇಳುತ್ತಾರೆ. ಶಿಕ್ಷಣಕ್ಕೆ ಅವರಿಗೆ ಆಸ್ಪದ ಇಲ್ಲದೆ ಇರುವುದರಿಂದ, ಶಾಲೆಯ ಪಾಠ ಪ್ರವಚನಗಳು ಅವರಿಗೆ ಆಸಕ್ತಿ ಮೂಡಿಸದೆ ಇರುವುದರಿಂದ ಹಾಗೂ ಶಾಲಾ ಶಿಕ್ಷಕಿಯರು ಇವರನ್ನು ಕಠೋರವಾಗಿ ನಡೆಸುವುದರಿಂದ, ಮಕ್ಕಳು ಕೆಲಸ ಮಾಡಲು ಹೋಗುತ್ತಾರೆ.

ಬಾಲಕಾರ್ಮಿಕತೆ ಸಮುದಾಯದ ಅನಾಸಕ್ತಿಯನ್ನು ಎತ್ತಿ ತೋರಿಸುತ್ತದೆ. ಮಕ್ಕಳಿಗೆ ಅವರ ಹಿರಿಯರ ಮೇಲೆ ನಂಬಿಕೆ ಇರುವುದಿಲ್ಲ. ಅವರಿಗೆ ಹಿರಿಯರು, ಪರಿಸ್ಥಿತಿಯನ್ನು ಬದಲಾಯಿಸುತ್ತಾರೆ ಎಂಬ ನಂಬಿಕೆ ಸಹ ಇರುವುದಿಲ್ಲಾ.

**3.13.6 ಮಕ್ಕಳನ್ನು ಅಪಾಯಕಾರಿ ಅಲ್ಲದ ಕೆಲಸದಲ್ಲಿ ತೊಡಗಿಸುವುದರಿಂದ ಯಾವುದೇ ತಪ್ಪಿಲ್ಲ.**

ಅಪಾಯಕಾರಿ ಎಂಬುದು ಚರ್ಚೆ ಮಾಡುವಂತಹ ವಿಚಾರ. ಮಕ್ಕಳಿಗೆ ಎಲ್ಲಾ ಕೆಲಸಗಳು ಅಪಾಯಕಾರಿ ಆಗಬಹುದು. ಯಾವುದೇ ಕೆಲಸವನ್ನು ಅನಾರೋಗ್ಯಕರ ಸನ್ನಿವೇಶದಲ್ಲಿ ಅಥವಾ ಹೆಚ್ಚು ಹೊತ್ತಿನವರೆಗೆ ಮಾಡಿದರೆ ಅದು ಅಪಾಯಕಾರಿ ಆಗಬಹುದು. ಮಕ್ಕಳಿಗೆ ಅವರ ಅಭಿವೃದ್ಧಿ, ಶಿಕ್ಷಣ, ಮನೋರಂಜನೆ, ವೈದ್ಯಕೀಯ ಸೌಲಭ್ಯ ಆಟ ಇತ್ಯಾದಿಗಳಿಂದ ವಂಚಿತರನ್ನಾಗಿ ಮಾಡುವುದು ಅಪಾಯಕಾರಿ ಆಗಬಹುದು.





**3.13.7 ಮಕ್ಕಳು ಕೆಲಸ ಮಾಡಿದರೆ ಅವರ ಕೌಶಲ್ಯ ಅಭಿವೃದ್ಧಿ ಆಗುತ್ತದೆ.**

ಮಕ್ಕಳಿಗೆ ಕೊಡುವ ಕೆಲಸಗಳು ಸರಳ ಮತ್ತು ಪುನರಾವರ್ತನೆ ಆಗಿರುತ್ತದೆ. ಉದಾ: ಲೇಟರ್ ಅಂಟಿಸುವುದು, ತುಂಬಿಸುವುದು, ರೋಲ್ ಮಾಡುವುದು, ತರುವುದು, ಹೊತ್ತುಕೊಂಡು ಹೋಗುವುದು ಇತ್ಯಾದಿ. ಇದರಲ್ಲಿ ಯಾವುದೇ ಕೌಶಲ್ಯ ಇರುವುದಿಲ್ಲ. ಮಕ್ಕಳು ಈ ಕೆಲಸವನ್ನು ಬಹಳ ಹೊತ್ತಿನವರೆಗೆ, ಅನಾರೋಗ್ಯಕರ ಸನ್ನಿವೇಶದಲ್ಲಿ ಮಾಡುತ್ತಾರೆ. ಕಷ್ಟಕರವಾದ ಭೌತಿಕ ಕೆಲಸ ಮತ್ತು ಜೊತೆಯಲ್ಲಿ ಧೂಳು, ಬೆಂಕಿ, ರಾಸಾಯನಿಕ ವಸ್ತುಗಳ ಸಂಪರ್ಕದಿಂದ ಮಕ್ಕಳ ಆರೋಗ್ಯ ಕೆಡುವುದೇ ಹೆಚ್ಚು.

**3.13.8 ಸಾಂಪ್ರದಾಯಿಕ ಕಲೆ ಮತ್ತು ಕಸುಬನ್ನು ಕಾಪಾಡಲು ಮಕ್ಕಳು ಕೆಲಸ ಮಾಡಬೇಕು.**

ಮಕ್ಕಳಿಗೆ ಅಂದರೆ ಬಾಲಕಾರ್ಮಿಕರಿಗೆ ಯಾರೂ ನಿಜವಾದ ಕಲೆ ಅಥವಾ ಕುಶಲ ಕೆಲಸವನ್ನು ಕಲಿಸಿ ಕೊಡುವುದಿಲ್ಲ. ಒಂದು ವೇಳೆ ಕುಟುಂಬದ ಕಲೆಗಳನ್ನು ಮಕ್ಕಳು ಕಲಿಯುವುದಿದ್ದರೆ ಅದು ಶಿಕ್ಷಣದ ಜೊತೆ ಆಗಬೇಕು.


**3.13.9 ಮಕ್ಕಳು ವೇಗವಾಗಿ ಕೆಲಸ ಮಾಡುತ್ತಾರೆ. ಅವರ ಪುಟ್ಟ ಕೈಗಳು ನಾಜೂಕು ಆದ ಕೆಲಸ ಮಾಡಲು ಅವಶ್ಯಕ.**

ಮಕ್ಕಳು ದೊಡ್ಡವರಿಗಿಂತ ಉತ್ತಮವಾಗಿ ಕೆಲಸ ಮಾಡುತ್ತಾರೆ ಎಂಬುದು ತಪ್ಪು ಕಲ್ಪನೆ. ಮಕ್ಕಳಿಗೆ ಕಲ್ಪನೆ ಇರುವುದಿಲ್ಲ. ಅವರು ಹೇಳಿ ಕೊಟ್ಟಿದ್ದನ್ನು ಮಾತ್ರ ಮಾಡುತ್ತಾರೆ. ದೊಡ್ಡವರಿಗೆ ಕಲ್ಪನೆ ಇರುತ್ತದೆ.

**3.13.10 ಮಕ್ಕಳು ಕೆಲಸ ಮಾಡದೆ ಇದ್ದರೆ, ಕೈಗಾರಿಕೆ ಬಿದ್ದು ಹೋಗುತ್ತದೆ.**

ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ, ಆಗುವ ವೆಚ್ಚದ ಹೆಚ್ಚಳ ಬಹಳ ಕಡಿಮೆ. ಇದನ್ನು ಕೈಗಾರಿಕೆಗೆ ಭರಿಸಲು ಆಸ್ಪದ ಇದೆ. ಅವರಿಗೆ ಲಾಭ ಸ್ವಲ್ಪ ಕಡಿಮೆ ಆಗಬಹುದು.





**3.13.11 ಬಾಲಕಾರ್ಮಿಕರು ತಯಾರಿಸಿದ ವಸ್ತುಗಳ ಮೇಲೆ ಜಾಗತಿಕವಾಗಿ ಬ್ಯಾನ್ ಹಾಕಿದರೆ, ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದು ನಿಲ್ಲುತ್ತದೆ ಮತ್ತು ಮಕ್ಕಳ ಹಕ್ಕುಗಳನ್ನು ಕಾಪಾಡಲು ಸಾಧ್ಯಾಗುತ್ತದೆ.**

ಬಾಲಕಾರ್ಮಿಕತೆ ನಮ್ಮ ದೇಶದ ರಾಷ್ಟ್ರೀಯ ಸಮಸ್ಯೆ. ಸುಮಾರು 8% ಬಾಲಕಾರ್ಮಿಕ ಮಕ್ಕಳು ರಫ್ತು ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಾನವ ಹಕ್ಕುಗಳನ್ನು ವ್ಯಾಪಾರದ ಜೊತೆಯಲ್ಲಿ ಸಂಬಂಧ ಕಲ್ಪಿಸುವುದರಿಂದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೆಚ್ಚು ಲಾಭವಾಗುತ್ತದೆ. ಈ ಸಾಮಾಜಿಕ ಕಳಕಳಿ ಮತ್ತು ನಿಷೇಧ ಬಾಲಕಾರ್ಮಿಕ ಮಕ್ಕಳ ಪುನರ್ವಸತಿ ಬಗ್ಗೆ ಏನೂ ಹೇಳುವುದಿಲ್ಲ ಮತ್ತು ಅವರ ಕಮಿಟ್‌ಮೆಂಟ್ ಇರುವುದಿಲ್ಲ.

**3.13.12 ಬಾಲಕಾರ್ಮಿಕತೆಯನ್ನು ನಿರ್ಮೂಲನೆ ಮಾಡಲು ಬಾಲಕಾರ್ಮಿಕ ನಿಷೇಧ ಕಾನೂನುಗಳು ಸಾಕು.**


ಬಾಲಕಾರ್ಮಿಕತೆಯ ನಿಷೇಧದ ಬಗ್ಗೆ ಕಾನೂನುಗಳು ಸಮಸ್ಯೆಗಳನ್ನು ಸಂಕೀರ್ಣಗೊಳಿಸಿ ಬಾಲಕಾರ್ಮಿಕತೆಯನ್ನು ಕಾನೂನು ಬದ್ಧಗೊಳಿಸುವ ಸಂಭವ ಇದೆ.


ಹಲವಾರು ಕಾನೂನುಗಳನ್ನು ಜಾರಿಗೊಳಿಸಿ, ಅದನ್ನು ಅನುಷ್ಠಾನ ಮಾಡಲು ಕ್ರಮ ತೆಗೆದುಕೊಳ್ಳದ ಪರಿಸ್ಥಿತಿ ಇದ್ದರೆ ಅದರಿಂದ ಏನೂ ಲಾಭವಾಗುವುದಿಲ್ಲ. ಸರ್ಕಾರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅನುಷ್ಠಾನದಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ (6–14 ವಯೋಮಿತಿ). ಹಲವಾರು ರಾಜ್ಯಗಳು ಶಿಕ್ಷಣ ಸೌಕರ್ಯಗಳನ್ನು ಒದಗಿಸುವಲ್ಲಿ ಉತ್ತಮ ಕೆಲಸ ಮಾಡಿವೆ. ಆದರೆ ಇದರಿಂದ ಶಾಲೆ ಬಿಡುವ ಮಕ್ಕಳ ಸಂಖ್ಯೆಯನ್ನು ತೊಡೆದು ಹಾಕಲು ಸಾಧ್ಯವಾಗಲಿಲ್ಲ.

**3.13.13 ಬಾಲಕಾರ್ಮಿಕತೆಯನ್ನು ತೊಡೆದು ಹಾಕಲು ಸಾಧ್ಯವಿಲ್ಲ.**

ಈ ಬಗ್ಗೆ ಇರುವ ಕೆಲಸ ದೊಡ್ಡದು. ಆದರೆ ಸಾಧಿಸಲಾಗದ ಕಾರ್ಯವಲ್ಲ. ಇದು ಬೃಹತ್ ಕೆಲಸ ಅಥವಾ ಹೊರೆಯ ಕೆಲಸವಲ್ಲ. ಸಮಸ್ಯೆಯ ನಿವಾರಣೆಗೆ ಸಂಪನ್ಮೂಲದ ಕೊರತೆ ಅಲ್ಲ. ಆದರೆ ಕೊರತೆ ಇರುವುದು ನಿಜವಾದ ಆಸಕ್ತಿ ಮತ್ತು ರಾಜಕೀಯ ಇಚ್ಛಾ ಶಕ್ತಿ.

ಬಾಲಕಾರ್ಮಿಕತೆಯ ನಿರ್ಮೂಲನೆ ಯಾಂತ್ರಿಕ ಕ್ರಿಯೆಯಲ್ಲ. ಯಾಂತ್ರಿಕ ಕ್ರಿಯೆಯಾದರೆ ಸಾಧಿಸುವುದು ಸುಲಭ. ಆದರೆ ಇದು ಮಾನವರು ಮತ್ತು ಮಾನವರ ಯೋಜನೆಗೆ ಸಂಬಂಧಿಸಿದ್ದು. ಮಕ್ಕಳನ್ನು ನಾವು ಮನಷ್ಯರಾಗಿ ಕಾಣಬೇಕು. ಮಕ್ಕಳ ಹಕ್ಕುಗಳನ್ನು ಗುರುತಿಸುವ ಕಾಲ ಕೂಡಿಬಂದಿದೆ.





## 3.14 ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾನೂನು 1986 ರ ಪ್ರಕಾರ ಬಾಲಕಾರ್ಮಿಕತೆಯನ್ನು ನಿಷೇಧ ಮಾಡಿದ ಕೆಲಸಗಳ ಮತ್ತು ಪ್ರಕ್ರಿಯೆಗಳ ಪಟ್ಟಿ

**3.14.1 ಈ ಕೆಳಗಿನವುಗಳಿಗೆ ಸಂಬಂಧಪಟ್ಟ ಯಾವುದೇ ಕೆಲಸಗಳು**

1. ಪ್ರಯಾಣಿಕರನ್ನು ಅಥವಾ ಸಾಮಗ್ರಿಗಳನ್ನು ಸಾಗಿಸುವ ಪ್ರಕ್ರಿಯೆ.
2. ಬೂದಿಯನ್ನು ಹೆಕ್ಕುವುದು, ಬೂದಿಗುಂಡಿಯನ್ನು ಸ್ವಚ್ಛ ಮಾಡುವುದು, ರೈಲು ವ್ಯವಸ್ಥೆಯ ಹತ್ತಿರ ನಿರ್ಮಾಣ ಕಾರ್ಯದಲ್ಲಿ ತೊಡಗುವುದು.
3. ರೈಲ್ವೆ ನಿಲ್ದಾಣದಲ್ಲಿ ಕೆಟರಿಂಗ್ ಕೆಲಸದಲ್ಲಿ ತೊಡಗುವುದು, ಒಂದು ಪ್ಲಾಟ್ ಫಾರಂನಿಂದ ಇನ್ನೊಂದು ಪ್ಲಾಟ್ ಫಾರಂಗೆ ಹೋಗಿ ತಿಂಡಿ ಮಾರುವುದು, ಓಡುತ್ತಿರುವ ರೈಲಿನಲ್ಲಿ ತಿಂಡಿ ಮಾರುವುದು, ರೈಲಿಗೆ ಹತ್ತಿ ಇಳಿದು ತಿಂಡಿ / ಸಾಮಾನು ಮಾರುವುದು.
4. ರೈಲ್ವೆಗೆ ಹತ್ತಿರವಾಗಿ ರೈಲ್ವೆ ಸ್ಟೇಷನ್ ನಿರ್ಮಾಣ ಅಥವಾ ಯಾವುದೇ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸುವುದು.
5. ಬಂದರು ಪ್ರಾಧಿಕಾರದ ಯಾವುದೇ ಬಂದರು ಪ್ರದೇಶದಲ್ಲಿ.
6. ತಾತ್ಕಾಲಿಕವಾಗಿ ಮಾರಾಟದ ಪರವಾನಗಿ ಇರುವ ಅಂಗಡಿಗಳಲ್ಲಿ / ಪಟಾಕಿ ಸಿಡಿ ಮದ್ದುಗಳನ್ನು ಮತ್ತು ಸ್ಫೋಟಕಗಳನ್ನು ಮಾರುವುದು.
7. ಪ್ರಾಣಿಗಳ
8. ಆಟೋ ಮೊಬೈಲ್ ಗ್ಯಾರೇಜುಗಳಲ್ಲಿ
9. ಫೌಂಡ್ರಿಗಳಲ್ಲಿ
10. ಅಮಲು ಪದಾರ್ಥಗಳ ತಯಾರಿ, ಬೆಂಕಿ ಹಿಡಿಯಬಹುದಾದ ವಸ್ತುಗಳ ಮತ್ತು ಸ್ಫೋಟಗೊಳಿಸುವ ವಸ್ತುಗಳ ಉತ್ಪಾದನೆಯಲ್ಲಿ
11. ಕೈಮಗ್ಗ ಮತ್ತು ಯಾಂತ್ರಿಕ ಮಗ್ಗಗಳಲ್ಲಿ
12. ನೀರಿನ ಕೆಳಗೆ ಅಥವಾ ಭೂಮಿ ಕೆಳಗೆ ಇರುವ ಗಣಿಗಳಲ್ಲಿ ಮತ್ತು ಭಟ್ಟಿಗಳಲ್ಲಿ
13. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸ್ ಘಟಕಗಳಲ್ಲಿ
14. ಮನೆಕೆಲಸದವರಾಗಿ
15. ಹೋಟೆಲು, ಡಾಭಾಗಳು, ಟೀ ಅಂಗಡಿ, ರೆಸಾರ್ಟಗಳು, ಇತರೆ ಮನರಂಜನಾ ಪರಿಸರಗಳಲ್ಲಿ




### 3.14.2 ನಿಷೇಧಿಸಲ್ಪಟ್ಟ ಪ್ರಕ್ರಿಯೆಗಳು

1. ಬೀಡಿ ತಯಾರಿ
2. ರತ್ನಗಂಬಳಿ, ಕಾರ್ಪೆಟ್ ನೇಯ್ಗೆ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಗಳು.
3. ಸಿಮೆಂಟ್ ತಯಾರಿ, ಸಿಮೆಂಟನ್ನು ಚೀಲಕ್ಕೆ ತುಂಬುವುದು.
4. ಬಟ್ಟೆಯ ಅಚ್ಚು ಹಾಕುವಿಕೆ, ಬಣ್ಣ ಹಾಕುವುದು, ನೇಯ್ಗೆ ಮತ್ತು ಇವುಗಳ ಸಂಬಂಧಿ ಕೆಲಸಗಳು.
5. ಬೆಂಕಿಪೊಟ್ಟಣ, ಸಿಡಿ ಮದ್ದುಗಳ, ಸ್ಫೋಟಕಗಳ ತಯಾರಿ.
6. ಮೈಕಾ ಕತ್ತರಿಸುವುದು ಮತ್ತು ತುಂಡು ಮಾಡುವುದು, ಒಡೆಯುವುದು.
7. ಶಾಂಪೂ ತಯಾರಿ.
8. ಸೋಪ್ ತಯಾರಿ.
9. ಟ್ಯಾನಿಂಗ್ (ಚರ್ಮ ಹದ ಗೊಳಿಸುವುದು).
10. ಕಟ್ಟಡ ನಿರ್ಮಾಣ.
11. ಕಡ್ಡಿ ತಯಾರಿಕೆಯಲ್ಲಿ.
12. ಎಗೆಟ್‌ನಿಂದ ತಯಾರಿಸುವ ವಸ್ತುಗಳ ತಯಾರಿಕೆಯಲ್ಲಿ
13. ಲೆಡ್, ಪಾದರಸ, ಮ್ಯಾಂಗನೀಸ್, ಕ್ರೋಮಿಯಮ್, ಕ್ಯಾಡ್‌ಮಿಯಮ್, ಬೆಂಜೀನ್, ಕ್ರಿಮಿನಾಶಕಗಳು, ಕರ್ನಾಡು ಮುಂತಾದವುಗಳ ತಯಾರಿಕೆಯಲ್ಲಿ.
14. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಸಿಬಿ) ಯಲ್ಲಿ ಸೂಚಿಸಿದ ಅಪಾಯಕಾರಿಕ ಪ್ರಕ್ರಿಯೆಗಳ ಮತ್ತು ಸೆಕ್ಷನ್ 87 ರಲ್ಲಿ ಸೂಚಿಸಿದ ಅಪಾಯದ ಕೆಲಸಗಳು.
15. ಉಣ್ಣೆಯನ್ನು ಶುಚಿಗೊಳಿಸುವ ಪ್ರಕ್ರಿಯೆ.
16. ಫ್ಯಾಕ್ಟರಿ ಕಾನೂನು ಸೆಕ್ಷನ್ 2 (ಕೆ) (4) ರಲ್ಲಿ ಸೂಚಿಸಿ ಪ್ರಿಂಟಿಂಗ್
17. ಗೇರು ಬೀಜದ ತಿರುಳನ್ನು ತೆಗೆಯುವ ಪ್ರಕ್ರಿಯೆ.
18. ಬೆಸುಗೆ ಹಾಕುವುದು (ಇಲೆಕ್ಟ್ರಾನಿಕ್ ಉದ್ದಿಮೆಗಳಲ್ಲಿ).
19. ಅಗರ ಬತ್ತಿ ತಯಾರಿ.
20. ಆಟೋಮೊಬೈಲ್ ರಿಪೇರಿ ಮತ್ತು ವೆಲ್ಡ್ ಮಾಡುವುದು, ಲೇತ್ ಕೆಲಸಗಳು, ಪೇಂಟ್ ಮಾಡುವುದು, ಬೆಂಡ್ ತೆಗೆಯುವುದು.
21. ಇಟ್ಟಿಗೆ ಮತ್ತು ಹಂಚಿನ ಗೂಡುಗಳಲ್ಲಿ.
22. ಹತ್ತಿ ಜಿನ್ನಿಂಗ್ ಪ್ರಕ್ರಿಯೆ ಉದ್ದಿಮೆಗಳಲ್ಲಿ.
23. ಡಿಟರ್‌ಜೆಂಟ್ ಉದ್ದಿಮೆಗಳಲ್ಲಿ.
24. ಫ್ಯಾಬ್ರಿಕೇಶನ್ ಉದ್ದಿಮೆಗಳಲ್ಲಿ.
25. ಹರಳು (ಜೆಮ್) ಕತ್ತರಿಸುವುದು.
26. ಕ್ರೋಮೈಟ್ ಮತ್ತು ಮ್ಯಾಂಗನೀಸ್ ಅದಿರು ಗಣಿಗಳಲ್ಲಿ ಮತ್ತು ಅವುಗಳ ಸಾಗಾಟ.
27. ಜ್ಯೂಟ್ ಉದ್ದಿಮೆಗಳಲ್ಲಿ ಮತ್ತು ನಾರು ತಯಾರಿಕಾ ಘಟಕಗಳಲ್ಲಿ



28. ಸುಣ್ಣದ ಗೂಡುಗಳಲ್ಲಿ.
29. ಬೀಗ ತಯಾರಿಕೆಯಲ್ಲಿ.
30. ಲೆಡ್ ಅನ್ನು ಒಳಗೊಂಡ ತಯಾರಿಕೆಯಲ್ಲಿ / ಪ್ರಕ್ರಿಯೆಗಳಲ್ಲಿ
31. ಸಿಮೆಂಟ್ ಪೈಪ್‌ಗಳ ತಯಾರಿ, ಸಿಮೆಂಟ್‌ನ ಇತರ ವಸ್ತು ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದಿಮೆ.
32. ಗ್ಲಾಸ್ ತಯರಿ, ಗ್ಲಾಸ್ ಉಪಕರಣಗಳು, ಬಳೆಗಳು ಇತ್ಯಾದಿ
33. ಬಣ್ಣಗಳ ತಯಾರಿ
34. ಕ್ರಿಮಿನಾಶಕಗಳ ತಯಾರಿ ಮತ್ತು ಅವುಗಳನ್ನು ಹ್ಯಾಂಡಲ್ ಮಾಡುವುದು.
35. ಮೆಟಲ್ ಶುಚಿಗೊಳಿಸುವುದು, ಪೊಟ್ ಇನ್‌ಗ್ರೇವಿಂಗ್
36. ಕಲ್ಲಿದ್ದಲು ಕೈಗಾರಿಕೆ.
37. ಚರ್ಮ, ರಾಸಾಯನಿಕ ವಸ್ತುಗಳು, ಸಿಂಥೆಟಿಕ್ ವಸ್ತುಗಳನ್ನು ಒಳಗೊಂಡ ಆಟೋಟ ಸಾಮಗ್ರಿಗಳು.
38. ಪ್ಲಾಸ್ಟಿಕ್ ಮತ್ತು ಫೈಬರ್ ಗ್ಲಾಸಿನ ಅಚ್ಚಿನಲ್ಲಿ
39. ಎಣ್ಣೆ ತಯಾರಿ ಮತ್ತು ರಿಫೈನರಿಗಳಲ್ಲಿ
40. ಕಾಗದ ತಯಾರಿ
41. ಮಡಿಕೆ ಮತ್ತು ಸೆರಾಮಿಕ್ ಉದ್ದಿಮೆ.
42. ಹಿತ್ತಾಳೆಯ ಪಾಲಿಶ್, ತುಂಡು ಮಾಡುವುದು ಮತ್ತು ವೆಲ್ಡ್ ಮಾಡುವ ಉದ್ದಿಮೆಗಳಲ್ಲಿ.
43. ಯಾಂತ್ರಿಕೃತ ಕೃಷಿಯಲ್ಲಿ (ಟ್ರ್ಯಾಕ್ಟರ್, ಹಾರ್ವೆಸ್ಟಿಂಗ್ ಯಂತ್ರ)
44. ಮರ ಕತ್ತರಿಸುವ ಮಿಲ್ಲುಗಳಲ್ಲಿ
45. ರೇಷ್ಮೆ ತಯಾರಿ / ಪ್ರಕ್ರಿಯೆ
46. ಹೊಗೆಸೊಪ್ಪಿನ ಉದ್ದಿಮೆ
47. ಕಲ್ಲು ತುಂಡು ಮಾಡುವುದು, ಪುಡಿ ಮಾಡುವುದು.
48. ಟೈರುಗಳ ತಯಾರಿ, ರಿಪೇರಿ, ರಿಟ್ರೇಡಿಂಗ್, ಇತ್ಯಾದಿ
49. ಪಾತ್ರೆಗಳ ತಯಾರಿ, ಪಾಲಿಶ್ ಮಾಡುವುದು ಇತ್ಯಾದಿ
50. ಜರಿ ತಯಾರಿ
51. ಗ್ರಾನೈಟ್ ಪ್ರಕ್ರಿಯೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು
52. ಇಲೆಕ್ಟ್ರೋ ಪ್ಲೇಟಿಂಗ್
53. ಗ್ರೈಂಡಿಂಗ್ ಮತ್ತು ಮೆಟಲ್‌ಗಳನ್ನು ಹೊಳಪು ಬರಿಸುವುದು.
54. ವಜ್ರದ ಕಟಿಂಗ್ ಮತ್ತು ಹೊಳಪು ಬರಿಸುವುದು.
55. ಗಣಿಗಳಿಂದ ಸ್ಲೇಟ್ ತೆಗೆಯುವುದು.
56. ಕಸ ಹೆಕ್ಕುವುದು.
57. ಶೌಚಾಲಯ ಶುಚಿ ಮಾಡುವುದು.





## 3.15 ಬಾಲಕಾರ್ಮಿಕತೆಯ ನಿರ್ಮೂಲನೆಯಲ್ಲಿ ಅಂಗನವಾಡಿ ಶಿಕ್ಷಕಿಯರು ಮತ್ತು ಅವರ ಸಂಘಟನೆಗಳ ಪಾತ್ರ

ಅಂಗನವಾಡಿ ಶಿಕ್ಷಕಿಯರಿಗೆ ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಮಹತ್ತರವಾದ ಪಾತ್ರ ಇದೆ. ಇವರು ಮಕ್ಕಳ ನೇರ ಸಂಬಂಧದಲ್ಲಿ ಇರುವವರು ಆಗಿದ್ದು, ಮಕ್ಕಳ ಮೇಲೆ ಧನಾತ್ಮಕ ಪರಿಣಾಮ ಉಂಟು ಮಾಡಬಹುದು ಹಾಗೂ ಅವರ ಭವಿಷ್ಯವನ್ನು ರೂಪಿಸಬಹುದು. ಶಿಕ್ಷಕಿಯರು ತಮ್ಮ ಶಾಲೆಗಳಲ್ಲಿ ಕ್ರಮ ತೆಗೆದುಕೊಳ್ಳುವ ಮೂಲಕ ಹಾಗೂ ಸಮುದಾಯದಲ್ಲಿ ಈ ಬಗ್ಗೆ ವ್ಯವಹರಿಸುವ ಮೂಲಕ ಬಾಲಕಾರ್ಮಿಕತೆಯನ್ನು ತಡೆಯಬಹುದು.

### 3.15.1 ಅಂಗನವಾಡಿಗಳಲ್ಲಿ

- ಅಂಗನವಾಡಿ ಶಿಕ್ಷಕಿಯರು ಮಕ್ಕಳಿಗೆ ಪೂರ್ವಪ್ರಾಥಮಿಕ ಕಲಿಕೆಯನ್ನು ತುಂಬಾ ಆಕರ್ಷಣೀಯವಾದ ಅನುಭವವಾಗಿ ಪರಿವರ್ತಿಸಬಹುದು. ತಮ್ಮ ಕಲಿಸುವ ವಿಧಾನದಲ್ಲಿ ವಿನೂತನತೆಯನ್ನು ಅಳವಡಿಸಿಕೊಂಡು, ಮಕ್ಕಳ ಮನಸ್ಸು ಸೆಳೆದು ಅವರಲ್ಲಿ ಆಸಕ್ತಿಯನ್ನು ಉಂಟು ಮಾಡಿದರೆ ಅವರು ತಮ್ಮ ಶಿಕ್ಷಣವನನು ಮುಂದುವರಿಸಲು ಪ್ರೇರೇಪಿತರಾಗುತ್ತಾರೆ. ಅಂಗನವಾಡಿಗಳಿಗೆ ನಿರಂತರವಾಗಿ ಹೋಗುತ್ತಿರುವ ಮಕ್ಕಳು ಶಾಲೆಗೆ ಹೋಗುವ ಅಭ್ಯಾಸವನ್ನು ಮಾಡಿಕೊಂಡು ಮುಂದೆ ಶಾಲೆಗೆ ಸೇರಲು ಹಾಗೂ ಶಾಲೆಯಲ್ಲಿ ಉಳಿದು ಉತ್ತಮವಾಗಿ ತಯಾರಾಗುವುದನ್ನು ನಾವು ಅನುಭವದಿಂದ ಕಲಿತಿದ್ದೇವೆ.
- ಮಕ್ಕಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಅವರ ಕಲಿಕೆಯ ಕಷ್ಟಗಳನ್ನು ಪರಿಹರಿಸಿದರೆ ಅಂಗನವಾಡಿ ಶಿಕ್ಷಕಿಯರು ಮಕ್ಕಳ ನಿರ್ಧಿಷ್ಟ ಸಮಸ್ಯೆಗಳಿಗೆ ಪರಿಹಾರವನ್ನು ನಿಶ್ಚಿತಗೊಳಿಸಬಹುದು.
- ಅಂಗನವಾಡಿ ಶಿಕ್ಷಕಿಯರು ಮಕ್ಕಳಿಗೆ ಹಾಗೂ ಅವರ ತಂದೆ ತಾಯಂದಿರಿಗೆ ಬಾಲಕಾರ್ಮಿಕತೆಯ ಅಪಾಯಗಳನ್ನು, ಅವರ ಹಕ್ಕುಗಳ ಬಗ್ಗೆ ಮತ್ತು ಅವರನ್ನು ಕಾಪಾಡಿಕೊಳ್ಳುವ ದಾರಿಗಳ ಬಗ್ಗೆ ತಿಳಿಸುವುದು ಅವಶ್ಯಕ.
- ಶಿಕ್ಷಕಿಯರು ಮಕ್ಕಳಲ್ಲಿ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿ, ಅವರು ಭವಿಷ್ಯದಲ್ಲಿ ಸರಿಯಾದ ಕೆಲಸವನ್ನು ಆಯ್ಕೆ ಮಾಡಲು ಸಹಕಾರಿ ಆಗುವುದು.

### 3.15.2 ಸಮುದಾಯದಲ್ಲಿ

ಅಂಗನವಾಡಿ ಶಿಕ್ಷಕಿಯರು ಸಮುದಾಯದ ಸದಸ್ಯರಾಗಿ, ಬಾಲಕಾರ್ಮಿಕರ ಪೋಷಕರಿಗೆ, ಬಾಲಕಾರ್ಮಿಕತೆಯ ಅಪಾಯಗಳ ಬಗ್ಗೆ, ಪರಿಣಾಮಗಳ ಬಗ್ಗೆ ಅರಿವು ಉಂಟುಮಾಡಬೇಕು, ಹಾಗೂ ಅವರನ್ನು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರದಲ್ಲಿ ಬಳಸಿಕೊಳ್ಳಬೇಕು. ಸಮುದಾಯದಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವನ್ನು ಹೆಚ್ಚಿಸಿ, ಅವರನ್ನು ಶಿಕ್ಷಣದ ಮಟ್ಟವನ್ನು ಹಾಗೂ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ತೊಡಗಿಸಿಕೊಳ್ಳುವುದರ ಮೂಲಕ ಸಮುದಾಯವನ್ನು ಪ್ರೇರೇಪಿಸಿ, ಎಲ್ಲಾ ಬಾಲಕಾರ್ಮಿಕರು ಶಾಲಾ ಶಿಕ್ಷಣವನ್ನು ಪಡೆದುಕೊಳ್ಳುವಂತೆ ಮಾಡಬೇಕು.

### 3.15.3 ಅಂಗನವಾಡಿ ಶಿಕ್ಷಕಿಯರು ಬಾಲಕಾರ್ಮಿಕತೆಯನ್ನು ಯಾವ ರೀತಿಯಲ್ಲಿ ಪರಿವೀಕ್ಷಣೆ ಮಾಡಬಹುದು

ಬಾಲಕಾರ್ಮಿಕತೆಯ ವಿರುದ್ಧದ ಚಟುವಟಿಕೆಯಲ್ಲಿ ಮುಖ್ಯವಾದದ್ದು ಶಿಕ್ಷಣ ಮತ್ತು ತರಬೇತಿ. ಸಮುದಾಯದಲ್ಲಿ ಬಾಲಕಾರ್ಮಿಕತೆ ಇದೆಯೇ ಎಂಬುದನ್ನು ಗ್ರಹಿಸಲು ಅತ್ಯಂತ ಹೆಚ್ಚು ಶಕ್ತರಾದವರು ಅಂಗನವಾಡಿ ಶಿಕ್ಷಕಿಯರು ಮತ್ತು ಶಿಕ್ಷಣ ತಜ್ಞರು. ಅವರು ಪೋಷಕರಲ್ಲಿ ಶಿಕ್ಷಣದ ಬಗ್ಗೆ ಅರಿವನ್ನು ಹೆಚ್ಚಿಸಲು ಹಾಗೂ ಅವರಲ್ಲಿ ಅದರ ಬಗ್ಗೆ ಆಸಕ್ತಿ ಮೂಡಿಸಲು ಶಕ್ತರಾಗಿರುತ್ತಾರೆ. ಅವರು ಬಾಲಕಾರ್ಮಿಕತೆಯ ವಿರುದ್ಧ ಹೋರಾಟದಲ್ಲಿ ಹಾಗೂ ಸಮುದಾಯದ ಮನೋಭಾವನೆಯನ್ನು



ಬದಲಿಸುವ, ಬದಲಾವಣೆಯ ಹರಿಕಾರರಾಗಿ ವರ್ತಿಸಬಹುದು. ಕುಟುಂಬವನ್ನು ಬೆಂಬಲಿಸುವ ಕಾರ್ಯಕ್ರಮ, ಪೂರ್ವಪ್ರಾಥಮಿಕ ಪೌಷ್ಠಿಕಾಂಶದ ಕಾರ್ಯಕ್ರಮ, ಹಾಗೂ ಅಂಗನವಾಡಿಯ ಅವಧಿಯ ನಂತರದ ಕಾರ್ಯಕ್ರಮಗಳು, ಶಾಲಾ ಕೊಠಡಿಯ ಹೊರಗೆ ಅಂಗನವಾಡಿ ಶಿಕ್ಷಕಿಯರು ಭಾಗವಹಿಸಿದಂತಹ ಕಾರ್ಯಕ್ರಮದ ಪ್ರಮುಖ ಉದಾಹರಣೆಗಳು. ಇವುಗಳು ಅಂಗನವಾಡಿ ಶಿಕ್ಷಕಿಯರು ಶಾಲಾ ಕೊಠಡಿಯ ಹೊರಗೆ, ಸಮುದಾಯದಲ್ಲಿ ಯಾವ ರೀತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುದನ್ನು ಎತ್ತಿ ತೋರಿಸುತ್ತವೆ.


ಅವರ ಕೆಲಸದ ಅಂಗವಾಗಿ, ಅಂಗನವಾಡಿ ಶಿಕ್ಷಕಿಯರು ಮಕ್ಕಳ ಹಾಜರಾತಿಯ ಬಗ್ಗೆ ಗಮನ ಇಡಲು ಔಪಚಾರಿಕ ಅಥವಾ ಅನೌಪಚಾರಿಕ ಪದ್ಧತಿಗಳನ್ನು ಉಪಯೋಗಿಸುತ್ತಿದ್ದು ಗೈರು ಹಾಜರು ಆಗುತ್ತಿರುವ ಮಕ್ಕಳ ಮೇಲೆ ಕಣ್ಣಿಟ್ಟು ಅಂಗನವಾಡಿಯನ್ನು ಬಿಡಬಹುದಾದ ಮಕ್ಕಳನ್ನು ಗುರುತಿಸಿ ಅದನ್ನು ತಪ್ಪಿಸುತ್ತಾರೆ. ಇದು ಬಾಲಕಾರ್ಮಿಕತೆಯ ಪರಿವೀಕ್ಷಣೆ ತಂತ್ರದ ಭಾಗವಾಗಿದ್ದು, ಅಂಗನವಾಡಿ ಶಿಕ್ಷಕಿಯರು ಈ ಮೂಲಕ ಬಾಲಕಾರ್ಮಿಕತೆಯ ನಿವಾರಣೆಯನ್ನು ಪ್ರೋತ್ಸಾಹಿಸಬಹುದು. ಸಿ.ಎಲ್.ಎಂ ಒಂದು ತಂತ್ರವಾಗಿದ್ದು ಇದು ಬಾಲಕಾರ್ಮಿಕರನ್ನು ಗುರುತಿಸಲು ಪರಿಣಾಮಕಾರಿಯಾದ ಅಸ್ತ್ರವಾಗಿದೆ. ಇದು ಹೆಚ್ಚು ಧೀರ್ಘವಾದ ಮತ್ತು ವಿವರವಾದ ಪ್ರಕ್ರಿಯೆಯಾಗಿದ್ದು ಇದರಲ್ಲಿ ಬಾಲಕಾರ್ಮಿಕರ ಗುರುತಿಸುವಿಕೆ, ತಡೆಹಿಡಿಯುವಿಕೆ, ಬಿಡಿಸುವಿಕೆ ಹಾಗೂ ಅವರನ್ನು ಟ್ರ್ಯಾಕಿಂಗ್ ಮಾಡುವ ಪ್ರಕ್ರಿಯೆಗಳು ಒಳಗೊಂಡಿದ್ದು, ಅಂಗನವಾಡಿ ಶಿಕ್ಷಕಿಯರನ್ನು ಮತ್ತು ಶಿಕ್ಷಣ ತಜ್ಞರನ್ನು ಬಾಲಕಾರ್ಮಿಕತೆಯ ಪರಿವೀಕ್ಷಣೆ ಮತ್ತು ಗುರುತಿಸುವಿಕೆಯಲ್ಲಿ ಉಪಯೋಗಿಸಬಹುದಾಗಿದೆ. ಅವರು ದಿನನಿತ್ಯದ ತಮ್ಮ ಕೆಲಸದಲ್ಲಿ ಇದನ್ನು ಸುಲಭವಾಗಿ ಮಾಡಬಹುದು. ಇದಲ್ಲದೆ ಅವರು ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ಸಮುದಾಯದ ಬಲವರ್ಧನೆ ಮಾಡಬಹುದು.

ಬಾಲಕಾರ್ಮಿಕರ ಪರಿವೀಕ್ಷಣಾ ವ್ಯವಸ್ಥೆಯ ಸ್ಥಾಪನೆಯು ಪಾಲುದಾರರ ಸಹಭಾಗಿತ್ವ (ಕಾರ್ಮಿಕ ಸಂಘಟನೆಗಳು, ಶಿಕ್ಷಕಿಯರ ಮತ್ತು ಮಾಲೀಕರ ಸಂಘಟನೆಗಳು, ಸಮುದಾಯ ಆಧಾರಿತ ಸಂಘಟನೆಗಳು ಹಾಗೂ ಇತರರು) ಒಳಗೊಂಡಿರುತ್ತದೆ ಹಾಗೂ ಇಲ್ಲಿ ಪ್ರತಿಯೊಬ್ಬ ಪಾಲುದಾರರಿಗೆ ಪ್ರತ್ಯೇಕವಾದ ಪರಿವೀಕ್ಷಣೆಯ ಹಾಗೂ ಸೇವೆಯನ್ನು ಒದಗಿಸುವ ಪಾತ್ರವನ್ನು ವಹಿಸಲಾಗಿದೆ. ಒಂದು ವ್ಯಾಪಕವಾದ ವ್ಯವಸ್ಥೆಯು, ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಪಟ್ಟ ನೀತಿ ನಿಯಮಗಳನ್ನು ಅನುಷ್ಠಾನ ಮಾಡಲು ಸಮುದಾಯ ಮಟ್ಟದ ಚಟುವಟಿಕೆಗಳನ್ನು ರಾಷ್ಟ್ರಮಟ್ಟದ ಸಾಂಸ್ಥಿಕ ವ್ಯವಸ್ಥೆಗೆ ಮೂಡಿಸುವ ಉದ್ದೇಶವನ್ನು ಇಟ್ಟುಕೊಂಡಿರುತ್ತದೆ.

ಈ ಪ್ರಕ್ರಿಯೆ ಒಂದು ಭಾಗವಾಗಿ, ಅಂಗನವಾಡಿ ತಪಾಸಣೆಯ ವ್ಯವಸ್ಥೆಯು ಅಂಗನವಾಡಿಗೆ ಸೇರ್ಪಡೆ, ಹಾಜರಾತಿ ಮತ್ತು ಅವರ ಅವರು ಮುಖ್ಯವಾಹಿನಿಯ ಶಾಲೆಗೆ ಬರುವಂತೆ ಮಾಡುವುದು ಸಾಧ್ಯ. ಇದಕ್ಕಾಗಿ ಅಂಗನವಾಡಿ ಚಟುವಟಿಕೆಗಳು, ಅಂಗನವಾಡಿ ತಪಾಸಣೆಯ ವ್ಯವಸ್ಥೆ, ಪರಿವೀಕ್ಷಣಾ ವ್ಯವಸ್ಥೆ ಮಧ್ಯೆ ಸಿ.ಎಲ್.ಎಂ ಅಡಿಯಲ್ಲಿ ಸಂಪರ್ಕ ಜೋಡಣೆ ಮಾಡುವುದು ಅವಶ್ಯ. ಇದು ಶಿಕ್ಷಣದ ಸೌಲಭ್ಯವನ್ನು ಒದಗಿಸಿದ ಹಿಂದಿನ ಬಾಲಕಾರ್ಮಿಕರು ಪುನಃ ಬೇರೆ ರೀತಿಯ ಬಾಲಕಾರ್ಮಿಕತೆಗೆ ಅಥವಾ ಕೆಟ್ಟ ವ್ಯವಸ್ಥೆಗಳಿಗೆ ಹೋಗದಂತೆ ನೋಡಿಕೊಳ್ಳಲು ಅವಶ್ಯವಾಗಿದೆ.

ಈ ಹಿನ್ನಲೆಯಲ್ಲಿ ಅಂಗನವಾಡಿ ಶಿಕ್ಷಕಿಯರಿಗೆ ಈ ಬಗ್ಗೆ ಸರಿಯಾದ ಮಾಹಿತಿ, ತರಬೇತಿ ಇತ್ಯಾದಿಗಳನ್ನು ಒದಗಿಸುವುದು ಅವಶ್ಯವಾಗಿದೆ. ಇದರಿಂದ ಅವರು ಬಾಲಕಾರ್ಮಿಕತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಬೆಂಬಲಿಸಲು ಸಾಧ್ಯವಾಗುವುದು. ಈ ಕೈಪಿಡಿಯ ಉದ್ದೇಶ ಅಂಗನವಾಡಿ ಶಿಕ್ಷಕಿಯರಿಗೆ ಬಾಲಕಾರ್ಮಿಕತೆಯ ಬಗ್ಗೆ ಹೆಚ್ಚು ಅರಿವನ್ನು ಒದಗಿಸುವುದು ಮತ್ತು ತಮ್ಮ ದಿನನಿತ್ಯದ ತರಗತಿಯ ಪರಿವೀಕ್ಷಣೆಯಲ್ಲಿ ಈ ಬಗ್ಗೆ ತಾವು ಏನು ಮಾಡಬಹುದು ಎಂಬುದನ್ನು ಕಂಡುಕೊಳ್ಳುವುದು. ಅಂಗನವಾಡಿ ಶಿಕ್ಷಕಿಯರ ತರಬೇತಿಯಲ್ಲಿ ಬಾಲಕಾರ್ಮಿಕತೆ ಸಂಬಂಧಪಟ್ಟ ವಿಚಾರಗಳನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಅಂಗನವಾಡಿ ಶಿಕ್ಷಕಿಯರ ಸಂಘಟನೆಯದ್ದಾಗಿದೆ. ಇದೇ ರೀತಿಯಲ್ಲಿ ಅಂಗನವಾಡಿ ಶಿಕ್ಷಕಿಯರಿಗೆ ಈಗಿನ ವ್ಯವಸ್ಥೆಯಲ್ಲಿ ಇರುವ ಹಿನ್ನಡೆ, ತೊಂದರೆಗಳನ್ನು ಪರಿಹರಿಸುವ ಬಗ್ಗೆ ಸಹ ಅವರಿಗೆ ಜವಾಬ್ದಾರಿ ಇದೆ.





### 3.15.4 ಸಹಾಯ ಸಂಪರ್ಕ ಜಾಲವನ್ನು ರೂಪಿಸುವುದು

ಬಾಲಕಾರ್ಮಿಕತೆಯಂತಹ ಸಾಮಾಜಿಕ ಕಳಕಳಿಯ ವಿಚಾರಗಳ ಬಗ್ಗೆ ಕೆಲಸ ಮಾಡಲು ಪ್ರೇರಣೆ ಹೊಂದಿದ ಅಂಗನವಾಡಿ ಶಿಕ್ಷಕಿಯರು ತಾವು ಪ್ರತ್ಯೇಕಿಸಲ್ಪಟ್ಟು ಏಕಾಂಗಿ ಆಗಿದ್ದೇವೆ ಎಂಬ ಭಾವನೆ ಹೊಂದಿ ಒಬ್ಬೊಬ್ಬರಿಗೆ ಕೆಲಸ ಮಾಡಲು ಅಸಾಧ್ಯ ಎಂದು ಯೋಚಿಸಲಾರಂಭಿಸಬಹುದು. ಈ ಸಮಸ್ಯೆಯ ಪರಿಹಾರಕ್ಕಾಗಿ ಹತ್ತಿರದ ಅಂಗನವಾಡಿ ಶಿಕ್ಷಕಿಯರೊಂದಿಗೆ, ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳೊಂದಿಗೆ, ಸಮುದಾಯದ ಇತರ ಸದಸ್ಯರುಗಳಾದ ತಾಯಂದಿರು, ಮಹಿಳಾ ಮಂಡಳಿಗಳು, ಸ್ವ-ಸಹಾಯ ಸಂಘಗಳು ಇನ್ನು ಮುಂತಾದ ಗುಂಪುಗಳೊಡನೆ ಸೇರಿಕೊಂಡು ಒಂದು ಸಹಾಯದ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅವಶ್ಯವಾಗಿದೆ. (ತಾಯಂದಿರ ಸಮಿತಿ, ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳು ಇತ್ಯಾದಿ)

### 3.15.5 ಇತರ ಅಂಗನವಾಡಿ ಶಿಕ್ಷಕಿಯರೊಂದಿಗೆ ಸಂಪರ್ಕ ಜೋಡಣೆ

ಅಂಗನವಾಡಿ ಶಿಕ್ಷಕಿಯರ ಸಭೆಯ ಸಂದರ್ಭಗಳಲ್ಲಿ, ಬಾಲಕಾರ್ಮಿಕತೆಯ ವಿಷಯವನ್ನು ಮಂಡಿಸಿ ಇತರ ಅಂಗನವಾಡಿ ಶಿಕ್ಷಕಿಯರನ್ನು ಸೂಕ್ಷ್ಮತೆಗೊಳಿಸಿರಿ

- ಸ್ಥಳೀಯ ಬಾಲಕಾರ್ಮಿಕತೆಯ ಬಗ್ಗೆ ಇರುವ ಮಾಹಿತಿಯನ್ನು ಹಂಚಿಕೊಳ್ಳಿರಿ
- ಬಾಲಕಾರ್ಮಿಕತೆಯ ಬಗ್ಗೆ ಇರುವ ಸಂಪನ್ಮೂಲ ಪರಿಕರಗಳನ್ನು ಇತರರೊಂದಿಗೆ ಹಂಚಿಕೊಳ್ಳಿರಿ.
- ಸ್ಥಳೀಯ ಪ್ರಾಧಿಕಾರಗಳಾದ ತಾಯಂದಿರ ಗುಂಪು, ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಿ ಮುಂತಾದವುಗಳನ್ನು ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ಆಸಕ್ತಿ ತೋರಿಸುವಂತೆ ಪ್ರೇರೇಪಿಸಿರಿ.
- ಅಂಗನವಾಡಿಯನ್ನು ಬಲಪಡಿಸುವುದರ ಮೂಲಕ ಬಾಲಕಾರ್ಮಿಕತೆಯನ್ನು ಹೇಗೆ ಹೋಗಲಾಡಿಸುತ್ತೀರಿ ಎಂಬುದಕ್ಕೆ ಯೋಜನೆ ತಯಾರಿಸಿರಿ.

ಅರಿವನ್ನು ಹೆಚ್ಚಿಸುವ ಆಂದೋಲನಗಳಿಗೆ ಅಂಗನವಾಡಿ ಶಿಕ್ಷಕಿಯರ ಸಂಘಟನೆಯ ಸಹಾಯವನ್ನು ಪಡೆದುಕೊಳ್ಳಿರಿ. ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳು ಮಕ್ಕಳಿಗೆ ಉತ್ತಮ ಶಿಕ್ಷಣ ಸೌಲಭ್ಯಗಳು ಸಿಕ್ಕುವಂತೆ ಪ್ರಭಾವ ಬೀರ ಬಹುದಾಗಿದೆ ಹಾಗೂ "ಬಾಲಕಾರ್ಮಿಕತೆ" ಯ ಬಗ್ಗೆ ತಾಯಂದಿರ ಹಾಗೂ ಸ್ವ ಸಹಾಯ ಸಂಘಗಳ ತರಬೇತಿ ಕಾರ್ಯಕ್ರಮದಲ್ಲಿ ಸೇರಿಸಲು ಒತ್ತಾಯ ತರಬಹುದಾಗಿದೆ.

### 3.15.6 ಸಮುದಾಯದೊಂದಿಗೆ ಸಂಪರ್ಕ ಜೋಡಣೆ

ಬಾಲಕಾರ್ಮಿಕತೆಯ ವಿರುದ್ಧದ ಹೋರಾಟದಲ್ಲಿ ಮುಖ್ಯವಾಗಿ ತಾಯಂದಿರು, ಸ್ಥಳೀಯ ಸರಕಾರದ ಅಧಿಕಾರಿಗಳು, ಸ್ಥಳೀಯ ಸಾಮಾಜಿಕ ಕಾರ್ಯಕರ್ತರು, ಸರಕಾರೇತರ ಸಂಸ್ಥೆಗಳು, ಕಾರ್ಮಿಕರ ಮತ್ತು ಮಾಲೀಕರ ಸಂಘಟನೆಗಳು ಮುಂತಾದವುಗಳನ್ನು ತೊಡಗಿಸಿಕೊಳ್ಳಿ.

- ಬಾಲಕಾರ್ಮಿಕತೆಯ ಬಗ್ಗೆ ಸಮುದಾಯದ ಅರಿವನ್ನು ಹೆಚ್ಚಿಸುವುದು (ಉದಾ: ಅಂಗನವಾಡಿ ಮಕ್ಕಳ ತಾಯಂದಿರ ಸಮಿತಿ ಸಭೆ, ಸ್ವ-ಸಹಾಯ ಸಂಘದ ಸಭೆ, ಮಹಿಳಾ ಮಂಡಳಿಗಳ ಸಭೆ, ಮುಂತಾದ ಸಭೆಗಳಲ್ಲಿ, ಬಾಲಕಾರ್ಮಿಕತೆಯ ಬಗ್ಗೆ ಚರ್ಚಿಸುವುದು)
- ಸಮುದಾಯದ ನೆರವನ್ನು ಪಡೆಯಲು ಹಾಗೂ ಅಂಗನವಾಡಿಯ ಸೌಲಭ್ಯಗಳನ್ನು ಹೆಚ್ಚಿಸಲು ಹಾಗೂ ಬಾಲಕಾರ್ಮಿಕತೆಯನ್ನು ನಿವಾರಿಸಲು ಕಾರ್ಯಕ್ರಮ ರೂಪಿಸಿಕೊಳ್ಳಿ. (ಉದಾ: ನಿಮ್ಮ ಪ್ರದೇಶವನ್ನು ಬಾಲಕಾರ್ಮಿಕ ರಹಿತ ಪ್ರದೇಶವಾಗಿ ಮಾಡಲು ಬೇಕಾದ ಸಹಾಯದ ಬಗ್ಗೆ ಅವರಿಂದ ಭರವಸೆ ಪಡೆಯಿರಿ)
- ಅಂಗನವಾಡಿಯ ಚಟುವಟಿಕೆಗಳನ್ನು ಮತ್ತು ಊರಿನ ಜಾತ್ರೆ, ಹಬ್ಬ ಮುಂತಾದ ಸಮುದಾಯದ



ಚಟುವಟಿಕೆಗಳಿಗೆ ಸಂಪರ್ಕ ಕಲ್ಪಿಸಿ. ಬಾಲಕಾರ್ಮಿಕತೆಯ ಬಗ್ಗೆ ಮಾಹಿತಿ ಕೊಡಿರಿ. (ಸಾರ್ವಜನಿಕ ಪ್ರದೇಶಗಳಲ್ಲಿ ಪೋಸ್ಟರ್‌ಗಳನ್ನು ಭಿತ್ತಿ ಪತ್ರಗಳನ್ನು ಅಂಟಿಸಿ)

### 3.15.7 ಸಮುದಾಯದ ಇತರ ಪಾತ್ರಧಾರಿಗಳು

ಸಮುದಾಯದ ಇತರ ಪಾತ್ರಧಾರಿಗಳು ಬಾಲಕಾರ್ಮಿಕತೆಯನ್ನು ನಿವಾರಿಸುವಲ್ಲಿ ಮಹತ್ವದ ಪಾತ್ರ ವಹಿಸಬಹುದಾಗಿದೆ. ಇವರೆಲ್ಲಾ ಒಟ್ಟು ಸೇರಿ ಕೆಲಸ ಮಾಡಿದರೆ ಹೆಚ್ಚು ಸಫಲತೆ ಪಡೆಯಬಹುದು.

#### 3.15.7.1 ಸರಕಾರಗಳು

ಸರಕಾರಗಳು ಬಾಲಕಾರ್ಮಿಕತೆಯ ಸಮಸ್ಯೆಯ ಪರಿಹಾರಕ್ಕೆ ಹೆಚ್ಚಿನ ಮಹತ್ವ ಕೊಡಬೇಕು. ಸರಕಾರಗಳು ಈ ಬಡತನ ನಿವಾರಣೆ, ಉದ್ಯೋಗ ಕ್ಷೇತ್ರ, ಸಮಾಜ ಸೇವೆ, ಶಿಕ್ಷಣ ಕ್ಷೇತ್ರದಲ್ಲಿನ ನೀತಿ ನಿಯಮಗಳು ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ ಬಾಲಕಾರ್ಮಿಕತೆಯನ್ನು ತಡೆಯಬೇಕು.

#### 3.15.7.2 ಅಂಗನವಾಡಿ ಶಿಕ್ಷಕಿಯರ ಸಂಘಟನೆಗಳು

ಅಂಗನವಾಡಿ ಶಿಕ್ಷಕಿಯರ ಸಂಘಗಳು ಬಾಲಕಾರ್ಮಿಕತೆಯ ಬಗ್ಗೆ ಅರಿವನ್ನು ಹೆಚ್ಚಿಸಲು ಹಾಗೂ ಎಲ್ಲರಿಗೂ ಉತ್ತಮವಾದ ಅಂಗನವಾಡಿ ಸೌಲಭ್ಯ ಒದಗಿಸುವ ಬಗ್ಗೆ ಅಂಗನವಾಡಿ ಶಿಕ್ಷಕಿಯರಿಗೆ, ಪೋಷಕರಿಗೆ, ಮಕ್ಕಳಿಗೆ ಮತ್ತು ಸಮುದಾಯದವರಿಗೆ ತರಬೇತಿಯನ್ನು ಹಮ್ಮಿಕೊಳ್ಳಬಹುದಾಗಿದೆ. ಅವರು ಅಂಗನವಾಡಿ ಹಾಗೂ ಶಾಲಾ ದಾಖಲಾತಿ, ಹಾಜರಾತಿ, ಶಾಲೆಯಲ್ಲಿ ಮಧ್ಯದಲ್ಲಿ ಬಿಡುವುದು ಇತ್ಯಾದಿಗಳನ್ನು ಪರಿವೀಕ್ಷಣೆ ಮಾಡಿ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿನ ಕುಂದುಕೊರತೆಗಳನ್ನು ಗುರುತಿಸಲು ಸಹಾಯ ಮಾಡಬಹುದು. ಅವರು ಇತರ ಸಂಸ್ಥೆಗಳ ಜೊತೆ ಸೇರಿ ಅಂಗನವಾಡಿ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಅನುದಾನ ಸಿಗಲು ಪ್ರಯತ್ನಿಸಬಹುದು ಹಾಗೂ ಉತ್ತಮವಾದ ಪೂರ್ವಪ್ರಾಥಮಿಕ ಶಿಕ್ಷಣದ ವ್ಯವಸ್ಥೆ, ಉತ್ತಮ ಪೌಷ್ಠಿಕಾಂಶದ ಆಹಾರ, ಉತ್ತಮ ಲಸಿಕೆ ವ್ಯವಸ್ಥೆ ಮಾಡಲು ಮತ್ತು ಪಠ್ಯ ಕ್ರಮದಲ್ಲಿ ಬಾಲಕಾರ್ಮಿಕತೆಯ ವಿಷಯವನ್ನು ಸೇರಿಸಲು ಅಂಗನವಾಡಿ ಶಿಕ್ಷಕಿಯರಿಗೆ ಉತ್ತಮ ಕೆಲಸದ ಪರಿಸರ ಹಾಗೂ ಸ್ಥಾನಮಾನ ಒದಗಿಸಲು ಪ್ರಯತ್ನಿಸಬೇಕು. ಶಿಕ್ಷಣಕ್ಕೆ ಸಂಬಂಧಪಟ್ಟ ಕಾನೂನುಗಳ ಮತ್ತು ಬಾಲಕಾರ್ಮಿಕತೆಗೆ ಸಂಬಂಧಪಟ್ಟ ಕಾನೂನು ಅನುಷ್ಠಾನ ಮಾಡಲು ಒತ್ತಾಯ ಮಾಡಬಹುದು.

#### 3.15.7.3 ಸರಕಾರೇತರ ಸಂಸ್ಥೆಗಳು

ಸರಕಾರೇತರ ಸಂಸ್ಥೆಗಳು ಮಕ್ಕಳಿಗೆ ನೇರವಾಗಿ ನೆರವು ನೀಡಬಹುದು. ಸಮುದಾಯದ ಅರಿವು ಹೆಚ್ಚಿಸುವ ಬಗ್ಗೆ ಮತ್ತು ಸಮುದಾಯವನ್ನು ಬಾಲಕಾರ್ಮಿಕತೆಯ ವಿರುದ್ಧ ಒಟ್ಟುಗೂಡಿಸುವ ಕೆಲಸ ಮಾಡಬಹುದು. ಬಾಲಕಾರ್ಮಿಕತೆಯ ಪರಿಮಾಣವನ್ನು ಅಳೆಯಬಹುದು. ಇತರ ಸಂಸ್ಥೆಗಳ ಸಹಾಯದಿಂದ ಬಾಲಕಾರ್ಮಿಕತೆಯ ಸಮಸ್ಯೆಯ ನಿವಾರಣೆಯನ್ನು ಸಾಧಿಸಲು ಸಾಮಾಜಿಕ ಸುಧಾರಣೆಯನ್ನು ಸಾಧಿಸಬಹುದು.

#### 3.15.7.4 ಪೋಷಕರು ಮತ್ತು ಸಮುದಾಯ

ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ಪೋಷಕರು ಮತ್ತು ಸಮುದಾಯದ ಬೆಂಬಲ ಅತ್ಯಂತ ಅವಶ್ಯಕ. ಅವರಲ್ಲಿ ಬಾಲಕಾರ್ಮಿಕತೆಯ ಸಮಸ್ಯೆಗಳಿಗೆ ಸೂಕ್ಷ್ಮತೆಯನ್ನು ಉಂಟುಮಾಡಿದರೆ ಅವರು ಬಾಲಕಾರ್ಮಿಕತೆಯ ಅಪಾಯವನ್ನು ಮನಗಂಡು, ಸ್ಥಳೀಯವಾಗಿ ಬಾಲಕಾರ್ಮಿಕತೆಯ ಸಮಸ್ಯೆಗಳಿಗೆ ಮುಕ್ತಾಯ ತರುವಲ್ಲಿ ಸಫಲರಾಗಿ ತಮ್ಮ ಮಕ್ಕಳಿಗೆ ಮೂಲ ಶಿಕ್ಷಣ ದೊರಕುವಂತೆ ಖಾತ್ರ ಮಾಡಿಕೊಳ್ಳುತ್ತಾರೆ.

#### 3.15.7.5 ಮಾಲೀಕರ ಸಂಘಟನೆಗಳು

ಮಾಲೀಕರಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಅರಿವನ್ನು ಹೆಚ್ಚಿಸಲು ಹಾಗೂ ಅವರಿಗೆ ಜಾರಿಯಲ್ಲಿ ಇರುವ ಬಾಲಕಾರ್ಮಿಕ ಕಾನೂನುಗಳ ಪರಿಚಯ ಮಾಡಿಕೊಡಲು ಸಾಧ್ಯ. ಅವರು ಮಾಲೀಕರಿಗೆ



ಅಪಾಯರಹಿತ ಮತ್ತು ಉತ್ತಮವಾದ ಉದ್ಯೋಗದ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು, ಹಾಗೂ ಕಡಿಮೆ ಪ್ರಾಯದ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳದೇ, ಸಾಮಾಜಿಕ ಭಾಧ್ಯತೆ ಎತ್ತಿ ತೋರಿಸಲು ಸೂಚಿಸಬಹುದು. ಈಗ ಇರುವ ಕಾರ್ಮಿಕ ಕಾನೂನುಗಳಿಗೆ ಮನ್ನಣೆ ಕೊಟ್ಟು, ಶಿಕ್ಷಣದಲ್ಲಿ ಸುಧಾರಣೆ ತರಲು ಹಾಗೂ ಬಾಲಕಾರ್ಮಿಕ ಕಾನೂನುಗಳನ್ನು ಅನುಷ್ಠಾನ ಮಾಡಲು ಒತ್ತಾಯ ತರಬಹುದು.


### 3.15.7.6 ಕಾರ್ಮಿಕರ ಸಂಘಟನೆಗಳು

ಕಾರ್ಮಿಕ ಸಂಘಟನೆಗಳು, ಬಾಲಕಾರ್ಮಿಕತೆಯ ನಿವಾರಣೆಯ ಬಗ್ಗೆ ಪರಿಣಾಮಕಾರಿ ಪಾತ್ರವಹಿಸಬಹುದು. ವಿವಿಧ ಕೆಲಸದ ಪ್ರದೇಶದಲ್ಲಿ ಬಾಲಕಾರ್ಮಿಕತೆಯ ಪ್ರಮಾಣವನ್ನು ಗುರುತಿಸಿ ಮಕ್ಕಳು ಹಾಗೂ ಪ್ರೌಢಕಾರ್ಮಿಕರಲ್ಲಿ ಬಾಲಕಾರ್ಮಿಕತೆ ಅಪಾಯದ ಬಗ್ಗೆ ಅರಿವನ್ನು ತರಬಹುದಾಗಿದೆ. ಅವರು ಸಮುದಾಯವನ್ನು ಬಾಲಕಾರ್ಮಿಕತೆಯ ವಿರುದ್ಧ ಹೋರಾಡಲು ಸಜ್ಜುಗೊಳಿಸಬಹುದು ಹಾಗೂ ಈಗ ಇರುವ ಕಾನೂನುಗಳಿಗೆ ಬದಲಾವಣೆ ತರಲು ಸೂಚಿಸಬಹುದು.

### 3.15.7.7 ಮಾಧ್ಯಮಗಳು

ಮಾಧ್ಯಮವು ಜನರಲ್ಲಿ ಬಾಲಕಾರ್ಮಿಕತೆಯ ಬಗ್ಗೆ ಅರಿವನ್ನು ತರುವಲ್ಲಿ ಮಹತ್ತರವಾದ ಕೆಲಸವನ್ನು ಮಾಡಬಹುದಾಗಿದೆ. ರಾಷ್ಟ್ರ ಮಟ್ಟದ ಹಾಗೂ ಸ್ಥಳೀಯ ವರ್ತಮಾನ ಪತ್ರಿಕೆಗಳು, ದೂರದರ್ಶನಗಳು ಮತ್ತು ರೇಡಿಯೋಗಳು ಬಾಲಕಾರ್ಮಿಕ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಕೊಡುವಲ್ಲಿ ಹಾಗೂ ಬಾಲಕಾರ್ಮಿಕತೆಯ ನಿವಾರಣೆ ಬಗ್ಗೆ ಆಸಕ್ತಿ ಮೂಡಿಸುವಲ್ಲಿ ಆಸಕ್ತರಾಗಬೇಕಾಗಿದೆ. ಮಾಧ್ಯಮಗಳು ಶಿಕ್ಷಣದ ಅಭಿವೃದ್ಧಿಯ ಅವಶ್ಯಕತೆಯ ಬಗ್ಗೆ ಹಾಗೂ ಶಿಕ್ಷಣದ ಬಜೆಟ್‌ನ್ನು ಹೆಚ್ಚಿಸುವಿಕೆಯ ಬಗ್ಗೆ ಮತ್ತು ಶಿಕ್ಷಕಿಯರಿಗೆ ಉತ್ತಮ ತರಬೇತಿ ಹಾಗೂ ಶಾಲೆಗಳಿಗೆ ಹೆಚ್ಚು ಸಂಪನ್ಮೂಲ ಒದಗಿಸುವ ಬಗ್ಗೆ ಶ್ರಮಪಡಬಹುದು.





## 3.16 ಬಾಲಾರ್ಮಿಕತೆಯನ್ನು ನಿವಾರಿಸಲು ಅಂಗನವಾಡಿ ಶಿಕ್ಷಕಿಯರು ಏನು ಮಾಡಬಹುದು

ತಮ್ಮ ಪ್ರದೇಶದ ಎಲ್ಲಾ ಅಂದರೆ ಶೇ. 100 ರಷ್ಟು 0–6 ವರ್ಷದ ಮಕ್ಕಳು ಅಂಗನವಾಡಿಗೆ ದಾಖಲು ಆಗಿ ನಿರಂತರ ಹಾಜರು ಆಗುವಂತೆ ನೋಡಿಕೊಂಡು, ಅವರಿಗೆ ಶಾಲೆಗೆ ಹೋಗುವ ಅಭ್ಯಾಸವನ್ನು ಮಾಡಿಸಿ, ಮುಖ್ಯವಾಹಿನಿ ಶಾಲೆಯಲ್ಲಿನ ಅವರ ದಾಖಲಾತಿ ಸುಗಮವಾಗಿ ಆಗುವಂತೆ ನೋಡಿಕೊಳ್ಳುವುದು ಅಂಗನವಾಡಿ ಶಿಕ್ಷಕಿಯರ ಮುಖ್ಯ ಕರ್ತವ್ಯವಾಗಿದೆ. ಯಾವ ಪ್ರದೇಶದಲ್ಲಿ ಅಂಗನವಾಡಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆಯೋ ಅಲ್ಲಿ ಎಲ್ಲಾ ಮಕ್ಕಳು ಮುಖ್ಯ ವಾಹಿನಿಯ ಶಾಲೆಗೆ ಸೇರುತ್ತಿದ್ದು, ಅಲ್ಲಿ ಬಾಲಕಾರ್ಮಿಕತೆಯ ಪ್ರಮಾಣ ಅತ್ಯಂತ ಕಡಿಮೆ ಆಗಿರುತ್ತದೆ. ಆದುದರಿಂದ ಬಾಲಕಾರ್ಮಿಕತೆಯ ನಿವಾರಣೆಯಲ್ಲಿ ಅಂಗನವಾಡಿ ಶಿಕ್ಷಕಿಯರಿಗೆ ಅತ್ಯಂತ critical ಪಾತ್ರ ಇದೆ.

**ಅವರುಗಳು ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳು**

i. ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸುವುದು

- ಅಂಗನವಾಡಿಗೆ ಹೋಗಲು ತಯಾರಿ, ಅಂಗನವಾಡಿಗೆ ಹೋಗುವುದು ಅಂಗನವಾಡಿಯಲ್ಲಿ ಹೊಸ ಹೊಸ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇತ್ಯಾದಿಗಳು ಮಕ್ಕಳನ್ನು ಮುಂದೆ ಅವರು ಶಾಲೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಾಯ ಮಾಡುತ್ತವೆ.
- ಅಂಗನವಾಡಿಗೆ ಮಕ್ಕಳನ್ನು ಕಳುಹಿಸುವ ಅನುಭವವು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಅವಶ್ಯವಾದ ತಯಾರಿ ಮಾಡಲು ಸಹಾಯ ಮಾಡುವುದು.

ii. ಮಕ್ಕಳಿಗೆ ಆರೋಗ್ಯಕರವಾಗಿ ಜೀವನವನ್ನು ಆರಂಭಿಸಲು ಸಹಾಯ ಮಾಡುವುದು.


- ಅಂಗನವಾಡಿಯಲ್ಲಿನ ಸರ್ವಾಂಗೀಣವಾದ ಪೌಷ್ಠಿಕ ಆಹಾರದ ಹಾಗೂ ಆರೋಗ್ಯ ಸೇವೆಯಿಂದ ಮಕ್ಕಳು ಬಲಿಷ್ಠವಾಗಿ ಹಾಗೂ ಗಟ್ಟಿಯಾಗಿ ಬೆಳೆದು ಅವರು ಕಾಯಿಲೆ ಬೀಳುವುದು ಕಡಿಮೆ ಆಗುವುದು.
- ಮಕ್ಕಳು ಆರೋಗ್ಯವಂತರಾಗಿರುವುದರಿಂದ, ಕುಟುಂಬದ ಮೇಲೆ ಆರ್ಥಿಕ ಹೊರೆ ಕಡಿಮೆ ಆಗುವುದು.

iii. ಶಾಲೆಗೆ ಸೇರಲು ಅವಶ್ಯವಾದ ಕಲಿಕೆಯ ಅಡಿಪಾಯವನ್ನು ಒದಗಿಸುವುದು.

- ಪೂರ್ವ ಪ್ರಾಥಮಿಕ ಶಿಕ್ಷಣವು ಮಕ್ಕಳ ಮುಂದಿನ ಶಾಲಾ ಶಿಕ್ಷಣಕ್ಕೆ ಅವಶ್ಯಕವಾದ ಬಣ್ಣ, ಆಕಾರ ಇತ್ಯಾದಿಗಳ ಜ್ಞಾನವನ್ನು ಒದಗಿಸುವುದು.
- ಅಂಗನವಾಡಿಯ ಚಟುವಟಿಕೆಗಳು ಮಕ್ಕಳ ಸಾಕ್ಷರತೆ, ಅಂಕಗಣಿತ ಕೌಶಲ್ಯವನ್ನು ವೃದ್ಧಿ ಪಡಿಸುವುದು.

iv. 0–6 ವರ್ಷದ ಮಕ್ಕಳು ಅಂಗನವಾಡಿಗೆ ನಿರಂತರವಾಗಿ ಹಾಜರಾಗುವುದರಿಂದ, ಅವರು ಮುಖ್ಯವಾಹಿನಿಯಲ್ಲಿ ಉತ್ತಮವಾಗಿ ಕಲಿಯುವುದರಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರಮಾಣ ಕನಿಷ್ಠವಾಗುವುದು. ಮಕ್ಕಳ ಉತ್ತಮ ಕಲಿಕೆಯಿಂದ/ ಯಶಸ್ಸಿನಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಕಡಿಮೆ ಆಗಿ, ಬಾಲಕಾರ್ಮಿಕರಾಗುವುದು ನಿಲ್ಲುತ್ತದೆ. ಅಂಗನವಾಡಿ ಶಿಕ್ಷಕಿಯರು ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸರಿಯಾಗಿ ತಯಾರು ಮಾಡಿ, ಮಕ್ಕಳು ಬಾಲಕಾರ್ಮಿಕರಾಗುವುದನ್ನು ನೇರವಾಗಿ ತಡೆಯುತ್ತಿದ್ದಾರೆ.





v. ಐ.ಸಿ.ಡಿ.ಎಸ್ ಹಾಗೂ ಅಂಗನವಾಡಿ ಕಾರ್ಯಕ್ರಮದ ಸವಲತ್ತುಗಳು, ಶಾಲೆಯನ್ನು ಮಧ್ಯದಲ್ಲಿ ಬಿಡುವ ಹಾಗೂ ಬಾಲಕಾರ್ಮಿಕರಾಗುವ ಸ್ಥಿತಿಯಲ್ಲಿರುವ ಅತ್ಯಂತ ಬಡಕುಟುಂಬಗಳ ಮಕ್ಕಳನ್ನು ತಲುಪುತ್ತಿಲ್ಲ. ಅಂಗನವಾಡಿ ಶಿಕ್ಷಕಿಯರು ಬಡಕುಟುಂಬಗಳ ಮತ್ತು ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ತಲುಪಲು ವಿಶೇಷ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. (ವಲಸೆ ಹೋಗುವ ಕುಟುಂಬದ ಮಕ್ಕಳು... ಇತ್ಯಾದಿ)

- ಅತ್ಯಂತ ಬಡಕುಟುಂಬಗಳನ್ನು ಗುರುತಿಸಿ, ಎಲ್ಲಾ 0–6 ವರ್ಷ ಪ್ರಾಯದ ಮಕ್ಕಳನ್ನು ಅಂಗನವಾಡಿಯಲ್ಲಿ ನೊಂದಾಯಿಸಿಕೊಳ್ಳಿ
- ಮಕ್ಕಳಿಗೆ ಹೆಚ್ಚುವರಿ ಪೌಷ್ಠಿಕ ಆಹಾರ, ಲಸಿಕೆ, ಆರೋಗ್ಯ ಸೇವೆ, ಪೂರ್ವ ಪ್ರಾಥಮಿಕ ಶಿಕ್ಷಣ ಮುಂತಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿರಿ.
- ಇಂತಹ ಮಕ್ಕಳು ಅಂಗನವಾಡಿಯಲ್ಲಿ ಕನಿಷ್ಠ ಎರಡು ಗಂಟೆ ಇರುವಂತೆ ನೋಡಿಕೊಳ್ಳಿರಿ.
- ಅಂಗನವಾಡಿ ಬರೀ ಪೌಷ್ಠಿಕ ಆಹಾರ ಒದಗಿಸುವ ಕೇಂದ್ರವಾಗಿರದೆ ಪೂರ್ವ ಪ್ರಾಥಮಿಕ ಶಿಕ್ಷಣ ಸಹ ಒದಗಿಸುವ ಕೇಂದ್ರ ಎಂಬ ವಿಚಾರವನ್ನು ಪೋಷಕರಿಗೆ ಅದರಲ್ಲೂ ಮಾತೆಯರಿಗೆ ಮನದಟ್ಟು ಮಾಡಿರಿ.

vi. ಅಂಗನವಾಡಿಗೆ ಬರುವ ಎಲ್ಲಾ ಮಕ್ಕಳನ್ನು 5 ವರ್ಷ ಹತ್ತು ತಿಂಗಳು ತುಂಬಿದ ಕೂಡಲೇ ಅವರನ್ನು ಪ್ರಾಥಮಿಕ ಶಾಲೆಗೆ ದಾಖಲು ಮಾಡಲು ಕ್ರಮ ತೆಗೆದುಕೊಳ್ಳಬೇಕು. ಶಾಲಾ ಪ್ರಾಯದ ಮಕ್ಕಳ ಗಣತಿಯಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳ ಹಾಗೂ ಕೆಲಸದಲ್ಲಿ ಇರುವ ಶಾಲಾ ಪ್ರಾಯದ ಮಕ್ಕಳನ್ನು ಗುರುತಿಸಲು ಶಿಕ್ಷಕಿಯರಿಗೆ ಸಹಾಯ ಮಾಡಿರಿ.

vii. ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಗುರುತಿಸಿ, ಅವರ ಪೋಷಕರನ್ನು ಅದರಲ್ಲೂ ಮಾತೆಯರನ್ನು ಅವರ ಮಕ್ಕಳನ್ನು ಶಾಲೆಗೆ ನಿರಂತರವಾಗಿ ಕಳುಹಿಸಲು ಪ್ರಚೋದಿಸಿರಿ.

viii. ಕುಟುಂಬಗಳ ಆರ್ಥಿಕ ತೊಂದರೆಗಳ ಬಗ್ಗೆ ಸೂಕ್ಷ್ಮತೆಯಿಂದ ಇರಿ. ಅವರಿಗೆ ಆರ್ಥಿಕ ತೊಂದರೆ ಇದ್ದಾಗ್ಯೂ ಮಗುವನ್ನು ಅಂಗನವಾಡಿಯಲ್ಲಿ ಬಳಸಿಕೊಳ್ಳಲು ದಾರಿ ಹುಡುಕಿರಿ. ಇಂತಹ ಕುಟುಂಬಗಳನ್ನು ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಹಾಗೂ ಜೀವನಾಧಾರವನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುವ ಸರಕಾರೇತರ ಸಂಸ್ಥೆಗಳಿಗೆ, ಗ್ರಾಮಪಂಚಾಯತ್ ಹಾಗೂ ಸರಕಾರಿ ಇಲಾಖೆಗಳ ಸಂಪರ್ಕಕ್ಕೆ ತನ್ನಿರಿ.

ix. ಅಂಗನವಾಡಿ ಗೋಡೆಗಳಿಗೆ ಆಕರ್ಷಕ ಬಣ್ಣ ಮಾಡಿ, ಬಣ್ಣ ಬಣ್ಣದ ಹಾಗೂ ಸುಂದರವಾದ ಚಾರ್ಟುಗಳನ್ನು, ಪೋಷ್ಟರ್‌ಗಳನ್ನು, ನಕಾಷೆಗಳನ್ನು ಪ್ರದರ್ಶಿಸುವ ಮೂಲಕ, ಅಂಗನವಾಡಿ ಆಟದ ಬಯಲನ್ನು ಚೊಕ್ಕವಾಡಿ ಇಡುವುದರ ಮೂಲಕ ಹಾಗೂ ಮಕ್ಕಳಿಗೆ ಆಟದ ಸಾಮಾನುಗಳನ್ನು ಉಪಯೋಗಿಸುವುದರ ಮೂಲಕ ಅಂಗನವಾಡಿಯನ್ನು ಆಕರ್ಷಕವಾಗಿ ಇಟ್ಟುಕೊಳ್ಳಿರಿ. ಮಕ್ಕಳಿಗೆ ಮತ್ತು ಅವರ ಮಾತೆಯಂದಿರಿಗೆ ಆಸಕ್ತಿದಾಯಕವಾದ ಕಲಿಕೆಯ ವಾತಾವರಣವನ್ನು ಒದಗಿಸಿರಿ.

x. ಶಾಲೆಗೆ ಸೇರಲು ಅಗತ್ಯವಾದ ಚಟುವಟಿಕೆಗಳನ್ನು ಆಯೋಜಿಸಿರಿ. (ರೋಲ್‌ಪ್ಲೇ. ಆಟಗಳು. ಆಸಕ್ತಿದಾಯದಕವಾದ ಕಲಿಕಾ ಸಾಮಗ್ರಿಗಳು)

- ಮಗು ಮನೆಯಿಂದ ಹೊರಗೆ ಇರಲು ಕಲಿಯುತ್ತದೆ. ಒಂದೇ ಜಾಗದಲ್ಲಿ ಸ್ವಲ್ಪ ಹೊತ್ತು ಕುಳಿತು ಕೊಟ್ಟ ಕೆಲಸವನ್ನು ಮುಗಿಸಲು ಕಲಿಯುತ್ತದೆ. ಇತರ ಮಕ್ಕಳೊಂದಿಗೆ ಸೇರಿ ಆಟ ಆಡಲು ಹಾಗೂ ತನ್ನ ವೈಯಕ್ತಿಕ ಶುಚಿತ್ವ ಕಾಪಾಡಲು ಕಲಿಯುವುದು. (ಶೌಚಾಲಯವನ್ನು ಸರಿಯಾಗಿ ಉಪಯೋಗಿಸುವುದು, ತಿನ್ನುವ ಮೊದಲು ಕೈ ತೊಳೆದುಕೊಳ್ಳುವುದು ಇತ್ಯಾದಿ)



- ಮಗು ಕಲಿಕೆಯನ್ನು ಸ್ಥಿರಿಗೊಳಿಸಿಕೊಳ್ಳುತ್ತದೆ: ಭಾಷಾ ಕೌಶಲ್ಯಗಳು (ಗ್ರಹಿಸುವಿಕೆ, ಮಾತನಾಡುವುದು, ಅರ್ಥಮಾಡಿಕೊಳ್ಳುವುದು) ಕಣ್ಣು ಮತ್ತು ಕೈಯ ಸಂಪರ್ಕ... ಇತ್ಯಾದಿಗಳು

xi. ಮಕ್ಕಳು ನಿರಂತರವಾಗಿ ಅಂಗನವಾಡಿಗೆ ಬರಲು ಹಾಗೂ ಅವರು 5 ವರ್ಷ 10 ತಿಂಗಳು ಆದ ನಂತರ ಶಾಲೆಗೆ ಸೇರುವಂತೆ ಮಾಡಲು ಪೋಷಕರೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು ಅವಶ್ಯಕ.

xii. ಬಾಲಕಾರ್ಮಿಕತೆಯಿಂದ ಆಗುವ ನಷ್ಟಗಳು ಹಾಗೂ ಶಾಲಾ ಶಿಕ್ಷಣದಿಂದಾಗುವ ಅನುಕೂಲತೆಗಳ ಬಗ್ಗೆ ಪೋಷಕರಿಗೆ ತಿಳಿಸಿ ಹೇಳುವುದು ಅವಶ್ಯ.

xiii. ಮಕ್ಕಳ ತಾಯಂದಿರ ಸಮಿತಿ ರಚಿಸಿ, ಅವರು ಆಗಾಗ ಸಭೆ ಸೇರುವಂತೆ ನೋಡಿಕೊಳ್ಳಬೇಕು. ಈ ಸಭೆಯಲ್ಲಿ ಅವರ ಮಕ್ಕಳ ಸಾಧನೆಯನ್ನು ತಿಳಿಸಬೇಕು ಹಾಗೂ ಶಾಲೆ ಮತ್ತು ಅಂಗನವಾಡಿಯಿಂದ ಆಗುವ ಲಾಭಗಳನ್ನು ಸಹ ಅವರಿಗೆ ಮನದಟ್ಟು ಮಾಡಬೇಕು. ಅವರಿಗೆ ತಮ್ಮ ಮಕ್ಕಳನ್ನು ನಿರಂತರವಾಗಿ ಅಂಗನವಾಡಿ ಮತ್ತು ಶಾಲೆಗೆ ಕಳುಹಿಸಲು ಒತ್ತಾಯ ತರಬೇಕು.

xiv. ಅಂಗನವಾಡಿಗೆ ಸರಿಯಾಗಿ ಬರದೆ ಇರುವ ಮಕ್ಕಳು ಹಾಗೂ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಕುಟುಂಬಗಳಿಗೆ ಮನೆ ಭೇಟಿ ಕೊಡುವುದು ಅತ್ಯಂತ ಅವಶ್ಯಕ. ಇಂತಹ ಕುಟುಂಬಗಳಿಗೆ ಹೆಚ್ಚು ಹೆಚ್ಚು ಭೇಟಿ ಕೊಡಬೇಕು.

ಅಂತಹ ಕುಟುಂಬಗಳು ಯಾವುವೆಂದರೆ

- ಪ.ಜಾತಿ/ ಪ. ಪಂಗಡದ ಕುಟುಂಬಗಳು
- ಸರಿಯಾದ ಆದಾಯ ಇಲ್ಲದ ಕುಟುಂಬಗಳು
- ಅಂಗನವಾಡಿಗೆ/ ಶಾಲೆಗೆ ಸರಿಯಾಗಿ ಹಾಜರಾಗದೆ ಇರುವ ಮಕ್ಕಳ ಕುಟುಂಬಗಳು
- ಏಕ ಪೋಷಕರ ಕುಟುಂಬ
- ಎರಡ್ಕಕಿಂತ ಹೆಚ್ಚು ಮಕ್ಕಳು ಇರುವ ಕುಟುಂಬಗಳು
- ಆರೋಗ್ಯದ ತೊಂದರೆ ಇರುವ ಹಾಗೂ ಕುಡಿತದ ಚಟ ಇರುವ ಕುಟುಂಬಗಳು

xv. ಅಂಗನವಾಡಿ ಶಿಕ್ಷಕಿಯರು ಶಾಲಾ ಶಿಕ್ಷಕಿಯರು, ಎಸ್.ಡಿ.ಎಂ.ಸಿ ಸದಸ್ಯರು, ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಹತ್ತಿರದ ಸಂಪರ್ಕ ಇಟ್ಟುಕೊಳ್ಳಬೇಕು. ಬಾಲಕಾರ್ಮಿಕತೆಯನ್ನು ತಡೆಯಲು ಇವರ ಸಹಾಯ/ ಸಹಕಾರ ತೆಗೆದುಕೊಳ್ಳಬೇಕು.

xvi. ಅಂಗನವಾಡಿ ಶಿಕ್ಷಕಿಯರು ಕುಟುಂಬಗಳ ಜೊತೆ ಹಾಗೂ ಸಮುದಾಯದ ಜೊತೆಯಲ್ಲಿ ನಿಕಟವಾದ ಸಂಬಂಧ ಇಟ್ಟುಕೊಂಡು ಕೆಲಸ ಮಾಡಬೇಕು.

xvii. ಕುಟುಂಬಗಳ ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳ ಅವಶ್ಯಕತೆಗಳನ್ನು ಗುರುತಿಸಿ ಅವುಗಳನ್ನು ತಮ್ಮ ಸಂಪರ್ಕ ಜಾಲದ ಸಹಾಯದಿಂದ ಒದಗಿಸಲು ಅಥವಾ ಪರಿಹರಿಸಲು ಪ್ರಯತ್ನಿಸಬೇಕು.

xviii. ಬಾಲಕಾರ್ಮಿಕತೆಯನ್ನು ನಿವಾರಿಸಲು ಹಾಗೂ ಬಾಲಕಾರ್ಮಿಕತೆಯ ಬಗ್ಗೆ ಇರುವ ತಪ್ಪಯ ನಂಬಿಕೆಗಳನ್ನು ದೂರ ಮಾಡಲು, ಪೋಷಕರನ್ನು, ಸಮುದಾಯದವರನ್ನು ಹೆಚ್ಚಿನ ಮಾಹಿತಿ ಕೊಟ್ಟು ಸೂಕ್ಷ್ಮತೆಗೊಳಿಸಬೇಕು.



## 3.17 ಮಕ್ಕಳ ಸಾಗಾಟ ಮತ್ತು ಪರಿವೀಕ್ಷಣೆ

### 3.17.1 ಅವಶ್ಯಕತೆ

ಸುವ್ಯವಸ್ಥಿತವಾದ ಪರಿವೀಕ್ಷಣೆ ಮತ್ತು ಮಕ್ಕಳ ಜಾಡು ಹಿಡಿಯುವ ವ್ಯವಸ್ಥೆಯು ಎಲ್ಲಾ ಮಕ್ಕಳು ಶಾಲೆಗೆ ಸೇರಿ ಮತ್ತು ಶಾಲೆಯಲ್ಲಿ ಉಳಿದುಕೊಳ್ಳುವಂತೆ ಮಾಡಲು ಪೂರ್ವಾಪೇಕ್ಷಿತ ಅವಶ್ಯಕತೆ ಆಗಿದೆ. ಇದು ಅವಶ್ಯಕತೆ ಇರುವ ಮಕ್ಕಳನ್ನು ಗುರುತಿಸಿ, ಸಮಯಕ್ಕೆ ಸರಿಯಾಗಿ ತಪ್ಪು ತಿದ್ದಿಕೊಂಡು ಮತ್ತು ಪರಿಹಾರ ಕಂಡುಕೊಳ್ಳಲು ಹಾಗೂ ಅವರು ಶಿಕ್ಷಣ ವ್ಯವಸ್ಥೆಯಲ್ಲಿ ಉಳಿದುಕೊಳ್ಳುವಂತೆ ನೋಡಿಕೊಳ್ಳಲು ಅವಶ್ಯಕವಾಗಿದೆ.

ಅಂಗನವಾಡಿ ಶಿಕ್ಷಕಿಯ ಮುಖ್ಯ ಅರ್ತವ್ಯ ಅವರ ಪ್ರದೇಶದ ಎಲ್ಲಾ ಮಕ್ಕಳು ಅಂದರೆ ಶೇ. 100 ರಷ್ಟು ಮಕ್ಕಳು ದಾಖಲಾಗಿ, ಹಾಜರು ಆಗುವಂತೆ ನೋಡಿಕೊಳ್ಳುವುದು ಆಗಿದೆ. ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಅಥವಾ ಕೆಲಸಕ್ಕೆ ಸೇರಿಕೊಳ್ಳುವ ಸಂಭವ ಇರುವುದರಿಂದ, ಈ ಮಕ್ಕಳ ಜಾಡು ಹಿಡಿಯುವ ಮತ್ತು ಪರಿವೀಕ್ಷಣೆಯ ವ್ಯವಸ್ಥೆಯ ಅವಶ್ಯಕತೆ ಇದೆ. ಮಕ್ಕಳು ಬಾಲಕಾರ್ಮಿಕರಾಗದಂತೆ ನೋಡಿಕೊಳ್ಳುವ ಹಾಗೂ ಸಾರ್ವತ್ರಿಕ ಶಿಕ್ಷಣ ಒದಗಿಸುವಲ್ಲಿನ ಪ್ರಮುಖ ತಂತ್ರ ಯಾವುದೆಂದರೆ, ಮಕ್ಕಳ ಹುಟ್ಟು, ಹುಟ್ಟಿನ ನೊಂದಣಿ, ಅಂಗನವಾಡಿಯಲ್ಲಿ ಸೇರ್ಪಡೆ ಹಾಗೂ ಹಾಜರಾತಿ, ಲಸಿಕೆ ಹಾಕುವುದು, ಭೌತಿಕ ಬೆಳವಣಿಗೆ, ಪೌಷ್ಠಿಕಾಂಶದ ಆಹಾರ, ಶಾಲೆಗೆ ದಾಖಲಾತಿ ಮತ್ತು ಹಾಜರಾತಿ ಇತ್ಯಾದಿಗಳನ್ನು ನಿರಂತರವಾಗಿ ಪರಿವೀಕ್ಷಣೆ ಮಾಡುವುದು.

ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಕೆಲಸಕ್ಕೆ ಸೇರಿಕೊಳ್ಳದಂತೆ ನೋಡಿಕೊಳ್ಳಲು ಹಾಗೂ ಅವರ ನಿರಂತರ ಹಾಜರಿ ಮತ್ತು ಸಾಧನೆಯನ್ನು ಅಂಗನವಾಡಿಗಳಲ್ಲಿ, ಸೇತುಬಂಧ ಶಾಲೆಗಳಲ್ಲಿ ಮತ್ತು ಮುಖ್ಯವಾಹಿನಿಯ ಶಾಲೆಗಳಲ್ಲಿ, ಪರಿವೀಕ್ಷಣೆ ಮಾಡುವುದು ಅವಶ್ಯವಾಗಿದೆ. ಇದರ ಬಗ್ಗೆ ಒಂದು ಸ್ವಯಂಚಾಲಿತ ಸಾಧನದ ಅವಶ್ಯಕತೆ ಇದ್ದು ಅದು ಈ ಕೆಳಗಿನವುಗಳನ್ನು ಹೊಂದಿರಬೇಕಾಗಿದೆ.

- ಸಂಗ್ರಹಿಸಿದ ಅಂಕಿ ಅಂಶಗಳನ್ನು ಪ್ರಮಾಣೀಕರಿಸುವುದು.
- ಅಂಕಿ ಅಂಶಗಳ ಕೇಂದ್ರೀಕೃತವಾದ ಭಂಡಾರವನ್ನು ರಚಿಸುವುದು.
- ಸಂಗ್ರಹಿಸಿದ ಅಂಕಿ ಅಂಶಗಳ ವಿಶ್ಲೇಷಣೆ ಮಾಡುವುದು.
- ಮಗು ಎಲ್ಲಿದೆ ಎಂದು ಪರೀಕ್ಷಿಸಲು ಅವಶ್ಯಕವಾದ ಚಾಕಚಕ್ಯತೆ

### 3.17.2 ಬೇಸಿಕ್ ಎಂದರೇನು? (Back to School Information on Children)

ಬೇಸಿಕ್ ಎಂಬ ಸಾಧನವನ್ನು ಕರ್ನಾಟಕ ಸರಕಾರದ ಕಾರ್ಮಿಕ ಇಲಾಖೆ ತಯಾರಿಸಿದೆ. ಇದರಲ್ಲಿ ಎಲ್ಲಾ ಯೋಜನೆಗಳ "ಮರಳಿ ಶಾಲೆಗೆ" ಕಾರ್ಯಕ್ರಮದಲ್ಲಿ ಶಾಲೆಗೆ ಸೇರಿದ ಮಕ್ಕಳ ಮಾಹಿತಿ ದೊರಕುತ್ತದೆ

**ಬೇಸಿಕ್‌ನಿಂದಾಗುವ ಅನುಕೂಲಗಳು**

- ಪ್ರತೀ ಮಗುವಿನ ಇತ್ತೀಚಿನ ಮಾಹಿತಿಯನ್ನು ಕೂಡಲೇ ಒದಗಿಸುವುದು.
- ಯಾವುದೇ ಸಂದರ್ಭದಲ್ಲಿ ಪ್ರತಿಯೊಂದು ಸೇತುಬಂಧ ಶಾಲೆಯಲ್ಲಿನ ಮಕ್ಕಳ ಜಾಡು ಹಿಡಿಯುವುದು ಮತ್ತು ಒದಗಿಸಿದ ಸೇವೆಗಳ ಪರಿವೀಕ್ಷಣೆ
    - ➢ ಆರೋಗ್ಯ ತಪಾಸಣೆ
    - ➢ ವೃತ್ತಿ ತರಬೇತಿಗಳು
    - ➢ ಯೋಜನೆಗಳಿಗೆ ಸಂಪರ್ಕ
    - ➢ ಮಗುವಿಗೆ ಕೊಟ್ಟ ವಿದ್ಯಾರ್ಥಿ ವೇತನ/ ಇತರೆ ಅನುದಾನಗಳು
- ಜಿಲ್ಲಾ ಕಾರ್ಯಕ್ರಮದಲ್ಲಿ ಮಗುವಿನ ಈಗಿನ ಸ್ಥಿತಿ



- ಮಗುವಿನ ಹೆಸರಿನ ಮೂಲಕ ಅಥವಾ ಗುರುತಿನ ಚೀಟಿಯ ಮೂಲಕ ಹುಡುಕುವುದು.
- ಮಕ್ಕಳ ಮಾಹಿತಿಯ ನಕಲು ನಮೂನೆಗಳನ್ನು ಗುರುತಿಸುವುದು.
- ಸೇತು ಬಂಧ ಮತ್ತು ಮುಖ್ಯವಾಹಿನಿಯ ಶಾಲೆಯನ್ನು ಮಧ್ಯದಲ್ಲಿ ಬಿಟ್ಟವರ ಜಾಡು ಹಿಡಿದು ಅವರು ಯಾವ ಕಾರಣಕ್ಕಾಗಿ ಮಧ್ಯದಲ್ಲಿ ಬಿಟ್ಟರು ಎಂಬುದನ್ನು ಕಂಡು ಹಿಡಿಯುವುದು.
- ಸೇತು ಬಂಧ ಮತ್ತು ಮುಖ್ಯವಾಹಿನಿಯ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಕಲಿಕೆಯ ಫಲಿತಾಂಶವನ್ನು ಪರಿವೀಕ್ಷಣೆ ನಡೆಸುವುದು.
- ಜಿಲ್ಲಾ ಮಟ್ಟದ ಅಂಕಿ ಅಂಶಗಳನ್ನು ರಾಜ್ಯ ಮಟ್ಟಕ್ಕೆ ಮತ್ತು ರಾಷ್ಟ್ರ ಮಟ್ಟಕ್ಕೆ ತಲುಪಿಸುವುದು.

### 3.17.3 ಬೇಸಿಕ್‌ನಲ್ಲಿರುವ ಮುಖ್ಯ ಅಂಶಗಳು (Main Menu in Basic)

**1. ಸೇತು ಬಂಧ ಕೇಂದ್ರ:** ಇದನ್ನು ನಮೂದಿಸಿರಿ: ಮಗುವಿನ ಚರಿತ್ರೆ (ಪ್ರೊಫೈಲ್) ಮತ್ತು ಸೇತುಬಂಧ ಕೇಂದ್ರದಲ್ಲಿ ಮಗುವಿನ ಸೇರ್ಪಡೆಯ ಅಂಶಗಳು/ ಮಾಹಿತಿಗಳು, ಒದಗಿಸಿದ ಸೇವೆಗಳು– ವಿದ್ಯಾರ್ಥಿವೇತನ, ಸ್ಟೈಂಫಂಡ್, ಆರೋಗ್ಯ ತಪಾಸಣೆ, ವೃತ್ತಿ ಶಿಕ್ಷಣ ತರಬೇತಿಗಳು, ಮಗುವಿನ ಕಲಿಕೆಯ ಫಲಿತಾಂಶ, ಕೇಂದ್ರವನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಮಾಹಿತಿ

**2. ಮುಖ್ಯವಾಹಿನಿಯ ಶಾಲೆ:** ಇವುಗಳನ್ನು ನಮೂದಿಸಿರಿ: ಔಪಚಾರಿಕ ಶಾಲೆಗೆ ದಾಖಲಾತಿ, ಶೈಕ್ಷಣಿಕ ಪ್ರಗತಿ ಮತ್ತು ಅನುಸರಣಾ ಪ್ರಕ್ರಿಯೆ

**3. ವರದಿಗಳು:** ಈ ಕೆಳಗಿನ ವರದಿಗಳನ್ನು ಉತ್ಪತ್ತಿ ಮಾಡಬಹುದು (ನಿರ್ದಿಷ್ಟ ಅವಧಿಗೆ) ಮಗುವಿನ ಚರಿತ್ರೆ (ಪ್ರೊಫೈಲ್), ಸೇತು ಬಂಧ ಕೇಂದ್ರದ ಸೇರ್ಪಡೆ, ಔಪಚಾರಿಕ ಶಾಲೆಯಲ್ಲಿ ದಾಖಲಾತಿ, ವಸತಿ ನಿಲಯಗಳಲ್ಲಿನ ಸೇರ್ಪಡೆಗಳು, ಸೇತು ಬಂಧ ಕೇಂದ್ರದಲ್ಲಿನ ಪ್ರಗತಿ, ಶಾಲೆಯ ವರದಿಗಳು,

**4. ಸೆಟ್ಟಿಂಗ್ಸ್‌ಗಳು:** ಎನ್.ಜಿ.ಓ ಗಳು, ಕೇಂದ್ರಗಳು, ಶಾಲೆಗಳು ಮತ್ತು ವಸತಿ ನಿಯಲಗಳ ಮಾಹಿತಿ

**5. ಸೇರ್ಪಡೆ (ಆಡಳಿತಾತ್ಮಕ)**

### 3.17.4 ಬೇಸಿಕ್‌ನಿಂದ ಸಿಗುವ ಫಲಿತಾಂಶ ಏನು?

- 42 ವಿವಿಧ ರೀತಿಯ ವರದಿಗಳು
- ಪ್ರತಿಯೊಂದು ಸೇತು ಬಂಧ ಕೇಂದ್ರದ ತ್ರೈಮಾಸಿಕ ವರದಿ
- ಜಿಲ್ಲಾ ಮಟ್ಟದ ತ್ರೈಮಾಸಿಕ ವರದಿ
- ಕೆಲಸದ ವಿಭಾಗದ ವಿಶ್ಲೇಷಣೆ
- ರಾಜ್ಯ ಮಟ್ಟದಲ್ಲಿ ಹಾಗೂ ಕೇಂದ್ರ ಮಟ್ಟದಲ್ಲಿ ವರದಿಗಳನ್ನು ಮತ್ತು ಅಂಕಿ ಅಂಶಗಳನ್ನು ಪಡೆಯಲು, ಕಳುಹಿಸಲು, ಕ್ರೋಢಿಕರಿಸಲು ಹಾಗೂ ವಿಶ್ಲೇಷಿಸಲು ಅವಕಾಶ.
- ಯಾವುದೇ ಸಂದರ್ಭದಲ್ಲಿ ಪ್ರತಿಯೊಂದು ಸೇತುಬಂಧ ಶಾಲೆಯಲ್ಲಿನ ಮಕ್ಕಳ ಜಾಡು ಹಿಡಿಯುವುದು ಮತ್ತು ಪರಿವೀಕ್ಷಣೆ

### 3.17.5 ಯಾರು ಬೇಸಿಕ್ ಅನ್ನು ಉಪಯೋಗಿಸಬಹುದು?


ಎನ್.ಸಿ.ಎಲ್.ಪಿ ಯ ಜಿಲ್ಲಾ ಮಟ್ಟದ ಕಛೇರಿಯವರು

ಸೇತುಬಂಧ ಕೇಂದ್ರದ ಸರಕಾರೇತರ ಸಂಸ್ಥೆಗಳ ಸಂಯೋಜಕರು

ಶಿಕ್ಷಣ ಇಲಾಖೆ–ಮರಳಿ ಬಾ ಶಾಲೆ ಕಾರ್ಯಕ್ರಮದ ಬಗ್ಗೆ

ಮಕ್ಕಳ ಪರಿವೀಕ್ಷಣೆಗಾಗಿ ಅಂಗನವಾಡಿ ಶಿಕ್ಷಕಿಯರು





## 3.18 ಅಪಾಯಕಾರಿ ಅಂಚಿನಲ್ಲಿರುವ ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಹತ್ತಿರ ಸಂವಹನ ನಡೆಸುವುದು

ಸಂವಹನವು ದ್ವಿಮುಖ ದಾರಿಯ ಪ್ರಕ್ರಿಯೆ ಅದರಲ್ಲಿ:

- ಇನ್ನೊಬ್ಬರ ವಿಚಾರಗಳನ್ನು ಮತ್ತು ಅನುಭವಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಇದೆ.
- ಗ್ರಹಿಸುವ ವ್ಯಕ್ತಿಗೆ ಅನುಕೂಲವಾಗುವ ಹಾಗೆ ಪ್ರತಿಸ್ಪಂದಿಸಬೇಕು/ ವಿನಿಮಯ ಮಾಡಬೇಕು

ಮೇಲಿನ ಪ್ರಕ್ರಿಯೆಯಿಂದ ಒಬ್ಬ ವ್ಯಕ್ತಿ ಉತ್ತಮವಾಗಿ ಸಂವಹನ ನಡೆಸಲು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು ಎಂಬುದು ತಿಳಿದುಬರುತ್ತದೆ.

- ಗ್ರಹಿಸುವ ಮತ್ತು ವೀಕ್ಷಿಸುವ ಕೌಶಲ್ಯಗಳು
- ನಿಮ್ಮ ವಿಚಾರಗಳನ್ನು ತಿಳಿಸುವ ಕೌಶಲ್ಯಗಳು ಮತ್ತು ಅವುಗಳನ್ನು ನಿರ್ದೇಶಿತ ಸಭಿಕರು, ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆಯೇ ಎಂಬ ಅನುಭವ

ನಾವು ಕಷ್ಟದಲ್ಲಿರುವ ಮತ್ತು ಒತ್ತಡದಲ್ಲಿರುವವರೊಂದಿಗೆ ಮತ್ತು ತಮ್ಮ ಕಷ್ಟದ ಪರಿಸ್ಥಿತಿಯಿಂದ ಹೊರಬಂದು ಸಹಾಯವನ್ನು ಅಪೇಕ್ಷಿಸುವವರೊಂದಿಗೆ ಹಾಗೂ ಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳೊಂದಿಗೆ ಸಂವಹನ ಮಾಡುವಾಗ ಮೊದಲು ಅವರ ಹತ್ತಿರ ಯಾವ ರೀತಿಯಲ್ಲಿ ಮಾತನಾಡಬೇಕು ಎಂಬುದರ ಬಗ್ಗೆ ಯೋಚಿಸಿ ಆದಷ್ಟು ಉತ್ತಮವಾಗಿ ಸ್ಪಂದಿಸಬೇಕು.

ಈ ವಿಭಾಗದಲ್ಲಿ ಯಾವ ರೀತಿಯಲ್ಲಿ ಶಿಕ್ಷಕಿಯರು, ಸಾಮಾಜಿಕ ಕಾರ್ಯಕರ್ತರು ಮತ್ತು ಪ್ರೌಢರು ಅವಶ್ಯಕತೆಯಲ್ಲಿರುವ ಮಕ್ಕಳ ಜೊತೆಯಲ್ಲಿ ಸಂವಹನ ನಡೆಸಬೇಕು ಹಾಗೂ ಯಾವ ರೀತಿಯಲ್ಲಿ ಅಂತಹ ಮಕ್ಕಳನ್ನು ತಮ್ಮ ವಿಚಾರಗಳನ್ನು/ ಅನುಭವಗಳನ್ನು ಸರಿಯಾಗಿ ತಿಳಿಸುವಂತೆ ಪ್ರೇರೇಪಿಸಬೇಕು ಎಂಬುದನ್ನು ವಿವರಿಸಲಾಗಿದೆ.

### 3.18.1 ಸಂವಹನ ಮತ್ತು ಮಕ್ಕಳು

ವಸತಿ ಸಹಿತ ಸೇತು ಬಂಧ ಕೇಂದ್ರದಲ್ಲಿನ ಮಕ್ಕಳ ವಯೋಮಿತಿ ಬೇರೆ ಬೇರೆಯಾಗಿದ್ದು ಅದು 8 ವರ್ಷದಿಂದ 14 ವರ್ಷದವರೆಗೆ ಇದ್ದು ಅವರು ಬೇರೆ ಬೇರೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯವರು ಆಗಿರುತ್ತಾರೆ. ಆರ್.ಬಿ.ಸಿ ಯಲ್ಲಿ ಎರಡೂ ಲಿಂಗದ ಮಕ್ಕಳು ಇದ್ದು ಅವರು ಬೇರೆ ಬೇರೆ ಧರ್ಮಗಳಿಗೆ ಮತ್ತು ಜಾತಿಗಳಿಗೆ ಸೇರಿದವರು ಆಗಿರಬಹುದು.

ಮಕ್ಕಳ ಜೀವನವು ಕುಟುಂಬ ಮತ್ತು ಸಮುದಾಯವನ್ನು ಹೊಂದಿಕೊಂಡಿರುತ್ತದೆ. ಅವರ ಭೌತಿಕ, ಮಾನಸಿಕ, ಭಾವನಾತ್ಮಕ ಬೆಳವಣಿಗೆಯು ಅವರಿಗೆ ಅವರ ಕುಟುಂಬದಿಂದ ಮತ್ತು ಹತ್ತಿರದ ಸಮುದಾಯದಿಂದ ಸಿಕ್ಕುವ ಲಾಲನೆ ಪಾಲನೆಯ ಮೇಲೆ ಅವಲಂಬಿತವಾಗಿದೆ. ಅವರ ಭಾಷೆ, ವ್ಯಕ್ತ ಪಡಿಸುವ ಶಕ್ತಿ, ಯೋಚಿಸುವ ಶಕ್ತಿ, ವಿಚಾರಧಾರೆ, ಅನುಭವಗಳು ಹೆಚ್ಚಾಗಿ ಅವರ ಪೋಷಕರ, ಸಂಬಂಧಿಕರ, ನೆರೆಕರೆಯವರ ಸಹಾಯ ಮತ್ತು ಸಂವಾದದ ಮೇಲೆ ಅವಲಂಬಿತವಾಗಿದೆ.

ಹೆಚ್ಚಿನ ಸಮುದಾಯದಲ್ಲಿ, ಮಕ್ಕಳು ಎರಡು ಲಿಂಗದ ವಿವಿಧ ವಯೋಮಿತಿ ವ್ಯಕ್ತಿಗಳೊಂದಿಗೆ ತಮ್ಮ ಸಂಪರ್ಕ ಜಾಲವನ್ನು ರಚಿಸಿಕೊಳ್ಳುತ್ತಾರೆ. ತಮ್ಮ ಕುಟುಂಬದ ಸದಸ್ಯರೊಂದಿಗೆ ಮಾತನಾಡುವುದಲ್ಲದೆ/ ಕಲೆಯುವುದಲ್ಲದೆ ಸಮುದಾಯ ಬೇರೆ ಬೇರೆ ಸದಸ್ಯರೊಂದಿಗೆ ಸಹ ಕಲೆತು ಪರಸ್ಪರ ವರ್ತಿಸುತ್ತಾರೆ.



### 3.18.2 ಸಂವಹನದ ಮಹತ್ವ

ಸಂವಹನವು ಇತರರೊಂದಿಗಿನ ಸಂಬಂಧದ ಮೂಲ ಆಧಾರವಾಗಿದೆ. ಸಂವಹನವು ಮಾತುಕತೆಯ ಮೂಲಕ, ಬರಹದ ಮೂಲಕ ಅಥವಾ ಇತರ ಪ್ರಕಾರಗಳ ಮೇರೆಗೆ ಇರಬಹುದು. ಸಂವಹನವು ನಮಗೆ ಬಹಳ ಕಷ್ಟದ ಪರಿಸ್ಥಿತಿಯಿಂದ ಹೊರ ಬರಲು ಸಹಾಯ ಮಾಡುವುದು. ಸಂವಹನದ ಕೆಲವೊಂದು ಆಯಾಮಗಳನ್ನು ಈ ಕೆಳಗೆ ಕೊಡಲಾಗಿದೆ.

**ನೈತಿಕ ಸಹಾಯ ಮತ್ತು ಆತ್ಮೀಯವಾಗಿ ಮಾತನಾಡಲು ಆಸ್ಪದ:**

ಕಷ್ಟದ ಪರಿಸ್ಥಿತಿಯಲ್ಲಿ ಸಾವಿರಾರು ಮಕ್ಕಳು ಇದ್ದು ಅವರಿಗೆ ನೈತಿಕವಾದ ಮತ್ತು ಭೌತಿಕವಾದ ಸಹಾಯದ ಅವಶ್ಯಕತೆ ಇದೆ. ರಸ್ತೆಯಲ್ಲಿರುವ ಮಕ್ಕಳಿಗೆ, ಕೆಲಸಲ್ಲಿರುವ ಮಕ್ಕಳಿಗೆ, ಬಡವರ ಕುಟುಂಬದ ಮಕ್ಕಳಿಗೆ, ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಯಾರಾದರೂ ಹಿರಿಯರ ಸಹಾಯದ ಅವಶ್ಯಕತೆ ಇದೆ. ಇಂತಹ ಮಕ್ಕಳೊಂದಿಗೆ ವ್ಯವಹರಿಸುವ ಪ್ರೌಢರು, ಅವರಲ್ಲಿ ಆತ್ಮಶಕ್ತಿಯನ್ನು ಬೆಳೆಸಬೇಕು. ಇವರಲ್ಲಿ ಹೆಚ್ಚಿನ ಮಕ್ಕಳನ್ನು ಲೈಂಗಿಕ, ಮಾನಸಿಕ ಹಾಗೂ ಭೌತಿಕ ದುರಪಯೋಗಕ್ಕೆ, ಹಿಂಸೆಗೆ ಮತ್ತು ಶೋಷಣೆಗೆ ಒಳಪಡಿಸಲಾಗುತ್ತಿದೆ. ಇಂತಹ ಮಕ್ಕಳಿಗೆ ತಮ್ಮ ವಿಚಾರಗಳನ್ನು ಹಂಚಿಕೊಂಡು ತಮ್ಮ ಕಷ್ಟಗಳನ್ನು, ನೋವುಗಳನ್ನು ಕಡಿಮೆ ಮಾಡಿಕೊಳ್ಳಲು ಯಾರಾದರೂ ಹಿರಿಯರ ಅವಶ್ಯಕತೆ ಇದೆ.

ಸಾಮಾಜಿಕ ಕಾರ್ಯಕರ್ತರು ಅಥವಾ ಪ್ರೌಢರು ಇಂತಹ ಮಕ್ಕಳು ತಮ್ಮ ಅನಿಸಿಕೆಗಳನ್ನು ಚಿತ್ರ ಬಿಡಿಸುವ, ಕಥೆ ಹೇಳುವ, ಆಟ ಆಡುವ ಕಲೆಗಳ ಹಾಗೂ ಚರ್ಚೆಯ ಮೂಲಕ ವ್ಯಕ್ತಪಡಿಸಲು ಸಹಾಯ ಮಾಡಲು ಸಾಧ್ಯವಿದೆ. ಸಾಮಾಜಿಕ ಕಾರ್ಯಕರ್ತರು/ ಪ್ರೌಢರು ಮಕ್ಕಳೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಂಡು ಅವರು ಯಾವುದೇ ಭಯ ಅಥವಾ ಅಳುಕು ಇಲ್ಲದೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಸಹಾಯ ಮಾಡಬಹುದು.

**ಧನಾತ್ಮಕ ಹೊಗಳಿಕೆ**

ಮನಸ್ಸಿಗೆ ಆದ ಆಘಾತಗಳು ಮತ್ತು ಇವುಗಳ ಅನುಭವಗಳಿಂದ ಹೊರಬರುವುದು ಮಕ್ಕಳಿಗೆ ಅತ್ಯಂತ ಅವಶ್ಯಕವಾಗಿದೆ. ಇಂತಹ ಮಕ್ಕಳೊಂದಿಗೆ ಕೆಲಸ ಮಾಡುವವರು, ಮಕ್ಕಳ ಮನಸ್ಸಿಗೆ ಆದ ಆಘಾತಗಳಿಂದ ಅವರನ್ನು ಹೊರತರಲು ಈ ಕೆಳಗಿನ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

- ಮಕ್ಕಳನ್ನು ಕೆಟ್ಟ ಅನುಭವಗಳಿಂದ ಬೇರ್ಪಡಿಸಿ ಅದರಿಂದ ದೂರ ಇಡಬೇಕು.
- ಅವರಿಗೆ ಆದ ನೋವುಗಳಿಗೆ ಬೇರೆಯಾದ ಆಯಾಮವನ್ನು ಕೊಡಿರಿ. ಅವರಿಗೆ ಬೇರೆ ಬೇರೆ ಪ್ರಕರಣಗಳ ಮೂಲಕ ಇತರರಿಗೂ ಇಂತಹದೇ ಕಷ್ಟಗಳು ಅಥವಾ ನೋವುಗಳು ಆಗಿವೆ ಎಂಬುದನ್ನು ಮನದಟ್ಟು ಮಾಡಿರಿ.
- ಮಗುವಿನ ಈಗಿನ ಸಮಸ್ಯೆಗಳನ್ನು ಮಗು ಮತ್ತು ಇತರ ಮಕ್ಕಳ ಸಹಾಯದಿಂದ ಪರಿಹರಿಸಿರಿ.
- ಧನಾತ್ಮಕವಾಗಿ ಯೋಚಿಸುವುದನ್ನು ಹಾಗೂ ಹೊಗಳುವುದನ್ನು ಅಭ್ಯಾಸಿಸಿರಿ.
- ಹೆಚ್ಚಿನ ನೋವುಗಳ ಅನುಭವವನ್ನು/ ಸಮಸ್ಯೆಗಳನ್ನು ಗುಂಪು ಚಟುವಟಿಕೆಯ ಮೂಲಕ ಹಾಗೂ ಇಂತಹ ಅನುಭವ ಇರುವ ಮಕ್ಕಳ ಸಹಾಯದಿಂದ ಪರಿಹರಿಸಬಹುದು. ತಮ್ಮದೇ ಆದ ಗುಂಪಿನೊಂದಿಗೆ ಸಮಾಲೋಚನೆ ಮಾಡಿ, ಪರಸ್ಪರ ನೋವು ನಲಿವುಗಳನ್ನು ಹಂಚಿಕೊಳ್ಳುವುದರಿಂದ, ಅವರಿಗೆ ಕೆಟ್ಟ ಅನುಭವಗಳಿಂದ ಹೊರಬರಲು ಸಾಧ್ಯವಾಗುವುದು, ಹಾಗೂ ಇತರರ ಸ್ನೇಹ ಗಳಿಸಲು ಸಾಧ್ಯವಾಗುವುದು.



### 3.18.3 ವಿವಿಧ ರೀತಿಯ ಸಂವಹನದ ಪ್ರಾಮುಖ್ಯತೆ

ಮಕ್ಕಳು ಚಿತ್ರಬಿಡಿಸುವ, ಆಟಗಳ, ಸಂಗೀತ, ಹಾಡು, ಮಾತುಕತೆ, ಅಳು, ಏಕಾಂತದಲ್ಲಿ ಇರುವುದು, ನರ್ತನ/ ಕುಣಿತ, ಬರಹ ಮುಂತಾದವುಗಳ ಮೂಲಕ ತಮ್ಮ ಸಂವೇದನೆಗಳನ್ನು ಅಭಿವ್ಯಕ್ತಿ ಪಡಿಸುವರು. ಸಂವಹನದಿಂದ ಆತ್ಮಸ್ಥೈರ್ಯ ಹೆಚ್ಚಾಗುವುದು ಹಾಗೂ ಕಷ್ಟಗಳನ್ನು ಪರಿಹರಿಸಲು ಸಾಧ್ಯವಾಗುವುದು. ಕಷ್ಟದಲ್ಲಿರುವ ಮಕ್ಕಳಿಗೆ ಸಾಮಾನ್ಯ ಜೀವನ ನಡೆಸುವ ಅವಕಾಶಗಳ ಅವಶ್ಯಕತೆ ಇದೆ. ಮಕ್ಕಳು ಪರಿಣಾಮಕಾರಿಯಾಗಿ ಅಭಿವ್ಯಕ್ತಿ ಮಾಡಲು ಹಾಗೂ ಅವರನ್ನು ಕಷ್ಟದ ಪರಿಸ್ಥಿತಿಯಿಂದ ಹೊರ ತರಲು, ಅವರ ಜೊತೆಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಈ ಕೆಳಗಿನ ವಿಚಾರಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

- ಮಕ್ಕಳ ಜೊತೆಯ ಕಣ್ಣಿನ ಸಂಪರ್ಕ ಇಟ್ಟುಕೊಂಡು ಅವರ ಮುಖದಲ್ಲಿ ಬದಲಾವಣೆಗಳನ್ನು ಅವಲೋಕಿಸಿರಿ.
- ಇನ್ನೊಬ್ಬರು ಏನು ಅಭಿವ್ಯಕ್ತಿಗೊಳಿಸುತ್ತಿದ್ದಾರೆ ಎಂಬುದಕ್ಕೆ ಹೆಚ್ಚು ಗಮನ ಕೊಡಬೇಕು.
- ಉತ್ತಮವಾಗಿ ಗ್ರಹಿಸುವವರು/ ಆಲಿಸುವವರು ಆಗಬೇಕು.
- ಬಾಯಿ ಮಾತಲ್ಲದೆ ಇತರ ವಿವಿಧ ರೀತಿಯ ಸಂವಹನಗಳ ಬಗ್ಗೆ ಗಮನ ಕೊಡಿರಿ.
- ಇನ್ನೊಬ್ಬ ವ್ಯಕ್ತಿ ಮಾತನಾಡುವ ಭಾಷೆಯನ್ನು ಅವರೊಂದಿಗಿನ ಸಂವಹನದಲ್ಲಿ ಬಳಸಬೇಕು. ಸಾಧ್ಯವಾದರೆ ಸ್ಥಳೀಯ ಭಾಷೆಯನ್ನು ಉಪಯೋಗಿಸಬೇಕು.
- ಮಕ್ಕಳ ಜೊತೆಯಲ್ಲಿ ಮಾತನಾಡುವಾಗ ಅವರು ಅರ್ಥಮಾಡಿಕೊಳ್ಳುವ ಭಾಷೆಯನ್ನು ಉಪಯೋಗಿಸಿರಿ. ಅವರು ಪ್ರಶ್ನೆ ಕೇಳಲು ಪ್ರೋತ್ಸಾಹಿಸಿರಿ. ಮುಂದಿನ ಚರ್ಚೆಗೆ ಆಸ್ಪದ ಕೊಡದ ಪ್ರಶ್ನೆಗಳನ್ನು ಕೇಳಬೇಡಿರಿ. ಅವುಗಳಿಂದ ಏನೂ ಉಪಯೋಗವಿಲ್ಲಾ.
- ನೀವು ಮಾತನಾಡುತ್ತಿರುವ ವ್ಯಕ್ತಿ ನಿಮ್ಮನ್ನು ಅರ್ಥ ಮಾಡಿಕೊಂಡಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಿರಿ.

**ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದು**


ಸೇತು ಬಂಧ ಕೇಂದ್ರಕ್ಕೆ ಬರುವ ಪ್ರತಿಯೊಬ್ಬ ಮಗು ಹರ್ಷದಾಯಕವಲ್ಲದ ಅನುಭವದಿಂದ ಬರುವುದು. ಇವರು ಕೆಲಸ ಮಾಡುತ್ತಿದ್ದು, ಶೋಷಣೆಗೆ ಒಳಗಾದವರು ಇರಬಹುದು. ಒಡೆದು ಹೋದ ಕುಟುಂಬದಿಂದ ಬಂದವರು, ನಿರಾಶ್ರಿತರು ಅಥವಾ ಬಾಲಾಪರಾಧಿಗಳು ಇರಬಹುದು. ಅವರು ಸಂಸ್ಥೆ ನೀತಿ ನಿಯಮಗಳನ್ನು ಇಷ್ಟ ಪಡದೆ ಇರಬಹುದು. ಅವರಲ್ಲಿ ಸಿಟ್ಟು ಮತ್ತು ಏಕಾಂಗಿತನ ಇರುತ್ತದೆ. ಆದುದರಿಂದ ಈ ಮಕ್ಕಳನ್ನು ಮತ್ತು ಅವರ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಇದಕ್ಕೆ ಕೆಲವೊಂದು ನಿಯಮಗಳು ಇರುವುದು ಅವಶ್ಯಕ. ಇದರಿಂದ ಶಿಕ್ಷಕಿಯರಿಗೆ ಮತ್ತು ಸಾಮಾಜಿಕ ಕಾರ್ಯಕರ್ತರಿಗೆ ಸಹಾಯವಾಗುವುದು. ಅವುಗಳು:

- ಮಕ್ಕಳ ಮಾಹಿತಿಯನ್ನು ಸಂಗ್ರಹಿಸಲು ಆತುರದ ಅವಶ್ಯಕತೆ ಇಲ್ಲ
- ಪರಸ್ಪರ ಅರ್ಥಮಾಡಿಕೊಂಡ, ನಂಬಿಕೆಯ ಸಂಬಂಧವನ್ನು ನಿಧಾನವಾಗಿ ಬೆಳೆಸಬೇಕು. ಮಕ್ಕಳಿಗೆ ಸಂಸ್ಥೆಯ ಕಾರ್ಯಕರ್ತರ ಮೇಲೆ ನಂಬಿಕೆ ಬರಬೇಕು. ಇದು ಮಕ್ಕಳ ಬಗ್ಗೆ ಆಸಕ್ತಿ ಮತ್ತು ಪ್ರೀತಿ ತೋರಿಸಿದಾಗ ಮಾತ್ರ ಸಾಧ್ಯ.
- ಮಕ್ಕಳ ಅನುಭವಗಳ/ ಭಾವನೆಗಳ ಬಗ್ಗೆ ಹೆಚ್ಚು ಒತ್ತು ಕೊಡಬೇಕು.
- ಮಗುವಿನ ಜೊತೆಯಲ್ಲಿ ಮಾತನಾಡುವಾಗ ಬರೀ ಪ್ರಶ್ನೆ ಕೇಳದೆ. ಕಥೆ, ಹಾಸ್ಯ ಪ್ರಸಂಗಗಳ ಮೂಲಕ ವಾತಾವರಣವನ್ನು ತಿಳಿಸಗೊಳಿಸಿರಿ. ಮಾತುಕತೆ ಜೀವಂತವಾಗಿದ್ದು ಭಾಗವಹಿಸುವಿಕೆಯಿಂದ ಕೂಡಿರುವುದು ಅವಶ್ಯಕ.
- ಮಕ್ಕಳ ಭಾವನೆಗಳನ್ನು ಮತ್ತು ಅವರ ಮನಸ್ಸಿನ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ. ಹೆಚ್ಚಿನ ಮಕ್ಕಳಿಗೆ ಕಠಿಣವಾದ ಮತ್ತು ಬಹಳ ಕೆಟ್ಟದಾದ ಅನುಭವಗಳು ಇರುತ್ತವೆ.



**3.18.4 ಸಂವಹನದಲ್ಲಿ ಅಡೆತಡೆ**

ಉತ್ತಮವಾದ ಹಾಗೂ ಸಂತೋಷಕರವಾದ ಬಾಲ್ಯವನ್ನು ಅನುಭವಿಸಿದ ಮಗು ತನ್ನ ಸಂವೇದನೆಯನ್ನು



ಯಾವುದೇ ಅಡೆತಡೆ, ನಾಚಿಕೆ ಇಲ್ಲದೆ ಬೇರೆ ಬೇರೆ ರೂಪದಲ್ಲಿ ವ್ಯಕ್ತಪಡಿಸುತ್ತದೆ. ನೋವಿನ ಅನುಭವ ಇರುವ ಮಕ್ಕಳು ತಮ್ಮ ಅನುಭವಗಳನ್ನು ವ್ಯಕ್ತಪಡಿಸುವಾಗ ಈ ಕೆಳಗಿನ ಅಡೆತಡೆಗಳನ್ನು ಗಮನಿಸುವುದು ಅವಶ್ಯಕ.

- ಮಗುವಿನಲ್ಲಿ ನಂಬಿಕೆಯ ಕೊರತೆ, ಬೆಂಬಲದ ಕೊರತೆ, ಹಾಗೂ ಮಗುವನ್ನು ನೋಡಿಕೊಳ್ಳುವ ಪ್ರೌಢರಲ್ಲಿ ಋಣಾತ್ಮಕ ಮನೋಭಾವನೆ.
- ಅದು ಇವರ ಸಂವೇದನೆಗಳಾದ ಅಪನಂಬಿಕೆ, ದುಃಖ, ಅಪರಾಧಿ ಮನೋಭಾವ ಇತ್ಯಾದಿಗಳಿಂದ ತೊಂದರೆಗಳಾಗಬಹುದು.
- ಮೊದಲನೇ ಅಥವಾ ಎರಡನೇ ಮಾತುಕತೆಯಲ್ಲಿ ಮಗು ಸತ್ಯವನ್ನು ಹೇಳದೇ ಇರಬಹುದು. ಇದು ಏತಕ್ಕಾಗಿ ಎಂಬುದನ್ನು ಅರ್ಥಮಾಡಿಕೊಳ್ಳಿರಿ ಹಾಗೂ ಇದು ಕೆಲವು ಸಂವೇದನೆಗಳನ್ನು ವ್ಯಕ್ತ ಪಡಿಸುವ ವಿಧಾನ ಎಂದು ತಿಳಿದುಕೊಳ್ಳಿರಿ. ಮಗುವಿಗೆ ಶಿಕ್ಷಕಿಯರಲ್ಲಿ ಅಥವಾ ಸಾಮಾಜಿಕ ಕಾರ್ಯಕರ್ತರಲ್ಲಿ ನಂಬಿಕೆ ಹುಟ್ಟಲು ಸಮಯ ಕೊಡಿರಿ.
- ಮಕ್ಕಳೊಂದಿಗಿನ ನಿಮ್ಮ ಸಂವಹನವನ್ನು ಅಭಿವೃದ್ಧಿ ಪಡಿಸಲು ಅತ್ಯಂತ ಉತ್ತಮ ವಿಧಾನವು– ನಿಮ್ಮ ಸಹೋದ್ಯೋಗಿಗಳ ಹತ್ತಿರ ನೀವು ಮಕ್ಕಳೊಂದಿಗೆ ಮಾತನಾಡುವಾಗ ನಿಮ್ಮನ್ನು ವಿಶ್ಲೇಷಿಸಲು ತಿಳಿಸಿರಿ. ಅವರ ಹತ್ತಿರ ನಿಮ್ಮ ಸಂವಹನವನ್ನು ಅಭಿವೃದ್ಧಿ ಪಡಿಸಲು ಅವಶ್ಯಕವಾದ ಸಲಹೆಗಳನ್ನು ಕೊಡಲು ತಿಳಿಸಿರಿ.

### 3.18.5 ನಿರ್ಧಿಷ್ಟವಾದ ಮತ್ತು ವಾಸ್ತವವಾದ ಸಲಹೆಗಳು

ಸಲಹೆ ಮತ್ತು ಸಹಾಯವನ್ನು ಒದಗಿಸುವುದರಲ್ಲಿ ಭೌತಿಕ ಸುಖ ಮತ್ತು ಸಂವೇದನೆ ಒಳಗೊಂಡಿರುತ್ತದೆ. ಸಂವೇದನೆಗೊಳಗಾದ 'ಹಗೆ', 'ಸಿಟ್ಟು'ಗಳು, ವೇದನೆ, ಅಪಮಾನ, ಅಪರಾಧಿ ಮನೋಭಾವದಿಂದ ಬರುವವುಗಳಾಗಿದ್ದು, ಅವುಗಳು ಸಾಮಾನ್ಯವೆಂದು ಶಿಕ್ಷಕಿಯರು ಮತ್ತು ಸಾಮಾಜಿಕ ಕಾರ್ಯಕರ್ತರು ಭಾವಿಸಬೇಕು. ಇದೇ ಸಮಯದಲ್ಲಿ 'ಭರವಸೆ'ಗಳು ಕೂಡ ಅವರಿಗೆ ಸಹಾಯವಾಗುವಂತೆ ಮತ್ತು ವಾಸ್ತವವಾಗಿರಬೇಕು. ಭರವಸೆಗಳು ಮತ್ತು ಸಲಹೆಗಳು ಮಕ್ಕಳ ಹೊಂದಿಕೊಳ್ಳುವಿಕೆಯ ಹೆಣಗಾಟದಲ್ಲಿ ಮಧ್ಯಪ್ರವೇಶಿಸುತ್ತವೆ. ಆದುದರಿಂದ ಸಲಹೆಗಳನ್ನು ಕೊಡುವಾಗ ಈ ಕೆಳಗಿನವುಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು.

- ಮನನೊಂದ ಮಗುವನ್ನು ಅರ್ಥಮಾಡಿಕೊಳ್ಳಲು ಅವಶ್ಯಕವಾದಷ್ಟು ಸಮಯ ತೆಗೆದುಕೊಳ್ಳಿರಿ.
- ಶಕ್ಯವಾದ ಪರಿಹಾರವನ್ನು ಗುಂಪಿನಲ್ಲಿ ಚರ್ಚಿಸಿ ಪಡೆಯಬೇಕು. ಆಗ ಮಗುವಿಗೆ ಹೆಚ್ಚು ಜನರ ಮೇಲೆ ನಂಬಿಕೆ ಹುಟ್ಟುತ್ತದೆ. ಸಲಹೆಗಳು ವಾಸ್ತವವಾಗಿದ್ದು, ಕಾರ್ಯರೂಪದ್ದಾಗಿರಬೇಕು ಹಾಗೂ ನಿರ್ಧಿಷ್ಟವಾಗಿರಬೇಕು.
- ಸಾಮಾಜಿಕ ಕಾರ್ಯಕರ್ತರು ಅಥವಾ ಶಿಕ್ಷಕಿಯರು ಧನಾತ್ಮಕವಾಗಿರಬೇಕು ಹಾಗೂ ಮಕ್ಕಳಲ್ಲಿ ಆತ್ಮಸ್ಥೈರ್ಯ ಬೆಳೆಸುವಂತಾಗಿರಬೇಕು ಮತ್ತು ಭವಿಷ್ಯತ್ತಿನಲ್ಲಿ ತೆಗೆದುಕೊಳ್ಳಬಹುದಾದ ಹೆಜ್ಜೆಗಳನ್ನು ವಿವರಿಸಬೇಕು.

### 3.18.6 ವಿಕಲಾಂಗ ಮಕ್ಕಳೊಡನೆ ಮಾತುಕತೆ

ಮಕ್ಕಳು ತಮಗೆ ಆದ ಆಘಾತ/ ತೊಂದರೆಯಿಂದ ಹೊರಬರಲು ಅನುಕೂಲವಾಗುವಂತೆ ಬೇರೆ ಬೇರೆ ರೀತಿಯ ಸಮಾಲೋಚನಾ ಪದ್ಧತಿಗಳನ್ನು ಉಪಯೋಗಿಸಬೇಕು. "ಗುಂಪು ಕೆಲಸ" ಇವುಗಳಲ್ಲಿ ಒಂದು ಪದ್ಧತಿ. ಹೆಚ್ಚಿನ ಸಮಯ ಮಗು ಸ್ನೇಹಿತರ ಜೊತೆಯಲ್ಲಿ ಇರುವುದರಿಂದ, ಅಲ್ಲಿ ತಮ್ಮ ಸಲಹೆಗಳನ್ನು ಹಂಚಿಕೊಳ್ಳುತ್ತಾರೆ. ಆದುದರಿಂದ ಅವರು ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳಬಹುದು.

ಗುಂಪು ಚಟುವಟಿಕೆಯಿಂದ ಮಗುವಿಗೆ ಈ ಕೆಳಗಿನ ಸಹಾಯವಾಗುವುದು.



- ತನ್ನ ಸಂವೇದನೆಗಳನ್ನು ಮತ್ತು ವಿಚಾರಗಳನ್ನು ಹಂಚಿಕೊಳ್ಳಲು ಸಾಧ್ಯ.
- ಸ್ನೇಹಿತರೊಂದಿಗೆ ಉತ್ತಮ ಸಂಬಂಧ ಬೆಳೆದು ಪರಸ್ಪರ ನೈತಿಕ ಸಹಾಯ ಪಡೆಯಲು ಆಸ್ಪದ
- ಜನರಲ್ಲಿರುವ ವ್ಯತ್ಯಾಸಗಳ ಒಪ್ಪಿಕೊಳ್ಳಲು ಸಾಧ್ಯವಾಗುವುದು.
- ಪರಸ್ಪರರ ಜವಬ್ದಾರಿ ತೆಗೆದುಕೊಳ್ಳುವುದು ಹಾಗೂ ಗುಂಪಿನ ನಡತೆಗಳ ಜವಾಬ್ದಾರಿ ತೆಗೆದುಕೊಳ್ಳುವುದು.

ಗುಂಪು ಚಟುವಟಿಕೆಯಿಂದ ಇತರರ ಮೇಲೆ ನಂಬಿಕೆ ಹೆಚ್ಚಾಗುವುದು. ಗುಂಪಿನ ಸದಸ್ಯರು ನಕಾರಾತ್ಮಕದೆಡೆಗೆ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರೌಢರದ್ದಾಗಿರುತ್ತದೆ.

### 3.18.8 ಕುಟುಂಬದೊಂದಿಗೆ ಮಾತುಕತೆ

ಕುಟುಂಬವು ಸಾಮಾಜದ ಪ್ರಾಥಮಿಕ ಘಟಕವಾಗಿದ್ದು ಬಹಳ ಮಹತ್ವದ್ದಾಗಿದೆ. ಇದು ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯ ಮಾಡುವ ಘಟಕ. ಮಗು ಉತ್ತಮವಾಗಿ ಬೆಳೆಯುವುದು ಕುಟುಂಬನ್ನು ಅವಲಂಬಿಸಿರುತ್ತದೆ. ಕುಟುಂಬಕ್ಕೆ ಸಮನಾದ ಬೇರೆ ವ್ಯವಸ್ಥೆ ಇರುವುದಿಲ್ಲಾ. ಇತರ ಎಲ್ಲಾ ವ್ಯವಸ್ಥೆಗಳು ತಾತ್ಕಾಲಿಕ.

ಪೋಷಕರ ಜೀವನವು ಜಗಳ, ದುರಾಭ್ಯಾಸ, ರಾಜಕೀಯ ಜಗಳ, ಆರ್ಥಿಕ ತೊಂದರೆಗಳು, ಇತ್ಯಾದಿಗಳಿಂದ ತೊಂದರೆಗೆ ಒಳಗಾಗಿದ್ದಾಗ, ಅವರಿಗೆ ತಮ್ಮ ಮಕ್ಕಳನ್ನು ಸಲಹುವುದು ಕಷ್ಟವಾಗುವುದು. ಒತ್ತಡವು ಪ್ರೌಢರಲ್ಲಿ ಸಿಟ್ಟು, ಅಪರಾಧ, ಇತ್ಯಾದಿಗಳನ್ನು ಹುಟ್ಟು ಹಾಕುತ್ತದೆ. ಇದರಿಂದ ಅವರಿಗೆ ಕುಟುಂಬವನ್ನು ಒಟ್ಟಾಗಿಟ್ಟು ಸರಿಯಾಗಿ ಕಾಪಾಡಲು ಸಾಧ್ಯವಾಗುವುದಿಲ್ಲಾ. ಇದರ ಪರಿಣಾಮ ಮಗುವಿನ ಮೇಲೆ ಆಗುವುದು.

ಮಗುವಿನ ಜೊತೆಯಲ್ಲಿ ಮಾತನಾಡುವಾಗ ಬೇಕಾಗುವ ಕೌಶಲ್ಯಗಳಷ್ಟು ಸಮನಾದ ಕೌಶಲ್ಯಗಳು ಕುಟುಂಬದ ಸದಸ್ಯರೊಂದಿಗೆ ಸಂವಹನ ಮಾಡುವವರಿಗೆ ಬೇಕಾಗಿರುತ್ತದೆ. ಕುಟುಂಬದ ಸ್ಥಿತಿಯನ್ನು ಹಾಗೂ ಕುಟುಂಬದ ಸದಸ್ಯರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರೌಢತೆ ಅವಶ್ಯ.


**ಮಕ್ಕಳ ಕುಟುಂಬದವರನ್ನು ಅರ್ಥಮಾಡಿಕೊಳ್ಳಲು ಅವಶ್ಯಕವಾದ ಕೆಲವು ಸೂಚನೆಗಳು**

- ಕುಟುಂಬಗಳಿಗೆ ತಮ್ಮದೇ ಆದ ನಂಬಿಕೆಗಳಿಗೆ, ಆದ್ಯತೆಗಳಿಗೆ ಹಾಗೂ ಆಚರಣೆಯ ದಾರಿಗಳಿವೆ/ ಕೆಲಸ ಮಾಡುವ ವಿಧಾನಗಳಿವೆ. ಕಾರ್ಯಕರ್ತರು ಕ್ರಿಯಾಶೀಲರಾಗಿಲ್ಲದೆ ಇದ್ದರೆ ಹಾಗೂ ಅವರಲ್ಲಿ ಸಹಾನುಭೂತಿ ಇಲ್ಲದೆ ಇದ್ದರೆ, ಮಾಹಿತಿಯನ್ನು ಸಂಗ್ರಹಿಸಲು/ ಇವರೊಂದಿಗೆ ಸಂವೇದನೆ ಹಂಚಿಕೊಳ್ಳಲು ಹೆಚ್ಚು ಸಮಯ ಬೇಕಾಗುತ್ತದೆ.
- ಕೆಲವೊಮ್ಮೆ ಕುಟುಂಬದವರು ತಾವು ನಂಬುವ ತಮ್ಮ ಸಮುದಾಯದ ವ್ಯಕ್ತಿಗಳನ್ನು ಸಂವಹನಕ್ಕೆ ಆರಿಸಿಕೊಳ್ಳಬಹುದು. ಇನ್ನು ಕೆಲವೊಮ್ಮೆ ಇದಕ್ಕೆ ವ್ಯತಿರಿಕ್ತವಾಗಿ ತಮಗೆ ನಂಬಿಕೆಯಿರುವ ಹೊರಗಿನ ವ್ಯಕ್ತಿಯನ್ನು ಆರಿಸಿಕೊಳ್ಳಬಹುದು. ಈ ಹೊರಗಿನ ವ್ಯಕ್ತಿ ಶಿಕ್ಷಕಿಯರು ಅಥವಾ ಸಾಮಾಜಿಕ ಕಾರ್ಯಕರ್ತರು ಆಗಿರಬಹುದು.

ಕುಟುಂಬದವರೊಂದಿಗಿನ ಸಂವಾದ, ಪರಿಸ್ಥಿತಿಗೆ ಅನುಗುಣವಾಗಿ ಬೇರೆ ಬೇರೆಯಾಗಿರಬಹುದು. ಶಿಕ್ಷಕಿಯರು ಅಥವಾ ಸಮಾಜಕಾರ್ಯಕರ್ತರು, ಕುಟುಂಬವು ಅನುಭವಿಸುತ್ತಿರುವ ತೊಂದರೆಗಳನ್ನು (ಮಾನಸಿಕ/ ಭೌತಿಕ) ಅರ್ಥ ಮಾಡಿಕೊಳ್ಳಬೇಕು. ನಮಗೆ ಗೊತ್ತಿರುವ ಹಾಗೆ, ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು ಕುಟುಂಬವು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸಲು ಅಥವಾ ಅವರ ಬಾಲ್ಯ ವಿವಾಹ ನಡೆಸಲು ಪ್ರಚೋದಿಸುತ್ತಿರಬಹುದು. ಮಾತುಕತೆ ಅಥವಾ ಸಂವಾದಗಳ ಆರಂಭದಲ್ಲಿ ಕುಟುಂಬದ ಆರೋಗ್ಯ, ಕೆಲಸ, ಸಂಬಂಧಗಳು, ಮಕ್ಕಳ ಶಿಕ್ಷಣ, ನೆರೆಕರೆಯವರೊಂದಿಗಿನ ಜಗಳ ಮುಂತಾದ ಸಾಮಾಜಿಕ-ಆರ್ಥಿಕ ವಿಚಾರಗಳ ಮೇಲೆ ಅವಲಂಬಿತವಾಗಿರಬೇಕು.



ಕುಟುಂಬಗಳ ಜೊತೆಯಲ್ಲಿ ಚರ್ಚಿಸಲು ಅವರ ನಂಬಿಕೆಗಳನ್ನು ಗಳಿಸಲು ಶಿಕ್ಷಕಿಯರು ಅಥವಾ ಸಾಮಾಜಿಕ ಕಾರ್ಯಕರ್ತರಿಗೆ ಉತ್ತಮ ಸಂವಹನದ ಕೌಶಲ್ಯಗಳು ಇರಬೇಕು. ಅವರು ಉತ್ತಮ



ನಡತೆಯವರಾಗಿದ್ದು, ಮಾದರಿ ವ್ಯಕ್ತಿಯಾಗಿರಬೇಕು. ಜೊತೆಯಲ್ಲಿ ಉತ್ತಮವಾಗಿ ಸಮಾಲೋಚನಾ ಕೌಶಲ್ಯಗಳನ್ನು ಹೊಂದಿರುವುದು ಅವಶ್ಯ. ತೊಂದರೆಯಲ್ಲಿರುವ ಕುಟುಂಬಗಳ ಜೊತೆಯಲ್ಲಿ ವ್ಯವಹರಿಸುವಾಗ ವ್ಯಕ್ತಿಗಳು ದೃಡವಾಗಿರಬೇಕು.

**3.18.9 ನಿಮಗೆ ಮತ್ತು ನಿಮ್ಮ ಸಿಬ್ಬಂದಿಯವರಿಗೆ ಬೆಂಬಲದ ವ್ಯವಸ್ಥೆ ಮಾಡುವುದು**

ಮಕ್ಕಳೊಂದಿಗೆ ಅಥವಾ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಪ್ರೇರೇಪಣಾ ಮಟ್ಟ ಸ್ಥಿರವಾಗಿರುವುದಿಲ್ಲಾ. ಇದಕ್ಕೆ ಕಾರಣ ಭಾವನಾತ್ಮಕ ಸ್ಥಿತಿ, ಭೌತಿಕ ಧೃಢತೆ, ಕುಟುಂಬದ ಪರಿಸ್ಥಿತಿ, ಕೆಲಸದ ಪರಿಸರ ಅಥವಾ ನಾವು ಕೆಲಸ ಮಾಡುತ್ತಿರುವ ಜನರ ಪರಿಸ್ಥಿತಿ ಆಗಿರಬಹುದು. ಹೆಚ್ಚಾಗಿ ನಾವು ನಮ್ಮ ಕೆಲಸದಲ್ಲಿ ತಲ್ಲೀನರಾಗಿ ನಮಗೆ ಅವಶ್ಯಕವಾದ ಬೆಂಬಲ/ ಸಹಾಯಗಳ ಬಗ್ಗೆ ಮರೆತು ಬಿಡುತ್ತೇವೆ ಹಾಗೂ ನಾವು ನಮ್ಮನ್ನು ಮರೆತು ಬಿಡುತ್ತೇವೆ.

ಹೆಚ್ಚಿನ ಸಂದರ್ಭಗಳಲ್ಲಿ ನಾವು ಭೌತಿಕವಾಗಿ ಹಾಗೂ ಭಾವನಾತ್ಮಕವಾಗಿ ಬರಿದಾಗುತ್ತೇವೆ ಹಾಗೂ ಆಸಕ್ತಿಯನ್ನು ಕಳೆದುಕೊಂಡು ಕಡಿಮೆ ಪರಿಣಾಮಕಾರಿ ಆಗುತ್ತೇವೆ. ನಾವು ಭಾವನಾತ್ಮಕವಾಗಿ ಬರಿದಾಗಿದ್ದು, ಭೌತಿಕವಾಗಿ ತೊಂದರೆಗಳಿಗೆ ಒಳಗಾಗಿದ್ದರೆ, ಕಾಯಿಲೆಗಳು ಸಾಮಾನ್ಯವಾಗಿ ಇದರಿಂದ ಕೆಲಸದಿಂದ ತಪ್ಪಿಸಿಕೊಳ್ಳಬೇಕಾಗುವುದು.

ಮಾನಸಿಕ ಒತ್ತಡದಿಂದ ಹೊರಬರಲು ಮತ್ತು ಭಾವನಾತ್ಮಕವಾಗಿ ಬರಿದಾಗುವುದನ್ನು ತಪ್ಪಿಸಲು ನಾವು ಶಾಂತರಾಗಿ ನಮ್ಮ ಕೆಲಸವನ್ನು ಆನಂದಿಸಬೇಕು. ಒತ್ತಾಯದಿಂದ ಕೆಲಸ ಮಾಡಬಾರದು. ಇದು ಅವರು ಕೆಲಸ ಮಾಡುತ್ತಿರುವ ಮಕ್ಕಳಿಗೆ ಅನಾವಶ್ಯಕ ತೊಂದರೆಗಳನ್ನು ಹಾಗೂ ಸಮಸ್ಯೆಗಳನ್ನು ತಂದೊಡ್ಡಬಹುದು.

ನಾವು ಮಕ್ಕಳ ಜೊತೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಹೇಗೆ?

**ನಮ್ಮ ಮನಸ್ಸಿನ ಸ್ಥಿತಿ**

ಒಬ್ಬ ವ್ಯಕ್ತಿ ಎಲ್ಲಾ ಕೆಲಸಗಳನ್ನು ಮಾಡಲು ಮತ್ತು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಇತರ ವ್ಯಕ್ತಿಗಳನ್ನು ಗುರುತಿಸಿಕೊಳ್ಳಬೇಕು. ಮಕ್ಕಳ ಲಾಲನೆಯಲ್ಲಿ ನಿರಂತರತೆ ಇರಬೇಕಾಗಿದ್ದರೂ ಸಹ ಮಕ್ಕಳಿಗೆ ಇತರ ಸಹೋದ್ಯೋಗಿಗಳನ್ನು ಸಂಪರ್ಕಿಸಲು ಆಸ್ಪದ ಮಾಡಿಕೊಡಬೇಕು.

**ಕೌಶಲ್ಯ ಅಭಿವೃದ್ಧಿ ಮತ್ತು ವಿಶ್ರಾಂತಿ**


ಕೆಲಸ ಮುಗಿದಿರುವುದಿಲ್ಲಾ ಎಂಬುದು ಗೊತ್ತಿದ್ದರೂ ನಾವು ಪರಿಣಾಮಕಾರಿಯಾಗುವುದು ನಮ್ಮ ಅವಶ್ಯಕತೆ ಹಾಗೂ ಪ್ರಾಮುಖ್ಯವಾಗಿದೆ. ಒಂದೇ ರೀತಿಯ ಕೆಲಸ ನಮ್ಮ ಕೆಲಸದ ಗುಣಮಟ್ಟದ ಮೇಲೆ ಪರಿಣಾಮ ಬೀರುವುದು. ಆದುದರಿಂದ ಕೆಲಸದಿಂದ ಸಣ್ಣ ಬಿಡುವು ತೆಗೆದುಕೊಂಡು ತನ್ನ ಸ್ವಂತ ಕೆಲಸ ಮಾಡಬಹುದು ಅಥವಾ ಕುಟುಂಬದವರೊಂದಿಗೆ ಬೇರೆ ಕೆಲಸದ ಪ್ರದೇಶಗಳಿಗೆ ಪ್ರವಾಸ ಹೋಗಬಹುದು ಅಥವಾ ವಿಶ್ರಾಂತಿ ತೆಗೆದುಕೊಳ್ಳಬಹುದು. ಇದರಿಂದ ಅವರ ಶಕ್ತಿಯ ಮಟ್ಟ ಹೆಚ್ಚಾಗುತ್ತದೆ ಹಾಗೂ ಸೋಮಾರಿತನದಿಂದ ಹೊರಬರಲು ಸಹಾಯವಾಗುವುದು.

ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವರ ಸ್ಥಿತಿಗಳು ವಿಶೇಷವಾಗಿದ್ದು ಅವುಗಳನ್ನು ಪರಿಹರಿಸಲು, ಜ್ಞಾನ ಮತ್ತು ಕೌಶಲ್ಯಗಳನ್ನು ಆಗಾಗ ಹೆಚ್ಚಿಸಿಕೊಳ್ಳಬೇಕು. ತರಬೇತಿಯಲ್ಲಿ ಭಾಗವಹಿಸುವುದು ಸಹ ಒಂದು ವಿಶ್ರಾಂತಿ ಮತ್ತು ಅದು ನಮ್ಮ ಜ್ಞಾನ ಮತ್ತು ಕೌಶಲ್ಯವನ್ನು ಅಭಿವೃದ್ಧಿ ಪಡಿಸುವುದು.

**ಪರಿವೀಕ್ಷಣೆ ಮತ್ತು ಹಿಮ್ಮಾಹಿತಿ– ಸಿಬ್ಬಂದಿಗಳ ಸಭೆ**



ನಿರಂತರವಾದ ಪರಿವೀಕ್ಷಣೆ ಸಭೆಗಳು ಕೆಲಸದ ಪ್ರದೇಶದಲ್ಲಿನ/ ವಾತಾವರಣದಲ್ಲಿನ ಆತಂಕವನ್ನು ಕಡಿಮೆ ಮಾಡುತ್ತದೆ. ಸಿಬ್ಬಂದಿಗಳ ಸಭೆಯಿಂದ ಸಮಸ್ಯೆಗಳನ್ನು ಅವರ ಗುಂಪಿನಲ್ಲಿಯೇ



ಇತ್ಯರ್ಥಗೊಳಿಸಸಲು ಆಸ್ಪದ ಇದೆ. ಇದಲ್ಲದೆ ಎಲ್ಲರಿಗೂ ಸಂಪೂರ್ಣವಾಗಿ ಕೆಲಸದ ಬಗ್ಗೆ ಮಾಹಿತಿ ದೊರಕುತ್ತದೆ ಹಾಗೂ ಇದರಿಂದ ಒಂದು ವೇಳೆ ಯಾರಾದರೂ ತಂಡವನ್ನು ಬಿಟ್ಟು ಹೋದರೂ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ತೊಂದರೆ ಇರುವುದಿಲ್ಲಾ. ಸಭೆಗಳು ಭಾವನಾತ್ಮಕವಾದ ಬೆಂಬಲವನ್ನು ಕೊಡುತ್ತದೆ.

ವ್ಯವಸ್ಥಿತವಾಗಿ ತಂಡದ ಸದಸ್ಯರಿಂದ, ಮಕ್ಕಳಿಂದ ಮತ್ತು ಸಮುದಾಯದಿಂದ ಹಿಮ್ಮಾಹಿತಿ ಪಡೆಯುತ್ತಿರಬೇಕು. ಕಾರ್ಯಕ್ರಮ ಮುಂದುವರೆಸಲು ಅಥವಾ ಬದಲಾವಣೆ ತರಲು ಹಿಮ್ಮಾಹಿತಿಯ ಅವಶ್ಯಕತೆ ಇದೆ. ಹಿಮ್ಮಾಹಿತಿಯು ಒಂದು ರೀತಿಯಲ್ಲಿ ಆಂತರಿಕ ಮೌಲ್ಯಮಾಪನ ಪ್ರಕ್ರಿಯೆ ಆಗಿ, ನಮ್ಮನ್ನು ನಮ್ಮ ಕೆಲಸದಲ್ಲಿ ಪರಿಣಾಮಕಾರಿಯಾಗಿ ತೊಡಗುವಂತೆ ಮಾಡುವುದು.


### 3.18.10 ಸಮಾಪ್ತಿ/ ವಕ್ತಾರರು

ಮಕ್ಕಳು ಉತ್ತಮವಾಗಿ ಇರಲು ಅವರ ಬಗ್ಗೆ ಆಸಕ್ತಿ ತೆಗೆದುಕೊಳ್ಳುವುದು ಮತ್ತು ಪ್ರೀತಿ ತೋರಿಸುವುದು ಅತ್ಯಂತ ಅವಶ್ಯಕ. ಮಕ್ಕಳಿಗೆ ತಮ್ಮ ವಿಚಾರಗಳನ್ನು ಸಹಾನುಭೂತಿಯಿಂದ ಕೇಳುವ/ ಗ್ರಹಿಸುವ ಪ್ರೌಢರ ಅವಶ್ಯಕತೆ ಇದೆ. ನಮ್ಮ ಬಾಲ್ಯದಲ್ಲಿ ಸಹ ನಮಗೆ ಹಲವಾರು ಪ್ರೌಢರು (ತಂದೆ, ತಾಯಿ) ನಮಗೆ ನಮ್ಮ ವಿಚಾರಗಳನ್ನು ಕೇಳುವ ಮೂಲಕ ಸಹಾಯ ಮಾಡಿದ್ದಾರೆ ಹಾಗೂ ಸಲಹೆಗಳನ್ನು ಕೊಟ್ಟಿದ್ದಾರೆ. ಕಷ್ಟದ ಪರಿಸ್ಥಿತಿಯಲ್ಲಿರುವ ದೊಡ್ಡ ಸಂಖ್ಯೆಯ ಮಕ್ಕಳಿದ್ದು ಅವರು ರಸ್ತೆಗಳಲ್ಲಿ ಇರಬಹುದು ಅಥವಾ ಸಂಸ್ಥೆಗಳಲ್ಲಿ ಇರಬಹುದು. ಅವರಿಗೆ ಅವರ ಮಾತನ್ನು ಕೇಳುವ, ಅವರಿಗೆ ಸಲಹೆ ಕೊಡುವ ಹಾಗೂ ಅವರ ಸ್ನೇಹಿತರಾಗಿ, ದಾರ್ಶನಿಕರಾಗಿ, ಮಾರ್ಗದರ್ಶಿಗಳಾಗಿ ವರ್ತಿಸುವ ವ್ಯಕ್ತಿಗಳು ಬೇಕು. ಒಟ್ಟಿನಲ್ಲಿ ಅವರಿಗೆ ಭಾವನಾತ್ಮಕ ಬೆಂಬಲ ನೀಡುವ ವಕ್ತಾರರ ಅವಶ್ಯಕತೆ ಇದೆ. ಇವರು ಮಕ್ಕಳಿಗೆ ಅವರ ಆತ್ಮಸ್ಥೈರ್ಯವನ್ನು ಮರಳಿ ಸಂಪಾದಿಸಲು ಹಾಗೂ ಬಾಲ್ಯದ ಹರ್ಷಮಯ ಜೀವನವನ್ನು ಪಡೆಯಲು ಬೆಂಬಲ ಕೊಡಬೇಕು.

**ನೆನಪಿಡಬೇಕಾದ ಅಂಶಗಳು**

- ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ನಿರಂತರವಾಗಿ ಕೌಶಲ್ಯಗಳನ್ನು ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು.
- ಮಕ್ಕಳಲ್ಲಿ ಧನಾತ್ಮಕ ಶಕ್ತಿ ಮತ್ತು ಉತ್ತಮ ಗುಣಗಳು ಇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.
- ನಿಮ್ಮ ಮನೋಭಾವ ಧನಾತ್ಮಕವಾಗಿರಲಿ
- ಮಕ್ಕಳ ವಿಚಾರಗಳಿಗೆ ಮತ್ತು ಸಲಹೆಗಳಿಗೆ ಬೆಲೆ ಕೊಡಿರಿ. ಮಕ್ಕಳ ಬಗ್ಗೆ ನನಗೆಲ್ಲಾ ಗೊತ್ತಿದೆ ಎಂಬ ಮನೋಭಾವನೆ ಇಟ್ಟುಕೊಳ್ಳಬೇಡಿರಿ.
- ಮಕ್ಕಳಿಗೆ ಪ್ರೀತಿ ತೋರಿಸಿರಿ, ಅವರ ನಂಬಿಕೆ ಗಳಿಸಿರಿ
- ಕಷ್ಟದ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆಲ್ಲ ಉತ್ತಮವಾದ ಹಾಗೂ ಸ್ನೇಹಪರನಾದ ಒಬ್ಬ ಪ್ರೌಢ ವ್ಯಕ್ತಿ ಅವರಲ್ಲಿ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಮೂಡಿಸಿ ಅವರು ಜೀವನವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ನಂಬಿಕೆ ಪಡೆಯುವಂತೆ ಮಾಡಬಹುದು.





## 3.19 ಕೃತಜ್ಞತೆಗಳು


- ಅನುಷ್ಠಾನಾಧಿಕಾರಿಗಳ ಕೈಪಿಡಿ – ಡಾ॥ ಎಂ.ಸಿ.ಆರ್ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ. ಹೈದರಾಬಾದ್, ಆಂಧ್ರಪ್ರದೇಶ
- ಕಾರ್ಮಿಕ ಆಡಳಿತ ಮತ್ತು ಅನೌಪಚಾರಿಕ ಆರ್ಥಿಕ ವ್ಯವಸ್ಥೆಯಲ್ಲಿ ಬಾಲಕಾರ್ಮಿಕತೆಯ ಪರಿವೀಕ್ಷಣೆ. ಶ್ರೀ ಸಂಜೀವ ಕುಮಾರ್
- ಕಾರ್ಮಿಕ ಸಂಘಗಳ ನಾಯಕರ ಕೈಪಿಡಿ
- ಕೃಷಿರಂಗದ ಅಪಾಯಕಾರಿ ಬಾಲಕಾರ್ಮಿಕತೆ ನಿರ್ಮೂಲನೆಯ ತರಬೇತಿ ಕೈಪಿಡಿ – ಐ.ಎಲ್.ಓ. ಪ್ರಕಟಣೆ
- ಮಗು ಮತ್ತು ಕಾನೂನು – ಗೀತಾ ರಾಮಸ್ವಾಮಿ, ಆಂಧ್ರಪ್ರದೇಶ ಜುಡಿಷಿಯಲ್ ಅಕಾಡೆಮಿ



# ಭಾಗ – 4







## 4.1 ಅನುಚ್ಛೇಧ – 1

### ಸ್ನೇಹ ಸೂಚಕ ಪಟ್ಟಿ





**ಮುಖವಾಡ ಉಪಯೋಗಿಸಲು ಸೂಚನೆಗಳು**

- ಮುಖವಾಡಗಳು ಸಾಮಾನ್ಯ ಮನುಷ್ಯನ ಮುಖದ ಅಳತೆಗಳಲ್ಲಿವೆ.
- ಮುಖವಾಡಗಳನ್ನು ಉಪಯೋಗಿಸುವ ಮೊದಲು ಕಣ್ಣಿನ ಹಾಗೂ ಮೂಗಿನ ಭಾಗವನ್ನು ಕತ್ತರಿಸಿ ತೆಗೆಯಿರಿ.
- ಮುಖವಾಡಗಳಿಗೆ ದಾರಗಳನ್ನು ಹಾಕಿ ಅದನ್ನು ಕಟ್ಟಿಕೊಳ್ಳಲು ಅನುಕೂಲವಾಗುವಂತೆ ರಂಧ್ರಗಳನ್ನು ಮಾಡಲಾಗಿದೆ.
- ಮುಖವಾಡಗಳು ಎಲ್ಲಾ ವ್ಯಕ್ತಿಗಳ ಮುಖಕ್ಕೂ ಹೊಂದಿಕೊಳ್ಳುವಂತಿದೆ.




## ಬಾಲಕಾರ್ಮಿಕ ಮಗುವಿನ ಮುಖವಾಡ



## 4.2 ಅನುಚ್ಛೇಧ – 2

### ಸಂತೋಷದಿಂದಿರುವ ಮಗುವಿನ ಮುಖವಾಡ





# 4.3 ಅನುಚ್ಛೇಧ – 3

ಮಾದರಿ ಪವರ್ ಪಾಯಿಂಟ್ ಮಂಡನೆಯ ನಮೂನೆ
(ಗ್ರಾಮೀಣ ಪ್ರದೇಶದಲ್ಲಿ ಈ ಸಾಹಿತ್ಯವನ್ನು ಇಡೀ ಹಾಳೆಯ ಮೇಲೆ ಮುದ್ರಿಸಿ ಫ್ಲಿಪ್ ಚಾರ್ಟ ಆಗಿ ಉಪಯೋಗಿಸಬಹುದು)

ಬಾಲಕಾರ್ಮಿಕರು

- **ನಾವು ಯಾರು?**
- **ನಾವ್ಯಾಕೆ ಕೆಲಸ ಮಾಡುತ್ತಿದ್ದೇವೆ?**
- **ನಮ್ಮ ಭವಿಷ್ಯವೇನು?**

ನಾವು ಯಾರು?

ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಕಾರ:

- ಯಾವುದೇ 18 ವರ್ಷದ ಕೆಳಗಿನ ವ್ಯಕ್ತಿ ನಿರಂತರವಾಗಿ ಪ್ರಾಯಸ್ತರು ಮಾಡುವ ಕೆಲಸ ಕಾರ್ಯಗಳನ್ನು ಅಪಾಯಕಾರಿ ಪರಿಸರದಲ್ಲಿ ಹಾಗೂ ಕಡಿಮೆ ಸಂಬಳಕ್ಕಾಗಿ ಮಾಡುತ್ತಿದ್ದು ತಮ್ಮ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯನ್ನು ಪಡೆಯದೇ ಇದ್ದರೆ ಅವರನ್ನು ಬಾಲಕಾರ್ಮಿಕರೆಂದು ಕರೆಯಲಾಗುತ್ತದೆ.
- ಶಿಕ್ಷಣ ಮತ್ತು ತರಬೇತಿಯಿಂದ ವಂಚಿತರಾಗಿ ತಮ್ಮ ಉಜ್ವಲವಾದ ಭವಿಷ್ಯವನ್ನು ಕಳದುಕೊಳ್ಳುವವರು.
- ಭೌತಿಕವಾಗಿ ಹಾಗೂ ಮಾನಸಿಕವಾಗಿ ಮನೆಯಿಂದ ದೂರ ಇಡಲ್ಪಟ್ಟ ಮಕ್ಕಳು

ನಾವು ಯಾರು?

- ಕರ್ನಾಟಕ ಸರ್ಕಾರದ ಬಾಲಕಾರ್ಮಿಕತೆಯ ನಿರ್ಮೂಲನೆಯ ಕ್ರಿಯಾ ಯೋಜನೆ 2007 ರ ಪ್ರಕಾರ – ಶಾಲೆಯಿಂದ ಹೊರಗಿರುವ ಯಾವುದೇ ಮಗು ಬಾಲಕಾರ್ಮಿಕರಾಗಿರುವ ಸಾಂಭವ್ಯ ಇದೆ.
- ಬಾಲಕಾರ್ಮಿಕತೆ (ನಿರ್ಮೂಲನೆ ಮತ್ತು ನಿಯಂತ್ರಣ) ಕಾನೂನು 1986– 14 ವರ್ಷ ಪ್ರಾಯ ಮೀರದ ಹಾಗೂ ಕಾನೂನಿನಲ್ಲಿ ಗುರುತಿಸಿದ ಅಪಾಯಕಾರಿ ಕ್ಷೇತ್ರ ಹಾಗೂ ಪ್ರಕ್ರಿಯೆಗಳಲ್ಲಿ ಕೆಲಸ ಮಾಡುತ್ತಿರುವ ಯಾವುದೇ ವ್ಯಕ್ತಿ.

ಮಕ್ಕಳು ಕೆಲಸ ಮಾಡುವುದನ್ನು...

**57 ಪ್ರಕ್ರಿಯೆಗಳಲ್ಲಿ**
**17 ವೃತ್ತಿಗಳಲ್ಲಿ..........................ನಿಷೇಧಿಸಲಾಗಿದೆ.**
ಆದರೂ ಮಕ್ಕಳು ಈ ಕೆಳಗಿನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
ಪ್ರಾಥಮಿಕ ವಲಯ: ಕೃಷಿ, ಜಾನುವಾರು ಸಾಕಣೆ, ರೇಷ್ಮೆ ಇತ್ಯಾದಿ.
ಮಾಧ್ಯಮಿಕ ವಲಯ: ಇಟ್ಟಿಗೆ, ಬೀಡಿ, ಅಗರಬತ್ತಿ, ಕಸೂತಿ ವಸ್ತುಗಳು, ಕೈಮಗ್ಗದ ಬಟ್ಟೆ, ಮನೆವಾರ್ತೆ ವಸ್ತುಗಳ ತಯಾರಿಕೆಯಲ್ಲಿ ಹಾಗೂ ಸಣ್ಣ ಕಾರ್ಖಾನೆಗಳಲ್ಲಿ.
ತೃತೀಯ ವಲಯ: ಮನೆಗಳಲ್ಲಿ ಮನೆಕೆಲಸದ ಆಳುಗಳು, ರಸ್ತೆ ಬದಿ ವ್ಯಾಪಾರ, ಅಂಗಡಿ ವ್ಯಾಪಾರ, ತ್ಯಾಜ್ಯ ಮರು ಬಳಕೆ, ವೇಶ್ಯಾವೃತ್ತಿ, ಕಟ್ಟಡ ನಿರ್ಮಾಣ ಇತ್ಯಾದಿ.


ಕೆಲವು ವ್ಯಕ್ತಿಗಳು ಕೆಲಸಗಳನ್ನು ಅಪಾಯಕಾರಿ ಮತ್ತು ಅಪಾಯಕಾರಿ ಅಲ್ಲದ ಕೆಲಸಗಳೆಂದು ವಿಭಜಿಸುತ್ತಾರೆ. ಇದು ಸರಿಯೆ?


**ಮಕ್ಕಳು ಮತ್ತು ಅವರ ಸ್ನೇಹಿತರ ಪ್ರಕಾರ**

ಯಾವುದೇ ಕೆಲಸವು ಮಕ್ಕಳಿಗೆ ಅಪಾಯಕಾರಿ ಕಾರಣ ಅದು ಅವರ ಶಿಕ್ಷಣ ಮತ್ತು ಸ್ವಾಭಾವಿಕ ಬೆಳವಣಿಗೆಗೆ ಅಡ್ಡಿ ಉಂಟುಮಾಡುತ್ತದೆ.

**ಹಕ್ಕುಗಳು ಮತ್ತು ವಾಸ್ತವ**

- ಅಂತರಾಷ್ಟ್ರೀಯ ಸಂಸ್ಥೆಯ ಮಕ್ಕಳ ಹಕ್ಕುಗಳ ಸಮಾವೇಶದ ಪ್ರಕಾರ ಮಕ್ಕಳಿಗೆ ಹಕ್ಕುಗಳಿವೆ.
- ಆದರೆ ಬಾಲಕಾರ್ಮಿಕರುಗಳು ವಾಸ್ತವವಾಗಿ ತಮ್ಮ ಹಕ್ಕುಗಳನ್ನು ಅನುಭವಿಸಲು ಆಸ್ಪದವಿಲ್ಲ.





### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗು ಶಿಕ್ಷಣ ಪಡೆದು ಕೊಳ್ಳುವ ಹಕ್ಕು ಇದೆ | • ಮಾಲೀಕರಾಗಲಿ ಅಥವಾ ಪೋಷಕರಾಗಲಿ ಮಕ್ಕಳ ಶಿಕ್ಷಣದ ಅವಶ್ಯಕತೆಯನ್ನು ಅರ್ಥ ಮಾಡಿಕೊಂಡಿರುವುದಿಲ್ಲ. |
| • ಎಲ್ಲಾ ಮಕ್ಕಳಿಗೆ ಜೀವಿಸುವ ಹಕ್ಕು ಇದೆ | • ಬಾಲಕಾರ್ಮಿಕರು ಯಾವಾಗಲೂ ಮಾಲೀಕರಿಂದ ಕೆಟ್ಟ ಶಬ್ದಗಳಿಂದ ಬೈಸಿಕೊಳ್ಳುತ್ತಾರೆ. |

### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗೆ ತಮ್ಮ ವಿಚಾರಗಳನ್ನು ಹೇಳಿಕೊಳ್ಳಲು ಸ್ವಾತಂತ್ರ್ಯ ಇದೆ | • ಬಾಲಕಾರ್ಮಿಕರು ತಮ್ಮ ಕಷ್ಟದ ಕೆಲಸಗಳ ಬಗ್ಗೆ ಹೇಳಿಕೊಂಡರೆ ಅವರ ಮಾಲೀಕರು ಅವರನ್ನು ಬೈಗಳುಗಳಿಗೆ ಗುರಿಪಡಿಸುತ್ತಾರೆ. |
| • ಎಲ್ಲಾ ಮಕ್ಕಳಿಗೆ ವಿರಾಮ ಮತ್ತು ಆಟದ ಹಕ್ಕು ಇದೆ | • ಬಾಲಕಾರ್ಮಿಕರು ಬರೀ ಕೆಲಸ ಮಾಡುತ್ತಾರೆ. ಅವರಿಗೆ ಆಟವಾಡಲು ಅವಕಾಶವಿರುವುದಿಲ್ಲ. ಅವರು ವಿರಾಮವಿಲ್ಲದೆ ಗ್ಯಾರೇಜುಗಳಲ್ಲಿ, ಅಂಗಡಿ ಮುಂಗಟ್ಟುಗಳಲ್ಲಿ ನಿರಂತರವಾಗಿ ಕೆಲಸ ಮಾಡುತ್ತಾರೆ. |

### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಎಲ್ಲಾ ಮಕ್ಕಳಿಗೆ ತಮ್ಮ ತಂದೆ ತಾಯಿಗಳ ಜೊತೆಯಲ್ಲಿ ಜೀವಿಸಲು ಹಕ್ಕು ಇದೆ | • ಬಾಲಕಾರ್ಮಿಕರು ತಮ್ಮ ತಂದೆ ತಾಯಿಗಳ ಪ್ರೀತಿ ವಾತ್ಸಲ್ಯದ ಬಗ್ಗೆ ಹಂಬಲಿಸುತ್ತಾರೆ. |
| • ಎಲ್ಲಾ ಮಕ್ಕಳಿಗೆ ನಿರ್ಲಕ್ಷ್ಯತೆ ಮತ್ತು ಬೈಗುಳದ ವಿರುದ್ಧ ಹಕ್ಕು ಇದೆ. | • ಸಣ್ಣ ಸಣ್ಣ ತಪ್ಪುಗಳಿಗೂ ಸಹ ಬಾಲಕಾರ್ಮಿಕರನ್ನು ಕಠಿಣವಾಗಿ ಭೌತಿಕ ದಂಡನೆಗೆ ಒಳಪಡಿಸಲಾಗುತ್ತದೆ. |


### ಮಕ್ಕಳ ಹಕ್ಕುಗಳು ಮತ್ತು ವಾಸ್ತವ

| ಹಕ್ಕುಗಳು | ವಾಸ್ತವ |
|---|---|
| • ಅವರ ಶಿಕ್ಷಣ, ಆರೋಗ್ಯ ಮತ್ತು ಬೆಳವಣಿಗೆಗೆ ತೊಂದರೆ ತರುವ ಎಲ್ಲಾ ಕೆಲಸಗಳಿಂದ ರಕ್ಷಣೆ ಪಡೆಯುವ ಹಕ್ಕು ಇದೆ. | • ಬಾಲಕಾರ್ಮಿಕರು ಅಪಘಾತಕ್ಕೆ ಗುರಿಯಾಗುತ್ತಾರೆ – ಕೈ ಕಾಲು ಕಳೆದುಕೊಳ್ಳುತ್ತಾರೆ – ಸಾವನ್ನಪ್ಪುತ್ತಾರೆ ಹಾಗೂ ಕುಂಠಿತ ಬೆಳವಣಿಗೆ ಹೊಂದುತ್ತಾರೆ. |
| • ಎಲ್ಲಾ ಮಕ್ಕಳಿಗೆ ನಿರ್ಲಕ್ಷ್ಯತೆ ಮತ್ತು ಬೈಗುಳದ ವಿರುದ್ಧ ಹಕ್ಕು ಇದೆ. | • ಮಕ್ಕಳು ಮೈ ಹುಷಾರಿಲ್ಲದಿದ್ದರು ಕೆಲಸ ಮಾಡಬೇಕಾಗುತ್ತದೆ. ಅವರು ಮಾನಸಿಕ ಹಾಗೂ ಲೈಂಗಿಕ ಹಿಂಸೆಗೆ ಒಳಪಡಬೇಕಾಗುತ್ತದೆ. |


### ಬಾಲಕಾರ್ಮಿಕರು ಮಾತ್ರ ಶೋಷಣೆಗೆ ಒಳಪಡುತ್ತಿಲ್ಲ.

- ಬಾಲಕಾರ್ಮಿಕರು ಅನಕ್ಷರಸ್ಥರಾಗಿ ಹಾಗೂ ಕೌಶಲ್ಯರಹಿತರಾಗಿ ಪ್ರೌಢಾವಸ್ಥೆಯನ್ನು ತಲುಪುವುದರಿಂದ ಅವರ ಕುಟುಂಬ ತೊಂದರೆಗೆ ಒಳಪಡಬೇಕಾಗುತ್ತದೆ.
- ಬಾಲಕಾರ್ಮಿಕರು ಅನಕ್ಷರತೆ, ಬಡತನ ಹಾಗೂ ಶೋಷಣೆಗೆ ಒಳಪಡುವುದರಿಂದ ಇಡೀ ಸಮುದಾಯ ಮತ್ತು ರಾಷ್ಟ್ರವು ತೊಂದರೆಗೊಳಪಡಬೇಕಾಗುತ್ತದೆ.
- ಬಾಲಕಾರ್ಮಿಕತೆ ಕೂಲಿದರ ಹಾಗೂ ಕೆಲಸದ ಮಾರುಕಟ್ಟೆಗೆ ತೊಂದರೆ ಕೊಡುತ್ತದೆ.

### ವಿಷ ವರ್ತುಲದಲ್ಲಿ ಸಿಕ್ಕಿರುವ ಬಾಲಕಾರ್ಮಿಕ





**ಮಕ್ಕಳ ಮೇಲೆ ಹೂಡಿಕೆ**

| ವೆಚ್ಚ | ಲಾಭಗಳು |
|---|---|
| –ಶಿಕ್ಷಣ ಹಾಗೂ ಆರೋಗ್ಯ ಗುಣಮಟ್ಟದ ಹೆಚ್ಚಳ | ಉತ್ತಮ ಶಿಕ್ಷಣ ಮತ್ತು ಆರೋಗ್ಯ, ಕೌಶಲ್ಯಭರಿತ ಪ್ರೌಢರು, ಧನಾತ್ಮಕ ಹಾಗೂ ಶಾಂತಿಪ್ರಿಯ ಚಿಂತನೆಯ ಉತ್ತಮ ಪ್ರಜೆಗಳು |
| ಬಾಲಕಾರ್ಮಿಕತೆಯ ನಿರ್ಮೂಲನೆಯ ಕಾರ್ಯಕ್ರಮಗಳು | |
| ಅವಕಾಶದ ವೆಚ್ಚ | |


**ಮಕ್ಕಳ ಯಾಕೆ ಕೆಲಸ ಮಾಡುತ್ತಾರೆ**

| ಬೇಡಿಕೆ ಭಾಗ | ಪೂರೈಕೆಯ ಭಾಗ |
|---|---|
| – ಕಾನೂನನ್ನು ಸರಿಯಾಗಿ ಅನುಷ್ಠಾನ ಮಾಡದೆ ಇರುವುದು | 1. ಬಡತನ |
| – ಕಡಿಮೆ ವೆಚ್ಚದ ಹಾಗೂ ಶಿಸ್ತುಬದ್ಧವಾದ ಕೂಲಿಗಳ ಸರಬರಾಜು | – ಸಾಲ<br>– ಶಿಕ್ಷಣದಿಂದ ವಂಚಿತ<br>– ವಲಸೆ<br>– ನೈಸರ್ಗಿಕ ಪ್ರಕೋಪ<br>– ಉತ್ತಮ ಕೆಲಸ ಇಲ್ಲದಿರುವುದು<br>– ಸಾಮಾಜಿಕ ಭದ್ರತೆ ಇಲ್ಲದಿರುವುದು<br>– ಜನರ ಮನೋಭಾವ |


ನೀವು ಮತ್ತು ನಾವು ಒಟ್ಟು ಸೇರಿ
ನಮ್ಮ ಎಲ್ಲಾ ಶಕ್ತಿಯನ್ನು ಹಾಕಿ
ಒಂದೇ ಮನಸ್ಸಿನಿಂದ
ಕೆಲಸ ಮಾಡಿದರೆ ಬಾಲಕಾರ್ಮಿಕತೆಯನ್ನು
ಹೋಗಲಾಡಿಸಲು ಸಾಧ್ಯ

ವಂದನೆಗಳು





## 4.4 ಬಾಲಕಾರ್ಮಿಕ ರಹಿತ ಕರ್ನಾಟಕ – ಒಂದು ವಿಷನ್




ಬಾಲಕಾರ್ಮಿಕ ರಹಿತ ರಾಜ್ಯ
(ಶಾಲೆಯಿಂದ ಹೊರಗಿರುವ ಎಲ್ಲಾ ಮಕ್ಕಳು ಸಂಭಾವನೀಯ ಬಾಲಕಾರ್ಮಿಕರು)

- ಎಲ್ಲಾ ಮಕ್ಕಳು ಶಾಲಯಲ್ಲಿ ಇರಬೇಕು. ( ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ)
- ಎಲ್ಲರಿಗೂ ಕೌಶಲ್ಯಭರಿತ ಮತ್ತು ಉತ್ತಮ ಕೆಲಸಗಳು
- ಎಲ್ಲರಿಗೂ ಬಡತನ ಮತ್ತು ಅವಶ್ಯಕತೆಗಳಿಂದ ಸ್ವಾತಂತ್ರ್ಯ

ಈ ಕೆಳಗಿನವುಗಳು ಅತ್ಯಂತ ಕನಿಷ್ಠ ಇರುವಂತೆ ನೋಡಿಕೊಳ್ಳುವುದು.

✦ಬಾಲಕಾರ್ಮಿಕ ನಿರ್ಮೂಲನೆಗೆ ಸಂಬಂಧಪಟ್ಟಂತೆ ಉದ್ದೇಶಗಳು.
✦ಸಮಸ್ಯೆಯ ಸ್ವರೂಪಗಳು.
✦ಟಾರ್ಗೆಟ್ ಗುಂಪಿನ ಗುರುತಿಸುವಿಕೆ
✦ಬಾಲಕಾರ್ಮಿಕತೆಯ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು.
✦ಪ್ರತಿಯೊಂದು ರೀತಿಯ ಬಾಲಕಾರ್ಮಿಕತೆಯನ್ನು ನಿರ್ಮೂಲನಗೊಳಿಸಲು ಪ್ರಕ್ರಿಯೆಗಳು.

- ಯೋಜನೆ ತಯಾರಿಸಲು, ಅನುಷ್ಠಾನ ಮಾಡಲು, ಮೇಲ್ವಿಚಾರಣೆ ನಡೆಸಲು, ದಾಖಲೀಕರಣ ಗೊಳಿಸಲು ಮತ್ತು ಮೌಲ್ಯಮಾಪನ ಮಾಡಲು ಸಾಂಸ್ಥಿಕ ವ್ಯವಸ್ಥೆ.
- ಅನುಷ್ಠಾನ ಮತ್ತು ಬಾಲ ಕೆಲಸಗಾರರ ಬಿಡುಗಡೆ
- ಸಮುದಾಯವನ್ನು ಒಟ್ಟು ಸೇರಿಸುವಿಕೆ, ಅರಿವಿನ ಹೆಚ್ಚಳ ಎಲ್ಲಾ ಹಂತದ ಭಾಗೀದಾರರೊಂದಿಗೆ ಸಮಾಲೋಚನೆ ಮತ್ತು ಅವರ ಕೆಪಾಸಿಟಿ ಹೆಚ್ಚಳ.
- ಬಾಲಕಾರ್ಮಿಕ ಕುಟುಂಬಗಳ ಜೀವನಾಧಾರ ಹೆಚ್ಚಳಕ್ಕೆ ಅಭಿವೃದ್ಧಿ ಕಾರ್ಯಕ್ರಮಗಳ ಕ್ರೋಢಿಕರಣ.
- ಬಾಲಕಾರ್ಮಿಕ ಕುಟುಂಬಗಳ ಶಿಕ್ಷಣ, ಆರೋಗ್ಯ, ಕೌಶಲ್ಯ ಮತ್ತು ಕೆಲಸಗಳ ಮಟ್ಟದ ಹೆಚ್ಚಳಿಕೆ ಪ್ರಯತ್ನ
- ಬಾಲಕಾರ್ಮಿಕರಾಗುವುದನ್ನು ತಡೆಗಟ್ಟುವುದು ಮತ್ತು ಮನಪರಿವರ್ತನೆ.

